ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೃಷ್ಣೆಗೆ ಇಂದು ಬಾಗಿನ

ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ (ಸೆ.6)ರ ಆಲಮಟ್ಟಿ ಅಣೆಕಟ್ಟೆಯಲ್ಲಿ ಕೃಷ್ಣಾ ನದಿಗೆ ಬಾಗಿನ ಸಮರ್ಪಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಜಲಾಶಯಕ್ಕೆ ತ್ರಿವರ್ಣ ವಿದ್ಯುತ್ ದ್ವೀಪಗಳಿಂದ ಆಕರ್ಷಕ ಲೈಟಿಂಗ್ಸ್ ವ್ಯವಸ್ಥೆ ಮಾಡಲಾಗಿದೆ.

ಸೊಂಪಾದ ಪುಟಗಳು

ಭಾರತದ ಸದೃಢ ಆರ್ಥಿಕತೆಯ ಮುನ್ನೋಟ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಸರಳೀಕೃತ ತೆರಿಗೆ: ವಿಕಸಿತ ಭಾರತದತ್ತ ದಿಟ್ಟಹೆಜ್ಜೆ!
ನವಪರ್ವ
ರವೀ ಸಜಂಗದ್ದೆ 7

ದಾರಿದೀಪೋಕ್ತಿ

ನೀವು ಯಾವುದಕ್ಕೆ ಚಿಂತಿಸುತ್ತಿದ್ದೀರಿ ಎಂಬುದು ಬಹಳ ಮುಖ್ಯ. ಈ ಹಿಂದೆ ನೀವು ಚಿಂತಿಸಿದ ಸಂದರ್ಭಗಳನ್ನು ನೆನಪಿಸಿಕೊಳ್ಳಿ. ಆ ಪೈಕಿ ಎಷ್ಟೋ ಘಟಿಸಿಯೇ ಇಲ್ಲ. ನಾವು ಚಿಂತಿಸಿದ್ದಷ್ಟೇ ಬಂತು. ಹೀಗಾಗಿ ಚಿಂತೆಯ ಬಗ್ಗೆ ಹೆಚ್ಚು ಚಿಂತಿಸಬಾರದು.

ವಕ್ರತುಂಡೋಕ್ತಿ

ಸ್ಕ್ರಿಪ್ಟ್ ಇಲ್ಲದ ನಾಟಕಕ್ಕೆ ಟಿವಿ ಡಿಬೇಟ್ ಎಂದು ಹೇಳಬಹುದು.

ಬಾಡಿಗೆದಾರರಿಗೆ ವಿದೇಶಿ ಸಂಕಷ್ಟ

ಬೆಂಗಳೂರು: ಅಗತ್ಯ ದಾಖಲೆಗಳಿಲ್ಲದೇ ವಿದೇಶಿ ಪ್ರಜೆಗಳಿಗೆ ಮನೆಗಳನ್ನು ಬಾಡಿಗೆಗೆ ನೀಡಿದ್ದ 23 ಜನ ಮಾಲೀಕರ ವಿರುದ್ಧ ಬೆಂಗಳೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಯಾವುದೇ ದಾಖಲಾತಿಗಳನ್ನು ಪಡೆದುಕೊಳ್ಳದ ಹಾಗೂ ಸಿ ಫಾರ್ಮ್ ಸಲ್ಲಿಸದ ಮನೆಯ ಮಾಲೀಕರ ವಿರುದ್ಧ ರಿಜಿಸ್ಟ್ರೇಷನ್ ಆಫ್ ಫಾರಿನರ್ಸ್ ಆ್ಯಕ್ಟ್ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇವಿಎಂಗೆ ಕೊಕ್ ಕೈ ಸಮರ್ಥನೆ | ಅಧಿಕಾರದ ದುರ್ಬಳಕೆ: ಬಿಜೆಪಿ ಆಕ್ರೋಶ

ಬ್ಯಾಲೆಟ್ ಪೇಪರ್‌ಗೆ ಜೈ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಬಳಸುವ ರಾಜ್ಯ ಸರಕಾರದ ತೀರ್ಮಾನದ ವಿರುದ್ಧ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದರೆ, ಕಾಂಗ್ರೆಸ್ ನಾಯಕರು ಸರಕಾರದ ತೀರ್ಮಾನವನ್ನು ಸಮರ್ಥಿಸಿಕೊಂಡಿದ್ದಾರೆ.

ಪರ-ವಿರೋಧದ ಚರ್ಚೆಯ ಹೊರತಾಗಿಯೂ, ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಬ್ಯಾಲೆಟ್ ಪೇಪರ್‌ನಲ್ಲಿ ನಡೆಸಲು ಅಗತ್ಯ ಕಾನೂನನ್ನು ಜಾರಿಗೊಳಿಸಿದರೆ ನಡೆಸಲು ಅವಕಾಶವಿದೆ ಎಂದು ರಾಜ್ಯ ಚುನಾವಣಾ ಆಯೋಗ ಸ್ಪಷ್ಟನೆ ನೀಡುವ ಮೂಲಕ ಸರಕಾರದ ತೀರ್ಮಾನಕ್ಕೆ ಮತ್ತಷ್ಟು 'ಬಲ' ಸಿಕ್ಕಿದೆ.

ಕಳೆದ ಮೂರು ಲೋಕಸಭಾ ಚುನಾವಣೆಯಿಂದಲೂ ಇವಿಎಂ ವಿರುದ್ಧ ಕಿಡಿಕಾರುತ್ತಿರುವ ಕಾಂಗ್ರೆಸ್ ನಾಯಕರು ಸ್ಥಳೀಯ ಸಂಸ್ಥೆಯಲ್ಲಿ ಬ್ಯಾಲೆಟ್ ಪೇಪರ್ ಬಳಕೆಯ ಮೂಲಕ 'ನ್ಯಾಯ ಸಮ್ಮತ' ಚುನಾವಣೆ ನಡೆಸುವ ಮಾತುಗಳನ್ನು ಆಡುತ್ತಿದ್ದಾರೆ. ಆದರೆ 'ಆಧುನಿಕ' ಚುನಾವಣಾ ಪದ್ಧತಿಯನ್ನು ಬಿಟ್ಟು, ಪುರಾತನ ಚುನಾವಣಾ ಪ್ರಕ್ರಿಯೆ ಹೋಗುತ್ತಿರುವುದು ಏಕೆ ಎಂದು ಬಿಜೆಪಿಗರು ಪ್ರಶ್ನಿಸಿದ್ದಾರೆ. ರಾಜಕೀಯ ಹೇಳಿಕೆಗಳ ಹೊರತಾಗಿ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಯಾವ ರೀತಿ ನಡೆಸಬೇಕು ಎನ್ನುವ ತೀರ್ಮಾನ ರಾಜ್ಯ ಚುನಾವಣಾ ಆಯೋಗ ಹಾಗೂ ರಾಜ್ಯ ಸರಕಾರದ ವ್ಯಾಪ್ತಿಗೆ ಬರುವುದರಿಂದ, ಸೂಕ್ತ ತಿದ್ದುಪಡಿಗಳೊಂದಿಗೆ ಬ್ಯಾಲೆಟ್ ಪೇಪರ್ ಬಳಸುವುದು ಕಾನೂನಾತ್ಮಕವಾಗಿ ಬಹುದೊಡ್ಡ ಸಮಸ್ಯೆಯಲ್ಲ ಎನ್ನುವ ಮಾತುಗಳನ್ನು ಅಧಿಕಾರಿಗಳು ಹೇಳುತ್ತಿದ್ದಾರೆ.

→ 4

ಇವಿಎಂ ಬದಲಿಗೆ ಬ್ಯಾಲೆಟ್ ಮೂಲಕ ಚುನಾವಣೆ ಮಾಡಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ನಮ್ಮ ಅನುಭವದ ಮೇಲೆ ನಾವು ಈ ತೀರ್ಮಾನ ಮಾಡಿದ್ದೇವೆ. ಈಗಾಗಲೇ ಅನೇಕ ದೇಶಗಳು ಇವಿಎಂ ಬಳಸಿ ಮತ್ತೆ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ಮಾಡುತ್ತಿದ್ದಾರೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಬ್ಯಾಲೆಟ್ ಪೇಪರ್ ಏಕೆ ?

- ಮತ ಹಕ್ಕು ಚಲಾವಣೆಯ ಸಾಚಾತನದ ಬಗ್ಗೆ ಅನುಮಾನ ಇಲ್ಲ
- ತಾಂತ್ರಿಕ ದೋಷ, ಆನ್‌ಲೈನ್ ಸಮಸ್ಯೆಯ ಭೀತಿ ಇರುವುದಿಲ್ಲ.
- ಮತದಾರರ ಖಾಸಗಿತನದ ಜತೆ ಮತ ಹಕ್ಕಿನ ರಕ್ಷಣೆ

ಅನಾನುಕೂಲಗಳೇನು?

- ಮತ ಪೆಟ್ಟಿಗೆ ಸಾಗಣೆ, ಸಂರಕ್ಷಣೆಗೆ ಹೆಚ್ಚಿನ ಸಮಯ, ಸ್ಥಳಾವಕಾಶ ಅಗತ್ಯ
- ಮತ ಎಣಿಕೆ ಪ್ರಕ್ರಿಯೆ ನಿಧಾನ, ಫಲಿತಾಂಶ ಪ್ರಕಟಣೆ ವಿಳಂಬ
- ಮತ ಪೆಟ್ಟಿಗೆಗಳ ರಕ್ಷಣೆ, ದುಷ್ಕೃತ್ಯ ತಡೆ ಸವಾಲು

ಮಟ್ಟಣ್ಣನವರ್ ಸುತ್ತ ಬುರುಡೆ ಪ್ರಕರಣ ಗಿರಕಿ | ವಿಚಾರಣೆ ಬಿರುಸು

ಗಿರೀಶ್‌ಗೆ ಎಸ್‌ಐಟಿ ಗ್ರಿಲ್

ಬೆಂಗಳೂರು/ಮಂಗಳೂರು

ದಿನಕ್ಕೊಂದು ತಿರುವು ಪಡೆಯುತ್ತಿರುವ ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ತೀವ್ರಗೊಂಡಿದ್ದು, ಗಿರೀಶ್ ಮಟ್ಟಣ್ಣನವರ್ ಪ್ರಕರಣದ ಕೇಂದ್ರ ಬಿಂದು ಎನ್ನುವ ಅಂಶ ಈವರೆಗಿನ ಎಸ್‌ಐಟಿ ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಮೂಲಗಳು ತಿಳಿಸಿವೆ. ಸಾಮಾಜಿಕ ಕಾರ್ಯಕರ್ತ ಬುರುಡೆ ಸಿಕ್ಕಿದ್ದು ಎಲ್ಲಿ ಎಂಬ ಪ್ರಶ್ನೆಗೆ ಮಟ್ಟಣ್ಣನವರ್ ಹೆಸರನ್ನು ಹೇಳಿರುವುದಾಗಿ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಎಸ್‌ಐಟಿ ಗಿರೀಶ್ ಅವರ ವಿಚಾರಣೆಯನ್ನು ತೀವ್ರಗೊಳಿಸಿದೆ.



ಬುರುಡೆ ರಹಸ್ಯ

ಶುಕ್ರವಾರ ಎಸ್‌ಐಟಿ ವಿಚಾರಣೆಗೆ ಹಾಜರಾಗಿದ್ದ ಗಿರೀಶ್ ಮಟ್ಟಣ್ಣನವರ್ ವಿಚಾರಣೆ ನಡೆಸಿರುವ ಅಧಿಕಾರಿಗಳು, ಬುರುಡೆ ಪ್ರಕರಣ ಸಂಬಂಧ ಹಲವಾರು ಪ್ರಶ್ನೆಗಳನ್ನು ಕೇಳಿ ಕೆಲವು ಮಾಹಿತಿಗಳನ್ನು ಪಡೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಬುರುಡೆ ಚಿನ್ನಯ್ಯ ವಿಚಾರಣೆ ಸಂದರ್ಭದಲ್ಲಿ ಆತ ಹೇಳಿರುವ ಕೆಲವು ಸೂಕ್ಷ್ಮ ವಿಷಯಗಳ ಹಿನ್ನೆಲೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಗಿರೀಶ್ ಹಾಜರಾದರು.

ವಸಂತ್ ಗಿಳಿಯಾರ್ ವಿರುದ್ಧ ಎಫ್‌ಐಆರ್

ಮೈಸೂರು: 'ಧರ್ಮಗಳ ನಡುವೆ ಅಶಾಂತಿ ಉಂಟು ಮಾಡುವಂಥ ವೈಯಕ್ತಿಕ ಚಾರಿತ್ರ್ಯ ವಧೆ ನಡೆಸಿದ್ದಾರೆ' ಎಂದು ಆರೋಪಿಸಿ ಒಡನಾಡಿ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ ಅವರು ವಸಂತ ಗಿಳಿಯಾರ್ ವಿರುದ್ಧ ಮೈಸೂರಿನ ವಿಜಯನಗರ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ. 'ವಸಂತ ಗಿಳಿಯಾರ್, ನನ್ನನ್ನು ಕ್ರೈಸ್ತ ಧರ್ಮದವನು ಎಂದು ಗುರುತಿಸಿ, ಹಿಂದೂ ಧರ್ಮ ಹಾಗೂ ದೇವಸ್ಥಾನಗಳನ್ನು ಒಡೆಯಲು ಬಂದವನು ಎಂದು ಸಾಮಾಜಿಕ ಮಾಧ್ಯಮದಲ್ಲಿ ಆರೋಪಿಸುತ್ತಿದ್ದಾರೆ' ಎಂದು ಸ್ಟ್ಯಾನ್ಲಿ ದೂರಿದ್ದಾರೆ.

ವಿಚಾರಣೆ ವೇಳೆ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗಿರೀಶ್ ನೀಡಿರುವ ಹೇಳಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಾಗೂ ದಾಖಲೆಗಳನ್ನು ಅಧಿಕಾರಿಗಳು ಹೇಳಿದ್ದಾರೆ ಎಂದು ತಿಳಿದುಬಂದಿದೆ. ಇದರೊಂದಿಗೆ ತಮಿಳುನಾಡಿನಲ್ಲಿದ್ದ ಚಿನ್ನಯ್ಯನನ್ನು ಸಂಪರ್ಕಿಸಿ, ಆತನನ್ನು ಧರ್ಮಸ್ಥಳಕ್ಕೆ ಕರೆತಂದು ಆಶ್ರಯ ನೀಡಿ ಹೇಳಿಕೆ ಕೊಡಿಸುವಲ್ಲಿ ಗಿರೀಶ್ ಮಟ್ಟಣ್ಣನವರ್ ಪಾತ್ರ ಮಹತ್ವದಾಗಿತ್ತು ಎನ್ನುವುದು ತಿಳಿದುಬಂದಿದೆ.

ಯೂಟ್ಯೂಬರ್‌ಗಳಿಗೆ ಆತಂಕ: ಇನ್ನು ಧರ್ಮಸ್ಥಳಕ್ಕೆ ಸಂಬಂಧಿಸಿದಂತೆ ಸರಣಿ ಕಥೆಗಳನ್ನು ಕಟ್ಟಿದ್ದ ಒಂದೊಂದೇ ಯೂಟ್ಯೂಬರ್‌ಗಳಿಗೆ ನೋಟಿಸ್ ನೀಡುತ್ತಿರುವ ಎಸ್‌ಐಟಿಯ ನಡೆ ಹಲವು ಯೂಟ್ಯೂಬರ್‌ಗಳ ಆತಂಕಕ್ಕೆ ಕಾರಣವಾಗಿದೆ. ಯೂ ಟ್ಯೂಬರ್ ಅಭಿಷೇಕ್‌ನನ್ನು ಎಸ್‌ಐಟಿ ಶುಕ್ರವಾರ ವಿಚಾರಣೆಗೆ ಒಳಪಡಿಸಿ ಹಲವು ಮಾಹಿತಿಗಳನ್ನು ಪಡೆದುಕೊಂಡಿದೆ.

ಈ ನಡುವೆ ಕೇರಳದ ಯೂಟ್ಯೂಬರ್ ಮನಾಫ್‌ಗೂ ಎಸ್‌ಐಟಿ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನೀಡಿದೆ. ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂಳಲಾಗಿದೆ ಎಂದು ಮನಾಫ್ ವಿಡಿಯೊ ಮಾಡಿ ಕೇರಳದಲ್ಲಿ ಭಾರೀ ಸಂಚಲನ ಸೃಷ್ಟಿಸಿದ್ದ. ಶಿರೂರು ಗುಡ್ಡ ಕುಸಿತ ಪ್ರಕರಣದಲ್ಲಿ ಈತನ ಲಾರಿ ನೀರುಪಾಲಾಗಿತ್ತು. ಈ ಮೂಲಕ ಬೆಳಕಿಗೆ ಬಂದ ಈತ ಚಿನ್ನಯ್ಯ, ಮಹೇಶ್ ಶೆಟ್ಟಿ ತಿಮರೋಡಿ ಅವರ ಮನೆಯಲ್ಲಿ ತಂಗಿದ್ದಾಗ ಅಲ್ಲಿಗೂ ತೆರಳಿ ಚಿನ್ನಯ್ಯನನ್ನು ಮಾತನಾಡಿಸಿ, ಮಾಹಿತಿ ಪಡೆದುಕೊಂಡಿದ್ದ ಎಂಬುದು ತಿಳಿದುಬಂದಿದೆ. ಆದ್ದರಿಂದ ಆತನಿಗೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಗಿದೆ.

→ 4

ರವಿಕುಮಾರ್ ರಾಜೀನಾಮೆ

ಬೆಂಗಳೂರು: ಭೋವಿ ನಿಗಮದ ಅಧ್ಯಕ್ಷರ ವಿರುದ್ಧದ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರ ತಲೆದಂಡವಾಗಿದೆ. ಆರೋಪ ಕೇಳಿ ಬಂದ ದಿನವೇ ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಸೂಚಿಸಿದ್ದರು. ಆದರೆ ರವಿಕುಮಾರ್ ತಮ್ಮ ವಿರುದ್ಧ ಕೇಳಿಬಂದಿರುವ ಆರೋಪದಲ್ಲಿ ಹುರುಳಿಲ್ಲ ಎಂದು ವಾದಿಸಿದ್ದರು. ಆದರೀಗ ರಾಜೀನಾಮೆ ಸಲ್ಲಿಸಿದ್ದು, ಈ ವೇಳೆ ತಮ್ಮ ವಿರುದ್ಧ ಕೇಳಿಬಂದಿರುವ ಆರೋಪದ ಸಮಗ್ರ ತನಿಖೆಗೆ ಆಗ್ರಹಿಸಿದ್ದಾರೆ.

ಅಲವತ್ತುಕೊಂಡ ಟ್ರಂಪ್

ವಾಷಿಂಗ್ಟನ್: ಭಾರತದ ವಿರುದ್ಧ ಸುಂಕಾಸ್ತ್ರ ಝಳಪಿಸಿದ್ದ ಡೊನಾಲ್ಡ್ ಟ್ರಂಪ್ ಇದೀಗ 'ಚೀನಾದ ಮೇಲಿನ ಹಗೆತನಕ್ಕೋಸ್ಕರ ಭಾರತ ಹಾಗೂ ರಷ್ಯಾವನ್ನು ಕಳೆದುಕೊಂಡೆ' ಎಂದು ಅಲವತ್ತುಕೊಂಡಿದ್ದಾರೆ. 'ನಾವು ಭಾರತ ಮತ್ತು ರಷ್ಯಾವನ್ನು ಕರಾಳ ಚೀನಾಕ್ಕೆ ಕಳೆದುಕೊಂಡಂತೆ ಕಾಣುತ್ತಿದೆ. ಅವರು ಒಟ್ಟಿಗೆ ದೀರ್ಘ ಮತ್ತು ಸಮೃದ್ಧ ಭವಿಷ್ಯವನ್ನು ಹೊಂದಿರಲಿ' ಎಂದಿರುವ ಟ್ರಂಪ್ ಶಾಂಘೈ ಸಭೆಯಲ್ಲಿ ಮೂವರು ನಾಯಕರು ಕಾಣಿಸಿಕೊಂಡ ಚಿತ್ರ ಹಂಚಿಕೊಂಡಿದ್ದಾರೆ.

ಶಿಲ್ಪಾ, ಕುಂದ್ರಾಗೆ ನೋಟಿಸ್

ಮುಂಬೈ: 60 ಕೋಟಿ ರೂಪಾಯಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ಅವರ ಉದ್ಯಮಿ ಪತಿ ರಾಜ್ ಕುಂದ್ರಾ ವಿರುದ್ಧ ಮುಂಬೈ ಪೊಲೀಸರು ಲುಕ್ ಔಟ್ ನೋಟಿಸ್ ಹೊರಡಿಸಿದ್ದಾರೆ. ದಂಪತಿ ಅಂತಾರಾಷ್ಟ್ರೀಯ ಪ್ರವಾಸ ನಿರ್ಬಂಧಿಸಿ ನಗರ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗವು ನೋಟಿಸ್ ನೀಡಿದೆ. ಉದ್ಯಮಿಯೊಬ್ಬರು ನಟಿ ಮತ್ತು ಅವರ ಪತಿಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನಾಲ್ವರು ನೀರುಪಾಲು

ಮಂಡ್ಯ: ಜಿಲ್ಲೆಯಲ್ಲಿ ಒಂದೇ ದಿನ ಇಬ್ಬರು ವಿದ್ಯಾರ್ಥಿಗಳು ಮತ್ತು ದಂಪತಿ ಸೇರಿ ನಾಲ್ವರು ನೀರುಪಾಲಾಗಿದ್ದಾರೆ. ಶ್ರೀರಂಗಪಟ್ಟಣ ತಾಲೂಕಿನ ಎಡಮುರಿ ಜಲಪಾತದಲ್ಲಿ ಮುಳುಗಿ ಬೆಂಗಳೂರಿನ ಡಾನ್ ಬಾಸ್ಕೋ ಪದವಿ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಶ್ಯಾಮ್(20) ವೆಂಕಟೇಶ್ (20)ಮೃತರು. ಎಮ್ಮೆ ತೊಳೆಯಲು ಹೋದ ಕೆ.ಆರ್‌ಪೇಟೆಯ ವಸಂತಮ್ಮ (65) ಕಾಳೇಗೌಡ (70) ದಂಪತಿ ಕೆರೆಗೆ ಬಿದ್ದು ಸಾವನ್ನಪ್ಪಿದ್ದಾರೆ.

ಆರೆಸ್ಸೆಸ್ ಸಮನ್ವಯ ಸಭೆ

ಜೋಧ್‌ಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಸಂಘ ಪ್ರೇರಿತ ಸಂಸ್ಥೆಗಳ ಅಖಿಲ ಭಾರತ ಪದಾಧಿಕಾರಿಗಳ ಸಭೆ ಜೋಧ್‌ಪುರದಲ್ಲಿ ಶುಕ್ರವಾರ ಪ್ರಾರಂಭವಾಗಿದೆ. ಸರಸಂಘಚಾಲಕ ಮೋಹನ್ ಭಾಗವತ್ ಮತ್ತು ದತ್ತಾತ್ರೇಯ ಹೊಸಬಾಳೆ ಅವರು ಮೊದಲ ಅಧಿವೇಶನದಲ್ಲಿ ಭಾರತ ಮಾತೆಯ ಫೋಟೋದ ಮುಂದೆ ಪುಷ್ಪನಮನ ಅರ್ಪಿಸಿದರು. ಸೆ. 7ರವರೆಗೆ ನಡೆಯುತ್ತಿರುವ 3 ದಿನಗಳ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ, ರಾಷ್ಟ್ರೀಯ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸೇರಿದಂತೆ 32 ಸಂಸ್ಥೆಗಳ ಅಖಿಲ ಭಾರತ ಪದಾಧಿಕಾರಿಗಳು ಭಾಗವಹಿಸುತ್ತಿದ್ದಾರೆ.

Tracxn

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್

CIN: L72200KA2012PLC065294

ನೋಂ. ಕಚೇರಿ: ನಂ. ಎಲ್–248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ–560102, ದೂ: +91 90360 90116, ಇ–ಮೇಲ್: investor.relations@tracxn.com, ವೆಬ್‌ಸೈಟ್: www.tracxn.com

13ನೇ ವಾರ್ಷಿಕ ಮಹಾಸಭೆ ಮತ್ತು ಇ–ಮತದಾನದ ಮಾಹಿತಿ

ಈ ಮೂಲಕ ಸದಸ್ಯರಿಗೆ **ಸೂಚನೆ** ನೀಡುತ್ತಿರುವುದೇನೆಂದರೆ, **ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್** ನ ("ಕಂಪನಿ") **13ನೇ (ಹದಿಮೂರನೇ)** ವಾರ್ಷಿಕ ಮಹಾಸಭೆ ("ಎಜಿಎಂ") ಸೋಮವಾರ, ಸೆಪ್ಟಂಬರ್ 29, 2025ರ ಸಂಜೆ 5.00 ಗಂಟೆಗೆ (ಭಾ.ಕಾ.) ವಿಡಿಯೋ ಕಾನ್ಫರೆನ್ಸಿಂಗ್ ('ವಿಸಿ')/ಇತರ ಆಡಿಯೊ ವಿಷುಯಲ್ ಮೀನ್ಸ್ (ಒಎವಿಎಂ') ಮೂಲಕ ನಡೆಯಲಿದ್ದು, ಕಂಪನಿ ಕಾಯಿದೆ 2013 ("ಕಾಯಿದೆ") ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ಅದರ ನಿಯಮಗಳು ಹಾಗು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ ಸುತ್ತೋಲೆಗಳು") ಮತ್ತು ಸೆಬಿ ಸೆಕ್ಯುರಿಟೀಸ್ ಆಂಡ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯ ("ಸೆಬಿ ಸುತ್ತೋಲೆಗಳು") ಅನುಸಾರ ಹೊರಡಿಸಿದ ವ್ಯವಹಾರಗಳ ಬಗ್ಗೆ ಅನ್ವಯವಾಗುವ ಎಲ್ಲ ಸುತ್ತೋಲೆಗಳನ್ನು ಓದಿಕೊಂಡಂತೆ 13ನೇ ಎಜಿಎಂ ನ ಸೂಚನೆ ದಿನಾಂಕ ಮೇ 26, 2025ರಲ್ಲಿ ತಿಳಿಸಿದಂತೆ ವ್ಯವಹಾರಗಳನ್ನು ನಡೆಸಲು ಕರೆಯಲಾಗಿದೆ. ಇದು ಕಂಪನಿಯ ವೆಬ್‌ಸೈಟ್ www.tracxn.com ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ ('ಎನ್‌ಎಸ್‌ಡಿಎಲ್') **www.evoting.nsdl.com** ನಲ್ಲಿ ಲಭ್ಯವಿರುತ್ತದೆ.

ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳಿಗೆ ಸಂಬಂಧಿಸಿದಂತೆ, ಎಜಿಎಂ ಸೂಚನೆ ಮತ್ತು ಕಂಪನಿಯ ಆರ್ಥಿಕ ವರ್ಷ ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ವಾರ್ಷಿಕ ವರದಿಯನ್ನು ಕಂಪನಿ /ಡೆಪಾಸಿಟರೀಸ್/ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಬಳಿ ಇ–ಮೇಲ್ ಐಡಿಯನ್ನು ನೋಂದಾಯಿಸಿದ ಎಲ್ಲಾ ಷೇರುದಾರರಿಗೆ ವಿದ್ಯುನ್ಮಾನ ಮಾದರಿ ಮೂಲಕ ಶುಕ್ರವಾರ, 29 ಆಗಸ್ಟ್ 2025ರಂದು ಕಳುಹಿಸಿಕೊಡಲಾಗಿದೆ. ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಗಳನ್ನು ಇ–ಮೇಲ್ ಮೂಲಕ ಕಳುಹಿಸಿಕೊಡುವ ಪ್ರಕ್ರಿಯೆ ಶುಕ್ರವಾರ, ಸೆಪ್ಟಂಬರ್ 05, 2025ರಂದು ಮುಕ್ತಾಯಗೊಂಡಿದೆ.

ಮುಂದುವರಿದು, ಸೆಬಿ ಲಿಸ್ಟಿಂಗ್ ರೆಗ್ಯುಲೇಷನ್ಸ್ ನಿಯಂತ್ರಣ 36(1)(ಬಿ) ಅನುಗುಣವಾಗಿ, ವಾರ್ಷಿಕ ವರದಿಯನ್ನು ಪಡೆಯಲು ನಿಖರವಾದ ಮಾರ್ಗ/ಕ್ಯುಆರ್ ಕೋಡ್ ಸೇರಿದಂತೆ ವೆಬ್–ಲಿಂಕ್ ಅನ್ನು ಒದಗಿಸುವ ಪತ್ರವನ್ನು ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ ಕಳುಹಿಸಲಾಗುತ್ತದೆ.

ಸೆಕ್ಷನ್ 108ರ ಕಾಯಿದೆ ನಿಯಮ 20ನ್ನು ಓದಿಕೊಂಡಂತೆ ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ) ಮತ್ತು ನಿಯಂತ್ರಣ 44 ರ ಲಿಸ್ಟಿಂಗ್ ರೆಗ್ಯುಲೇಶನ್ಸ್ (ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ) ಮತ್ತು ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳ ಅನುಸಾರ ಕಂಪನಿಯು ಎಜಿಎಂ ಸಂದರ್ಭದಲ್ಲಿ ವ್ಯವಹಾರಗಳ ಮೇಲೆ ಮತಚಲಾಯಿಸಲು ರಿಮೋಟ್ ಇ–ವೋಟಿಂಗ್ ಮತ್ತು ಎಜಿಎಂ ಸಂದರ್ಭದಲ್ಲಿ ಇ–ವೋಟಿಂಗ್ ಸೌಲಭ್ಯವನ್ನು ತನ್ನ ಸದಸ್ಯರಿಗೆ ಒದಗಿಸುತ್ತಿದೆ. ಈ ಉದ್ದೇಶದಿಂದ ಎಲೆಕ್ಟ್ರಾನಿಕ್ ಮತದಾನ ನಡೆಸಲು ಕಂಪನಿಯು ಎನ್‌ಎಸ್‌ಡಿಎಲ್‌ನ್ನು ಅಧಿಕೃತ ಏಜೆನ್ಸಿಯನ್ನಾಗಿ ಒಪ್ಪಂದವನ್ನು ಮಾಡಿಕೊಂಡಿದೆ.

ಎಜಿಎಂ ಮತ್ತು ಇ–ಮತದಾನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಮುಖ ವಿವರಗಳನ್ನು ಸದಸ್ಯರಿಗೆ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

1. 13ನೇ ಎಜಿಎಂ ಸೂಚನೆಯಲ್ಲಿ ತಿಳಿಸಿದಂತೆ ವ್ಯವಹಾರಗಳನ್ನು ಎಲೆಕ್ಟ್ರಾನಿಕ್ ಮಾದರಿಯಲ್ಲಿ ಮಾತ್ರ ನಡೆಸಲಾಗುವುದು.
2. ಎಲೆಕ್ಟ್ರಾನಿಕ್ ಮಾದರಿಯಲ್ಲಿ ಮತ ಚಲಾಯಿಸುವುದನ್ನು ನಿರ್ಧರಿಸಲು ಕಟ್ ಆಫ್ ದಿನಾಂಕವು ಸೋಮವಾರ, 22ನೇ ಸೆಪ್ಟಂಬರ್, 2025 ಅಗಿರುತ್ತದೆ. ಸದಸ್ಯರ ರಿಜಿಸ್ಟರ್ ಅಥವಾ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರಿರುವ ಸದಸ್ಯರು ಈ ಕಟ್‌ಆಫ್ ದಿನಾಂಕವನ್ನು ಗಮನದಲ್ಲಿಟ್ಟು, ರಿಮೋಟ್ ಇ–ವೋಟಿಂಗ್ ಮತ್ತು ಎಜಿಎಂ ಸಂದರ್ಭದಲ್ಲಿ ಇ–ವೋಟಿಂಗ್‌ಗೆ ಅರ್ಹತೆಯನ್ನು ಪಡೆದುಕೊಳ್ಳುತ್ತಾರೆ.
3. ಇ–ವೋಟಿಂಗ್ ಪೋರ್ಟಲ್ ಶುಕ್ರವಾರ, 26ನೇ ಸೆಪ್ಟಂಬರ್ 2025ರಿಂದ (ಭಾ.ಕಾ.9.00 ಗಂಟೆ) ಗೆ ತೆರೆಯಲಿದ್ದು, ಭಾನುವಾರ, 28ನೇ ಸೆಪ್ಟಂಬರ್, 2025ರಂದು (ಭಾ.ಕಾ. ಸಂಜೆ 5.00 ಗಂಟೆಗೆ) ಮುಕ್ತಾಯಗೊಳ್ಳಲಿದೆ. ಈ ದಿನಾಂಕ ಮತ್ತು ಸಮಯದ ನಂತರ ಎನ್‌ಎಸ್‌ಡಿಎಲ್ ಮತದಾನದ ಮಾಡ್ಯೂಲ್‌ನ್ನು ನಿಷ್ಕ್ರಿಯಗೊಳಿಸುತ್ತದೆ ಹಾಗೂ ತದನಂತರ ಮತದಾನಕ್ಕೆ ಅವಕಾಶವಿರುವುದಿಲ್ಲ.
4. ಮೇಲೆ ತಿಳಿಸಿದಂತೆ ಇ–ಮೇಲ್ ವಿಳಾಸವನ್ನು ಯಶಸ್ವಿಯಾಗಿ ನೋಂದಾಯಿಸಿದ ಸದಸ್ಯರಿಗೆ ಇ–ಮತದಾನಕ್ಕಾಗಿ ಲಾಗಿನ್ ವಿವರಗಳನ್ನು ಇ–ಮೇಲ್ ಮೂಲಕ ಲಭ್ಯವಾಗುವಂತೆ ನೋಡಿಕೊಳ್ಳಲಾಗಿದೆ.
5. ವಿಸಿ/ಒಎವಿಎಂ ಮೂಲಕ ಎಜಿಎಂ ಗೆ ಹಾಜರಾಗಲು ಇದೇ ಲಾಗಿನ ವಿವರಗಳನ್ನು ಬಳಸಿಕೊಳ್ಳಬಹುದಾಗಿದೆ.
6. ಯಾವುದೇ ವ್ಯಕ್ತಿ ಸೂಚನೆಯನ್ನು ಕಳುಹಿಸಿದ ನಂತರ ಕಟ್ ಆಫ್ ದಿನಾಂಕ ಅಂದರೆ ಸೋಮವಾರ, ಸೆಪ್ಟಂಬರ್ 22, 2025 ರ ನಂತರ ಷೇರುಗಳನ್ನು ಹೊಂದಿದ್ದರೆ, ಅವರು ಮತದಾನ ಮಾಡಲು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಲು **evoting.nsdl.com** ಗೆ ಕೋರಿಕೆಯನ್ನು ಸಲ್ಲಿಸಿ, ವಿದ್ಯುನ್ಮಾನ ಮಾದರಿಯಲ್ಲಿ ಮತದಾನ ಮಾಡಬಹುದು. ಆದಾಗ್ಯೂ, ಒಬ್ಬ ವ್ಯಕ್ತಿ ಎನ್‌ಎಸ್‌ಡಿಎಲ್‌ನಲ್ಲಿ ಈಗಾಗಲೇ ನೋಂದಾಯಿತವಾಗಿದ್ದರೆ ಹಾಲಿ ಇರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಳಸಿ ಮತದಾನ ಮಾಡಬಹುದು.
7. ಸಭೆಗೆ ಮೊದಲು ಇ–ವೋಟಿಂಗ್ ಮೂಲಕ ಮತ ಚಲಾಯಿಸಿದವರು ಸಭೆಯಲ್ಲಿ ಭಾಗವಹಿಸಬಹುದು. ಆದರೆ, ಮತ್ತೊಮ್ಮೆ ಅವರಿಗೆ ಅಲ್ಲಿ ಮತದಾನಕ್ಕೆ ಅವಕಾಶವಿರುವುದಿಲ್ಲ.

ಭೌತಿಕ, ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿ, ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸದೆ ಇರುವಂತಹ ಸದಸ್ಯರಿಗೆ ಎಜಿಎಂ ಸಂದರ್ಭದಲ್ಲಿ ರಿಮೋಟ್ ಇ–ವೋಟಿಂಗ್ ಮತ್ತು ಇ–ವೋಟಿಂಗ್ ಮೂಲಕ ಮತಚಲಾಯಿಸಲು ವಿವರಗಳನ್ನು ಎಜಿಎಂ ಸೂಚನೆಯಲ್ಲಿ ನೀಡಲಾಗಿದೆ.

ಮತದಾನದ ಪಾರದರ್ಶಕತೆಗಾಗಿ ಮೆ॥ ಮನೀಶ್ ಘಿಯಾ ಆಂಡ್ ಅಸೋಸಿಯೇಟ್ಸ್, ಕಂಪನಿ ಕಾರ್ಯದರ್ಶಿಗಳು, ಮುಂಬಯಿ ಇವರನ್ನು ಎಜಿಎಂ ಸಂದರ್ಭದಲ್ಲಿ ನಡೆಯುವ ಇ–ವೋಟಿಂಗ್ ಪ್ರಕ್ರಿಯೆಗೆ ಪರಿಶೀಲಕರನ್ನಾಗಿ ನೇಮಿಸಲಾಗಿದೆ. ಪರಿಶೀಲಕರ ವರದಿಯ ಜೊತೆಗೆ ಫಲಿತಾಂಶಗಳನ್ನು ನಿಗದಿತ ಅವಧಿಯಲ್ಲಿ ಕಂಪನಿಯ ವೆಬ್‌ಸೈಟ್‌ನಲ್ಲಿ ಘೋಷಿಸಲಾಗುವುದು ಹಾಗೂ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಇವರೊಂದಿಗೂ ಸಂವಹನ ನಡೆಸಲಾಗುವುದು.

ಸದಸ್ಯರು ಎಜಿಎಂ ಸೂಚನೆಯಲ್ಲಿ ನೀಡಲಾದ ಎಲ್ಲಾ ಮಾಹಿತಿಗಳನ್ನು ಮತ್ತು ನಿರ್ದಿಷ್ಟವಾಗಿ ಎಜಿಎಂಗೆ ಹಾಜರಾಗುವುದು ಇ–ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಮತಚಲಾಯಿಸಲು ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳಲು ಕೋರಲಾಗಿದೆ.

ಇ–ವೋಟಿಂಗ್ ಬಗ್ಗೆ ವಿವರವಾದ ಮಾಹಿತಿಗಾಗಿ ಸದಸ್ಯರು 13ನೇ ಎಜಿಎಂ ಸೂಚನೆಯನ್ನು ಆಧಾರ ಮಾಡಿಕೊಳ್ಳಬಹುದು. ಒಂದು ವೇಳೆ ಇ–ವೋಟಿಂಗ್ ಪ್ರಕ್ರಿಯೆ ಬಗ್ಗೆ ಯಾವುದಾದರೂ ಕುಂದುಕೊರತೆಗಳಿದ್ದಲ್ಲಿ ಸದಸ್ಯರು ಫ್ರೀಕ್ವೆಂಟ್ಲಿ ಆಸ್ಕ್ಡ್ ಕ್ವೆಶ್ಚನ್ಸ್ (ಎಫ್‌ಎಕ್ಯು) ಮತ್ತು ಇ–ವೋಟಿಂಗ್ ಕೈಪಿಡಿಯು **www.evoting@nsdl.com** ನಲ್ಲಿ ಲಭ್ಯವಿರುತ್ತದೆ. ಅಥವಾ ಶ್ರೀ ಫಲ್ಗುಣಿ ಚಕ್ರವರ್ತಿ ಇವರಿಗೆ evoting@nsdl.com ಗೆ ಇ–ಮೇಲ್ ಕಳುಹಿಸಬಹುದು. ಅಥವಾ 022–4886 7000 ಗೆ ಕರೆ ಮಾಡಬಹುದು. ಸದಸ್ಯರು ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ ಇವರನ್ನು **compliance-officer@tracxn.com** ರಲ್ಲಿ ಸಂಪರ್ಕಿಸಬಹುದು ಅಥವಾ ಕಂಪನಿಯ ನೋಂದಾಯಿತ ಕಚೇರಿ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/–
ಮೇಘ ತಿಬ್ರೇವಾಲ್
ಕಂಪನಿ ಸೆಕ್ರೆಟರಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟಂಬರ್ 06, 2025

SUBEX

ಸುಬೆಕ್ಸ್ ಲಿಮಿಟೆಡ್

(ಸಿಐಎನ್: L85110KA1994PLC016663)

ನೋಂದಾಯಿತ ಕಚೇರಿ: ಪ್ರಿಟೆಕ್ ಪಾರ್ಕ್ – ಎಸ್‌ಇಝೆಡ್, ಬ್ಲಾಕ್–09, 4ನೇ ಮಹಡಿ, ಬಿ ವಿಂಗ್, ಸರ್ವೆ ನಂ. 51–64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು, ಕರ್ನಾಟಕ, ಭಾರತ–560103 ದೂರವಾಣಿ: 080 3745 1377
ಇಮೇಲ್: investorrelations@subex.com ಜಾಲತಾಣ: www.subex.com

ವಿಡಿಯೋ ಕಾನ್ಫರೆನ್ಸ್ / ಇತರೆ ದೃಶ್ಯಶ್ರಾವ್ಯ ಮಾಧ್ಯಮದ ಮೂಲಕ ನಡೆಸಲಾಗುವ ಮೂವತ್ತೊಂದನೇ ವಾರ್ಷಿಕ ಮಹಾಸಭೆಯ ಸೂಚನೆ ಹಾಗೂ ಇ–ಮತದಾನ ಕುರಿತ ಮಾಹಿತಿ

ಸುಬೆಕ್ಸ್ ಲಿಮಿಟೆಡ್ ("ಕಂಪನಿ")ನ ಸದಸ್ಯರ **31ನೇ ವಾರ್ಷಿಕ ಮಹಾಸಭೆಯು** ('31ನೇ ಎಜಿಎಂ') ಸೋಮವಾರ, **ಸೆಪ್ಟೆಂಬರ್ 29, 2025ರಂದು ಬೆಳಿಗ್ಗೆ 11.00 ಗಂಟೆಗೆ** (ಐಎಸ್‌ಟಿ) ನಿಗದಿಪಡಿಸಿದ್ದು, ವಿಡಿಯೋ–ಕಾನ್ಫರೆನ್ಸ್ / ಇತರೆ ದೃಶ್ಯಶ್ರಾವ್ಯ ಮಾಧ್ಯಮದ ("ವಿಸಿ / ಒಎವಿಎಂ") ಮೂಲಕ 31ನೇ ಎಜಿಎಂನ ಸೂಚನೆಯಲ್ಲಿ ತಿಳಿಸಲಾದ ಸಾಮಾನ್ಯ ಮತ್ತು ವಿಶೇಷ ವ್ಯವಹಾರಗಳನ್ನು ವ್ಯವಹರಿಸಲಾಗುವುದು. ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 ಜೊತೆಗೆ ಇದೇ ವಿಷಯಕ್ಕೆ ಸಂಬಂಧಿಸಿದ ಸುತ್ತೋಲೆಗಳನ್ನು ಓದಿಕೊಂಡಂತೆ ("ಎಂಸಿಎ ಸುತ್ತೋಲೆಗಳು") ಮತ್ತು ಸೆಬಿಯಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD2/P/CIR/2024/133 ದಿನಾಂಕ ಅಕ್ಟೋಬರ್ 3, 2024 ಜೊತೆಗೆ ಇದೇ ವಿಷಯಕ್ಕೆ ಸಂಬಂಧಿಸಿದ ಸುತ್ತೋಲೆಗಳನ್ನು ಓದಿಕೊಂಡಂತೆ ("SEBI ಸುತ್ತೋಲೆಗಳು") ಮತ್ತು ಕಂಪನಿಗಳ ಕಾಯ್ದೆ 2013 ("ಕಾಯ್ದೆ") ಮತ್ತು ಎಸ್‌ಇಬಿಐ (ಆಭಾರಗಳು ಮತ್ತು ಪ್ರಕಟಪಡಿಸುವಿಕೆಯ ಅಗತ್ಯತೆಯ ಸೇರ್ಪಡೆ) ನಿಯಮಗಳು 2015 ಮತ್ತು ಇತರೆ ಅನ್ವಯವಾಗುವ ಕಾನೂನುಗಳ ಅನುಸಾರ ಒಂದೇ ಸ್ಥಳದಲ್ಲಿ ಸದಸ್ಯರ ದೈಹಿಕ ಉಪಸ್ಥಿತಿ ಇಲ್ಲದೆ ಎಜಿಎಂನ ಸೂಚನೆಯಲ್ಲಿ ತಿಳಿಸಿರುವ ವ್ಯವಹಾರಗಳನ್ನು ನಡೆಸಲು ವಾರ್ಷಿಕ ಮಹಾಸಭೆಯ ಸೂಚನೆ ನೀಡಲಾಗಿದೆ.

ಕಂಪನಿ / ಆರ್‌ಟಿಎ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್(ಡಿಪಿ) ರವರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಸದಸ್ಯರಿಗೆ ಮೇಲಿನ ಸುತ್ತೋಲೆಗಳ ಅನುಸಾರ, 31ನೇ ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷ 2024–25ರ ವಾರ್ಷಿಕ ವರದಿ ಜೊತೆಗೆ ಪರಿಶೋಧಿತ ಕ್ರೋಢೀಕೃತ ಹಣಕಾಸು ಹೇಳಿಕೆಗಳನ್ನು ("ವಾರ್ಷಿಕ ವರದಿ") ಸೆಪ್ಟೆಂಬರ್ 05, 2025ರಂದು ಇಮೇಲ್ ಮೂಲಕ ಮಾತ್ರ ಕಳುಹಿಸಲಾಗಿದೆ. ಮೇಲಿನ ಸುತ್ತೋಲೆಗಳ ಅನುಗುಣವಾಗಿ ಕಂಪನಿಯ ಸದಸ್ಯರಿಗೆ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಭೌತಿಕ ವಿಧಾನದಲ್ಲಿ ಕಳುಹಿಸಿರುವುದಿಲ್ಲ.

ಸದಸ್ಯರು (ಭೌತಿಕ / ವಿದ್ಯುನ್ಮಾನ ಸ್ವರೂಪ ಎರಡರಲ್ಲೂ ಷೇರುಗಳನ್ನು ಹೊಂದಿರುವವರು) ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವುದನ್ನು ಕಂಪನಿಯು ಪ್ರೋತ್ಸಾಹಿಸುತ್ತದೆ. ಇಮೇಲ್ ವಿಳಾಸ, ಬ್ಯಾಂಕ್ ಖಾತೆ ವಿವರಗಳು ಮತ್ತು/ಅಥವಾ ಇತರೆ ಕೆವೈಸಿ ವಿವರಗಳ ನೋಂದಣಿ ವಿಧಾನ, ವಾರ್ಷಿಕ ಮಹಾ ಸಭೆಯ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಪಡೆಯುವುದು, ರಿಮೋಟ್ ಇ–ಮತದಾನ, ವಾರ್ಷಿಕ ಮಹಾ ಸಭೆಯ ಸಂದರ್ಭದಲ್ಲಿ ಇ–ಮತದಾನ ಮತ್ತು/ಅಥವಾ ಇ–ಮತದಾನಕ್ಕಾಗಿ ಯೂಸರ್ ಐಡಿ/ಪಾಸ್‌ವರ್ಡ್ ಪಡೆಯುವುದು ಮತ್ತು ಪಾವತಿಸದ/ಕ್ಲೈಮ್ ಮಾಡದ ಲಾಭಾಂಶದ ಸ್ವೀಕೃತಿಗಾಗಿ ಬ್ಯಾಂಕ್ ಖಾತೆಯ ವಿವರಗಳನ್ನು ನವೀಕರಿಸುವ ಪ್ರಕ್ರಿಯೆಯನ್ನು ವಾರ್ಷಿಕ ಮಹಾ ಸಭೆಯ ಸೂಚನೆಯಲ್ಲಿ ನೀಡಿರುವ ವಿವರಗಳನ್ನು ಸದಸ್ಯರು ಅನುಸರಿಸತಕ್ಕದ್ದು.

ನಿರ್ಣಾಯಕ ದಿನಾಂಕ: ಸೋಮವಾರ, ಸೆಪ್ಟೆಂಬರ್ 22, 2025.

ವಿಸಿ/ಒಎವಿಎಂ: ಷೇರುದಾರರು ತಮ್ಮ ಸುರಕ್ಷಿತ ಲಾಗಿನ್ ರುಜುವಾತುಗಳನ್ನು ಬಳಸಿಕೊಂಡು 31ನೇ ವಾರ್ಷಿಕ ಮಹಾಸಭೆಯಲ್ಲಿ ವಿಸಿ/ಒಎವಿಎಂ ಮೂಲಕ ಲಿಂಕ್: **https://evoting.nsdl.com/** ಬಳಸಿಕೊಂಡು ಭಾಗವಹಿಸಲು ಕಂಪನಿಯು ಕೋರುತ್ತದೆ. 31ನೇ ವಾರ್ಷಿಕ ಮಹಾಸಭೆಯಲ್ಲಿ ವಿಸಿ / ಒಎವಿಎಂ ಮೂಲಕ ಭಾಗವಹಿಸುವ ಮತ್ತು ಇ–ಮತದಾನ ಮಾಡುವ ವಿಧಾನ ಮತ್ತು ಸೂಚನೆಗಳನ್ನು 31ನೇ ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ತಿಳಿಸಲಾಗಿದೆ.

ಇ–ಮತದಾನ: ಕಂಪನಿಯ ಇ–ಮತದಾನ ಸೇವಾದಾರರಾದ ಎನ್‌ಎಸ್‌ಡಿಎಲ್‌ರವರು ಒದಗಿಸಿರುವ ಇ–ಮತದಾನ ಸೌಲಭ್ಯದ ಮೂಲಕ ಸದಸ್ಯರು 31ನೇ ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ತಿಳಿಸಲಾದ ಎಲ್ಲಾ ನಿರ್ಣಯಗಳ ಮೇಲೆ ವಿದ್ಯುನ್ಮಾನವಾಗಿ ಮತ ಚಲಾಯಿಸಬಹುದಾಗಿದೆ. ಸದೂರ ಇ–ಮತದಾನವು **ಗುರುವಾರ, ಸೆಪ್ಟೆಂಬರ್ 25, 2025ರಂದು ಬೆಳಿಗ್ಗೆ 9:00 ಗಂಟೆ** (ಐಎಸ್‌ಟಿ)ಯಿಂದ ಪ್ರಾರಂಭಗೊಂಡು **ಭಾನುವಾರ, ಸೆಪ್ಟೆಂಬರ್ 28, 2025ರಂದು ಸಂಜೆ 5:00 ಗಂಟೆ** (ಐಎಸ್‌ಟಿ)ಗೆ ಮುಕ್ತಾಯಗೊಳ್ಳುತ್ತದೆ. **ಭಾನುವಾರ ಸೆಪ್ಟೆಂಬರ್ 28, 2025ರ ಸಂಜೆ 5:00 ಗಂಟೆ** (ಐಎಸ್‌ಟಿ) ನಂತರ ಇ–ಮತದಾನದ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು ಎಂಬುದನ್ನು ಸದಸ್ಯರು ಗಮನಿಸತಕ್ಕದ್ದು. ಸದೂರ ಇ–ಮತದಾನದ ಮೂಲಕ ಮತ ಚಲಾಯಿಸದ ಸದಸ್ಯರು, 31ನೇ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಇ–ಮತದಾನದ ಮೂಲಕ ಮತವನ್ನು ಚಲಾಯಿಸಬಹುದಾಗಿರುತ್ತದೆ.

ನಿರ್ಣಾಯಕ ದಿನಾಂಕವಾದ **ಸೋಮವಾರ, ಸೆಪ್ಟೆಂಬರ್ 22, 2025**ರಂದು ಯಾವ ಸದಸ್ಯರ ಹೆಸರುಗಳು ಡೆಪಾಸಿಟರೀಸ್ ಬಳಿ ಇರುವ ಸದಸ್ಯರ ನೋಂದಣಿ ದಸ್ತಾವೇಜು / ಡೆಪಾಸಿಟರೀಸ್‌ನಿಂದ ನಿರ್ವಹಿಸಲ್ಪಟ್ಟ ಫಲಾನುಭವಿ ಮಾಲೀಕರ ದಸ್ತಾವೇಜಿನಲ್ಲಿ ಸೇರ್ಪಟ್ಟಿರುತ್ತದೆಯೋ, ಅಂತಹ ಸದಸ್ಯರು ಮಾತ್ರ ಸದೂರ ಇ–ಮತದಾನ (**ಸೆಪ್ಟೆಂಬರ್ 25, 2025 – ಸೆಪ್ಟೆಂಬರ್ 28, 2025**ರ ನಡುವೆ) / 31ನೇ ವಾರ್ಷಿಕ ಮಹಾಸಭೆಯಲ್ಲಿ ಇ–ಮತದಾನ ಮಾಡುವ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯರು ಒಮ್ಮೆ ನಿರ್ಣಯದ ಅನುಸಾರವಾಗಿ ತಮ್ಮ ಮತದಾನವು ಚಲಾಯಿಸಲ್ಪಟ್ಟ ತರುವಾಯ, ಅವನ / ಅವಳ ನಿರ್ಣಯವನ್ನು ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ. ಸದೂರ ಇ–ಮತದಾನದ ಮೂಲಕ ಮತ ಚಲಾಯಿಸದ ಸದಸ್ಯರು, ತಮ್ಮ ಇ–ಮತದಾನದ ಹಕ್ಕನ್ನು 31ನೇ ವಾರ್ಷಿಕ ಮಹಾಸಭೆಯಲ್ಲಿ ಚಲಾಯಿಸಬಹುದಾಗಿರುತ್ತದೆ. 31ನೇ ವಾರ್ಷಿಕ ಮಹಾಸಭೆಗೆ ಮುಂಚಿತವಾಗಿ ಒದಗಿಸಿರುವ ಸದೂರ ಇ–ಮತದಾನ ಮೂಲಕ ಮತ ಚಲಾಯಿಸಿದ ಸದಸ್ಯರು ಸಹ 31ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಹುದು, ಆದರೆ ಅಲ್ಲಿ ಪುನಃ ಮತದಾನಕ್ಕೆ ಅವಕಾಶವಿರುವುದಿಲ್ಲ.

ಇಮೇಲ್ ಮೂಲಕ ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಸದಸ್ಯರಾದ ಹೂಡಿಕೆದಾರರು ಮತ್ತು ನಿರ್ಣಾಯಕ ದಿನಾಂಕದಂದು ಅಂದರೆ **ಸೆಪ್ಟೆಂಬರ್ 22, 2025**ರಂತೆ ಷೇರುಗಳನ್ನು ಹೊಂದಿರುವ ಹೂಡಿಕೆದಾರರು, ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಪಡೆಯಲು ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ಒದಗಿಸಿರುವ ವಿಧಾನದಂತೆ ಪಡೆಯತಕ್ಕದ್ದು.

ಇ–ಮತದಾನ ಮತ್ತು ಸದೂರ ಇ–ಮತದಾನ ಪ್ರಕ್ರಿಯೆಯನ್ನು ನಡೆಸಲು ಕಂಪನಿಯು ಶ್ರೀ ಪ್ರಮೋದ್ ಎಸ್.ಎಂ. ಪಾಲುದಾರರು, ಬಿಎಂಪಿ & ಕಂ., ಎಲ್‌ಎಲ್‌ಪಿ, ಪಿಸಿಎಸ್, ಅವರನ್ನು ಪರಿವೀಕ್ಷಕರನ್ನಾಗಿ ಮತ್ತು ಶ್ರೀ ಬಿಸ್ವಜಿತ್ ಘೋಷ್, ಪಾಲುದಾರರು, ಬಿಎಂಪಿ & ಕಂ., ಎಲ್‌ಎಲ್‌ಪಿ, ಪಿಸಿಎಸ್, ಅವರನ್ನು ಶ್ರೀ ಪ್ರಮೋದ್ ಎಸ್.ಎಂ. ರವರಿಗೆ ಪರ್ಯಾಯ ಪರಿವೀಕ್ಷಕರನ್ನಾಗಿ ಇ–ಮತದಾನವನ್ನು ಪರಿಶೀಲಿಸಲು ನೇಮಿಸಿದೆ.

ವಾರ್ಷಿಕ ಮಹಾಸಭೆಯ ಸೂಚನೆ ಮತ್ತು ವಾರ್ಷಿಕ ವರದಿಯನ್ನು ಕಂಪನಿಯ ಜಾಲತಾಣ ಅಡಿಯಲ್ಲಿ https://www.subex.com/investors/shareholder-services/ ಮತ್ತು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ 'ಸ್ಟಾಕ್ ಎಕ್ಸ್ಚೇಂಜ್'ಗಳ ಜಾಲತಾಣಗಳು ಅಂದರೆ ಬಿಎಸ್‌ಇ ಲಿಮಿಟೆಡ್ (www.bseindia.com) ಮತ್ತು ನ್ಯಾಷನಲ್ ಸ್ಟಾಕ್‌ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ನಲ್ಲಿ ಹಾಗೂ ಎನ್‌ಎಸ್‌ಡಿಎಲ್‌ನ ವೆಬ್‌ಸೈಟ್ www.evoting.nsdl.com ನಲ್ಲಿ ಸಹ ಲಭ್ಯವಿದೆ. ವಾರ್ಷಿಕ ವರದಿ ಮತ್ತು 31ನೇ ವಾರ್ಷಿಕ ಮಹಾಸಭೆಯ ಸೂಚನೆಯ ಪ್ರತಿಯನ್ನು ಪಡೆಯಲು ಸದಸ್ಯರು investorrelations@subex.com ಗೆ ಬರೆಯಬಹುದು.

ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರಿಂದ ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯು www.evoting.nsdl.comನ "ಡೌನ್‌ಲೋಡ್ಸ್" ವಿಭಾಗದಲ್ಲಿ ಲಭ್ಯವಿದೆ, ಅಥವಾ 022 – 4886 7000ಗೆ ಕರೆ ಮಾಡಬಹುದು ಅಥವಾ ಶ್ರೀಮತಿ ರಿಂಪಾ ಬಾಗ್ ಅವರಿಗೆ evoting@nsdl.comಗೆ ಇಮೇಲ್ ಕಳುಹಿಸಬಹುದು. ಯಾವುದೇ ಸ್ಪಷ್ಟೀಕರಣ / ಕುಂದುಗಳಿದ್ದಲ್ಲಿ ಸದಸ್ಯರು ಕೆಳ ಸಹಿದಾರರನ್ನು investorrelations@subex.com ಮೂಲಕ ಸಂಪರ್ಕಿಸಬಹುದು.

ಸುಬೆಕ್ಸ್ ಲಿಮಿಟೆಡ್ ಪರವಾಗಿ
ಸಹಿ/–
ರಾಮು ಅಕ್ಕಿಲಿ
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲೈನ್ಸ್ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಸೆಪ್ಟೆಂಬರ್ 5, 2025

ದಾಖಲೆ ಇಲ್ಲದೇ ವಿದೇಶಿಗರಿಗೆ ಮನೆ ಬಾಡಿಗೆ | ಸಿ – ಫಾರ್ಮ್ ಕಡ್ಡಾಯ ಸಲ್ಲಿಕೆಗೆ ಪೊಲೀಸರ ಸೂಚನೆ

23 ಮನೆ ಮಾಲೀಕರ ವಿರುದ್ಧ ಎಫ್‌ಐಆರ್

ಬೆಂಗಳೂರು ವಿಶ್ವವಾಣಿ ಸುದ್ದಿಮನೆ

ಅಗತ್ಯ ದಾಖಲೆಗಳಿಲ್ಲದೇ ವಿದೇಶಿ ಪ್ರಜೆಗಳಿಗೆ ಮನೆಗಳನ್ನು ಬಾಡಿಗೆಗೆ ನೀಡಿದ್ದ 23 ಜನ ಮಾಲೀಕರ ವಿರುದ್ಧ ಬೆಂಗಳೂರು ಈಶಾನ್ಯ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಯಾವುದೇ ದಾಖಲಾತಿಗಳನ್ನು ಪಡೆದುಕೊಳ್ಳದ ಹಾಗೂ ಸಿ ಫಾರ್ಮ್ ಸಲ್ಲಿಸದ ಮನೆಯ ಮಾಲೀಕರ ವಿರುದ್ಧ ರಿಜಿಸ್ಟ್ರೇಷನ್ ಆಫ್ ಫಾರಿನರ್ಸ್ ಆ್ಯಕ್ಟ್ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈಶಾನ್ಯ ವಿಭಾಗದ ಅಮೃತಹಳ್ಳಿ, ಬಾಗಲೂರು, ಸಂಪಿಗೆಹಳ್ಳಿ, ವಿದ್ಯಾರಣ್ಯಪುರ ಠಾಣೆಗಳಲ್ಲಿ ತಲಾ ಒಂದು, ಚಿಕ್ಕಜಾಲ ಹಾಗೂ ಕೊಡಿಗೆಹಳ್ಳಿಯಲ್ಲಿ ತಲಾ ಎರಡು, ಯಲಹಂಕ ನ್ಯೂಟೌನ್ ಠಾಣೆಯಲ್ಲಿ ಮೂರು, ಕೊತ್ತನೂರು ಠಾಣೆಯಲ್ಲಿ ಐದು, ಯಲಹಂಕ ಠಾಣೆಯಲ್ಲಿ ಏಳು ಪ್ರಕರಣಗಳು ದಾಖಲಾಗಿವೆ. ಅನೇಕ ಕಡೆಗಳಲ್ಲಿ ವೀಸಾ ಅವಧಿ ಅಂತ್ಯವಾದ ಬಳಿಕ ಅಕ್ರಮವಾಗಿ ವಿದೇಶಿ ಪ್ರಜೆಗಳು ನಗರದಲ್ಲಿ ನೆಲೆಸಿರುವುದು ಪತ್ತೆಯಾಗಿದೆ.

ಭಾರತೀಯ ವಿದೇಶಿಗರ ಕಾಯ್ದೆಯ ಅನುಸಾರ ವಿದೇಶಿ ಪ್ರಜೆಗಳಿಗೆ ಮನೆಗಳನ್ನು ಬಾಡಿಗೆಗೆ ನೀಡುವಾಗ ಮಾಲೀಕರು ಅಥವಾ ಆ ಮನೆಗಳನ್ನು ನಿರ್ವಹಿಸುತ್ತಿರುವವರು ಆ ಪ್ರಜೆಗಳ ವಿವರಗಳನ್ನು 24 ಗಂಟೆಗೊಳಗಾಗಿ ಸಲ್ಲಿಸಬೇಕು. ನಂತರ ಎಫ್‌ಆರ್‌ಆರ್‌ಒನಿಂದ ಸಿ – ಫಾರ್ಮ್ ಪಡೆದು ಸ್ಥಳಿಯ ಠಾಣೆಗೆ ಸಲ್ಲಿಸಬೇಕಿರುವುದು ಕಡ್ಡಾಯ. ಈ ಕಾಯ್ದೆಯನ್ನು ಉಲ್ಲಂಘಿಸುವ ಮನೆ ಮಾಲೀಕರ ವಿರುದ್ಧ ಬೆಂಗಳೂರಿನಲ್ಲಿ 70 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಆ ಪೈಕಿ 42 ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದು, 26 ಪ್ರಕರಣಗಳು ತನಿಖಾ ಹಂತದಲಿದ್ದು, ಬಂಡೆಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಒಂದು ಪ್ರಕರಣದಲ್ಲಿ ಶಿಕ್ಷೆ ಪ್ರಕಟವಾಗಿದೆ ಎಂದು ಪೊಲೀಸರು ತಿಳಿಸಿದರು.

ಮಾರ್ಚ್‌ನಲ್ಲಿ ಇಬ್ಬರು ವಿದೇಶಿಗಳ ಬಂಧನ

ವೀಸಾ ಅವಧಿ ಮುಗಿದ ಬಳಿಕವೂ ಅಕ್ರಮವಾಗಿ ಭಾರತದಲ್ಲಿಯೇ ವಾಸವಾಗಿದ್ದ ಇಬ್ಬರು ವಿದೇಶಿ ಪ್ರಜೆಗಳನ್ನು ಸಿಸಿಬಿ ಪೊಲೀಸರು ಮಾರ್ಚ್‌ನಲ್ಲಿ ಬಂಧಿಸಿದ್ದರು. ಮಾಡೆಲಿಂಗ್‌ಗಾಗಿ ಅರ್ಜೆಂಟೀನಾ ಹಾಗೂ ಬ್ರೆಜಿಲ್ ಪ್ರಜೆಗಳು ಬೆಂಗಳೂರಿಗೆ ಬಂದು ಹೆಬ್ಬಾಳದ ಆನಂದ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಇವರ ವೀಸಾ ಅವಧಿ ಮುಗಿದಿ ದ್ದರೂ ಭಾರತದಲ್ಲಿಯೇ ವಾಸವಾಗಿದ್ದರು. ಜತೆಗೆ ದೇಶಿ ಪ್ರಜೆಗಳು ವಾಸವಿದ್ದುದರ ಕುರಿತು ವಿದೇಶಿಗರ ಪ್ರಾದೇಶಿಕ ನೋಂದಣಿ ಕೇಂದ್ರ/ಸ್ಥಳೀಯ ಠಾಣೆಗೆ ಮಾಹಿತಿ ನೀಡಿ, ಸಿ ಫಾರ್ಮ್ ಪಡೆಯದ ಹಿನ್ನೆಲೆಯಲ್ಲಿ ಬಾಡಿಗೆ ಮನೆ ಮಾಲೀಕ ಹಾಗೂ ಮಾಡೆಲಿಂಗ್ ಏಜೆನ್ಸಿ ಪ್ರತಿನಿಧಿಯ ವಿರುದ್ಧವೂ ಪ್ರಕರಣ ದಾಖಲಾಗಿತ್ತು.

ಆಟಿಕೆ ಪಿಸ್ತೂಲಿನಿಂದ ಬೆದರಿಸಿ ಕಳ್ಳತನ: ನಾಲ್ವರ ಸೆರೆ

ನಗರದ ಹೊರವಲಯದ ಜ್ಯೂವೆಲ್ಲರಿ ಶಾಪ್‌ಗೆ ನುಗ್ಗಿ ಮಾಲೀಕನಿಗೆ ಆಟಿಕೆ ಪಿಸ್ತೂಲಿನಿಂದ ಬೆದರಿಸಿ 90 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ನಾಲ್ವರ ದರೋಡೆಕೋರರನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಿಹಾರ ಹಾಗೂ ನಗರದ ನಾಲ್ವರು ದರೋಡೆಕೋರ ಬಂಧನದಿಂದ 40ಕ್ಕೂ ಹೆಚ್ಚು ದರೋಡೆ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ದರೋಡೆಕೋರರ ಗ್ಯಾಂಗ್ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ದರೋಡೆ ಹಾಗೂ ಕಳ್ಳತನ ಮಾಡಿರುವುದು ಪೊಲೀಸರ ವಿಚಾರಣೆಯಿಂದ ಬೆಳಕಿಗೆ ಬಂದಿದೆ.

ಕಳೆದ ಜುಲೈ 21 ರಂದು ಮಾಗಡಿ ರಸ್ತೆಯ ಮಾಚೋಹಳ್ಳಿ ಜ್ಯೂವೆಲ್ಲರಿ ಶಾಪ್‌ಗೆ ಈ ದರೋಡೆಕೋರರ ತಂಡ ನುಗ್ಗಿ, ಮಾಲೀಕನಿಗೆ ಆಟಿಕೆ ಗನ್ ತೋರಿಸಿ ಬೆದರಿಸಿ ಆಭರಣಗಳನ್ನು ದೋಚಿ ಪರಾರಿಯಾಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ಚುರುಕುಗೊಳಿಸಿದ ಪೊಲೀಸರು ಬೇರೆ ಬೇರೆ ರಾಜ್ಯಗಳಿಗೂ ಮಾಹಿತಿ ರವಾನಿಸಿ ಆರೋಪಿಗಳಿಗಾಗಿ ಹುಡುಕಾಡುತ್ತಿದ್ದರು. ಇದೀಗ ನಾಲ್ವರನ್ನು ಬಂಧಿಸಿದ್ದು, ಉಳಿದವರಿಗಾಗಿ ಶೋಧ ಮುಂದುವರೆಸಿದ್ದಾರೆ.

ಯುವತಿ ವಿಚಾರಕ್ಕೆ ಜಗಳ: ನಾಲ್ವರ ಸೆರೆ

ಯುವತಿಯ ವಿಚಾರಕ್ಕೆ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದು ಕೊಲೆಗೆ ಯತ್ನಿಸಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಫಾರ್ದೀನ್ (24), ಮೊಹಮ್ಮದ್ ಅಫಾನ್ (26), ಮೊಹಮ್ಮದ್ ರಾಯನ್ (21) ಹಾಗೂ ಎಂ. ಸಮೀರ್ (24) ಬಂಧಿತರು. ಬಾಬು ರಾಯನ್ ಎಂಬುವವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಕೊಲೆ ಮಾಡುವ ಉದ್ದೇಶದಿಂದ ಮಾರಕಾಸ್ತ್ರ ಹಿಡಿದು ಬಂದಿದ್ದ ಆರೋಪಿಗಳು, ನನ್ನ ಹಾಗೂ ಅಫ್ರಿನ್ ಮೇಲೆ ಹಲ್ಲೆ ನಡೆಸಿದ್ದರು ಎಂದು ರಾಯನ್ ದೂರು ನೀಡಿದ್ದರು.

ಬೈಕ್ ಡಿಕ್ಕಿ: ಸೆಕ್ಯೂರಿಟಿ ಗಾರ್ಡ್ ಸಾವು

ಎಲೆಕ್ಟ್ರಾನಿಕ್ ಸಿಟಿ ಶಾಂತಿಪುರದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ವೇಳೆ ದ್ವಿಚಕ್ರ ವಾಹನವೊಂದು ಸೆಕ್ಯೂರಿಟಿ ಗಾರ್ಡ್‌ಗೆ ಡಿಕ್ಕಿಯಾದ ಪರಿಣಾಮ ಅವರು ಮೃತಪಟ್ಟಿದ್ದಾರೆ. ಹೀರಾನಾಯ್ಕ (60) ಮೃತಪಟ್ಟ ಪಾದಚಾರಿ. ಶಾಂತಿಪುರ ನಿವಾಸಿಯಾದ ಹೀರಾನಾಯ್ಕ ಅವರು ಮನೆಯ ಸಮೀಪದ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಗುರುವಾರ ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದರು. ಆಗ, ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಹೀರಾನಾಯ್ಕ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವನಹಳ್ಳಿ ತಾಲೂಕಿನ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತ

ಬೆಂಗಳೂರು: ದೇವನಹಳ್ಳಿ ತಾಲೂಕಿನಲ್ಲಿ ಕೈಗಾರಿಕೆ ಉದ್ದೇಶಕ್ಕೆ ಮಾಡಲಾಗಿದ್ದ ಭೂ ಸ್ವಾಧೀನವನ್ನು ಕೈಬಿಟ್ಟು ಹಸಿರುವಲಯವನ್ನಾಗಿ ಮುಂದುವರೆಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರ ವಿರೋಧ ಇರುವ ಒಂದು ಎಕರೆ ಜಮೀನನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಸ್ವ ಇಚ್ಛೆಯಿಂದ ಯಾರು ಕೃಷಿ ಜಮೀನು ನೀಡಲು ಮುಂದೆ ಬರುತ್ತಾರೆಯೋ ಅಂಥ ಜಮೀನನ್ನು ಪಡೆಯುತ್ತೇವೆ. ವರ್ಷದ ನಂತರ ಭೂಮಿಯ ಬೆಲೆ ದುಬಾರಿಯಾಗಿದೆ. ಹೀಗಾಗಿ ಜಮೀನು ನೀಡಲು ನಿರಾಕರಿಸಿದವರ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುತ್ತೇವೆ ಎಂದರು. ಕೃಷ್ಣ ಮೇಲ್ದಂಡೆ ಯೋಜನೆಯ ಭೂ ಸ್ವಾಧೀನದ ಗೊಂದಲದ ವಿಚಾರ ಈಗ ಒಂದು ಹಂತಕ್ಕೆ ಬಂದಿದೆ. 75 ಸಾವಿರ ಎಕರೆ ಪ್ರದೇಶ ಮುಳುಗಡೆಯಾಗಲಿದೆ. 75 ಸಾವಿರ ಎಕರೆ ಭೂಸ್ವಾಧೀನ ಆಗಬೇಕು. ಅದಕ್ಕೆ ಪರಿಹಾರ ನೀಡಬೇಕಾಗಿದೆ. ಪ್ರತಿ ಎಕರೆ 50 ಲಕ್ಷ ರು. ನೀಡಬೇಕೆಂಬ ಬೇಡಿಕೆ ಇದೆ. ಒಟ್ಟಾರೆ 25 ಸಾವಿರ ಕೋಟಿ ರು. ಬೇಕಾಗಬಹುದು ಎಂದರು. ನಾಲೆಗಳಿಗೆ 11 ಕೋಟಿ ಬೇಕಾಗುತ್ತದೆ. ಒಟ್ಟಾರೆ ಯೋಜನೆಗೆ 95 ಸಾವಿರ ಕೋಟಿ ರು. ವೆಚ್ಚವಾಗಬಹುದೆಂದು ಅಂದಾಜಿಸ ಲಾಗಿದೆ. ಪುನರ್‌ವಸತಿಯಲ್ಲೂ ಸಮಸ್ಯೆಯಿದೆ. ಸರಕಾರ ಎಲ್ಲವನ್ನು ಸರಿ ಮಾಡಲಿದೆ ಎಂದು ತಿಳಿಸಿದರು.

ಉದ್ಘಾಟಿಸುವುದು ಬೇಡ: ಮಾಜಿ ಎಂಎಲ್‌ಸಿ ಅಬ್ದುಲ್ ಅಜೀಮ್ ಮನವಿ

ದಸರಾ ಉದ್ಘಾಟನೆ ಆಹ್ವಾನ ಬಾನು ಮುಷ್ತಾಕ್ ತಿರಸ್ಕರಿಸಲಿ

ಬೆಂಗಳೂರು: ಒಂದು ಧರ್ಮದ ಜನರು ದಸರಾ ಉದ್ಘಾಟನೆ ಮಾಡುವುದು ಬೇಡ ಎಂದು ಹೇಳಿದಾಗ ಅವರು ದಸರಾ ಉದ್ಘಾಟನೆಗೆ ಹೋಗಬಾರದು. ಸರಕಾರದ ಆಹ್ವಾನವನ್ನು ಅವರು ತಿರಸ್ಕರಿಸಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಅಬ್ದುಲ್ ಅಜೀಮ್ ಮನವಿ ಮಾಡಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದಸರಾ ಉದ್ಘಾಟನೆಗೆ ಸರಕಾರದ ಆಹ್ವಾನವನ್ನು ಬಾನು ಮುಷ್ತಾಕ್ ಒಪ್ಪಿಕೊಂಡಿದ್ದಾರೆ. ಆದರೆ ರಾಜ್ಯದಲ್ಲಿರುವ ಹಿಂದೂಗಳು ಮುಷ್ತಾಕ್ ಅವರಿಗೆ ನೀವು ದಸರಾ ಉದ್ಘಾಟನೆ ಮಾಡುವುದು ಬೇಡ. ಇದು ಹಿಂದೂಗಳ ಧಾರ್ಮಿಕ ಹಬ್ಬ. ಅದನ್ನು ನಮ್ಮ ಹಿಂದೂಗಳೇ ಮಾಡಬೇಕು, ಬೇರೆ ಧರ್ಮದವರು ಮಾಡಬಾರದು ಎಂದು ಮನವಿ ಮಾಡಿದ್ದಾರೆ. ಆದ್ದರಿಂದ ಅವರು ದಸರಾ ಉದ್ಘಾಟನೆಯ ಆಹ್ವಾನ ಒಪ್ಪಿಕೊಳ್ಳಬಾರದು. ಕರ್ನಾಟಕದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವುದು ನಮ್ಮ ಜವಾಬ್ದಾರಿ. ರಾಜ್ಯದಲ್ಲಿರುವ ಹಿಂದೂ ಮುಸಲ್ಮಾನರು ಸೌಹಾರ್ದತೆಯಿಂದ ಬಾಳಬೇಕು ಎನ್ನುವ ಉದ್ದೇಶವಾಗಿದೆ ಎಂದು ಹೇಳಿದರು.

ನಾನು ಪೊಲೀಸ್ ಸೇವೆಯಲ್ಲಿದ್ದಾಗ ಸುಮಾರು 10 ವರ್ಷಗಳ ಕಾಲ ದಸರಾ ಹಬ್ಬದ ಸಂದರ್ಭದಲ್ಲಿ ಚಾಮುಂಡಿ ದೇವಸ್ಥಾನದಲ್ಲಿ, ಮೈಸೂರು ಪ್ಯಾಲೆಸ್, ವಿಜಯದಶಮಿ, ಆಯುಧ ಪೂಜೆ ಭದ್ರತೆಗೆ ಕೆಲಸ ಮಾಡಿದ್ದೇನೆ. ಇದರಿಂದ ಏನು ಅರ್ಥವಾಗಿದೆ ಎಂದರೆ ದಸರಾ ಹಬ್ಬ ಹಿಂದೂಗಳ ಧಾರ್ಮಿಕ ಹಬ್ಬ. ಬಕ್ರೀದ್ ಮತ್ತು ರಂಜಾನ್ ಹಬ್ಬಗಳು ಮುಸಲ್ಮಾನರ ಹಬ್ಬ. ನಮ್ಮ ಧರ್ಮದಲ್ಲಿ ಇರುವ ಆಚರಣೆ ನಾವು ಮಾಡುತ್ತೇವೆ ಎಂದು ತಿಳಿಸಿದರು.

ಹಿಂದೂ ಮುಸಲ್ಮಾನರ ಮಧ್ಯೆ ದ್ವೇಷ ಸಾಧ್ಯತೆ

ಹಿಂದೂಗಳ ಗ್ರಂಥಗಳಲ್ಲಿ, ಪುರಾಣಗಳಲ್ಲಿ, ವೇದಗಳಲ್ಲಿ, ಉನಿಷತ್‌ಗಳಲ್ಲಿ, ಭಗವದ್ಗೀತೆಯಲ್ಲಿ, ಮಹಾಭಾರತದಲ್ಲಿ ಮತ್ತು ರಾಮಾಯಣದಲ್ಲಿ ಚಾಮುಂಡಿ ದೇವಿಯ ಬಗ್ಗೆ ನಮೂದಿಸಿದ್ದಾರೆ. ಮಹಿಷಾಸುರ ರಾಕ್ಷಸನನ್ನು ಚಾಮುಂಡಿ ದೇವಿ ನಾಶ ಮಾಡಿದ ವಿಜಯೋತ್ಸವ ನವರಾತ್ರಿ ದಿನವನ್ನಾಗಿ ಆಚರಿಸುತ್ತಾರೆ. ಇದು ಹಿಂದೂ ಧಾರ್ಮಿಕ ಹಬ್ಬ. ಹಿಂದೂ ಧಾರ್ಮಿಕ ಹಬ್ಬಕ್ಕೆ ಮುಸಲ್ಮಾನರು ಹೋದರೆ ಅವರ ಭಾವನೆಗಳಿಗೆ ಧಾರ್ಮಿಕ ಧಕ್ಕೆ ಉಂಟಾಗುತ್ತದೆ. ಇದರಿಂದ ವಿವಾದಗಳು ಸೃಷ್ಟಿಯಾಗುತ್ತದೆ ಹಾಗೂ ಹಿಂದೂ ಮುಸಲ್ಮಾನರ ಮಧ್ಯೆ ದ್ವೇಷ ಉಂಟಾಗುವ ಸಾಧ್ಯತೆಗಳು ಇರುವುದರಿಂದ, ಅವರು ಸರಕಾರದ ಆಹ್ವಾನ ಒಪ್ಪಿಕೊಳ್ಳಬಾರದು ಎಂದು ಮಾಜಿ ಎಂಎಲ್‌ಸಿ ಅಬ್ದುಲ್ ಅಜೀಮ್ ವಿನಂತಿಸಿದರು.

- **ಹಿಂದೂ ಮುಸಲ್ಮಾನರು ಸೌಹಾರ್ದತೆಯಿಂದ ಬಾಳಬೇಕು ಎನ್ನುವ ಉದ್ದೇಶ ನನ್ನದು**
- **ಹಿಂದೂ ಧಾರ್ಮಿಕ ಹಬ್ಬಕ್ಕೆ ಮುಸಲ್ಮಾನರು ಹೋದರೆ ಹಿಂದೂ ಭಾವನೆಗೆ ಧಾರ್ಮಿಕ ಧಕ್ಕೆ ಸಾಧ್ಯತೆ**
- **ಹೀಗಾಗಿ ಸರಕಾರ ಆಹ್ವಾನ ನೀಡಿರುವುದಕ್ಕೆ ಬಾನು ಮುಷ್ತಾಕ್ ಒಪ್ಪಿಕೊಳ್ಳಬಾರದು**

Canarys Solution is our Mantra

ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್
(ಹಿಂದಿನ ಹೆಸರು ಕ್ಯಾನರೀಸ್ ಆಟೊಮೇಶನ್ಸ್ ಪ್ರೈವೇಟ್ ಲಿಮಿಟೆಡ್)
CIN: L31101KA1991PLC012096
ನೋಂದಾಯಿತ ಕಛೇರಿ : ನಂ. 566 & 567, 2ನೇ ಮಹಡಿ, 30ನೇ ಮುಖ್ಯರಸ್ತೆ, ಅತ್ತಿಮಬ್ಬೆ ರಸ್ತೆ, ಬನಗಿರಿನಗರ, ಬನಶಂಕರಿ 3ನೇ ಘಟ್ಟ, ಬೆಂಗಳೂರು– 560085, ಕರ್ನಾಟಕ, ಭಾರತ
ಸಂಪರ್ಕ ಸಂಖ್ಯೆ: +91 9845862780; ಇಮೇಲ್ ಐಡಿ: fin@ecanarys.com ವೆಬ್‌ಸೈಟ್: www.ecanarys.com

ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, **ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್** ("ಕಂಪನಿ") ಕಂಪನಿಯ ಸದಸ್ಯರ 34ನೇ ವಾರ್ಷಿಕ ಮಹಾಸಭೆಯನ್ನು **ಮಂಗಳವಾರ, 30ನೇ ಸೆಪ್ಟಂಬರ್ 2025 ರಂದು ಸಂಜೆ 04:00 ಗಂಟೆಗೆ (ಐಎಸ್‌ಟಿ)** ವಿಡಿಯೊ ಕಾನ್ಫರೆನ್ಸಿಂಗ್ ("ವಿಸಿ") / ಇನ್ನಿತರ ಆಡಿಯೊ ವಿಷುಯಲ್ ಮಾಧ್ಯಮಗಳ ("ಒಎವಿಎಂ") ಮುಖಾಂತರ ಕೈಗೊಳ್ಳಲಾಗುತ್ತದೆ ಮತ್ತು ಸದರಿ ಸಭೆಯಲ್ಲಿ ಎಜಿಎಂ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ವ್ಯವಹಾರಗಳನ್ನು ಚರ್ಚಿಸಲಾಗುತದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (**"ಎಂಸಿಎ"**) ಇವರು ಹೊರಡಿಸಿರುವ ದಿನಾಂಕ 19ನೇ ಸೆಪ್ಟಂಬರ್, 2024ರ ಸಾಮಾನ್ಯ ಸುತ್ತೋಲೆ ಸಂ. 09/2024 ಮತ್ತು ಸೆಬಿ ಇವರು ಹೊರಡಿಸಿರುವ ದಿನಾಂಕ 3ನೇ ಅಕ್ಟೋಬರ್, 2024ರ ಸುತ್ತೋಲೆ ಸಂ. ಸೆಬಿ/ಎಚ್‌ಒ/ಸಿಎಫ್‌ಡಿ/ಸಿಎಫ್‌ಡಿ/ಪಿಒಡಿ–2/ಪಿ/ಸಿಐಆರ್/2024/133 (**"ಸೆಬಿ ಸುತ್ತೋಲೆ"**) (ಇಲ್ಲಿ ಇನ್ನುಮುಂದೆ ಸಮಗ್ರವಾಗಿ "ಸಂಬಂಧಿತ ಸುತ್ತೋಲೆಗಳು" ಎನ್ನಲಾಗುವ), ಹಾಗೂ ಸೆಬಿ (**ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್**) ನಿಯಮಾವಳಿಗಳು, 2015ರ (**"ಸೆಬಿ ಲಿಸ್ಟಿಂಗ್ ರೆಗ್ಯುಲೇಶನ್ಸ್"**) ಪ್ರಕಾರ, ಕಂಪನಿಯ 34ನೇ ಎಜಿಎಂ ಸಭೆಯನ್ನು ವಿಸಿ/ಒಎವಿಎಂ ಸೌಕರ್ಯಗಳ ಮುಖಾಂತರ, ಒಂದು ಸಾಮಾನ್ಯ ಸ್ಥಳದಲ್ಲಿ ಕಂಪನಿ ಸದಸ್ಯರ ಭೌತಿಕ ಹಾಜರಾತಿ ಇಲ್ಲದೆಯೆ ನೆರವೇರಿಸಲಾಗುತ್ತದೆ. ಸದರಿ ಸಭೆಯಲ್ಲಿ ವಿಸಿ/ಒಎವಿಎಂ ಮುಖಾಂತರ ಪಾಲ್ಗೊಳ್ಳುವ ಪ್ರಕ್ರಿಯೆಯ ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ ಮತ್ತು ಸದರಿ ವಿವರಗಳು www.ecanarys.com ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತವೆ.

ದಿನಾಂಕ 29ನೇ ಆಗಸ್ಟ್ 2025 ರೊಳಗೆ, ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್ / ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರಲ್ಲಿ ತಮ್ಮ ಇಮೇಲ್ ವಿಳಾಸವನ್ನು ನೋಂದಣಿ ಮಾಡಿಕೊಂಡಿರುವ ಕಂಪನಿಯ ಎಲ್ಲ ಸದಸ್ಯರಿಗೆ, ಕಂಪನಿಯ 34ನೇ ವಾರ್ಷಿಕ ಮಹಾಸಭೆಯ ಪ್ರಕಟಣೆಯನ್ನು ಮತ್ತು ಹಣಕಾಸು ವರ್ಷ 2024 – 2025ನೇ ಸಾಲಿನ ವಾರ್ಷಿಕ ವರದಿಯನ್ನು ರವಾನಿಸಲಾಗಿದೆ ಮತ್ತು **ಶುಕ್ರವಾರ, 05ನೇ ಸೆಪ್ಟಂಬರ್ 2025** ರಂದು ರವಾನೆ ಕಾರ್ಯ ಪೂರ್ಣಗೊಂಡಿರುತ್ತದೆ. ಈ ಮೂಲಕ ಸದಸ್ಯರಿಗೆ ತಿಳಿಸುವ ಮಾಹಿತಿ ಏನೆಂದರೆ, ಸಭೆಯ ನೋಟಿಸ್ ಹಾಗೂ ಮೇಲೆ ತಿಳಿಸಲಾಗಿರುವ ದಾಖಲಾತಿಗಳು ಕಂಪನಿಯ www.ecanarys.com ವೆಬ್‌ಸೈಟ್‌ನಲ್ಲಿ ಮತ್ತು ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ (ಹಿಂದಿನ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ("ಎಂಯುಎಫ್‌ಜಿ ಇನ್‌ಟೈಮ್") www.in.mpms.mufg.com ವೆಬ್‌ಸೈಟ್‌ನಲ್ಲಿ ಹಾಗೂ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತವೆ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 108ರ ನಿಯಮಗಳನ್ನು, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ರೊಂದಿಗೆ, ಅವುಗಳಲ್ಲಿ ಉಂಟಾಗಿರುವ ಯಾವುದೇ ಮಾರ್ಪಾಡುಗಳು, ತಿದ್ದುಪಡಿಗಳು ಅಥವಾ ಪುನರ್ ಶಾಸನಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನ್ವಯ, ಸೆಬಿ ಲಿಸ್ಟಿಂಗ್ ರೆಗ್ಯುಲೇಶನ್ಸ್, 2015ರ ನಿಯಮಾವಳಿ 44, ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿರುವ ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್–2 (ಎಸ್‌ಎಸ್–2) ಮತ್ತು ಸಂಬಂಧಿತ ಸುತ್ತೋಲೆಗಳ ಪ್ರಕಾರ, ಕಂಪನಿಯು ಸದಸ್ಯರಿಗೆ ಎಜಿಎಂ ಸಭೆಯಲ್ಲಿ ಉದ್ದೇಶಿಸಲಾಗಿರುವ ಠರಾವುಗಳಿಗೆ ತಮ್ಮ ಮತ ಚಲಾವಣೆ ಹಕ್ಕನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸಲು ಮತ್ತು ವ್ಯವಹಾರಗಳನ್ನು ಚರ್ಚಿಸಲು, ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದಿನ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ರವರಿಂದ ಪೂರೈಸಲಾಗುವ ಇ–ವೋಟಿಂಗ್ ಸೇವೆಗಳ ("ರಿಮೋಟ್ ಇ–ವೋಟಿಂಗ್") ಸೌಲಭ್ಯ ಒದಗಿಸುತ್ತದೆ. ಕಂಪನಿಯು ತನ್ನ 34ನೇ ಎಜಿಎಂ ಸಭೆಯಲ್ಲಿ ಕೂಡ ವಿಸಿ / ಒಎವಿಎಂ ಸೌಲಭ್ಯವನ್ನು ಹೊಂದಿರುತ್ತದೆ ಮತ್ತು ಈಗಾಗಲೇ ರಿಮೋಟ್ ಇ–ವೋಟಿಂಗ್ ಸೌಲಭ್ಯದ ಮುಖಾಂತರ ತಮ್ಮ ಮತ ಚಲಾಯಿಸದೆ ಇರುವ ಷೇರುದಾರರು, ಎಜಿಎಂ ಸಭೆಯಲ್ಲಿ ಲಭ್ಯವಿರುವ ಇ–ವೋಟಿಂಗ್ ಸೌಕರ್ಯದ ಮೂಲಕ ತಮ್ಮ ಮತ ಚಲಾಯಿಸಬಹುದಾಗಿರುತ್ತದೆ.

ರಿಮೋಟ್ ಇ–ವೋಟಿಂಗ್ ವ್ಯವಸ್ಥೆಯನ್ನು ಮತ್ತು ಎಜಿಎಂ ಸಭೆಯಲ್ಲಿನ ಇ–ವೋಟಿಂಗ್ ವ್ಯವಸ್ಥೆಯನ್ನು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು, ಕಂಪನಿಯು **ಮೆ. ಗಣಪತಿ & ಮೋಹನ್,** ಕಾರ್ಯನಿರತ ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂ. 5659 ಮತ್ತು ಪ್ರಾಕ್ಟೀಸ್ ಸರ್ಟಿಫಿಕೇಟ್ ನಂ. 4520) ಇವರನ್ನು ಪರಿಶೀಲಕರನ್ನಾಗಿ ನಿಯೋಜಿಸಿರುತ್ತದೆ.

ರಿಮೋಟ್ ಇ–ವೋಟಿಂಗ್ ಮತ್ತು ಇ–ವೋಟಿಂಗ್‌ಗೆ ಸಂಬಂಧಿತ ಸೂಚನೆಗಳನ್ನು ಎಜಿಎಂ ಪ್ರಕಟಣೆಯಲ್ಲಿ ನೀಡಲಾಗಿದೆ. ಅದಾಗ್ಯೂ, ಷೇರುದಾರರು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:

ಎ) ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯು **ಶನಿವಾರ, 27ನೇ ಸೆಪ್ಟಂಬರ್ 2025 ರಂದು ಬೆಳಗ್ಗೆ 09:00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುತ್ತದೆ ಮತ್ತು ಸೋಮವಾರ, 29ನೇ ಸೆಪ್ಟಂಬರ್ 2025 ರಂದು ಸಂಜೆ 05:00 ಗಂಟೆಗೆ (ಐಎಸ್‌ಟಿ)** ಮುಕ್ತಾಯಗೊಳ್ಳುತ್ತದೆ. ತದನಂತರದಲ್ಲಿ ಎಂಯುಎಫ್‌ಜಿ ಇನ್‌ಟೈಮ್ ರವರಿಂದ ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು ಸ್ಥಗಿತಗೊಳಿಸಲಾಗುತ್ತದೆ, ಇದಾದ ಬಳಿಕ, ನಿಗದಿತ ದಿನಾಂಕ ಮತ್ತು ಕಾಲಾವಧಿಯ ನಂತರ ಯಾವುದೇ ಷೇರುದಾರರಿಗೆ ವಿದ್ಯುನ್ಮಾನ ವಿಧಾನದ ಮೂಲಕ ಮತ ಚಲಾಯಿಸುವ ಅವಕಾಶ ದೊರೆಯುವುದಿಲ್ಲ. ಈ ನಿಗದಿತ ಅವಧಿಯೊಳಗೆ, ಕಟ್–ಆಫ್ **ದಿನಾಂಕ ಮಂಗಳವಾರ, 23ನೇ ಸೆಪ್ಟಂಬರ್ 2025** ರೊಳಗೆ ಭೌತಿಕ ರೂಪದ ಅಥವಾ ಡಿಮಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಪಡೆದಿರುವ ಕಂಪನಿ ಷೇರುದಾರರು, 34ನೇ ಎಜಿಎಂ ಪ್ರಕಟಣೆಯಲ್ಲಿ ನಿಗದಿಪಡಿಸಲಾಗಿರುವ ಠರಾವುಗಳಿಗೆ ರಿಮೋಟ್ ಇ–ವೋಟಿಂಗ್ ಮುಖಾಂತರ ತಮ್ಮ ಮತ ಚಲಾಯಿಸಬಹುದು. 34ನೇ ಎಜಿಎಂ ಸಭೆಗೂ ಮುನ್ನವೇ ರಿಮೋಟ್ ಇ–ವೋಟಿಂಗ್ ಮುಖಾಂತರ ತಮ್ಮ ಮತ ಚಲಾಯಿಸಿರುವ ಷೇರುದಾರರು ಕೂಡ ವಿಸಿ / ಒಎವಿಎಂ ಮುಖಾಂತರ ಕೈಗೊಳ್ಳಲಾಗುವ 34ನೇ ಎಜಿಎಂ ಸಭೆಗೆ ಹಾಜರಾಗಬಹುದು, ಆದರೆ ಅವರು ಸಭೆಯಲ್ಲಿ ಪುನಃ ಮತ ಚಲಾಯಿಸಲು ಹಕ್ಕುದಾರರಾಗಿರುವುದಿಲ್ಲ. ಷೇರುದಾರರೊಬ್ಬರು ಒಂದು ಠರಾವಿನ ಮೇಲೆ ಚಲಾಯಿಸಿದ ಬಳಿಕ, ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

ಬಿ) ಷೇರುದಾರರ ಮತ ಚಲಾವಣೆಯ ಹಕ್ಕುಗಳು (ರಿಮೋಟ್ ಇ–ವೋಟಿಂಗ್ ಮುಖಾಂತರ ಅಥವಾ 34ನೇ ಎಜಿಎಂ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು) ಕಟ್–ಆಫ್ ದಿನಾಂಕ **ಮಂಗಳವಾರ, 23ನೇ ಸೆಪ್ಟಂಬರ್ 2025** ರೊಳಗೆ ಕಂಪನಿಯ ಪೇಡಪ್ ಇಕ್ವಿಟಿ ಷೇರು ಕ್ಯಾಪಿಟಲ್‌ನಲ್ಲಿ ಅವರು ಪಡೆದಿರುವ ಷೇರುಗಳ ಅನುಪಾತದಲ್ಲಿರುತ್ತವೆ. ಕಟ್–ಆಫ್ ದಿನಾಂಕದೊಳಗೆ ಡೆಪಾಸಿಟರಿಗಳು / ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್‌ರು ನಿರ್ವಹಿಸುವ ಷೇರುದಾರರ ರಿಜಿಸ್ಟರ್ ಅಥವಾ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ದಾಖಲಾಗಿರುವ ವ್ಯಕ್ತಿಗಳು, ರಿಮೋಟ್ ಇ–ವೋಟಿಂಗ್ ಸೌಲಭ್ಯ ಹಾಗೂ 34ನೇ ಎಜಿಎಂ ಸಭೆಯಲ್ಲಿನ ಇ–ವೋಟಿಂಗ್ ಸೌಲಭ್ಯ ಪಡೆಯಲು ಹಕ್ಕುದಾರರಾಗಿರುತ್ತಾರೆ.

ಸಿ) 34ನೇ ಎಜಿಎಂ ಪ್ರಕಟಣೆ ರವಾನೆಗೊಂಡ ಬಳಿಕ, ಯಾವುದೇ ವ್ಯಕ್ತಿಯು ಕಂಪನಿ ಷೇರುಗಳನ್ನು ಪಡೆದುಕೊಂಡು, ಕಂಪನಿಯ ಷೇರುದಾರರಾಗಿದ್ದರೆ ಮತ್ತು ಕಟ್–ಆಫ್ ದಿನಾಂಕದೊಳಗೆ ಷೇರುಗಳನ್ನು ಹೊಂದಿದ್ದರೆ, ಅಂತಹವರು 34ನೇ ಎಜಿಎಂ ಪ್ರಕಟಣೆಯ ಸೂಚನೆಗಳಲ್ಲಿ ಉಲ್ಲೇಖಿಸಲಾಗಿರುವ ಠರಾವುಗಳ ಮೇಲೆ ಮತ ಚಲಾಯಿಸುವ ಸೂಚನೆಗಳನ್ನು ಅನುಸರಿಸಬೇಕು. ಕಟ್–ಆಫ್ ದಿನಾಂಕದೊಳಗೆ ವ್ಯಕ್ತಿಯೊಬ್ಬರು ಷೇರುದಾರರ ಆಗಿರದಿದ್ದರೆ, ಅಂತಹವರು 34ನೇ ಎಜಿಎಂ ಪ್ರಕಟಣೆಯನ್ನು ಕೇವಲ ರಿಮೋಟ್ ಇ–ವೋಟಿಂಗ್ ಹಾಗೂ ಇ–ವೋಟಿಂಗ್ ಕುರಿತಾದ ಮಾಹಿತಿಗಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು.

ರಿಮೋಟ್ ಇ–ವೋಟಿಂಗ್ ಮುಖಾಂತರ ಮತ್ತು ಎಜಿಎಂ ಸಭೆಯಲ್ಲಿ ಚಲಾವಣೆ ಆಗಿರುವ ಮತಗಳ ಫಲಿತಾಂಶಗಳನ್ನು, 34ನೇ ಎಜಿಎಂ ಪೂರ್ಣಗೊಂಡ ಬಳಿಕ ಎರಡು ಕೆಲಸದ ದಿನಗಳೊಳಗೆ ಘೋಷಿಸಲಾಗುತ್ತದೆ. ಹೀಗೆ ಘೋಷಿಸಲಾಗುವ ಫಲಿತಾಂಶಗಳನ್ನು, ಪರಿಶೀಲಕರ ವರದಿಯ ಜೊತೆಗೆ ತಕ್ಷಣವೇ ಕಂಪನಿಯ www.ecanarys.com ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಎಂಯುಎಫ್‌ಜಿ ಇನ್‌ಟೈಮ್ ಇವರೊಂದಿಗೆ www.in.mpms.mufg.com ಹಾಗೂ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ವೆಬ್‌ಸೈಟ್‌ಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ.

ರಿಮೋಟ್ ಇ–ವೋಟಿಂಗ್ ಮತ್ತು ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆಗಳಿದ್ದಲ್ಲಿ ಅಥವಾ ಕುಂದು ಕೊರತೆಗಳಿದ್ದಲ್ಲಿ, ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳನ್ನು ("ಎಫ್‌ಎಕ್ಯೂ") ಪರಿಶೀಲಿಸಿರಿ ಮತ್ತು www.in.mpms.mufg.com ನಲ್ಲಿ ಲಭ್ಯವಿರುವ ಇ–ವೋಟಿಂಗ್ ಮ್ಯಾನುಯಲ್ ಅಡಿಯಲ್ಲಿನ ಹೆಲ್ಪ್ ಸೆಕ್ಷನ್ ಪರಿಶೀಲಿಸಿ ಅಥವಾ instameet@in.mpms.mufg.com ವಿಳಾಸಕ್ಕೆ ಮನವಿ ಸಲ್ಲಿಸುವ ಮೂಲಕ ಇನ್‌ಸ್ಟಾಮೀಟ್ ಹೆಲ್ಪ್‌ಡೆಸ್ಕ್ ಸಂಪರ್ಕಿಸಿರಿ ಅಥವಾ 022–49186000/49186175 ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿರಿ.

34ನೇ ಎಜಿಎಂ ಸಭೆಯಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅಥವಾ ಪ್ರಶ್ನೆಗಳನ್ನು ಕೇಳಬಯಸುವ ಷೇರುದಾರರು, ಸಭೆಯ ದಿನಾಂಕಕ್ಕೆ ಏಳು ದಿನ ಮುಂಚಿತವಾಗಿಯೇ, ತಮ್ಮ ನೋಂದಾಯಿತ ಇಮೇಲ್ ಐಡಿ ಮುಖಾಂತರ ambikeshwari.m@ecanarys.com ವಿಳಾಸಕ್ಕೆ ತಮ್ಮ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ / ಪೋಲಿಯೊ ನಂಬರ್, ಪಾನ್, ಮೊಬೈಲ್ ನಂಬರ್ ಉಲ್ಲೇಖಿಸುತ್ತ, ತಮ್ಮ ವಿಚಾರಣೆಗಳ ಸಮೇತ, ಸಭೆಯಲ್ಲಿ ಮಾತನಾಡುವುದಕ್ಕೆ ಮನವಿ ಸಲ್ಲಿಸಬೇಕು.

ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಅಂಬಿಕೇಶ್ವರಿ ಎಂ ಎ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ದಿನಾಂಕ: 05.09.2025
ಸ್ಥಳ: ಬೆಂಗಳೂರು

ಅಭಿಮಾನ್ ಸ್ಟುಡಿಯೊ ಜಪ್ತಿ ಹಕ್ಕು ಸರಕಾರಕ್ಕಿಲ್ಲ

ಬೆಂಗಳೂರು: ಅಭಿಮಾನ್ ಸ್ಟುಡಿಯೊ ಜಾಗವನ್ನು ಸರಕಾರ ವಶಪಡಿಸಿಕೊಳ್ಳುವ ಕ್ರಮವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದು ಟಿ.ಎನ್.ಬಾಲಕೃಷ್ಣ ಅವರ ಪುತ್ರಿ ಗೀತಾ ಬಾಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ಕಾನೂನು ಬದ್ಧವಾಗಿ ಸರಕಾರಕ್ಕೆ ಈ ಕ್ರಮ ಜರುಗಿಸಲು ಯಾವುದೇ ರೀತಿಯ ಹಕ್ಕಿಲ್ಲ. ನಾನು ಖ್ಯಾತ ಕನ್ನಡ ಚಲನಚಿತ್ರ ನಟ ದಿವಂಗತ ಟಿ.ಎನ್.ಬಾಲಕೃಷ್ಣ ಅವರ ಮೂರನೇ ಪುತ್ರಿ. ಇತ್ತೀಚೆಗೆ ಡಾ. ವಿಷ್ಣುವರ್ಧನ್ ಅವರ ಸ್ಮಾರಕವನ್ನು ಕೆಡವಿದ ನಂತರ ನನ್ನ ದಿವಂಗತ ತಂದೆಯವರ ಅಭಿಮಾನ್ ಫಿಲ್ಮ್ ಸ್ಟುಡಿಯೊ ಬಗ್ಗೆ ವಿವಿಧ ಮಾಹಿತಿಗಳು ಅಥವಾ ವದಂತಿಗಳು ಹರಡುತ್ತಿವೆ. ಸರಕಾರವು ಅರಣ್ಯ ಇಲಾಖೆಗೆ 10 ಎಕರೆ ವಿಸ್ತೀರ್ಣದ ಅಭಿಮಾನ್ ಸ್ಟುಡಿಯೊ ಭೂಮಿಯನ್ನು ಮರಳಿ ಸ್ವಾಧೀನಪಡಿಸಿಕೊಳ್ಳಲು ನಿರ್ದೇಶಿಸಿದೆ ಎಂಬ ಸುದ್ದಿಯೂ ಪ್ರಚಾರದಲ್ಲಿದೆ, ಇದು ನನಗೆ ಆಘಾತಕಾರಿ ಸುದ್ದಿಯಾಗಿದೆ ಎಂದರು. ಸರಕಾರ ಅಥವಾ ಅರಣ್ಯ ಇಲಾಖೆಯು ನನ್ನ ತಂದೆಯ ಸ್ಟುಡಿಯೊ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಯಾವುದೇ ಕಾನೂನುಬದ್ಧ ಹಕ್ಕನ್ನು ಹೊಂದಿಲ್ಲ ಎಂಬುದನ್ನು ದೃಢೀಕರಿಸುವ ದಾಖಲೆಗಳೊಂದಿಗೆ ಸರಕಾರ ಮತ್ತು ಸಾರ್ವಜನಿಕರ ಗಮನಕ್ಕೆ ತರಲು ನಾನು ಉದ್ದೇಶಿಸಿದ್ದೇನೆ. 10 ಎಕರೆ ಮಾರಾಟದಲ್ಲಿ ಫಲಾನುಭವಿಗಳು ವಿಕಸನಗೊಳ್ಳುತ್ತಿದ್ದಾರೆ ಎಂಬ ಗುಪ್ತ ಸಂಗತಿಗಳ ಬಗ್ಗೆ ನಾನು ತಿಳಿಸುತ್ತಿದ್ದೇನೆ ಎಂದರು.

ವಿಧಾನಸಭೆ ವಿಸರ್ಜಿಸಿ ಚುನಾವಣೆ ಎದುರಿಸಿ

ಬೆಂಗಳೂರು: ಇವಿಎಂ ಮೂಲಕ ಚುನಾಯಿತವಾದ ಕಾಂಗ್ರೆಸ್‌ನ ರಾಜ್ಯ ಸರಕಾರ ಅಧಿಕಾರದಲ್ಲಿದ್ದು, ಮತಯಂತ್ರದ ಬಗ್ಗೆ ನಿಮಗೆ ಸಂಶಯ ಇದ್ದಲ್ಲಿ ನೀವು ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಹೋಗಬೇಕು ಎಂದು ಶಾಸಕ ಎಸ್.ಸುರೇಶ್ ಕುಮಾರ್ ಸವಾಲು ಹಾಕಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವು ಗೆದ್ದಾಗಲೆಲ್ಲ ಚೆನ್ನಾಗಿದೆ. ಗೆಲ್ಲದೇ ಇದ್ದಾಗ ಇವಿಎಂ ಎಂಬ ಧೋರಣೆಯು ಅತ್ಯಂತ ಹಳೆಯ ರಾಜಕೀಯ ಪಕ್ಷ ಎಂದು ತನ್ನನ್ನೇ ತಾನು ಬಣ್ಣಿಸಿಕೊಳ್ಳುವ ರಾಜಕೀಯ ಪಕ್ಷಕ್ಕೆ ಶೋಭೆ ತರುವುದಿಲ್ಲ. ಸಚಿವ ಸಂಪುಟ ಸಭೆ ರಾಜ್ಯದ ದೃಷ್ಟಿಯಿಂದ ಅತ್ಯಂತ ಮಾರಕ ನಿರ್ಧಾರ ಕೈಗೊಂಡಿದೆ. ಕೃತಕ ಬುದ್ಧಿಮತ್ತೆಯ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಈ ಕಾಲದಲ್ಲಿ ಕೃತಕ ಅಜ್ಞಾನದಿಂದ (ಆರ್ಟಿಫಿಶಿಯಲ್ ಇಗ್ನೊರೆನ್ಸ್) ಕೂಡಿದ ನಿರ್ಧಾರಗಳನ್ನು ಕೈಗೊಂಡ ಸಭೆ ಇದಾಗಿದೆ ಎಂದು ದೂರಿದರು. ಬಹುಮತ ಇದೆ ಎಂದ ತಕ್ಷಣ ನಾವು ಮಾಡಿದ್ದೇ ಸರಿ ಎಂಬ ಅಹಂಕಾರ ಸರಕಾರದ ಅಧಃಪತನಕ್ಕೆ ಹಾದಿಯಾ ಗುತ್ತದೆ. ಬೆಂಗಳೂರು ಭಾರತದ ಸಿಲಿಕಾನ್ ಸಿಟಿ ಎಂದೇ ಗುರುತಿಸಿಕೊಂಡಿದೆ. ಸಿಲಿಕಾನ್ ಸಿಟಿ ಎಂಬ ಹೆಸರಿಗೇ ಇವರು ತೋರಿಸುವ ದೊಡ್ಡ ತಿರಸ್ಕಾರವಿದು ಎಂದು ಖಂಡಿಸಿದರು.

ಇವಿಎಂ ಯಂತ್ರಗಳನ್ನು ಬದಿಗಿಟ್ಟು ಮತಪತ್ರದೊಂದಿಗೆ ಚುನಾವಣೆ ನಡೆಸಲು ಸರಕಾರ ಮುಂದಾಗಿದ್ದು, ಮತ್ತೆ ಪುರಾತನ ಯುಗಕ್ಕೆ ಹೋಗುತ್ತಿದೆ. ಮತಪತ್ರ ಬಳಸಿದರೆ 2–3 ದಿನ ಮತ ಎಣಿಕೆ ಮಾಡಬೇಕಾಗುತ್ತದೆ. ರಾಹುಲ್ ಗಾಂಧಿಯವರು ಹೇಳಿದರೆಂಬ ಕಾರಣಕ್ಕಾಗಿ ಇವಿಎಂ ಬದಿಗಿಟ್ಟು, ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ಮಾಡುವುದನ್ನು ಬಿಜೆಪಿ ಒಪ್ಪುವುದಿಲ್ಲ. ಈ ವಿಷಯವನ್ನು ನಾವು ಜನರ ಬಳಿ ಒಯ್ಯುತ್ತೇವೆ.

–ಎನ್.ರವಿಕುಮಾರ್, ವಿಧಾನಪರಿಷತ್ ಪ್ರತಿಪಕ್ಷದ ಮುಖ್ಯಸಚೇತಕ

ಸಮಾಚಾರ ಸಣ್ಣದಲ್ಲ

ಮಕ್ಕಳನ್ನು ರೂಪಿಸುವ ಹೊಣೆ ಶಿಕ್ಷಕರದ್ದು

ಬೆಂಗಳೂರು: ಯುವ ಪೀಳಿಗೆಯನ್ನು ರೂಪಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ ಎಂದು ಕ್ಯಾನ್ಸರ್ ತಜ್ಞ ವಿಜಯಲಕ್ಷ್ಮಿ ದೇಶಮಾನೆ ಹೇಳಿದರು. ಎನ್ ಆರ್ ಕಾಲೋನಿಯ ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಯಲ್ಲಿ ಮಾತನಾಡಿ, ಯುವ ಪೀಳಿಗೆಗೆ ಈಗ ಜ್ಞಾನ ಪಡೆಯುವುದು ಕಷ್ಟವಲ್ಲ. ಆದರೆ ಸರಿಯಾದ ಜ್ಞಾನ ಪಡೆದುಕೊಳ್ಳಬೇಕೆಂದರೆ ಶಿಕ್ಷಕರ ಮಾರ್ಗದರ್ಶನ ಬೇಕೇ ಬೇಕು. ಯುವ ಪೀಳಿಗೆಯನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿಸಲು ಶಿಕ್ಷಕರು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಕಸಾಪ ದತ್ತಿ ಪ್ರಶಸ್ತಿಗೆ ಸಾಹಿತಿಗಳ ಆಯ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ ಡಾ. ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿಗೆ ಜನಪದ ಗಾಯಕ ಎಚ್. ಜನಾರ್ದನ (ಜನ್ನಿ) ಮತ್ತು ಸಾಹಿತಿ ಶೂದ್ರ ಶ್ರೀನಿವಾಸ್ ಆಯ್ಕೆಯಾಗಿ ದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಆಯ್ಕೆ ಸಮಿತಿ ಕ್ರಮವಾಗಿ 2024 ಮತ್ತು 2025ನೇ ಸಾಲಿಗೆ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ 10 ಸಾವಿರ ನಗದು ಒಳಗೊಂಡಿದೆ. ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಕವಿ ಸಿದ್ದಲಿಂಗಯ್ಯ ಅವರ ಸ್ಮರಣಾರ್ಥ ಈ ಸಾಹಿತ್ಯ ದತ್ತಿ ಪುರಸ್ಕಾರ ಸ್ಥಾಪಿಸ ಲಾಗಿದೆ. ಸಿದ್ದಲಿಂಗಯ್ಯ ಅವರ ತಾತ್ವಿಕತೆಯನ್ನು ಸಮರ್ಥವಾಗಿ ವಿವಿಧ ಮಾಧ್ಯಮಗಳ ಮೂಲಕ ಬಿಂಬಿಸುತ್ತಿರುವ ಸಾಧಕ ರಿಗೆ ಈ ಪುರಸ್ಕಾರ ನೀಡ ಲಾಗುತ್ತಿದೆ. 18ರಂದು ಬೆ.11.30ಕ್ಕೆ ಶ್ರವಣಬೆಳ ಗೊಳದ ಚಾವುಂಡರಾಯ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

62ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿ ಜತೆ ಒಪ್ಪಂದ

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಬೆಂಗಳೂರಿನ ನಾಗರಭಾವಿ ಕ್ಯಾಂಪಸ್‌ನಲ್ಲಿ 62 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಮತ್ತು ಪ್ರಮುಖ ಇಂಟರ್ನ್‌ಶಿಪ್ ಪೂರೈಕೆದಾರರೊಂದಿಗೆ ಮಹತ್ವದ ಒಪ್ಪಂದಕ್ಕೆ ಸಹಿ ಮಾಡಿತು. ಈ ಉಪಕ್ರಮವು ಉದ್ಯಮ-ಶೈಕ್ಷಣಿಕ ಸಹಯೋಗ ಬಲಪಡಿಸುವಲ್ಲಿ ಮತ್ತು ಕರ್ನಾಟಕದಾದ್ಯಂತ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ವಿದ್ಯಾರ್ಥಿಗಳಿಗೆ ರಚನಾತ್ಮಕ ಇಂಟರ್ನ್‌ಶಿಪ್ ಅವಕಾಶ ಒದಗಿಸುವಲ್ಲಿ ಒಂದು ಮೈಲಿಗಲ್ಲನ್ನು ಸೃಷ್ಟಿಸಿದೆ. ವಿಟಿಯ ಉಪ ಕುಲಪತಿ ಪ್ರೊ.ವಿದ್ಯಾಶಂಕರ್ ಎಸ್.ಒಡಂಬಡಿಕೆ ಪತ್ರಕ್ಕೆ ಸಹಿ ಮಾಡಿದ್ದು, ಗ್ರಾಮೀಣ ವಿದ್ಯಾರ್ಥಿಗಳು ಈ ಸಹಯೋಗಗಳಿಂದ ಗರಿಷ್ಠ ಪ್ರಯೋಜನವನ್ನು ಪಡೆಯಬೇಕು. ಇಂಟರ್ನ್‌ಶಿಪ್‌ಗಳು ಕೌಶಲ್ಯ ವರ್ಧನೆಗೆ ವೇದಿಕೆಯಷ್ಟೇ ಅಲ್ಲ, ಶೈಕ್ಷಣಿಕ ಜ್ಞಾನ ಮತ್ತು ಕೈಗಾರಿಕಾ ಅಭ್ಯಾಸಗಳ ನಡುವಿನ ಅಂತರ ವನ್ನು ಕಡಿಮೆ ಮಾಡಲು ಒಂದು ಮೆಟ್ಟಿಲು. ವಿಟಿಯ ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುವ ಮತ್ತು ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮತ್ತು ತರಬೇತಿಯ ಪ್ರಯೋಜನ ಗಳನ್ನು ಪಡೆಯುವಂತೆ ತಿಳಿಸಿದರು.

ಚಾಲಕನ ಮೇಲೆ ಹಲ್ಲೆ: ಮೂವರ ಬಂಧನ

ಬೆಂಗಳೂರು: ಬನಶಂಕರಿ ಸಮೀಪದ ಕದಿರೇನಹಳ್ಳಿ ಕ್ರಾಸ್‌ನಲ್ಲಿ ಬಿಎಂಟಿಸಿ ಬಸ್‌ವೊಂದನ್ನು ಅಡ್ಡಗಟ್ಟಿ, ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಮೂವರು ಆರೋಪಿ ಗಳ ಪೈಕಿ ಒಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಕುಮಾರಸ್ವಾಮಿ ಲೇಔಟ್‌ನ ಸಿದ್ದ ಅಪ್ಪಾಜಿ (28) ಬಂಧಿತ. ಮೂವರು ಆರೋಪಿಗಳು ತಲೆಮರೆಸಿ ಕೊಂಡಿದ್ದು ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಸಿದ್ದ ಅಪ್ಪಾಜಿ ಸೇರಿದಂತೆ ನಾಲ್ವರು ಗುರುವಾರ ಮಧ್ಯಾಹ್ನ ಎರಡು ಬೈಕ್‌ಗಳಲ್ಲಿ ಕದಿರೇನಹಳ್ಳಿ ಕ್ರಾಸ್‌ನ ಏಕಮುಖ ಸಂಚಾರ ರಸ್ತೆ ಯಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದರು. ಆ ಮಾರ್ಗ ವಾಗಿ ಬಿಎಂಟಿಸಿ ಬಸ್ ಚಲಿಸುತ್ತಿತ್ತು. ಬಿಎಂಟಿಸಿ ಚಾಲಕ ಹುಚ್ಚೀರಪ್ಪ ಅವರು ಬೈಕ್ ಸವಾರರಿಗೆ ಬುದ್ಧಿ ಮಾತು ಹೇಳಿದ್ದರು. ಇದರಿಂದ ಕೆರಳಿದ ಆರೋಪಿ ಗಳು, ಚಾಲಕನ ಜತೆಗೆ ವಾಗ್ವಾದ ನಡೆಸಿದ್ದರು. ಚಾಲಕನಿಗೆ ಅವಾಚ್ಯ ಪದಗಳಿಂದ ನಿಂದಿಸಿದ್ದರು. ಇದು ಬಸ್ನಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಗಲಾಟೆ ವಿಕೋಪಕ್ಕೆ ಹೋದ ಮೇಲೆ ನಿರ್ವಾಹಕ ಪ್ರಕಾಶ್ ಅವರು ಪೊಲೀಸ್ ಸಹಾಯ ವಾಣಿಗೆ ಕರೆ ಮಾಡಿದ್ದರು. ಅದಾದ ಮೇಲೆ ಆರೋಪಿ ಗಳು ಪರಾರಿ ಆಗಿದ್ದರು. 'ಆರೋಪಿಗಳ ಬೈಕ್ ನೋಂದಣಿ ಸಂಖ್ಯೆ ಆಧರಿಸಿ ಸಿದ್ದ ಅಪ್ಪಾಜಿಯನ್ನು ಪತ್ತೆ ಮಾಡಿ ಬಂಧಿಸಲಾಗಿದೆ. ಇತರೆ ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ' ಎಂದು ಬನಶಂಕರಿ ಠಾಣೆಯ ಪೊಲೀಸರು ಹೇಳಿದರು.

{ಅಶ್ವತ್ಥ ನಾರಾಯಣ} ಶಾಸಕ

ಅಧಿಕಾರ ದುರ್ಬಳಕೆ ಮೂಲಕ ಚುನಾವಣೆ ಗೆಲ್ಲುವ ಹುನ್ನಾರವಿದು. ಎಲ್ಲದರಲ್ಲೂ ಹಸ್ತಕ್ಷೇಪ ಮಾಡುವ ದುರುದ್ದೇಶ ಇಟ್ಟುಕೊಂಡಿದ್ದಾರೆ. ಜನರ ಕೋಪ ಮುಗಿಲಿಗೇರಿದೆ. ಈ ಆಕ್ರೋಶವನ್ನು ಚುನಾವಣೆಯಲ್ಲಿ ತೋರಿಸುತ್ತಾರೆ ಎಂಬ ಭಯ ಇದೆ. ಹಾಗಾಗಿ ಬ್ಯಾಲೆಟ್ ಪೇಪರ್‌ಗೆ ಹೋಗಿದ್ದಾರೆ.

ಸಿಎಸ್‌ಆರ್ ಅನುದಾನದಲ್ಲಿ 2 ಸಾವಿರ ಶಾಲೆಗಳ ನಿರ್ಮಾಣಕ್ಕೆ ತೀರ್ಮಾನ | ಶಿಕ್ಷಕರ ಕ್ಷೇತ್ರದ ಚುನಾವಣೆ ಮೇಲೆ ಗಮನ ಹರಿಸಿ

ರಾಜ್ಯದ ಪ್ರಗತಿಯಲ್ಲಿ ಶಿಕ್ಷಕರ ಮಹತ್ವದ ಪಾಲು: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಹಾಗೂ ಬೆಂಗಳೂರಿನ ಮೂಲಕ ಇಡೀ ಪ್ರಪಂಚ ಭಾರತವನ್ನು ನೋಡುತ್ತಿದೆ. ಇದಕ್ಕೆ ಶಿಕ್ಷಕರೇ ಮೂಲ ಕಾರಣ. ಶಿಕ್ಷಣದಿಂದಲೇ ಪ್ರಗತಿ. ಹೀಗಾಗಿ ನಮ್ಮ ಪ್ರಗತಿಗೆ ಶಿಕ್ಷಕರ ಪಾಲು ಹೆಚ್ಚಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ಅವರು ಬಣ್ಣಿಸಿದರು.

ಕೆಪಿಸಿಸಿ ಕಚೇರಿಯ ಭಾರತ ಜೋಡೋ ಸಭಾಂಗಣದಲ್ಲಿ ಶುಕ್ರವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿದ ಅವರು, ನಮ್ಮ ಹಿರಿಯರು ಶಿಕ್ಷಣದ ಮೂಲಕ ನಮಗೆ ಕೊಟ್ಟಿರುವ ಕೊಡುಗೆ ಮಹತ್ವದ್ದಾಗಿದೆ. ಸಿ.ವಿ ರಾಮನ್, ಸರ್ವಪಲ್ಲಿ ರಾಧಾಕೃಷ್ಣನ್ ಅವರಂತಹ ಶ್ರೇಷ್ಠ ವ್ಯಕ್ತಿಗಳು ಕರ್ನಾಟಕದ ನೆಲದಲ್ಲಿ ಬೋಧನೆ ಮಾಡಿದ್ದಾರೆ. ಕರ್ನಾಟಕವು ಅತ್ಯಂತ ಹೆಚ್ಚು ಎಂಜಿನಿಯರ್, ವೈದ್ಯರು, ನರ್ಸ್‌ಗಳನ್ನು ದೇಶಕ್ಕೆ ಕೊಡುಗೆ ನೀಡುತ್ತಿದೆ. ಜವಾಹರ್ ಲಾಲ್ ನೆಹರೂ ಅವರ ಕಾಲದಲ್ಲೂ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು ಎಂದರು.

ಮುಂದಿನ ಸಚಿವ ಸಂಪುಟದಲ್ಲಿ ಸಿಎಸ್‌ಆರ್ ಅನುದಾನದಿಂದ ಶಾಲೆಗಳ ನಿರ್ಮಾಣದ ಬಗ್ಗೆ ಮಹತ್ವದ ತೀರ್ಮಾನ ಮಾಡಲಾಗುವುದು. ಯಾರು ಶಾಲೆ ನಿರ್ಮಾಣ ಮಾಡುತ್ತಾರೋ ಅವರ ಕಂಪನಿಯ ಹೆಸರನ್ನೇ ಇಟ್ಟುಕೊಳ್ಳಬಹುದು ಎಂದು ಹೇಳಿದ್ದೇವೆ. ಆದರೆ ಅತ್ಯುತ್ತಮ ಕಟ್ಟಡ ನಿರ್ಮಾಣ ಮಾಡಬೇಕು ಹಾಗೂ ನಗರ ಮಾದರಿಯಲ್ಲಿ ಸಿಬಿಎಸ್‌ಇ ಶಿಕ್ಷಣ ದೊರೆಯಬೇಕು ಎಂಬುದು ನಮ್ಮ ಆಶಯ. ಈಗಾಗಲೇ ಒಂದಷ್ಟು ಶಾಲೆಗಳು ಪ್ರಾರಂಭವಾಗಿವೆ. ಸುಮಾರು 2 ಸಾವಿರ ಶಾಲೆ ನಿರ್ಮಾಣ ನಮ್ಮ ಗುರಿ ಎಂದರು.



ಕೆಪಿಸಿಸಿ ಕಚೇರಿಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿಯನ್ನು ಉತ್ತಮ ಶಿಕ್ಷಕರಿಗೆ ಡಿಸಿಎಂ ಡಿಕೆಶಿ ಪ್ರಶಸ್ತಿ ಪ್ರದಾನ ಮಾಡಿದರು.

ಇತ್ತೀಚೆಗೆ ಪತ್ರಿಕೆಯಲ್ಲಿ ಒಂದು ವರದಿ ಓದಿದೆ. ಸರಕಾರಿ ಶಾಲೆಗಳನ್ನು ತೊರೆದು ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿದ್ದಾರೆ ಎಂದು. ಅದಕ್ಕೆ ನಾವು ಸಿಎಸ್‌ಆರ್ ಹಣದ ತೊಡಗಿಸುವಿಕೆಗೆ ಪ್ರೋತ್ಸಾಹ ನೀಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ 7,800 ಕೋಟಿಯಷ್ಟು ಹಣವನ್ನು ಸಿಎಸ್‌ಆರ್ ಹಣ ಲಭ್ಯವಿದೆ ಎಂದು ವರದಿಗಳು ಹೇಳುತ್ತವೆ. ಒಂದಷ್ಟು ಜನ ಉದ್ಯಮಿಗಳು ಇನ್ನೂ ಮನಸು ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಕೆಪಿಎಸ್ ಶಾಲೆಗಳ ವಿಚಾರದಲ್ಲಿ ಅತ್ಯುತ್ತಮ ಕೆಲಸವಾಗಿದೆ. ನನ್ನ ಕ್ಷೇತ್ರದಲ್ಲಿ ಟೊಯೋಟಾ ಕಂಪೆನಿಯವರು ತಲಾ 10 ಕೋಟಿ ವೆಚ್ಚದಲ್ಲಿ 7 ಕೆಪಿಎಸ್ ಶಾಲೆ ನಿರ್ಮಾಣ ಮಾಡುತ್ತಿದ್ದಾರೆ ಎಂದರು.

ನಾನು ರಾಜಕಾರಣಿಯಾದರೂ ಶಿಕ್ಷಣ ಪ್ರೇಮಿ: ನಾನು ರಾಜಕಾರಣಿ ಇರಬಹುದು, ಜತೆಗೆ ಶಿಕ್ಷಣ ಪ್ರೇಮಿ. ನಾನು ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸಲಿಲ್ಲ. ಓದುವಾಗಲೇ ರಾಜಕೀಯದ ಕಡೆಗೆ ಆಕರ್ಷಿತನಾದೆ. ಚುನಾವಣೆಯಲ್ಲಿ ಗೆದ್ದ ಸಂದರ್ಭದಲ್ಲಿ ನಾನು ಬಂಗಾರಪ್ಪನವರು, ಕೆ.ಎಚ್.ರಂಗನಾಥರು, ವೀರಪ್ಪ ಮೊಯಿಲಿ, ರಾಮಕೃಷ್ಣ ಹೆಗಡೆ ಅವರ ಭಾಷಣ, ವಿಚಾರಧಾರೆಗಳನ್ನು ವಿಧಾನಸಭೆಯಲ್ಲಿ ನೋಡಿದೆ. ಆಗ ನನಗೆ ಅರಿವಾಯಿತು ನಾನು ಶಿಕ್ಷಣಕ್ಕೆ ಆದ್ಯತೆ ನೀಡಲಿಲ್ಲ ಎಂಬುದು. 47ನೇ ವಯಸ್ಸಿನಲ್ಲಿ ಪದವಿ ಮಾಡಿದೆ. ನಾನು ಯಾವುದೇ ಸಚಿವನಾದಾಗ ಆಗದ ಸಂತೋಷ ಪದವಿ ಪ್ರಮಾಣ ಪತ್ರ ಪಡೆದಾಗ ಆಯಿತು ಎಂದರು.

ಎನ್‌ಪಿಎಸ್ ಶಾಲೆಯ ಮುಖ್ಯಸ್ಥರಾಗಿದ್ದ ಗೋಪಾಲಕೃಷ್ಣ ಅವರು ನನ್ನನ್ನು ಶಾಲೆಯಿಂದ ತೆಗೆದುಹಾಕಿದರು. ನಂತರ ಅವರ ಸಹಾಯದಲ್ಲೇ ಕೆಲವು ಶಾಲೆ ಆರಂಭಿಸಿದ್ದೇನೆ. ನಮ್ಮ ಊರಿನಲ್ಲಿ ಶಿಕ್ಷಣಕ್ಕಾಗಿಯೇ ಹತ್ತಾರು ಎಕರೆ ಜಮೀನನ್ನು ದಾನ ಮಾಡಿದ್ದೇನೆ ಎಂದು ಹೇಳಿದರು.

ಶಿಕ್ಷಕರು ಹೊಸ ವಿಚಾರಗಳತ್ತ ಗಮನಹರಿಸಿ

ಶಿಕ್ಷಕರ ಕ್ಷೇತ್ರದ ಚುನಾವಣೆ ಮೇಲೆ ಗಮನ ಹರಿಸಿ ಶಿಕ್ಷಕರ ಕ್ಷೇತ್ರದ ಪರಿಷತ್ ಚುನಾವಣೆ ಮುಂದಿನ ವರ್ಷ ನಡೆಯಲಿದ್ದು, ಈ ತಿಂಗಳ ಒಳಗಾಗಿ ಅರ್ಜಿ ಕರೆಯಲಾಗುವುದು. ನಂತರ ಅಭ್ಯರ್ಥಿ ಆಯ್ಕೆ ಮಾಡಲಾಗುವುದು. ಜಿ.ಸಿ.ಚಂದ್ರಶೇಖರ್ ಅವರಿಗೆ ಇದರ ಜವಾಬ್ದಾರಿ ನೀಡಲಾಗಿದೆ. ನಾಲ್ಕು ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು ಇದರ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಇತ್ತೀಚೆಗೆ ಪುಟ್ಟಣ್ಣ ಸೇರಿದಂತೆ ಅನೇಕರು ಗೆದ್ದಿದ್ದಾರೆ. ಶಿಕ್ಷಕರು ಹೊಸ ವಿಚಾರಗಳತ್ತ ಗಮನಹರಿಸಬೇಕು. ಎಐ ಈಗ ಎಲ್ಲವನ್ನು ನಿಯಂತ್ರಿಸುತ್ತಿದೆ. ಅದಕ್ಕೆ ತಕ್ಕಂತೆ ನೀವು ತಯಾರಿ ಮಾಡಿಕೊಳ್ಳಬೇಕು. ಸಮಾಜಕ್ಕೆ ನಾಲ್ಕು ಉತ್ತಮ ಪ್ರಜೆಗಳನ್ನು ತಯಾರು ಮಾಡಿದ ಆತ್ಮತೃಪ್ತಿ ನಿಮ್ಮಲ್ಲಿ ಇರಲಿ. ಗುರು ಗುರಿ ನೀಡುತ್ತಾನೆ. ಗುರಿ ತಲುಪಬೇಕಾದರೆ ಗುರು ಇರಬೇಕು ಎಂದು ಡಿಸಿಎಂ ಡಿಕೆಶಿ ಹೇಳಿದರು.

ಮೊಬೈಲ್ ಫೋನ್ ಬಂದ ಮೇಲೆ ಉಪಯೋಗ ಎಷ್ಟಿದೆಯೋ ಕೆಟ್ಟ ಪರಿಣಾಮಗಳು ಅಷ್ಟೇ ಇವೆ. ಉತ್ತರ ಭಾರತಕ್ಕೆ ಹೋಲಿಸಿಕೊಂಡರೆ ನಮ್ಮಲ್ಲಿ ಉತ್ತಮ ಶಿಕ್ಷಣ ವ್ಯವಸ್ಥೆ ಇದೆ. ಬೆಂಗಳೂರಿನಲ್ಲಿ ಸುಮಾರು 25 ಲಕ್ಷ ಐಟಿ ಉದ್ಯೋಗಿಗಳಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿ 23 ಲಕ್ಷ ಇದ್ದಾರೆ. ಟಾಟಾ ಸಂಸ್ಥೆ, ಎಚ್ ಎಂಟಿ, ಬಿಇಎಲ್, ಬಿಇಎಂಎಲ್, ಇಸ್ರೋ ಹೀಗೆ ಅನೇಕ ಬೌದ್ಧಿಕ ಸಂಸ್ಥೆಗಳು ಬೆಂಗಳೂರಿನಲ್ಲಿ ಪ್ರಾರಂಭವಾಗಿದ್ದು ನಮ್ಮ ಹೆಗ್ಗಳಿಕೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಧರ್ಮ ಸಹಿಷ್ಣುತೆ ಸಂವಿಧಾನದ ಮೂಲ ಆಶಯ: ಸಿಎಂ

ಬೆಂಗಳೂರು: ಧರ್ಮ ಸಹಿಷ್ಣುತೆ ಸಂವಿಧಾ ನದ ಮೂಲ ಆಶಯವಾಗಿದ್ದು, ಸಂವಿಧಾನದ ಪಾಲನೆಯೇ ನಮ್ಮೆಲ್ಲರ ಗುರಿಯಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಮನೆ ಮೈದಾನದಲ್ಲಿ ಈದ್‌ಮಿಲಾದ್ ಸಮಿತಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಿಲಾದುನ್ನಬೀ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರವಾದಿಯ ವರ ಬೋಧನೆಗಳು ಮಾನವ ಇತಿಹಾಸದಲ್ಲಿ ಕ್ರಾಂತಿ ಕಾರಿ ಬದಲಾವಣೆಗಳನ್ನು ತಂದವು. ಅವರು ಸಮಸ್ತ ಮಾನವ ಕೋಟಿಗೆ ನ್ಯಾಯ, ಸಮಾನತೆ ಮತ್ತು ಧಾರ್ಮಿಕ ಸೌಹಾರ್ದದ ಮಾರ್ಗಗಳನ್ನು ತೋರಿ ಸಿದರು. ಬಸವಣ್ಣನವರ ನೇತೃತ್ವದ ಶರಣ ಚಳವಳಿಯೂ ಕೂಡ ಮಾನವ ಕುಲ ಒಂದೇ ಎನ್ನುವ ಮೌಲ್ಯವನ್ನೇ ಸಾರಿತ್ತು ಎಂದರು. ಪ್ರವಾದಿಗಳು ಶಾಂತಿಯ ಧೂತರು. ಇಡೀ ಮಾನವ ಕುಲ ಶಾಂತಿಗಾಗಿ, ಪರಸ್ಪರತೆ, ಸಹೋದರತ್ವಕ್ಕಾಗಿ ಕೆಲಸ ಮಾಡಬೇಕು ಎನ್ನುವುದು ಪ್ರವಾದಿಗಳ ಬೋಧನೆ ಯಾಗಿದೆ. ನಮ್ಮ ಸಂವಿಧಾನದ ಮೂಲ ಆಶಯ ಕೂಡ ಬ್ರಾತೃತ್ವ ಮತ್ತು ಪರಧರ್ಮ ಸಹಿಷ್ಣತೆಯೇ ಆಗಿದೆ. ಆದ್ದರಿಂದ ಸಂವಿಧಾನವನ್ನು ಆಚರಿಸುವುದು, ಪಾಲಿಸುವುದು ನಮ್ಮೆಲ್ಲರ ಗುರಿಯಾಗಲಿ ಎಂದು ಹೇಳಿದರು.

ಈ ವೇಳೆ ವಸತಿ ಸಚಿವ ಜಮೀರ್ ಅಹಮದ್, ಇಂಧನ ಸಚಿವ ಕೆ.ಜೆ.ಜಾರ್ಜ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಾಸೀರ್ ಅಹಮದ್, ಶಾಸಕರಾದ ಹ್ಯಾರಿಸ್ ಸೇರಿ ಹಲವು ಗಣ್ಯರು, ಧಾರ್ಮಿಕ ಮುಖಂಡರು ಉಪಸ್ಥಿತರಿದ್ದರು.

ಅರಮನೆ ಮೈದಾನದಲ್ಲಿ ಈದ್‌ಮಿಲಾದ್ ಸಮಿತಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಿಲಾದುನ್ನಬೀ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಪಾಲ್ಗೊಂಡರು. ಸಚಿವ ಜಮೀರ್ ಅಹ್ಮದ್ ಇದ್ದರು.

ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಎಚ್ಚರಿಕೆ

ರೈತರ ಬಗ್ಗೆ ಮಾತನಾಡುವಾಗ ಎಚ್ಚರವಿರಲಿ: ಆರ್. ಅಶೋಕ

ಬೆಂಗಳೂರು: ನಾಡಿನ ಅನ್ನದಾತ ರೈತರ ಬಗ್ಗೆ ಮಾತನಾಡುವಾಗ ಸ್ವಲ್ಪ ಎಚ್ಚರ ಇರಲಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಎಚ್ಚರಿಕೆ ಕೊಟ್ಟಿದ್ದಾರೆ. ಈ ಕುರಿತು ತಮ ಅಧಿಕೃತ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಅವರು, ಈ ಹಿಂದೆ ರೈತರ ಸರಣಿ ಆತ್ಮಹತ್ಯೆ ವಿಷಯ ಬಂದಾಗ ಎಲ್ಲಿದೆ ಆತ್ಮಹತ್ಯೆ? ಸ್ವಂತಕ್ಕೆ ಆತ್ಮಹತ್ಯೆ ಮಾಡಿಕೊಂಡವರನ್ನೆಲ್ಲಾ ರೈತರು ಅನ್ನೋಕ್ಕಾಗತ್ತಾ? ಸುಳ್ಳು ಅದೆಲ್ಲಾ ಎಂದು ರೈತರ ಬಗ್ಗೆ ತುಚ್ಛವಾಗಿ ಮಾತನಾಡಿದ್ದೀರಿ. ಈಗ ರೈತರು ಧಿಕ್ಕಾರ ಕೂಗೋದು ಬಿಟ್ಟು ಬೇರೇನೂ ಮಾಡುವುದಕ್ಕಾಗುವುದಿಲ್ಲ ಎಂದು ರೈತರನ್ನು ಅಸಹಾಯಕರು ಅನ್ನುವ ರೀತಿ ಹೀಯಾಳಿಸಿ ಮಾತನಾಡಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇಶಕ್ಕೆ ಅನ್ನ ನೀಡುವ ರೈತ ಜೀವನವಿಡೀ ತಾನು ಬದುಕುವುದು, ದುಡಿಯುವುದು ಎಲ್ಲವೂ ಇನ್ನೊಬ್ಬರಿಗಾಗಿಯೇ ಹೊರತು ತನ್ನ ಸ್ವಂತಕ್ಕಾಗಿ ಅಲ್ಲ. ಕೈಗಾರಿಕೆಗಳಿಗೆ, ರೈಲು, ರಸ್ತೆ, ವಿಮಾನ ನಿಲ್ದಾಣಕ್ಕೆ ಈ ಹಿಂದೆಯೂ ರೈತರ ಬಳಿ ಜಮೀನು ಪಡೆಯಲಾಗಿದೆ. ತಮ್ಮ ಜೀವನದ ಆಧಾರ ಸ್ತಂಭವಾಗಿರುವ ಜಮೀನನ್ನು ಕಳೆದು ಕೊಳ್ಳುತ್ತಿರುವ ರೈತರ ಬಳಿ ಹೇಗೆ ಮಾತನಾಡಬೇಕು, ಯಾವ ರೀತಿ ಸಂವೇದನೆಯಿಂದ ನಡೆದುಕೊಳ್ಳಬೇಕು ಎನ್ನುವ ಕನಿಷ್ಠ ಸೌಜನ್ಯವೂ ಇಲ್ಲದ ತಮ್ಮಂತಹವರು ಮುಂದೊಂದು ದಿನ ಮುಖ್ಯಮಂತ್ರಿ ಆಗುವ ಕನಸು ಕಾಣುತ್ತಿರುವುದು ನಮ ನಾಡಿನ ದುರಂತ ಎಂದಿದ್ದಾರೆ.

ನೋಟಿಸ್ ಜಾರಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 2023-24ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಗ್ರೂಪ್-ಸಿ, ಸಮೂಹದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹೈದರಾಬಾದ್ ಕರ್ನಾಟಕ ವೃಂದದ 97 ಹುದ್ದೆಗಳ ನೇಮಕಾತಿ ಸಂಬಂಧ 6-11-2024ರಂದು ಕನ್ನಡ ಭಾಷಾ ಪರೀಕ್ಷೆಯಲ್ಲಿ ಪರೀಕ್ಷಾ ದುರಾಚಾರ ಎಸಗಿರುವ ಆರೋಪವಿರುವ ಅಭ್ಯರ್ಥಿಗಳಿಗೆ ಆಯೋಗವು ಕಾರಣ ಕೇಳುವ ನೋಟಿಸ್ ಜಾರಿ ಮಾಡಿದೆ. ಈ ನೋಟಿಸ್‌ಗೆ ಲಿಖಿತ ಸಮಜಾಯಿಷಿ ಸಲ್ಲಿಸದಿರುವ ಅಭ್ಯರ್ಥಿಗಳಿಗೆ ಎರಡನೇ/ಅಂತಿಮ ಕಾರಣ ಕೇಳುವ ನೋಟಿಸ್‌ನ್ನು ಆನ್‌ಲೈನ್ ಅರ್ಜಿಯಲ್ಲಿ ತಿಳಿಸಿದ ವಿಳಾಸಕ್ಕೆ ಜಾರಿ ಮಾಡಲಾಗಿದ್ದು, 7 ದಿನಗಳೊಳಗಾಗಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಸೂಚಿಸಿದೆ. ತಪ್ಪಿದಲ್ಲಿ ಆಯೋಗವು ತಮ್ಮ ವಿರುದ್ಧ ಏಕಪಕ್ಷೀಯವಾಗಿ ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ. ಅಭ್ಯರ್ಥಿಗಳ ಮಾಹಿತಿಯನ್ನು ಅಂತರ್ಜಾಲ http://kpsc.kar.nic.in ನಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದೆ.

ಸ್ಥಳೀಯ ಸಂಸ್ಥೆ ಚುನಾವಣೆಗೆ ಬ್ಯಾಲೆಟ್ ಪೇಪರ್ ಬಳಕೆ

ರಾಜ್ಯ ಸರಕಾರದ ಕ್ರಮ ಸುರ್ಜೇವಾಲ ಸ್ವಾಗತ

ಬೆಂಗಳೂರು: ರಾಜ್ಯ ಸರಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಾಲಿಕೆಗಳು, ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಇವಿಎಂ ಬದಲು ಬ್ಯಾಲೆಟ್ ಪತ್ರಗಳ ಮೂಲಕ ನಡೆಸಲು ಮುಂದಾಗಿರುವ ನಿರ್ಧಾರವನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ನಿರ್ಧಾರವು ನಮ್ಮ ಪ್ರಜಾಪ್ರಭುತ್ವದ ಆಶಯಗಳನ್ನು ಬಲಪಡಿಸುವ ಮತ್ತು ಮತದಾರರ ನಂಬಿಕೆಯನ್ನು ಮರುಸ್ಥಾಪಿಸುವ ಒಂದು ದಿಟ್ಟ ಹೆಜ್ಜೆಯಾಗಿದೆ ಎಂದು ಎಸಿಸಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ಇವಿಎಂನ ವಿಶ್ವಾಸಾರ್ಹತೆಯ ಕುರಿತು ಹಲವು ಅನುಮಾನಗಳು ಮತ್ತು ಪ್ರಶ್ನೆಗಳು ರಾಜಕೀಯ ವಲಯಗಳಲ್ಲಿ ಹಾಗೂ ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿವೆ. ಎಲೆಕ್ಟ್ರಾನಿಕ್ ಮತಯಂತ್ರಗಳಲ್ಲಿನ ತಾಂತ್ರಿಕ ದೋಷಗಳು, ಹ್ಯಾಕಿಂಗ್ ಸಾಧ್ಯತೆಗಳು ಮತ್ತು ಫಲಿತಾಂಶಗಳ ಕುರಿತು ವ್ಯಕ್ತವಾಗುತ್ತಿರುವ ಗೊಂದಲಗಳು ಮತದಾರರಲ್ಲಿ ವಿಶ್ವಾಸದ ಕೊರತೆಯನ್ನು ಸೃಷ್ಟಿಸಿವೆ. ನಮ್ಮ ಪ್ರಜಾಪ್ರಭುತ್ವದ ಹೃದಯ ಭಾಗವಾಗಿರುವ ಮತದಾನ ಪ್ರಕ್ರಿಯೆಯು ಸಂಪೂರ್ಣವಾಗಿ ಪಾರದರ್ಶಕ ಮತ್ತು ಎಲ್ಲರ ನಂಬಿಕೆಗೆ ಅರ್ಹವಾಗಿರಬೇಕು ಎಂದು ಹೇಳಿದರು.

ರಾಹುಲ್ ಗಾಂಧಿ ಇವಿಎಂ ವಿವಾದದ ಕುರಿತು ಸ್ಪಷ್ಟವಾದ ನಿಲುವು ಹೊಂದಿದ್ದಾರೆ. ಇವಿಎಂಗಳ ಬದಲಿಗೆ ಬ್ಯಾಲೆಟ್ ಪೇಪರ್ ವ್ಯವಸ್ಥೆಯ ಮರುಸ್ಥಾಪನೆಗೆ ನಿರಂತರವಾಗಿ ಆಗ್ರಹಿಸಿ ದ್ದಾರೆ. ಇವಿಎಂ ಮೂಲಕ ವ್ಯಕ್ತವಾಗುವ ಮತದಾ ನದ ಬದಲು, ಬ್ಯಾಲೆಟ್ ಪೇಪರ್ ಬಳಕೆಯು ಪ್ರತಿ ಮತವೂ ನಿಷ್ಪಕ್ಷಪಾತವಾಗಿ ಎಣಿಕೆಯಾಗುತ್ತಿದೆ ಎಂಬ ಭರವಸೆಯನ್ನು ನೀಡುತ್ತದೆ. ಇದು ಮತದಾರರ ಹಕ್ಕುಗಳನ್ನು ಬಲಪಡಿಸುತ್ತದೆ ಎಂದು ತಿಳಿಸಿದರು.

ಪ್ರತ್ಯೇಕ ಮತದಾರರ ಪಟ್ಟಿ ಕಾರ್ಯವೂ ಶ್ಲಾಘನೀಯ

ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ರಾಜ್ಯ ಚುನಾವಣಾ ಆಯೋಗದ ನೇತೃತ್ವದಲ್ಲಿಯೇ ಪ್ರತ್ಯೇಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ನಿರ್ಧಾರವು ಒಂದು ಮಹತ್ವದ ಮತ್ತು ಸ್ವಾಗತಾರ್ಹ ಹೆಜ್ಜೆಯಾಗಿದೆ. ಇದುವರೆಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಭಾರತ ಚುನಾವಣಾ ಆಯೋಗ ಸಿದ್ಧಪಡಿಸಿದ ಮತದಾರರ ಪಟ್ಟಿಯನ್ನೇ ಬಳಸಲಾಗುತ್ತಿತ್ತು. ಆದರೆ, ಈಗ ಪ್ರತ್ಯೇಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದರಿಂದ ಹಲವು ಪ್ರಮುಖ ಅನುಕೂಲಗಳಿವೆ ಎಂದು ಎಸಿಸಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು.

ರಾಹುಲ್ ಗಾಂಧಿ ಮೆಚ್ಚಿಸಲು ಸಿದ್ದರಾಮಯ್ಯ ಬ್ಯಾಲೆಟ್ ಮೊರೆ

ಬ್ಯಾಲೆಟ್ ಮೂಲಕ ಚುನಾವಣೆ ಎದುರಿಸಿ ಸಿಎಂ ಗೆದ್ದು ಬರಲಿ

ಬೆಂಗಳೂರು: ಇವಿಎಂ ಬಳಸುವ ಮೂಲಕ ನಡೆದ ಚುನಾವಣೆಯಲ್ಲಿ ಗೆದ್ದಿರುವ ಸಿದ್ದರಾಮಯ್ಯ ಮತ್ತೆ ಬ್ಯಾಲೆಟ್ ಪೇಪರ್ ಬೇಕು ಎಂದು ಸಂಪುಟದಲ್ಲಿ ನಿರ್ಧಾರ ಮಾಡಿರುವುದು ಅತ್ಯಂತ ವಿಪರ್ಯಾಸ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇವಿಎಂ ಮೂಲಕ ಸಿಎಂ ಆಗಿರುವ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಬ್ಯಾಲೆಟ್ ಮೂಲಕ ಚುನಾವಣೆ ಎದುರಿಸಿ ಆರಿಸಿ ಬಂದು ಬ್ಯಾಲೆಟ್ ಪೇಪರ್ ಬಳಕೆಗೆ ಮುಂದಾಗಲಿ ಎಂದು ಆಗ್ರಹಿಸಿದ್ದಾರೆ. ಇವಿಎಂ ಮುಖಾಂತರವೇ ಎರಡು ಬಾರಿ ಸಿಎಂ ಆಗಿರುವ ಸಿದ್ದರಾಮಯ್ಯ ಅವರು ಯಾವ ಆಧಾರದ ಮೇಲೆ ಸಿಎಂ ಆಗಿದ್ದಾರೆ ಅದನ್ನೇ ಪ್ರಶ್ನಿಸುವ ರಾಜಕೀಯ ಅಧೋಪತನಕ್ಕೆ ಹೋಗಿದ್ದಾರೆ. ಕೊಪ್ಪಳದಲ್ಲಿ ಬ್ಯಾಲೆಟ್ ಪೇಪರ್ ಮೇಲೆ ನಡೆದ ಚುನಾವಣೆಯಲ್ಲಿಯೇ ಅವರು ಸೋತಿದ್ದಾರೆ. ಯಾವ ಇವಿಎಂ ನಿಂದ ಗೆದ್ದಿದ್ದಾರೆ. ಈಗ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಬ್ಯಾಲೆಟ್ ಮುಖಾಂತರ ಚುನಾವಣೆ ಎದುರಿಸಿ ಸಿಎಂ ಆಗಿ ಸ್ಥಳೀಯ ಸಂಸ್ಥೆಗಳಿಗೆ ಬ್ಯಾಲೆಟ್ ಮೂಲಕ ಚುನಾವಣೆ ನಡೆಸಿದರೆ ಅದಕ್ಕೊಂದು ಆಧಾರ ಇದೆ. ಅದ್ಯಾವುದನ್ನೂ ಮಾಡದೇ ಕೇವಲ ರಾಹುಲ್ ಗಾಂಧಿ ಮೆಚ್ಚಿಸಲು ಈ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಕೇಸ್ ವಾಪಸ್ ಖಂಡನೀಯ: ಬೊಮ್ಮಾಯಿ

ಸಿದ್ದರಾಮಯ್ಯ ಪಿಎಫ್‌ಐ, ಎಸ್ ಡಿಪಿಐ ವಿರುದ್ಧದ ಪ್ರಕರಣ ವಾಪಸ್ ಪಡೆದು ಪುನರ್ ಆಯ್ಕೆ ಯಾಗಿದ್ದರು. ಎರಡನೇಯದಾಗಿ ಹುಬ್ಬಳ್ಳಿಯ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದವರನ್ನು ಬಿಡುಗಡೆ ಮಾಡುವ ಕೆಲಸ ಮಾಡಿದ್ದರು. ಈಗ ತಮ್ಮ ರಾಜಕೀಯ ಬೆಂಬಲಿಗರನ್ನು ರಕ್ಷಣೆ ಮಾಡುವ ಪ್ರಯತ್ನ ಮಾಡಿದ್ದಾರೆ. ಇದರಿಂದ ಸಮಾಜ ಘಾತುಕ ಶಕ್ತಿಗಳು ಈ ಥರದ ಪ್ರತಿಭಟನೆ ಹೆಸರಿನಲ್ಲಿ ಮತ್ತೆ ದಂಗೆ ಮಾಡುವ ಸಾಧ್ಯತೆ ಹೆಚ್ಚಿದೆ. ಸಮಾಜ ಘಾತುಕ ಶಕ್ತಿಗಳಿಗೆ ಪುಷ್ಠಿ ಕೊಡುವ ಕೆಲಸ ಸಿಎಂ ಮಾಡುತ್ತಿರುವುದು ಖಂಡನೀಯ ಎಂದು ಹೇಳಿದರು.

ಅಪಪ್ರಚಾರಕ್ಕೆ ಇಳಿದ ಕಾಂಗ್ರೆಸ್

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆ ತಡೆದುಕೊಳ್ಳುವುದಕ್ಕೆ ಆಗದೆ, ಕೊನೇ ಅಸ್ತ್ರವಾಗಿ ಕಾಂಗ್ರೆಸ್ ಅಪಪ್ರಚಾರಕ್ಕೆ ಇಳಿದಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಆರೋಪಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನವರಿಗೆ ಚುನಾವಣೆ ಅಕ್ರಮ ಇವಿಎಂಗಳ ಮೂಲಕ ನಡೆಯುತ್ತಿಲ್ಲ ಎಂಬುದು ಗೊತ್ತಾಗಿದೆ. ಮೋದಿ ಅವರ ಜನಪ್ರಿಯತೆಯಲ್ಲಿ ನಾವು ಚುನಾವಣೆ ಗೆಲ್ಲುವುದಕ್ಕೆ ಸಾಧ್ಯವೇ ಇಲ್ಲ ಎನ್ನುವುದು ಅವರಿಗೆ ಅರ್ಥವಾಗಿದೆ. ಹಾಗಾಗಿ ಜನರ ಮಧ್ಯೆ ಗೊಂದಲ ಸೃಷ್ಟಿ ಮಾಡಲು ಮತಗಳ್ಳತನದ ಆರೋಪ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ಸ್ಥಳೀಯ ಚುನಾವಣೆ ಮತಪತ್ರಗಳ ಮೂಲಕ ನಡೆಸುತ್ತೇವೆ ಎಂದು ಕಾಂಗ್ರೆಸ್ ತೀರ್ಮಾನಿಸಿದೆ. ನರೇಂದ್ರ ಮೋದಿ ಜಗತ್ತಿನಲ್ಲಿ ನಡೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಭಾರತ ಸವಾಲು ಒಡ್ಡುವ ರೀತಿಯಲ್ಲಿ ನಿಲ್ಲಬೇಕು ಎಂದು ಡಿಜಿಟಲ್ ಆಡಳಿತ ಮತ್ತು ಡಿಜಿಟಲ್ ವಹಿವಾಟು ಮಾಡುತ್ತಿರುವಾಗ ರಾಜ್ಯ ಸರಕಾರ ಮತ ಪತ್ರದ ಕಡೆಗೆ ವಾಪಸು ತಿರುಗಿ ಹೋಗುತ್ತಿದೆ. ಇದರ ಹಿಂದೆ ಯಾವ ಉದ್ದೇಶವಿದೆ ಎಂದು ಪ್ರಶ್ನಿಸಿದರು.

250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನಮೋ ವಿದ್ಯಾನಿಧಿ ವಿದ್ಯಾರ್ಥಿವೇತನ | ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಭಾಗಿ

ಯಶಸ್ಸನ್ನು ಗಳಿಸುವುದರೊಂದಿಗೆ ಉಳಿಸಿಕೊಳ್ಳುವುದು ಮುಖ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಯಶಸ್ಸನ್ನು ಗಳಿಸುವುದಕ್ಕಿಂತ ಅದನ್ನು ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಭಿಪ್ರಾಯ ಪಟ್ಟರು. ಸಂಸದ ತೇಜಸ್ವಿ ಸೂರ್ಯ ಅವರ ನಮೋ ವಿದ್ಯಾನಿಧಿ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ಯಶಸ್ಸನ್ನು ಗಳಿಸುವುದಕ್ಕಿಂತ ಅದನ್ನು ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ. ವಿದ್ಯಾರ್ಥಿಯೊಬ್ಬ 99 ಅಂಕ ಪಡೆದ ಬಳಿಕ ಅದನ್ನು ಉಳಿಸಿಕೊಳ್ಳಲು ಅಥವಾ ಸುಧಾರಿಸಿಕೊಳ್ಳಲು ಪ್ರಯತ್ನಿಸಬೇಕು. ಇಲ್ಲವಾದರೆ ಅದು ಆಕಸ್ಮಿಕವಾಗುತ್ತದೆ ಎಂದು ಹೇಳಿದರು.

ಇಂದಿನ ಕಾಲಘಟ್ಟದಲ್ಲಿರುವ ನಮಗೆ ಯಾವುದೇ ರೀತಿಯ ಸಾಧನೆಗೆ ಅವಕಾಶವಿದೆ. ಅಂತಹ ಅದ್ಭುತವಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಆದರೆ ಯಾವುದೇ ರೀತಿಯ ಆಸೆ, ಗುರಿಯನ್ನು ಈಡೇರಿಸಿಕೊಳ್ಳಲು ನಾವು ಮನಸ್ಸು ಮಾಡಬೇಕು. ನಾವೇನಾದರೂ ಸಾಧನೆ ಮಾಡದಿದ್ದರೆ ಅದಕ್ಕೆ ನಾವೇ ಕಾರಣವಾಗುತ್ತೇವೆ ಹೊರತು ಬೇರೆಯವರಲ್ಲ. ಮುಂದಿನ 10 ವರ್ಷದಲ್ಲಿ ನೀವೇನಾಗಬೇಕು ಎನ್ನುವುದನ್ನು ನೀವು ನಿರ್ಧರಿಸಿ, ಆ ನಿಟ್ಟಿನಲ್ಲಿ ಪ್ರಯತ್ನಪಟ್ಟರೆ ಯಶಸ್ಸು ನಿಶ್ಚಿತವಾಗಿ ಸಿಗಲಿದೆ ಎಂದು ಸಲಹೆ ನೀಡಿದರು.

ಸಂಸದ ತೇಜಸ್ವಿ ಸೂರ್ಯ ಅವರ ನಮೋ ವಿದ್ಯಾನಿಧಿ ವಿದ್ಯಾರ್ಥಿ ವೇತನವನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ವಿದ್ಯಾರ್ಥಿನಿಗೆ ವಿತರಿಸಿದರು.

ಈ ಹಿಂದೆ ಅಮೆರಿಕ, ಲಂಡನ್‌ನಲ್ಲಿ ಓದಬೇಕು ಎಂದು ಅದು ಸುಲಭವಾಗಿರಲಿಲ್ಲ. ಆದರಿಂದು ಎಲ್ಲವೂ ಸಾಧ್ಯ. ಓದಿಗೆ ಹಣಕಾಸಿನ ಸಮಸ್ಯೆಯಿದ್ದರೆ, ತೇಜಸ್ವಿ ಸೂರ್ಯರಂತಹ ಅನೇಕ ದಾನಿಗಳು ಹಣಕಾಸಿನ ನೆರವಿಗೆ ಬರುತ್ತಾರೆ. ಆದರೆ ನಾವು ಮನಸ್ಸು ಮಾಡಬೇಕು. ಇಂದಿನ ತಂತ್ರಜ್ಞಾನ ಯುಗದಲ್ಲಿ ಯಾವುದೇ ಭಾಷೆ, ಕಲೆಯನ್ನು ಮನೆಯಲ್ಲಿಯೇ ಕೂತು ಕಲಿಯಲು ಅವಕಾಶವಿದೆ ಎಂದರು.

ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗುವ ಉದ್ದೇಶದಿಂದ ತೇಜಸ್ವಿ ಸೂರ್ಯ ಅವರು ಆರಂಭಿಸಿರುವ 'ನಮೋ ವಿದ್ಯಾನಿಧಿ' ಯೋಜನೆಯಲ್ಲಿ ಸುಮಾರು 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್ ಛಬ್ಬಿ, ಬಿಎನ್‌ಎಂ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ನಾರಾಯಣ ರಾವ್ ಮಾನೆ, ಬಿಎನ್‌ಎಂ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಎಸ್. ವಿ. ಕುಲಕರ್ಣಿ, ಬಿಜೆಪಿ ಮುಖಂಡರಾದ ಲಕ್ಷ್ಮಿಕಾಂತ್, ಬಸವರಾಜು ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

ಕಳೆದ ಐದು ವರ್ಷಗಳಿಂದ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮ ಮಾಡುತ್ತಿದ್ದೇವೆ. ವೈಯಕ್ತಿಕವಾಗಿ ಇದು ನನಗೆ ತೃಪ್ತಿ ಸಿಗುತ್ತದೆ. ಇದರಲ್ಲಿ ಯಾವುದೇ ರಾಜಕೀಯ ಉದ್ದೇಶ ಇಲ್ಲ. ಸಮಾಜದಲ್ಲಿ ಸಾಮಾಜಿಕ ಬದಲಾವಣೆಯಾಗಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು ಎನ್ನುವ ಸಂದೇಶ ನೀಡಲು ಈ ಕಾರ್ಯಕ್ರಮ ರೂಪಿಸಲಾಗಿದೆ.

-ತೇಜಸ್ವಿ ಸೂರ್ಯ, ಸಂಸದ

ಪರೀಕ್ಷೆಗೋಸ್ಕರ ತಯಾರಿ ನಡೆಸಿ ಅಂಕ ಪಡೆಯುವುದಕ್ಕಿಂತ ಹೆಚ್ಚಾಗಿ ಯಾವಾಗ ಬೇಕಾದರೂ ಪರೀಕ್ಷೆ ತೆಗೆದುಕೊಳ್ಳುವ ರೀತಿಯಲ್ಲಿ ವಿದ್ಯಾರ್ಥಿಗಳು ಸಿದ್ಧವಾಗಬೇಕು. ಈ ರೀತಿಯ ತಯಾರಿಯನ್ನು ಎಂಎನ್‌ಸಿ ಸಂಸ್ಥೆಗಳು ನೋಡುತ್ತಿವೆ. ಆದ್ದರಿಂದ ವಿದ್ಯಾರ್ಥಿಗಳು, ಈ ನಿಟ್ಟಿನಲ್ಲಿ ತಯಾರಿ ನಡೆಸಬೇಕು.

-ನಾರಾಯಣರಾವ್ ಮಾನೆ, ಕಾರ್ಯದರ್ಶಿಗಳು, ಬಿಎನ್‌ಎಂ ವಿದ್ಯಾಸಂಸ್ಥೆ

ಗಿರೀಶ್‌ಗೆ ಎಸ್‌ಐಟಿ ಗ್ರಿಲ್

← ಮೊದಲಪುಟದಿಂದ

ಸೋನಿಯಾ ತಲುಪಿದ ಬುರುಡೆ ಪ್ರಕರಣ: ಧರ್ಮಸ್ಥಳ ಪ್ರಕರಣ ಸಂಬಂಧ ಕೆಲವು ಮಹಿಳಾ ಸಂಘಟನೆಗಳು ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದು, ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿವೆ. 'ಯಾರು ಕೊಂದರು' ಶೀರ್ಷಿಕೆಯಲ್ಲಿ ಕೈ ನಾಯಕಿಗೆ ಪತ್ರ ಬರೆಯಲಾಗಿದೆ. ರಾಜ್ಯದ 10 ಮಹಿಳಾ ಸಂಘಟನೆಗಳು ಮತ್ತು 40 ಮಹಿಳಾ ಕಾರ್ಯಕರ್ತರು ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋನಿಯಾ ಗಾಂಧಿಗೆ ಪತ್ರ ಬರೆದು ಎಸ್‌ಐಟಿ ತನಿಖೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಪತ್ರದಲ್ಲಿ ಆರೋಪಿ ಚಿನ್ನಯ್ಯ ಬಂಧನ, ಸುಜಾತಾ ಭಟ್ ಪ್ರಕರಣ ಮತ್ತು ಮಾಧ್ಯಮ ವರದಿಗಳನ್ನು ಉಲ್ಲೇಖಿಸಲಾಗಿದೆ. ಧರ್ಮಸ್ಥಳ ಪ್ರಕರಣದಲ್ಲಿ ಪಿತೂರಿ ನಡೆದಿದೆ. ಇದರಲ್ಲಿ ಹುರುಳಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಪ್ಪುದಾರಿಗೆಳೆಯುವ ಹೇಳಿಕೆ ನೀಡಿದ್ದಾರೆ. ಇವರಿಗೆ ಸಾಥ್ ನೀಡುವ ರೀತಿಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ನೀಡಿದ್ದಾರೆ. ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಪ್ರತಿಪಕ್ಷದ ಒತ್ತಡಕ್ಕೆ ಮಣಿದು ಧರ್ಮಸ್ಥಳದ ಕುರಿತು ವರದಿ ಮಾಡುವ ಯೂಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸಿದ್ದಾರೆ ಎಂದು ಪತ್ರದಲ್ಲಿ ದೂರಲಾಗಿದೆ. ಇದರೊಂದಿಗೆ ವಿ.ಎಸ್. ಉಗ್ರಪ್ಪ ಸಮಿತಿ 2018ರಲ್ಲಿ ಸಲ್ಲಿಸಿದ ವರದಿಯನ್ನು ಪರಿಗಣಿಸಬೇಕು. ಸಾರ್ವಜನಿಕ ಪ್ರತಿನಿಧಿಗಳು ನಿಷ್ಪಕ್ಷಪಾತ ತನಿಖೆಗೆ ಸಹಕರಿಸಬೇಕು. ಸೌಜನ್ಯ ಪ್ರಕರಣದ ತನಿಖೆಯಲ್ಲಿ ಲೋಪ ಎಸಗಿದ ಅಧಿಕಾರಿಗಳನ್ನು ನ್ಯಾಯಾಲಯದ ಆದೇಶದಂತೆ ತನಿಖೆ ನಡೆಸಬೇಕೆಂದು ವಿನಂತಿಸಲಾಗಿದೆ.

ಪಾಗಲ್ ಪ್ರೇಮಿಯಿಂದ ಯುವತಿಗೆ ಚಾಕು ಇರಿತ

ಚಿಕ್ಕಮಗಳೂರು: ಪ್ರೀತಿ ನಿರಾಕರಿಸಿದ ಕಾರಣಕ್ಕೆ ಸಿಟ್ಟಿಗೆದ್ದ ಯುವಕನೊಬ್ಬ ಯುವತಿ ಮೇಲೆ ಚಾಕುವಿನಿಂದ ಇರಿದು ಪರಾರಿಯಾಗಿರುವ ಘಟನೆ ಕಳಸ ಪಟ್ಟಣದ ಮಹಾವೀರ ಸರ್ಕಲ್ ಬಳಿ ಶುಕ್ರವಾರ ನಡೆದಿದೆ. ಕಳಸ ತಾಲೂಕಿನ ಹೆಗ್ಗೋಡು ಮೂಲದ ಕಾವ್ಯ (24) ಪ್ರಿಯಕರನಿಂದ ಚಾಕು ಇರಿತಕ್ಕೊಳಗಾದ ಯುವತಿಯಾಗಿದ್ದಾಳೆ. ಕೊಪ್ಪ ತಾಲೂಕಿನ ಗುಡ್ಡತೋಟ ಮೂಲದ ಯುವಕ ಆರೋಪಿಯಾಗಿದ್ದು ಸದ್ಯ ಪೊಲೀಸರು ಈತನ ಪತ್ತೆಗೆ ಬಲೆ ಬೀಸಿದ್ದಾರೆ. ಕಾವ್ಯ ಕಳಸದ ಖಾಸಗಿ ಕ್ಲಿನಿಕ್‌ನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದು ಆಕೆ ಯನ್ನು ಯುವಕನೋರ್ವ ಪ್ರೀತಿಸುತ್ತಿದ್ದ ಎನ್ನಲಾಗಿದೆ.

ವೈಜ್ಞಾನಿಕ, ವೈಚಾರಿಕ ಚಿಂತನೆ ಶಿಕ್ಷಣದ ಗುರಿ

ಶಿಕ್ಷಣಕ್ಕೆ ನಮ್ಮ ಸರಕಾರದಿಂದ ಹೆಚ್ಚಿನ ಒತ್ತು: ಮುಖ್ಯಮಂತ್ರಿ ಸಿದ್ದರಾಮಯ್ಯ | ಮೊಬೈಲ್ ಬಿಡಿ-ಪುಸ್ತಕ ಹಿಡಿ: ಶಿಕ್ಷಕರಿಗೆ ಮಕ್ಕಳಿಗೆ ಕರೆ ನೀಡಿದ ಸಿಎಂ | ಕಲಬುರಗಿ ಭಾಗಕ್ಕೆ 5 ಸಾವಿರ ಶಿಕ್ಷಕರ ನೇಮಕ: ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಕ್ಕಳನ್ನು ವೈಚಾರಿಕತೆ ಹಾಗೂ ವೈಜ್ಞಾನಿಕವಾಗಿ ಬೆಳೆಸುವುದೇ ಶಿಕ್ಷಣದ ಗುರಿಯಾಗಿರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಮನಸ್ಥಿತಿಯನ್ನು ರೂಪಿಸುವುದು ವೈಚಾರಿಕ ಶಿಕ್ಷಣ. ಕೇವಲ ಪಾತ್ರೆ ತುಂಬಿಸುವುದು ಶಿಕ್ಷಣ ಅಲ್ಲ. ಮಕ್ಕಳಲ್ಲಿ ಅರಿವಿನ ಕಿಡಿ ಹೊತ್ತಿಸುವುದೇ ಶಿಕ್ಷಣದ ಉದ್ದೇಶ ಮತ್ತು ಮಹತ್ವವಾಗಿದೆ. ಇಂಥಾ ಶಿಕ್ಷಣ ನಮ್ಮ ಸರಕಾರದ ಗುರಿ. ಮೊದಲೆಲ್ಲಾ ಶೂದ್ರರಿಗೆ ವಿದ್ಯೆ ಕಲಿಯುವ ಅವಕಾಶ ಇರಲಿಲ್ಲ. ಸಂವಿಧಾನ ನಮಗೆ ಎಲ್ಲರಿಗೂ ಕಡ್ಡಾಯ ಶಿಕ್ಷಣದ ಹಕ್ಕು ನೀಡಿದೆ. ಆದ್ದರಿಂದ, ನಮ್ಮ ಸರಕಾರ ಬಂದ ಮೇಲೆ ಸಂವಿಧಾನದ ಪೀಠಿಕೆಯನ್ನು ಅರ್ಥೈಸುವ ಕೆಲಸ ಮಾಡುತ್ತಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಂವಿಧಾನದ ಮೌಲ್ಯಗಳಾಗಿದ್ದು ಇವನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಮನುಷ್ಯತ್ವ ಹೊಂದಿರುವ ಅತ್ಯುನ್ನತ ನಾಗರಿಕರನ್ನು ಸೃಷ್ಟಿಸಬಹುದು. ಇದನ್ನು ಶಿಕ್ಷಕರು ಅರ್ಥ ಮಾಡಿಕೊಂಡು ನಾಗರಿಕ ಸಮಾಜ ರೂಪಿಸಬೇಕು ಎಂದರು.

ಜಾತಿ ವ್ಯವಸ್ಥೆ ಇರುವ ನಮ್ಮ ಸಮಾಜದಲ್ಲಿ ಬದಲಾವಣೆ ಆಗಿ ಮಾನವೀಯ ವ್ಯವಸ್ಥೆ ರೂಪುಗೊಳ್ಳಬೇಕು. ಶಿಕ್ಷಣ ಕಲಿತೂ ಜಾತಿ ಆಚರಿಸುವುದು, ಕಂದಾಚಾರ-ಮೌಢ್ಯ ಆಚರಿಸುವುದು ಶಿಕ್ಷಣಕ್ಕೆ ಬಗೆಯುವ ದ್ರೋಹ. ಆದ್ದರಿಂದ ವೈಚಾರಿಕತೆ, ವೈಜ್ಞಾನಿಕತೆ, ಪರಧರ್ಮ ಸಹಿಷ್ಣುತೆ ಮೈಗೂಡಿಸಿಕೊಳ್ಳುವ ಶಿಕ್ಷಣ ಕೊಡುವ ನೈತಿಕ ಮತ್ತು ವೃತ್ತಿಪರ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ವೈದ್ಯರಾದವರು, ಪ್ರೊಫೆಸರ್‌ಗಳು, ಉಪನ್ಯಾಸಕರೂ ಹಣೆ ಬರಹ ನಂಬಿಕೊಂಡಿದ್ದಾರೆ. ಇವರು ಮತ್ತು ಎಂಜಿನಿಯರಿಂಗ್ ಓದಿದವರೂ ಜಾತಿ ಮಾಡುವುದನ್ನು, ಮೌಢ್ಯ ಆಚರಿಸುವುದನ್ನು ನಾನು ನೋಡಿದ್ದೇನೆ. ಹಾಗಾದರೆ ಇವರಿಗೆ ಸಿಕ್ಕ ಶಿಕ್ಷಣ ಎಂಥಾದ್ದು ಎಂದು ಪ್ರಶ್ನಿಸಿದರು.

ಪ್ರತಿನಿತ್ಯ ಅನ್ನ ಸಿಗುತ್ತಿರಲಿಲ್ಲ: ವಿದ್ಯಾರ್ಥಿ ದೆಸೆಯಲ್ಲಿ ನನಗೆ ಪ್ರತಿದಿನ ಅನ್ನ ತಿನ್ನುವ ಅವಕಾಶ, ಶಕ್ತಿ ಇರಲಿಲ್ಲ. ಯಾರಿಗೂ ಈ ಸ್ಥಿತಿ ಬರಬಾರದು ಎನ್ನುವ ಕಾರಣದಿಂದ ನಾನು ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದೆ. ಡಾ.ಸರ್ವಪಲ್ಲಿ ರಾಧಾಕೃಷ್ಣ ಅವರು ಅತ್ಯಂತ ನೈತಿಕ ಮೌಲ್ಯಗಳುಳ್ಳ ಶಿಕ್ಷಕರೂ, ರಾಷ್ಟ್ರಪತಿಗಳೂ ಆಗಿದ್ದರು. ಇವರ ಆದರ್ಶಗಳನ್ನು ಪಾಲಿಸುವುದೇ ಅವರಿಗೆ ಸಲ್ಲಿಸುವ ಅತ್ಯುನ್ನತ ಗೌರವ ಎಂದರು. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನಡವಳಿಕೆಗಳು ಮಕ್ಕಳ ಮೇಲೆ ಅಪಾರ ಪ್ರಭಾವ ಬೀರುತ್ತವೆ. ಆದ್ದರಿಂದ ಶಿಕ್ಷಕರು ಅತ್ಯುನ್ನತ ಮಾನವೀಯ ಮತ್ತು ನಾಗರಿಕ ಮೌಲ್ಯಗಳನ್ನು ಪಾಲಿಸಬೇಕು ಎಂದರು.

> ಜಾತಿ ವ್ಯವಸ್ಥೆ ಕಾರಣಕ್ಕೆ ಅಸಮಾನ ಸಮಾಜ ನಿರ್ಮಾಣ ಆಗಿ ಅವಕಾಶಗಳು ಎಲ್ಲರಿಗೂ ಸಿಗುತ್ತಿಲ್ಲ. ಶೂದ್ರರ ಜತೆಗೆ ಮಹಿಳೆಯರನ್ನೂ ಶಿಕ್ಷಣದಿಂದ ಹೊರಗಿಡಲಾಗಿತ್ತು. ಆದರೆ ಈಗ ಶಿಕ್ಷಣದ ಹಕ್ಕಿನ ಕಾರಣಕ್ಕೆ ಅವಕಾಶ ಪಡೆದು ಹೆಚ್ಚೆಚ್ಚು ರ್‍ಯಾಂಕ್ ಪಡೆಯುತ್ತಿರುವವರಲ್ಲಿ ಹೆಣ್ಣು ಮಕ್ಕಳೇ ಹೆಚ್ಚಾಗಿದ್ದಾರೆ.
>
> – ಸಿದ್ದರಾಮಯ್ಯ ಮುಖ್ಯಮಂತ್ರಿ

ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ನೀಡಿ ಅಭಿನಂದಿಸಿದರು.

ಮೊಬೈಲ್ ಗೀಳಿನಿಂದ ಹೊರಬನ್ನಿ

ಮೊಬೈಲ್ ಗೀಳು ಈಗ ಮಕ್ಕಳಲ್ಲಿ ಹೆಚ್ಚಾಗಿದೆ. ಈ ಗೀಳಿನಿಂದ ಮಕ್ಕಳನ್ನು ಹೊರಗೆ ತರುವ ಕೆಲಸವನ್ನು ಶಿಕ್ಷಕರು ಪರಿಣಾಮಕಾರಿಯಾಗಿ ಆಗಬೇಕಿದೆ. ಆದ್ದರಿಂದ, ಮೊಬೈಲ್ ಬಿಡಿ-ಪುಸ್ತಕ ಹಿಡಿ ಎನ್ನುವ ಮೌಲ್ಯವನ್ನು ಪ್ರತೀ ಶಾಲೆ ಮತ್ತು ಮನೆಗಳಲ್ಲೂ ಜಾರಿ ಆಗಲಿ ಎಂದು ಶಿಕ್ಷಕರಿಗೆ-ಮಕ್ಕಳಿಗೆ ಸಲಹೆ ನೀಡಿದರು. ಇದೇ ವೇಳೆ ಸಾವಿತ್ರಿ ಫುಲೆ ಮತ್ತು ಫಾತಿಮಾ ಶೇಖ್ ಇಬ್ಬರೂ ದಮನಿತ ಮಹಿಳೆಯರಿಗೆ ಶಿಕ್ಷಣ ಕೊಟ್ಟ ಮೊದಲ ಶಿಕ್ಷಕಿಯರು. ಇವರಿಗೆ ಸೆಗಣಿಯನ್ನೆಲ್ಲಾ ಎಸೆದು ಅವಮಾನಿಸಲಾಗಿತ್ತು. ಈ ಎಲ್ಲಾ ಅವಮಾನ ಸಹಿಸಿಕೊಂಡೂ ಶಿಕ್ಷಣ ನೀಡಿದರು ಎಂದು ಸಿಎಂ ಸ್ಮರಿಸಿದರು.

18 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ರಾಜ್ಯದಲ್ಲಿ 18 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ. ಕಲಬುರಗಿ ಭಾಗದಲ್ಲಿ 5 ಸಾವಿರ ಶಿಕ್ಷಕರ ನೇಮಕಕ್ಕೆ ಅನುಮೋದನೆ ನೀಡಲಾಗಿದೆ. 800 ಕೆಪಿಎಸ್‌ಸಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. 5 ಸಾವಿರ ದ್ವಿಭಾಷಾ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಒಂದು ಸಾವಿರವಿದ್ದ ಎಲ್‌ಕೆಜಿ, ಯುಕೆಜಿ ಶಾಲೆಗಳನ್ನು ನಾಲ್ಕು ಸಾವಿರಕ್ಕೆ ಹೆಚ್ಚಿಸಲಾಗಿದೆ. ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೂ ಅನುಮೋದನೆ ನೀಡಲಾಗಿದೆ. ಆರು ದಿನಗಳ ಕಾಲ ಮಕ್ಕಳ ಭೌತಿಕತೆ ಹೆಚ್ಚಲು ಮೊಟ್ಟೆ ಇಲ್ಲವೇ ಬಾಳೆಹಣ್ಣನ್ನು ನೀಡಲಾಗುತ್ತಿದೆ ಎಂದು ವಿವರಿಸಿದರು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಶಾಲೆಗಳ ಮೂಲ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ಅಜೀಮ್ ಪ್ರೇಮ್‌ಜಿ: 110 ಕೋಟಿ ವಿದ್ಯಾರ್ಥಿ ವೇತನ

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಉತ್ತೇಜನ ನೀಡಲು ರಾಜ್ಯದ 36,000 ಹೆಣ್ಣು ಮಕ್ಕಳಿಗೆ ವಾರ್ಷಿಕ 30 ಸಾವಿರ ವಿದ್ಯಾರ್ಥಿ ವೇತನವನ್ನು ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನ ನೀಡಲು ಯೋಜನೆ ರೂಪಿಸಿದ್ದು, 19ರಂದು ಈ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ. 10ನೇ ತರಗತಿ ಸರಕಾರಿ ಶಾಲೆಯಲ್ಲಿ ಹಾಗೂ ಪಿಯುಸಿ ಮಟ್ಟದ ಶಿಕ್ಷಣವನ್ನು ಸರಕಾರಿ ಕಾಲೇಜಿನಲ್ಲಿ ಪಡೆದಿರುವ ಹೆಣ್ಣು ಮಕ್ಕಳಿಗೆ ಪಿಯುಸಿ ನಂತರದ ಉನ್ನತ ಶಿಕ್ಷಣ ವ್ಯಾಸಂಗಕ್ಕಾಗಿ ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನ ವಾರ್ಷಿಕ 110 ಕೋಟಿಗೂ ಹೆಚ್ಚು ಮೊತ್ತದ ವಿದ್ಯಾರ್ಥಿ ವೇತನವನ್ನು ನೀಡಲಿದೆ ಎಂದರು. ಪದವಿ ಕಾಲೇಜುಗಳ 2000 ಬೋಧಕರ ನೇಮಕಾತಿ ಪ್ರಕ್ರಿಯೆಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು. ಕೆಲವೇ ದಿನಗಳಲ್ಲಿ 310 ಪ್ರಾಂಶುಪಾಲರ ನೇಮಕಾತಿಯು ಪೂರ್ಣಗೊಳ್ಳಲಿದೆ. ಪದವಿ ಕಾಲೇಜುಗಳ 6,800 ಕ್ಕೂ ಹೆಚ್ಚು ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕರಿಗೆ ಪದೋನ್ನತಿ ನೀಡಲಾಗಿದೆ. ಯಾವುದೇ ಕಿರುಕುಳ, ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದಂತೆ ಬಡ್ತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

![CHLOROPHYLL ORGANICS]

CHLOROPHYLL ORGANICS
Plot No: 5/A/1, Sy No: 148, Automotive park, Kallakal Village, Manoharabad Mandal, MedakDistrict, Telangana-502336

SALES AND MARKETING ANNOUNCEMENT

CHLOROPHYLL ORGANICS wishes to market their 100% water soluble fertilizers under their brand name in the state of Karnataka.

SL. NO	NAME OF THE FERTILIZERS	BRAND NAME
1	N:P:K 19:19:19	IKON EQUAL
2	N:P:K 20:20:20	IKON VIKAS
3	N:P:K 14:35:14	IKON SATTHA
4	N:P:K 15:05:10 +TE	IKON RANGOLI
5	N:P:K 28:28:0	IKON MAYA
6	Calcium nitrate with Boron	IKON AHAAR
7	N:P:K 10:54:10 +1Mg	IKON SHAKA
8	N:P:K 13:0:45	IKON SURMA
9	N:P:K 12:61:0	PhosPulse

The above mentioned 100% water soluble mixture fertilizers are strictly in accordance with the notification no: S.O.2900 Dated 24.10.2015 duly amended notification no: S.O.4120 (F) Dated 30.12.2017 issued by Ministry of Agriculture and Farmer welfare, New Delhi.
Dated: 6th September 2025

Marketed by:
CHLOROPHYLL ORGANICS
Plot No: 5/A/1, Sy No: 148, Automotive park, Kallakal Village, Manoharabad Mandal, Medak District, Telangana-502336
e-Mail: chlorophyll.organics@gmail.com Mobile: +91 91001 64474
Visit us at: www.chlorophyllorganics.com

Sale and Storage point in Karnataka:
WARD NO 22, SHOP NO 2971/139/2977, S SUBHANALLA COMPLEX, VIJAYANAGAR COLONY, NEAR SAI BABA TALKIES, ADONI ROAD, SIRUGUPPA, BALLARI, KARNATAKA - 583121

ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು-01.
ದೂರವಾಣಿ: 080-22867172/22866302 ಫ್ಯಾಕ್ಸ್: 080-22863576/22861665
ಇ-ಮೇಲ್: sedmatech@gmail.com Website: www.municipaladmn.gov.in

ಸಂಖ್ಯೆ: 1802916 DMA/TECH/MGNV/31/2025 ದಿನಾಂಕ: 03.09.2025

ಟೆಂಡರ್ ಪ್ರಕಟಣೆ

ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ-2)ಯಡಿ UIDF ಮಾರ್ಗಸೂಚಿಯನ್ವಯಯಡಿ ಶಿವಮೊಗ್ಗ ಮತ್ತು ಮೈಸೂರು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಈ ಕೆಳಕಂಡಂತೆ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.

ಕ್ರ ಸಂ	ಕಾಮಗಾರಿ ಇಂಡೆಂಟ್	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	DMA/2025-26/RD/WORK_INDENT45196- ಶಿವಮೊಗ್ಗ ಮಹಾನಗರ ಪಾಲಿಕೆ	4900.00
2.	DMA/2025-26/RD/WORK_INDENT45741- ಶಿವಮೊಗ್ಗ ಮಹಾನಗರ ಪಾಲಿಕೆ	4775.00
3.	DMA/2025-26/RD/WORK_INDENT45744- ಶಿವಮೊಗ್ಗ ಮಹಾನಗರ ಪಾಲಿಕೆ	2189.00
4.	DMA/2025-26/RD/WORK_INDENT39807- ಶಿವಮೊಗ್ಗ ಮಹಾನಗರ ಪಾಲಿಕೆ	886.00
5.	DMA/2025-26/RD/WORK_INDENT45005- ಮೈಸೂರು ಮಹಾನಗರ ಪಾಲಿಕೆ	4437.00
6.	DMA/2025-26/RD/WORK_INDENT42983- ಮೈಸೂರು ಮಹಾನಗರ ಪಾಲಿಕೆ	1738.00
7.	DMA/2025-26/RD/WORK_INDENT43263- ಮೈಸೂರು ಮಹಾನಗರ ಪಾಲಿಕೆ	4715.00
8.	DMA/2025-26/RD/WORK_INDENT43439- ಮೈಸೂರು ಮಹಾನಗರ ಪಾಲಿಕೆ	4850.00
9.	DMA/2025-26/RD/WORK_INDENT43683 - ಮೈಸೂರು ಮಹಾನಗರ ಪಾಲಿಕೆ	4310.00
10.	DMA/2025-26/RD/WORK_INDENT43534 - ಮೈಸೂರು ಮಹಾನಗರ ಪಾಲಿಕೆ	4950.00

ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗಿದ್ದು, ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್/ ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/-
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
DIPR/CP/2666/NR/2025-26

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ,
ನೀಸ&ಒಚ(ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಸ.ಅ/ಟಿಎನ್-10/506/2025-26 **ದಿನಾಂಕ:** 04.09.2025

ಅಲ್ಪಾವಧಿ / ಪೂರ್ಣಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ (ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಸಂಜೆ 4.30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4.30 ಗಂಟೆ ನಂತರ ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1.	Kw-1	07 ಸಂಖ್ಯೆಗಳು	55.26	06.09.2025	22.09.2025	23.09.2025
2.	SERVICE TENDERS	01 ಸಂಖ್ಯೆ	64.80	06.09.2025	22.09.2025	23.09.2025
3.	KW-1	01 ಸಂಖ್ಯೆ	15.00	06.09.2025	15.09.2025	16.09.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ನೀಸ&ಒಚ (ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/916/25-26

ಹಣಕಾಸು ಸೇವೆಗಳ ಇಲಾಖೆ
वित्तीय सेवाएं विभाग
DEPARTMENT OF FINANCIAL SERVICES

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

3 ತಿಂಗಳ ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ
(ಜುಲೈ 1, 2025 – ಸೆಪ್ಟೆಂಬರ್ 30, 2025)

ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ 1 ಶಿಬಿರ

ದೇಶಾದ್ಯಂತ ಒಟ್ಟು 2.7 ಲಕ್ಷ ಶಿಬಿರಗಳು

ಶಿಬಿರಗಳಲ್ಲಿ ಒದಗಿಸಲಾಗುವ ಸೌಲಭ್ಯಗಳು

- ಯಾವುದೇ ಶುಲ್ಕವಿಲ್ಲದೆ ಶೂನ್ಯ ಬ್ಯಾಲೆನ್ಸ್ ನಲ್ಲಿ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ **(ಪಿಎಂಜೆಡಿವೈ)** ಖಾತೆ ತೆರೆಯಬಹುದು ಮತ್ತು 2 ಲಕ್ಷ ರೂಪಾಯಿ ತನಕ ಅಪಘಾತ ವಿಮೆಯೊಂದಿಗೆ ಉಚಿತ ಡೆಬಿಟ್ ಕಾರ್ಡ್ ಒದಗಿಸಲಾಗುತ್ತದೆ
- ವಾರ್ಷಿಕ ಕೇವಲ **436 ರೂ.** ಕಂತು ಪಾವತಿಸಿ 2 ಲಕ್ಷ ರೂ. ತನಕ ಜೀವ ವಿಮಾ ರಕ್ಷಣೆ ಪಡೆಯಲು **ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ**ಯಲ್ಲಿ ನೋಂದಣಿ (ಅರ್ಹತೆ: 18-50 ವರ್ಷಗಳು) ಮಾಡಬಹುದು
- ವಾರ್ಷಿಕ ಕೇವಲ 20 ರೂ. ಕಂತಿನಲ್ಲಿ 2 ಲಕ್ಷ ರೂ. ತನಕ ಅಪಘಾತ ವಿಮಾ ರಕ್ಷಣೆ ಪಡೆಯಲು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಲ್ಲಿ ನೋಂದಣಿ(ಅರ್ಹತೆ: 18-70 ವರ್ಷಗಳು) ಮಾಡಬಹುದು
- ತಿಂಗಳಿಗೆ **1000 ರೂ.ನಿಂದ 5,000 ರೂ.** ತನಕ ಖಾತರಿಯ ಪಿಂಚಣಿ ಗಳಿಸಲು **ಅಟಲ್ ಪಿಂಚಣಿ ಯೋಜನೆಗೆ** ಚಂದಾದಾರಿಕೆ (ಅರ್ಹತೆ: 18-40 ವರ್ಷಗಳು) ಪಡೆಯಬಹುದು
- 10 ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳ ಹಿಂದೆ ತೆರೆಯಲಾದ ಉಳಿತಾಯ ಖಾತೆಗಳಿಗೆ, **ಪಿಎಂಜೆಡಿವೈ** ಖಾತೆಗಳಿಗೆ ಹಾಗೂ ನಿಷ್ಕ್ರಿಯ ಖಾತೆಗಳಿಗೆ ಕೆವೈಸಿ ನವೀಕರಿಸಿ **(ರೀ -ಕೆವೈಸಿ)**
- **ಡಿಜಿಟಲ್ ವಂಚನೆಗಳಿಂದ ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳುವುದು ಮತ್ತು ಆರ್‌ಬಿಐ ಠೇವಣಿಗಳಿಗೆ** ವರ್ಗಾಯಿಸಲಾದ ಕ್ಲೈಮ್ ಮಾಡದ ಹಣವನ್ನು ಹೇಗೆ ಪಡೆಯುವುದು ಎಂಬುದರ ಕುರಿತು ಮಾಹಿತಿ ಪಡೆಯಿರಿ

ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಿಮ್ಮ ಹತ್ತಿರದ ಬ್ಯಾಂಕ್ ಶಾಖೆ / ವ್ಯವಹಾರ ಪ್ರತಿನಿಧಿ(ಬಿಸಿ)ಯನ್ನು ಸಂಪರ್ಕಿಸಿ.

ಅಭಿಯಾನದಲ್ಲಿ ಸೇರಿ. ಎಲ್ಲರಿಗೂ ಮಾಹಿತಿ ನೀಡಿ. ವಿಮೆ ಮಾಡಿಸಿ.
ಜನಸುರಕ್ಷಾ ಯೋಜನೆಗಳ ನೋಂದಣಿ, ಖಾತೆ ತೆರೆಯುವಿಕೆ, ಕೆವೈಸಿ ನವೀಕರಣ ಮತ್ತು ಹಣಕಾಸು ವಂಚನೆ ತಡೆಗಟ್ಟಲು ಪ್ರತಿ ಪಂಚಾಯಿತಿಯಲ್ಲಿ ನಡೆಯುವ ಶಿಬಿರಕ್ಕೆ ಭೇಟಿ ನೀಡಿ.

ನಿಮ್ಮ ಮನೆ ಬಾಗಿಲಿನಲ್ಲಿ ಬ್ಯಾಂಕ್ ಸೇವೆ ಪಡೆಯಿರಿ
ಪ್ರಯೋಜನಗಳನ್ನು ಪಡೆದುಕೊಳ್ಳಿ

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಬ್ಯಾಲೆಟ್ ಪೇಪರ್‌ಗೆ ಜೈ

← ಮೊದಲಪುಟದಿಂದ

ಕೇಂದ್ರ ಚುನಾವಣಾ ಆಯೋಗದ ಅನುಮತಿ ಬೇಕಿಲ್ಲ: ಇನ್ನು ರಾಜ್ಯ ಸರಕಾರ ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಬಳಸಲು ಮುಂದಾಗಿರುವುದನ್ನು ಕೇಂದ್ರ ಚುನಾವಣಾ ಆಯೋಗ ತಡೆಯಬಹುದೇ ಎನ್ನುವ ಪ್ರಶ್ನೆಗಳು ಕೇಳಿಬಂದಿತ್ತು. ಆದರೆ ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳ ಪ್ರಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸೇರಿದಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯಿತಿಗಳಿಗೆ ಇವಿಎಂ ಬದಲಿಗೆ ಮತ ಪತ್ರ ಮೂಲಕ ಚುನಾವಣೆ ನಡೆಸುವ ಕೇಂದ್ರ ಸರಕಾರ ಅಥವಾ ಕೇಂದ್ರ ಚುನಾವಣಾ ಆಯೋಗದ ಅನುಮತಿ ಅಗತ್ಯವಿಲ್ಲ.

ಈ ಬಗ್ಗೆ ಮಾತನಾಡಿರುವ ರಾಜ್ಯ ಚುನಾವಣಾ ಮುಖ್ಯ ಆಯುಕ್ತ ಜಿ.ಎಸ್. ಸಂಗ್ರೇಶ್ ಅವರು, ಕಾಯಿದೆಗೆ ಸೂಕ್ತ ತಿದ್ದುಪಡಿ ತಂದು ರಾಜ್ಯ ಚುನಾವಣಾ ಆಯೋಗ ವ್ಯಾಪ್ತಿಯ ಚುನಾವಣೆಗಳಲ್ಲಿ ಮತಪತ್ರವನ್ನೇ ಬಳಸಲು ಅವಕಾಶವಿದೆ. ಇದಕ್ಕಾಗಿ ಕೇಂದ್ರ ಚುನಾವಣಾ ಆಯೋಗದ ಅನುಮತಿ ಪಡೆಯುವ ಅಗತ್ಯವಿಲ್ಲ. ರಾಜ್ಯ ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ. ಈ ಹಿಂದೆ ಚುನಾವಣೆಗಳಲ್ಲಿ ಮತಪತ್ರದ ಬದಲಿಗೆ ಇವಿಎಂ ಬಳಕೆ ಸಂಬಂಧ ಕಾಯಿದೆ – ನಿಯಮಾವಳಿಗೆ ತಿದ್ದುಪಡಿ ತಂದ ಬಳಿಕವಷ್ಟೆ ಇವಿಎಂ ಬಳಕೆಗೆ ಅವಕಾಶವಾಯಿತು. ಈಗಾಗಲೇ ಗ್ರಾಮ ಪಂಚಾಯಿತಿ ಚುನಾವಣೆಗೆ ಮತಪತ್ರವನ್ನೇ ಬಳಸಲಾಗುತ್ತಿದೆ. ಇದೀಗ ಇತರೆ ಸ್ಥಳೀಯ ಸಂಸ್ಥೆ ಚುನಾವಣೆಗಳನ್ನೂ ಇದಕ್ಕೆ ಸೇರಿಸಬಹುದು ಎಂದು ಸ್ಪಷ್ಟಪಡಿಸಿದ್ದಾರೆ.

> ಇವಿಎಂ ಮತಯಂತ್ರ ಬಳಸಿ ರಾಜ್ಯದಲ್ಲಿ 2023ರ ಚುನಾವಣೆಯಲ್ಲಿ ಆರಿಸಿ ಬಂದಿರುವ 136 ಕಾಂಗ್ರೆಸ್ ಶಾಸಕರಿಂದ ಮೊದಲು ರಾಜೀನಾಮೆ ಕೊಡಿಸಲಿ. ರಾಜ್ಯದಿಂದ ಆಯ್ಕೆಯಾದ ಒಂಬತ್ತು ಕಾಂಗ್ರೆಸ್ ಸಂಸದರು ರಾಜೀನಾಮೆ ಕೊಟ್ಟು ಮತಪತ್ರ ಬಳಸಿ ಚುನಾವಣೆ ಗೆದ್ದು ಬರಲಿ. ಇಲ್ಲದಿದ್ದರೆ ಮತಗಳ್ಳತನದಿಂದ ನಾವು ಆಯ್ಕೆಯಾಗಿ ಬಂದಿರುವುದು ಎಂದು ಒಪ್ಪಿಕೊಳ್ಳಲಿ.
>
> –ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಜಾರಿಗೆ ತರಲು ರಾಜ್ಯ ಸರಕಾರಕ್ಕೆ ಅವಕಾಶವಿದೆ. ಬಿಜೆಪಿ ಆಡಳಿತಾವಧಿಯಲ್ಲಿ ಮಾಡಿರುವ ಕಾನೂನಿನಲ್ಲಿ ಮತಪತ್ರ ಅಥವಾ ಇವಿಎಂ ಬಳಕೆ ಎಂಬುದಿದೆ. ಹೀಗಾಗಿ ನಾವು ಮತಪತ್ರ ಬಳಕೆಗೆ ತೀರ್ಮಾನಿಸಿದ್ದೇವೆ. ಮತಪತ್ರ ಬಳಕೆ ಕುರಿತಂತೆ ಬಿಜೆಪಿಯವರಿಗೆ ಗಾಬರಿ ಏಕೆ? ಕಳ್ಳನ ಮನಸ್ಸು ಹುಳ್ಳಗೆ ಎಂಬಂತಾಗಿದೆ.
>
> –ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

> ಇವಿಎಂ ಮುಖಾಂತರವೇ ಎರಡು ಬಾರಿ ಸಿಎಂ ಆಗಿರುವ ಸಿದ್ದರಾಮಯ್ಯ ಅವರು ಯಾವ ಆಧಾರದ ಮೇಲೆ ಅದನ್ನೇ ಪ್ರಶ್ನಿಸುತ್ತಿದ್ದಾರೆ? ರಾಹುಲ್ ಗಾಂಧಿಯನ್ನು ಮೆಚ್ಚಿಸಲು ಈ ಪ್ರಯತ್ನ ಮಾಡಿದ್ದಾರೆ. ರಾಜ್ಯ ಚುನಾವಣಾ ಆಯೋಗ ಇದಕ್ಕೆ ಸ್ಪಂದನೆ ಮಾಡಿರುವುದು ಕಾನೂನುಬಾಹಿರ.
>
> –ಬಸವರಾಜ ಬೊಮ್ಮಾಯಿ ಮಾಜಿ ಮುಖ್ಯಮಂತ್ರಿ

IN THE COURT OF THE ADDL CIVIL JUDGE AND JMFC AT C.N.HALLI
O.S. No. 89/2020

Plaintiff:1.Nagarajarawath and others
V/S
Defendants:Gowraiahrawath and others

Name and address of proposed defendant no 9 to 11.
1.Sahana w/o Vinodkumar D/o late jayaram rawath A/A 33YEARS,.
2.Swathi w/o Venkatesh. D/o late jayaramrawath A/A30 YEARS.
3. Sagar s./o late jayaram rawath A/A 27 YEARS,
all are R/A ward no 20.infront of post office, behind basveshwara kalyan mantapa,pension mohala,yashodamma papegowda building, Hassan town, Hassan taluk, Hassan District

PUBLIC NOTIFICATION

Whereas the applicant/plaintiff has filed the above suit against the opponents/defendants for partition and separate possession.at the time of filing of the suit by over sight the names of proposed defendant no 9 to 11 have not been included in the plaint.thery are necessary parties in this suit as they are sons and daughters of late Jayaramarawath and pushpalatha [defendant no 5] and grand daughters and grand son of the deceased defendant no 1 .so summons have to be send them through publication in this news paper to the proposed defendant no 9to 11.

All of you Take notice that you are hereby called upon to appear before Hon'ble Addl Civil Judge and jmfc court at C.N.Halli on 26/9/2025at 11:00 am. Therefore you are hereby summoned to appear before the above mentioned court on the said date, failing of which the above case shall be heard and determined in your absence.

Given under my seal and signed on this 2nd day of sep 2025 at C.n.halli.

Adv for applicant:
T.G.Vijay kumar
Advocate
Place: Chikkanayakanahalli
Date: 29-8-2025
BY ORDER OF THE COURT
Shirestedar
Addl Civil Judge and jmfc Court, C.n.halli

ಗಂಡ, 3 ಮಕ್ಕಳಿಗೆ ಮೋಸ

ಆನೇಕಲ್: ಪ್ರೀತಿಸಿ ಮದುವೆಯಾದ ಗಂಡ, ಮೂವರು ಮಕ್ಕಳನ್ನು ತೊರೆದು ಪ್ರಿಯಕರನೊಂದಿಗೆ ವಿವಾಹಿತೆ ಪರಾರಿಯಾಗಿರುವ ಘಟನೆ

ಬನ್ನೇರುಘಟ್ಟ ಠಾಣಾ ವ್ಯಾಪ್ತಿಯ ಬಸವನಪುರದಲ್ಲಿ ನಡೆದಿದೆ. ಅನ್ಯಾಯ ಆಗಿದೆ ಎಂದು ಗಂಡ ಠಾಣೆಯ ಮೆಟ್ಟಿಲೇರಿದ್ದರು. ಓಡಿಹೋಗಿದ್ದ ಲೀಲಾವತಿಯನ್ನು ಪೊಲೀಸರು ಠಾಣೆಗೆ ಕರೆಸಿ ಬುದ್ಧಿವಾದ ಹೇಳಿದರೂ ಪ್ರಿಯತಮನ ಸಾಂಗತ್ಯ ತೊರೆಯಲ್ಲ ಎಂದಿದ್ದಾಳೆ. ಪ್ರಿಯಕರನ ಜತೆಗೆ ಜೀವನ ನಡೆಸುವೆ ಎಂದು ಹೇಳಿದ್ದಾಳೆ. ಕ್ಯಾಬ್ ಚಾಲಕನಾಗಿರುವ ಮಂಜುನಾಥ್ 11 ವರ್ಷಗಳ ಹಿಂದೆ ಲೀಲಾವತಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಇಬ್ಬರ ಸಂಸಾರಕ್ಕೆ 2 ಗಂಡು, ಒಂದು ಹೆಣ್ಣು ಮಗುವಿದೆ. ಬಸವನಪುರದಲ್ಲಿ ದಂಪತಿ ವಾಸವಿದ್ದರು. ಕಳೆದ 2 ವರ್ಷಗಳಿಂದ ಮಂಜುನಾಥ್ ನಿಂದ ಲೀಲಾವತಿ ಅಂತರ ಕಾಯ್ದುಕೊಂಡಿದ್ದರು. ಇತ್ತೀಚಿಗೆ ಮಂಜುನಾಥ್‌ಗೆ ಪತ್ನಿ ಲೀಲಾವತಿ ಮತ್ತೊಬ್ಬನ ಜತೆಗೆ ಇರುವ ಫೋಟೋ ಸಿಕ್ಕಿತ್ತು. ಆಕೆಯ ನಡವಳಿಕೆಯಿಂದ ಅನುಮಾನಗೊಂಡಿದ್ದ ಪತಿ ಮಂಜುನಾಥ್ ಆಗಸ್ಟ್ 31ರ ಭಾನುವಾರ ರಾತ್ರಿ ಡ್ರೈವಿಂಗ್ ಕೆಲಸದ ಮೇಲೆ ಹೊರಹೋಗುವುದಾಗಿ ತಿಳಿಸಿ ಮನೆಯ ಸಮೀಪ ಕಾರಿನಲ್ಲೆ ಇರುತ್ತಾನೆ. ಈ ವೇಳೆ ಪ್ರಿಯಕರ ಮನೆಗೆ ಬಂದಾಗ ಪತ್ನಿ ಅನೈತಿಕ ಸಂಬಂಧ ಬಯಲಾಗಿತ್ತು. ಮಂಜುನಾಥ್ ಬರುವುದು ತಡವಾಗುತ್ತದೆ ಎಂದು ಭಾವಿಸಿ ಪ್ರಿಯಕರ ಸಂತೋಷ್‌ನನ್ನು ಲೀಲಾವತಿ ಮನೆಗೆ ಕರೆಸಿಕೊಂಡಾಗ ಮನೆಗೆ ಬಂದ ಮಂಜುನಾಥ್ ಪತ್ನಿಯ ಚೆಲ್ಲಾಟ ಕಂಡು ದಿಗ್ಭ್ರಮೆ ಯಾಗಿ ಕೋಪಗೊಳ್ಳುತ್ತಾನೆ. ಮೂವರ ಮಧ್ಯೆ ಮನೆಯಲ್ಲಿಯೇ ಗಲಾಟೆ ನಡೆದಿದೆ. ಆಗಲೇ ಪತ್ನಿ ಲೀಲಾವತಿ ಕಟ್ಟಿದ್ದ ತಾಳಿಯನ್ನು ಕಿತ್ತು ಮಂಜುನಾಥ್ ಕೈಗೆ ಕೊಟ್ಟು ಸಂತೋಷ್ ಜತೆ ಹೊರಟು ಹೋಗಿದ್ದಾಳೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಟೆಂಡರ್ ಪ್ರಕಟಣೆ ಸಂಖ್ಯೆ: 09/2025-26/1636-40 **ದಿನಾಂಕ:** 04-09-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1,3,4 ರನ್ವಯ ಏಕಲಕೋಟೆ, ದ್ವಿ ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054-ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆ ಅಪೆಂಡಿಕ್ಸ್-ಇ ಅಡಿಯ ಒಟ್ಟು -3 ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ:22229, 22294, 22196) (2ನೇ ಕರೆ) ಹಾಗೂ ಲೆಕ್ಕಶೀರ್ಷಿಕೆ: 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕಾಲು ಸಂಕ) ಅಡಿಯ ಒಟ್ಟು -1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ: 22940) (2ನೇ ಕರೆ) ಹಾಗೂ ಲೆಕ್ಕಶೀರ್ಷಿಕೆ: 3054-ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಅಡಿಯ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ: 25855) (1ನೇ ಕರೆ) ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ. 6.74 ಲಕ್ಷ ಮತ್ತು ಗರಿಷ್ಠ ರೂ. 161.52 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡ ಸಲ್ಲಿಸಲು ಕೊನೆಯ ದಿನಾಂಕ: 11-09-2025 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ.

ಸಮಾಚಾರ ಸಣ್ಣದಲ್ಲ

ಆಕಸ್ಮಿಕವಾಗಿ ಗುಂಡು ಹಾರಿ ಬಾಲಕ ಸಾವು

ಶಿರಸಿ: ಆಟವಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಬಾಲಕನ ಕೈಯ್ಯಿಂದ ಏರ್ ಗನ್ ಗುಂಡು ಹಾರಿ ಇನ್ನೊಂದು ಬಾಲಕ ಮೃತಪಟ್ಟ ಹೃದಯ ವಿದ್ರಾವಕ ಘಟನೆ ಶುಕ್ರವಾರ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಡೆದಿದೆ. ಶಿರಸಿಯ ಸೋಮನಳ್ಳಿಯ ರಾಘವೇಂದ್ರ ಕೇಶವ ಹೆಗಡೆ ಎಂಬುವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಬಸಪ್ಪ ಉಂಡಿಯರ್ ಎಂಬುವರ ಇಬ್ಬರು ಮಕ್ಕಳು (ಅಣ್ಣ, ತಮ್ಮ) ಆಟವಾಡುತ್ತಿದ್ದ ಸಂದರ್ಭದಲ್ಲಿ ದುರ್ಘಟನೆ ನಡೆದಿದ್ದು, ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಅಣ್ಣ ತಮ್ಮ ಮನೆಯ ಅಂಗಳದಲ್ಲಿ ಆಟವಾಡುತ್ತಿದ್ದಾಗ 7 ವರ್ಷದ ತಮ್ಮನಿಂದ ಆಕಸ್ಮಿಕವಾಗಿ ಗುಂಡು ಹಾರಿದ್ದು, ಇದರಿಂದ ಅಣ್ಣ ಕರಿಯಪ್ಪ (9) ಸ್ಥಳದಲ್ಲೇ ಮೃತಪಟ್ಟಿದ್ದಾಗಿ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಘಟನೆಗೆ ಸಂಬಂಧಿಸಿ ಸಿಸಿಟಿವಿಯಲ್ಲಿ ವಿಡಿಯೊ ದಾಖಲಾಗಿದೆ. ಶಿರಸಿ ಗ್ರಾಮೀಣ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸಿಪಿಐ ಶಶಿಕಾಂತ ವರ್ಮಾ, ಪಿಎಸ್ಐ ಸಂತೋಷ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೈಕ್‌ಗೆ ವಾಹನ ಡಿಕ್ಕಿ: ಇಬ್ಬರು ಸಾವು

ಯರಗಟ್ಟಿ: ಅಪರಿಚಿತ ವಾಹನ ಡಿಕ್ಕಿ ಹೊಡೆದಿದ್ದಕ್ಕೆ ಬೈಕ್ ಸವಾರರು ಸ್ಥಳದಲ್ಲೇ ಮೃತಪಟ್ಟ ಘಟನೆ ಗುರುವಾರ ರಾತ್ರಿ ಯರಗಟ್ಟಿ ಸಮೀಪದ ಹಲಕಿ-ಮುರಗೋಡ ಕ್ರಾಸ್ ಹತ್ತಿರ ಸಂಭವಿಸಿದೆ. ಸವದತ್ತಿ ತಾಲೂಕಿನ ಹೂಲಿಕೇರಿ ತಾಂಡಾದ ವಿಶಾಲ ಲಮಾಣಿ (20), ಅಪ್ಪು ಲಮಾಣಿ (23) ಮೃತ ದುರ್ದೈವಿಗಳು. ಬೈಕ್ ಮೇಲೆ ತೆರಳುವ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದ್ದು ಇಬ್ಬರು ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಮುರಗೋಡ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಮುರಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೃದಯಾಘಾತದಿಂದ ಕಾನ್‌ಸ್ಟೇಬಲ್ ಸಾವು

ಕಲಬುರಗಿ: ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಹೃದಯಾಘಾತದಿಂದ ಪೊಲೀಸ್ ಪೇದೆ ದುರ್ಮರಣ ಹೊಂದಿರುವ ಘಟನೆ ಜಿಲ್ಲೆಯ ಸೇಡಂ ತಾಲೂಕಿನ ಮಳಖೇಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೃತಪಟ್ಟವರನ್ನು ಮಳಖೇಡ ಠಾಣೆಯಲ್ಲಿ ಮುಖ್ಯಪೇದೆಯಾಗಿ ಸೇವೆ ಸಲ್ಲಿಸುತ್ತಿದ್ದ ಮನೋಹರ ಪವಾರ್ (46) ಮೃತ ದುರ್ದೈವಿಯಾಗಿದ್ದಾರೆ.

ಕರ್ತವ್ಯ ನಿಮಿತ್ತ ಸೇಡಂಗೆ ಆಗಮಿಸಿದ್ದ ವೇಳೆ ಅವರಿಗೆ ಹೃದಯಾಘಾತ ಉಂಟಾಗಿ ತೀವ್ರ ಅಸ್ವಸ್ಥರಾದರು. ತಕ್ಷಣವೇ, ಆಂಬ್ಯುಲೆನ್ಸ್‌ನಲ್ಲಿ ಕಲಬುರಗಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗ ಮಧ್ಯೆ ಅವರು ಕೊನೆಯುಸಿರೆಳೆದರು. ಕರ್ತವ್ಯನಿಷ್ಠ ಅಧಿಕಾರಿಯ ಆಕಸ್ಮಿಕ ಸಾವು ಪೊಲೀಸರಲ್ಲಿ ಹಾಗೂ ಸ್ಥಳೀಯರಲ್ಲಿ ದುಃಖದ ವಾತಾವರಣ ಸೃಷ್ಟಿಸಿದೆ.

ಧರ್ಮಸ್ಥಳದಲ್ಲಿ ನಡೆದ ಧರ್ಮ ಜಾಗೃತಿ ಸಮಾವೇಶದಲ್ಲಿ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅಭಿಪ್ರಾಯ

ಅಣ್ಣಪ್ಪ ಸ್ವಾಮಿ ರಕ್ಷಣೆಯಿಂದ ಎಲ್ಲಾ ಸಮಸ್ಯೆ ನಿವಾರಣೆ

ಉಜಿರೆ: ಬುರುಡೆ ಪ್ರಕರಣ ಭಾರೀ ಸದ್ದು ಮಾಡುತ್ತಿರುವ ಬೆನ್ನಲ್ಲೇ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ಶುಕ್ರವಾರ ಧರ್ಮಸ್ಥಳದಲ್ಲಿ ಧಾರ್ಮಿಕ ಧಾರ್ಮಿಕ ಕ್ಷೇತ್ರಗಳ ಮುಖಂಡರಿಂದ ಧರ್ಮಜಾಗೃತಿ ಸಮಾವೇಶ ನಡೆಯಿತು. ಧಾರ್ಮಿಕ ಮುಖಂಡರ ಸಮ್ಮುಖದಲ್ಲಿ 8 ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಮಾವೇಶ ಉದ್ಘಾಟಿಸಿ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರು ಮಾತನಾಡಿ, ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹ, ಧರ್ಮದೇವತೆಗಳ ಅಭಯ ಮತ್ತು ಅಣ್ಣಪ್ಪ ಸ್ವಾಮಿ ರಕ್ಷಣೆಯಿಂದ ಎಲ್ಲಾ ಸಮಸ್ಯೆಗಳು ನಿವಾರಣೆಯಾಗುತ್ತಿವೆ. ಸತ್ಯದ ಸಾಕ್ಷಾತ್ಕಾರವಾಗುತ್ತಿದೆ. ಜತೆಗೆ ಶಾಂತಿ, ನೆಮ್ಮದಿಯೂ ದೊರಕಿದೆ. ಅಲ್ಲದೆ ಧರ್ಮಸ್ಥಳದ ಭಕ್ತರು ಹಾಗೂ ಅಭಿಮಾನಿಗಳ ಪ್ರೀತಿ-ವಿಶ್ವಾಸ ಮತ್ತು ಗೌರವದಿಂದ ನಮಗೆ ಎಲ್ಲಾ ಸೇವಾಕಾರ್ಯಗಳನ್ನು ಮುಂದುವರಿಸಲು ನವಚೈತನ್ಯ ಮತ್ತು ಉತ್ಸಾಹ ಮೂಡಿಬಂದಿದೆ ಎಂದರು.

ಧರ್ಮಸ್ಥಳ ಕ್ಷೇತ್ರ ಮಹಾತ್ಮೆ ಪ್ರಕಟವಾಗಿ ಎಲ್ಲರಿಗೂ ಪರಿಚಿತವಾಗಿದೆ. ನಾನು ಧರ್ಮಾಧಿಕಾರಿಯಾಗಿ 'ಹೆಗ್ಗಡೆ' ಪೀಠವನ್ನು ಬಯಸಿದವನಲ್ಲ. ಆದರೆ ಅನಿರೀಕ್ಷಿತವಾಗಿ ತೀರ್ಥರೂಪರ ನಿಧನದಿಂದ ನಾನು ಪಟ್ಟವನ್ನು ಸ್ವೀಕರಿಸಬೇಕಾಯಿತು. ಇಲ್ಲಿ ನಾನು 'ನೆಪ' ಮಾತ್ರ. ಎಲ್ಲಾ ಕಾರ್ಯಗಳೂ ಶ್ರೀಮಂಜುನಾಥ ಸ್ವಾಮಿಯ ಅನುಗ್ರಹದೊಂದಿಗೆ, ಧರ್ಮದೇವತೆಗಳ ಆಶಯದಂತೆ ಹಾಗೂ ಅಣ್ಣಪ್ಪ ಸ್ವಾಮಿಯ ರಕ್ಷಣೆಯಿಂದ ಸುಗಮವಾಗಿ ನಡೆಯುತ್ತವೆ. ಪ್ರತಿ ಸಂಕ್ರಮಣದ ದಿನ ನಾನು ಧರ್ಮದೇವತೆ ಗಳಿಗೆ ವರದಿ ಒಪ್ಪಿಸಬೇಕು. ಆಗ ಅವರು, ತಿಳುವಳಿಕೆ ಇಲ್ಲದೆ ಮಾಡಿದ ತಪ್ಪಿಗೆ ಕ್ಷಮೆ ಇದೆ. ಏನೇ ಆಪತ್ತು, ವಿಪತ್ತು ಬಂದರೂ ಹೆತ್ತ ತಾಯಿಯಂತೆ ನಾವು ರಕ್ಷಣೆ ನೀಡುತ್ತೇವೆ ಎಂದು ಅವರು ಅಭಯ ನೀಡುತ್ತಾರೆ. ಏನಾದರು ತಪ್ಪಾದಲ್ಲಿ ಕೈಯ ಎಣ್ಣೆ ಕಣ್ಣಿಗೆ ತಾಗಿದಂತೆ ಆಗಬಹುದು ಎಂದು ಎಚ್ಚರಿಕೆಯನ್ನೂ ನೀಡುತ್ತಾರೆ ಎಂದು ಹೆಗ್ಗಡೆಯವರು ತಿಳಿಸಿದರು. ಮೂಡಬಿದ್ರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಪ್ರಾಸ್ತಾವಿಕ ಮಾತು ಗಳೊಂದಿಗೆ ಸ್ವಾಗತಿಸಿದರು. ವಿಧಾನಪರಿಷತ್ ಸದಸ್ಯ ಕೆ. ಪ್ರತಾಪ ಸಿಂಹ ನಾಯಕ್, ಉಜಿರೆಯ ಜನಾರ್ದನ ಸ್ವಾಮಿ ದೇವಸ್ಥಾನ ಮೊಕ್ತೇಸರ ಶರತ್‌ಕೃಷ್ಣ ಪಡ್ವೆಟ್ನಾಯ ಇದ್ದರು. ಪ್ರೊ. ಸುವೀರ್ ಕುಮಾರ್ ಸಭೆಯಲ್ಲಿ ತೆಗೆದುಕೊಂಡ ಠರಾವನ್ನು ಮಂಡಿಸಿದರು.

ಕಟೀಲು ದೇವಸ್ಥಾನದ ಲಕ್ಷ್ಮಿ ನಾರಾಯಣ ಅಸ್ರಣ್ಣ, ಬಾರ್ಕೂರಿನ ಹಿರಿಯ ವಿದ್ವಾಂಸ ದಾಮೋದರ ಶರ್ಮಾ, ವಿದ್ವಾನ್ ಹಿರಣ್ಯ ವೆಂಕಟೇಶ್ವರ ಭಟ್ಟ, ವಿದ್ವಾನ್ ನಾಗೇಂದ್ರ ಭಾರದ್ವಾಜ, ಹೇಮಾವತಿ ವಿ. ಹೆಗ್ಗಡೆ, ಶ್ರದ್ಧಾಅಮಿತ್, ಡಿ. ಹರ್ಷೇಂದ್ರ ಕುಮಾರ್, ಸೋನಿಯಾ ವರ್ಮ, ಉಡುಪಿ, ದಕ್ಷಿಣಕನ್ನಡ ಮತ್ತು ಕಾಸರಗೋಡು ಜಿಲ್ಲೆಯ ಎಲ್ಲಾ ಧಾರ್ಮಿಕ ಕ್ಷೇತ್ರಗಳು, ದೈವಸ್ಥಾನಗಳು ಮತ್ತು ಶ್ರದ್ಧಾಕೇಂದ್ರಗಳ ಮುಖಂಡರು ಹಾಗೂ ಧಾರ್ಮಿಕ ಪರಿಷತ್ತಿನ ಸದಸ್ಯರು ಸೇರಿದಂತೆ ಆರು ಸಾವಿರ ಮಂದಿ ಉಪಸ್ಥಿತರಿದ್ದರು.

ಧರ್ಮಸ್ಥಳದಲ್ಲಿ ನಡೆದ ಧಾರ್ಮಿಕ ಮುಖಂಡರ ಸಮಾವೇಶದಲ್ಲಿ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಮಾತನಾಡಿದರು. ಚಿತ್ರ 1

ವೇದಿಕೆಯಲ್ಲಿದ್ದ ಧಾರ್ಮಿಕ ಕ್ಷೇತ್ರಗಳ ನೂರಾರು ಮುಖಂಡರು. ಚಿತ್ರ 2

ಸಾಕಷ್ಟು ವಿರೋಧ ಕೇಳಿ ಬಂದವು: ಹೆಗ್ಗಡೆ

ಧರ್ಮಾಧಿಕಾರಿಯಾಗಿ ನನಗೆ ಪಟ್ಟಾಭಿಷೇಕ ಆದ ಆರಂಭದಲ್ಲಿಯೂ ಅನೇಕ ಪ್ರತಿಭಟನೆ, ವಿರೋಧಗಳು ವ್ಯಕ್ತವಾಗಿದ್ದವು. ಆದರೆ, ಕುಟುಂಬದ ಎಲ್ಲಾ ಸದಸ್ಯರ ಸಹಕಾರ, ನೌಕರವೃಂದದವರ ಕರ್ತವ್ಯ ನಿಷ್ಠೆ ಹಾಗೂ ಊರಿನ ನಾಗರಿಕರು ಮತ್ತು ಕ್ಷೇತ್ರದ ಅಭಿಮಾನಿಗಳ ಸಹಕಾರದಿಂದ ಎಲ್ಲಾ ಸಮಸ್ಯೆಗಳು ಸುಗಮವಾಗಿ ನಿವಾರಣೆಯಾಗಿವೆ. ಚತುರ್ದಾನ ಪರಂಪರೆಯೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಉಚಿತ ಸಾಮೂಹಿಕ ವಿವಾಹ, ಮದ್ಯವರ್ಜನ ಶಿಬಿರ, ಸ್ವ-ಉದ್ಯೋಗ ತರಬೇತಿ ಸಂಸ್ಥೆಗಳು ಇತ್ಯಾದಿ ಹತ್ತು-ಹಲವು ಸೇವಾ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಯಿತು ಎಂದು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಹೇಳಿದರು.

ದೇವಸ್ಥಾನದ ರಕ್ಷಣೆ ಕೂಡಾ ಎಲ್ಲರ ಸಾಂವಿಧಾನಿಕ ಹಕ್ಕು ಆಗಿದೆ. ಸತ್ಯಕ್ಕೆ ಸದಾ ಜಯವಿದೆ ಎಂಬುದು ನಮಗೆ ಈಗ ಅನುಭವಕ್ಕೆ ಬಂದಿದೆ. ಹಿಂದೂಗಳ ಸಾಮೂಹಿಕ ಮೌನದಿಂದಲೇ ಅಪಪ್ರಚಾರ ಮಾಡುವವರಿಗೆ ನಾವು ಎಚ್ಚರಿಕೆಯನ್ನು ಕೊಡುತ್ತೇವೆ. ಇಲ್ಲವಾದಲ್ಲಿ ಮುಂದಿನ ಸಮಸ್ಯೆಗಳನ್ನು ಅವರು ಎದುರಿಸಬೇಕಾಗುತ್ತದೆ.

-ಬಿ.ಕೆ.ಧನಂಜಯ ರಾವ್,
ಬೆಳ್ತಂಗಡಿಯ ವಕೀಲ

ಸಮಾವೇಶದಲ್ಲಿ ಕೈಗೊಂಡ 8 ನಿರ್ಣಯ

1. ಧರ್ಮಸ್ಥಳ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳದ ಮೂಲಕ ತನಿಖೆ ನಡೆಸುವಂತೆ ಪ್ರಧಾನ ಮಂತ್ರಿ ಮತ್ತು ಕೇಂದ್ರದ ಗೃಹ ಸಚಿವರಿಗೆ ಮನವಿ ನೀಡಲು ನಿರ್ಣಯ.
2. ಅಪಪ್ರಚಾರ ಮತ್ತು ಸುಳ್ಳು ಸುದ್ದಿಯನ್ನು ಹಬ್ಬಿಸಿ ಸಮಾಜದ ಶಾಂತಿ ನೆಮ್ಮದಿಗೆ ಭಂಗ ತರುತ್ತಿರುವ ಯೂಟ್ಯೂಬರ್‌ಗಳ ವಿರುದ್ಧ ಮತ್ತು ಯೂಟ್ಯೂಬ್ ಚಾನಲ್‌ಗಳ ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮ ವನ್ನು ಕೈಗೊಳ್ಳುವಂತೆ ಸರಕಾರಕ್ಕೆ ಆಗ್ರಹ.
3. ಎಸ್‌ಐಟಿ ರಚನೆಗಾಗಿ ಮುಖ್ಯಮಂತ್ರಿಗಳಿಗೆ, ಗೃಹ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಲು ನಿರ್ಣಯ
4. ಧರ್ಮಸ್ಥಳ ಮತ್ತು ವೀರೇಂದ್ರ ಹೆಗ್ಗಡೆಯವರ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ, ಸಾಮಾಜಿಕ ಜಾಲತಾಣ ಮೂಲಕ ನಡೆಯುತ್ತಿರುವ ಸುಳ್ಳು ಪ್ರಚಾರಕ್ಕೆ ಖಂಡನೆ.
5. ಹಿಂದೂ ಧಾರ್ಮಿಕ ನಂಬಿಕೆಗಳಿಗೆ ಘಾಸಿ ಮಾಡುವ ಹೇಳಿಕೆಯನ್ನು ನೀಡುತ್ತಿರುವ ವ್ಯಕ್ತಿ ಗಳ ವಿರುದ್ಧ ಮತ್ತು ಅವರ ಹಿಂದೆ ನಿಂತು ಅವರಿಗೆ ಸಹಕಾರ ನೀಡುತ್ತಿರುವ ವ್ಯಕ್ತಿ,ಸಂಘ ಸಂಸ್ಥೆಗಳ ವಿರುದ್ಧ ಕ್ರಮಕ್ಕೆ ಒತ್ತಾಯ.
6. ಶ್ರದ್ಧಾ ಕೇಂದ್ರಗಳ ವಿರುದ್ಧ, ಧಾರ್ಮಿಕ ನಂಬಿಕೆ ಗಳ ವಿರುದ್ಧ ಮತ್ತು ಧಾರ್ಮಿಕ ಮುಖಂಡರ ವಿರುದ್ಧ ವ್ಯವಸ್ಥಿತ ಷಡ್ಯಂತ್ರಗಳು ಮುಂದಿನ ದಿನಗಳಲ್ಲಿ ನಡೆದರೆ ಎಲ್ಲಾ ಧಾರ್ಮಿಕ ಮುಖಂಡರು ಸಂಘಟಿತ ರಾಗಿ, ಸಮರ್ಥ ಯೋಜನೆಯನ್ನು ರೂಪಿಸಿ, ಅದರ ವಿರುದ್ಧ ಹೋರಾಟ.
7. ಸಂಘಟನಾ ದೃಷ್ಟಿಯಿಂದ ಈ ಧರ್ಮ ಜಾಗೃತಿ ಸಮಿತಿಯನ್ನು ಇನ್ನಷ್ಟು ಬಲಪಡಿಸಿ ವರ್ಷಕ್ಕೆ ಒಂದು ಬಾರಿಯಾದರೂ ಈ ರೀತಿಯ ಸಮಾವೇಶವನ್ನು ಆಯೋಜಿಸಿ ಸೂಕ್ತ ಕಾರ್ಯಯೋಜನೆಗಳನ್ನು ರೂಪಿಸಲು ನಿರ್ಣಯ.
8. ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರೊಂದಿಗೆ ದೃಢವಾಗಿ ನಿಂತು ಧರ್ಮ ಸಂರಕ್ಷಣೆ ಮಾಡಲು ಕಟಿಬದ್ಧರಾಗಿರುತ್ತೇವೆ ಎಂಬ ತೀರ್ಮಾನ.

ಅರಮನೆ ಆವರಣದಲ್ಲಿ ನಡೆದ ಪೂಜೆಯಲ್ಲಿ ಪೊಲೀಸ್, ಅರಣ್ಯ ಅಧಿಕಾರಿಗಳು ಭಾಗಿ

ದಸರಾ: ಫಿರಂಗಿ ಗಾಡಿಗಳಿಗೆ ಸಾಂಪ್ರದಾಯಿಕ ಪೂಜೆ

ಮೈಸೂರು: ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳ ಪೈಕಿ ಒಂದಾದ ಫಿರಂಗಿ ಗಾಡಿಗಳಿಗೆ ಶುಕ್ರವಾರ ಸಂಪ್ರದಾಯಿಕವಾಗಿ ವಿಶೇಷ ಪೂಜೆ ನೆರವೇರಿತು. ಅರಮನೆ ಆವರಣದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಮಣ್ಯ, ಡಿಸಿಪಿಗಳಾದ ಸುಂದರರಾಜ್, ಬಿಂದುಮಣಿ, ಮಾರುತಿ ಸೇರಿದಂತೆ ಇನ್ನಿತರ ಪ್ರಮುಖರು ಉಪಸ್ಥಿತರಿದ್ದರು.

ಪೂಜಾ ವಿಧಿವಿಧಾನಗಳ ನಂತರ ನಗರ ಸಶಸ್ತ್ರ ಮೀಸಲು ಪಡೆ ಪೊಲೀಸ ರಿಂದ ಕುಶಾಲ ತೋಪು ಸಿಡಿಸುವ ಡ್ರೈಪ್ರಾಕ್ಟೀಸ್ ಆರಂಭವಾಗಲಿದೆ. ಅರಮನೆಯ ಆನೆ ಬಾಗಿಲು ಬಳಿ ಚಾಮುಂಡೇಶ್ವರಿ, ಗಣಪತಿ ಹಾಗೂ ಮೃತ್ಯುಂಜಯ ಸ್ವಾಮಿಗೂ ಪೂಜೆ ನೆರವೇರಿತು. ಅರಮನೆಯಲ್ಲಿರುವ 11 ಫಿರಂಗಿ ಗಾಡಿಗಳನ್ನು ಪೂಜೆಗೆ ಇರಿಸಲಾಗಿತ್ತು. ವಿಜಯ ದಶಮಿ ಜಂಬೂಸವಾರಿ ಮೆರವಣಿಗೆಯ ದಿನ ಫಿರಂಗಿಗಾಡಿಗಳ ಮೂಲಕ ಕುಶಾಲತೋಪು ಸಿಡಿಸಲಾಗುತ್ತದೆ. ಜಂಬೂಸವಾರಿ ಮೆರವಣಿಗೆ ದಿನ ಚಿನ್ನದ ಅಂಬಾರಿ ಹೊತ್ತ ಆನೆಗೆ ಗಣ್ಯರು ಪುಷ್ಪಾರ್ಚನೆ ಮಾಡುತ್ತಿದ್ದಂತೆ, ರಾಷ್ಟ್ರ ಗೀತೆ ನುಡಿಸಲಾಗುತ್ತದೆ. ರಾಷ್ಟ್ರಗೀತೆ ಮುಗಿಯುವುದರೊಳಗೆ 7 ಫಿರಂಗಿ ಗಾಡಿಗಳಿಂದ ತಲಾ ಮೂರು ಸುತ್ತು ಸೇರಿದಂತೆ ಒಟ್ಟು 21 ಬಾರಿ ಕುಶಾಲ ತೋಪುಗಳನ್ನು ಸಿಡಿಸಲಾಗುತ್ತದೆ. ನಗರ ಸಶಸ್ತ್ರ ಮೀಸಲು ಪಡೆ ಪೊಲೀಸರು ಕುಶಾಲತೋಪುಗಳನ್ನು ಸಿಡಿಸುತ್ತಾರೆ. ಅಂತಿಮ ಹಂತದಲ್ಲಿ ಪೂರ್ಣ ಪ್ರಮಾಣದ ಕುಶಾಲ ತೋಪು ಸಿಡಿಸುವ ತಾಲೀಮನ್ನು ದಸರಾ ಗಜಪಡೆ ಹಾಗೂ ಅಶ್ವಾರೋಹಿ ದಳದ ಸಮ್ಮುಖದಲ್ಲಿ ನಡೆಸುವ ಮೂಲಕ ಆನೆ ಕುದುರೆಗಳು ಕುಶಾಲತೋಪು ಶಬ್ದಕ್ಕೆ ಹೊಂದಿಕೊಳ್ಳುವಂತೆ ಮುಂಜಾಗ್ರತೆ ವಹಿಸಲಾಗುತ್ತದೆ.

ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳ ಪೈಕಿ ಒಂದಾದ ಫಿರಂಗಿ ಗಾಡಿಗಳಿಗೆ ಶುಕ್ರವಾರ ವಿಶೇಷ ಪೂಜೆ ನೆರವೇರಿತು.

ನಿರಂತರ ಮಳೆಯಿಂದ ಕಿರುದಾಲೆ ಸುತ್ತಮುತ್ತ ಗ್ರಾಮಸ್ಥರಿಗೆ ಆತಂಕ

ಕೊಡಗಿನಲ್ಲಿ ಮತ್ತೆ ಭೂಕುಸಿತದ ಭೀತಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕೆಲ ದಿನಗಳಿಂದ ಕೊಂಚ ಮಟ್ಟಿಗೆ ಬಿಡುವು ನೀಡಿದ ಮಳೆ ಕಳೆದ ಒಂದು ವಾರದಿಂದ ಜಿಲ್ಲೆಯಾದ್ಯಂತ ಎಡೆಬಿಡದೆ ಸುರಿಯುತ್ತಿದೆ. ಇದರಿಂದ ಜಿಲ್ಲೆಯ ಜನರು ಮತ್ತೆ ಹೈರಾಣಾಗುತ್ತಿದ್ದಾರೆ. ಈ ನಡುವೆ 2018ರಲ್ಲಿ ಪ್ರಕೃತಿ ವಿಕೋಪ ಉಂಟಾಗಿದ್ದ ಗ್ರಾಮಗಳಲ್ಲಿ ಮತ್ತೆ ಭೂಕುಸಿತ ಉಂಟಾಗುವ ಲಕ್ಷಣಗಳು ಗೋಚರಿಸುತ್ತಿದ್ದು ಗ್ರಾಮೀಣ ಭಾಗದ ಜನರು ಮತ್ತೆ ಆತಂಕಕ್ಕೆ ಒಳಗಾಗುತ್ತಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಕಿರುದಾಲೆ ಗ್ರಾಮದಲ್ಲಿ 2018-19ರಲ್ಲಿ ಭೀಕರ ಪ್ರವಾಹ, ಭೂಕುಸಿತ ಸಂಭವಿಸಿತ್ತು. ಅಂದು ಇಲ್ಲಿನ ಜನ ಮನೆಗಳನ್ನು ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳಿ ಜೀವ ಉಳಿಸಿಕೊಂಡಿದ್ದರು. ಪ್ರತಿ ಮಳೆಗಾಲದ ಸಂದರ್ಭದಲ್ಲಿಯೂ ಇಲ್ಲಿನ ಜನರು ಜೀವ ಕೈಯಲ್ಲಿ ಹಿಡಿದುಕೊಂಡು ಬದುಕು ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಾರಿ ನಿರಂತರ ಮಳೆಯಾಗುತ್ತಿರುವುದರಿಂದ ಈ ಆತಂಕ ಇನ್ನೂ ಹೆಚ್ಚಾಗಿದೆ. ಈ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳ ಕೆಲ ಜಾಗಗಳಲ್ಲಿ ಜಲ ಹಾಗೂ ಸಣ್ಣಪುಟ್ಟ ಪ್ರಮಾಣದಲ್ಲಿ ಭೂಕುಸಿತ ಉಂಟಾಗುತ್ತಿದೆ. ಹೀಗಾಗಿ ಇಲ್ಲಿನ ಜನರು 2018ರ ಕರಾಳ ದಿನಗಳು ಮತ್ತೆ ಮರುಕಳಿಸುತ್ತಾ ಎನ್ನುವ ಆತಂಕದಲ್ಲೇ ದಿನ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಟ್ಟದ ನಿವಾಸಿಗಳಿಗೆ ಭಯ

ಕೊಡಗು ಜಿಲ್ಲೆಯಾದ್ಯಂತ ಕಳೆದ ಒಂದು ವಾರದಿಂದ ಮಳೆ ಆರ್ಭಟ ಹೆಚ್ಚಾಗುತ್ತಿದೆ. ಜಿಲ್ಲೆಯ ಜನರು ಅಕ್ಷರಶಃ ತತ್ತರಿಸಿ ಹೋಗುತ್ತಿದ್ದಾರೆ. ಈ ನಡುವೆ ಹಳ್ಳ-ಕೊಳ್ಳ ನದಿ ತೊರೆಗಳಲ್ಲಿ ನಿಧಾನವಾಗಿ ನೀರಿನ ಮಟ್ಟ ಏರಿಕೆಯಾಗುತ್ತಿದೆ. ಹೀಗಾಗಿ ಬೆಟ್ಟಗುಡ್ಡದ ನಿವಾಸಿಗಳಿಗೆ ಭೂಕುಸಿತದ ಭೀತಿ ಮತ್ತೆ ಕಾಡುತ್ತಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಬೆಂಗಳೂರು

ಸಮಸ್ಯೆಯೇನು..?

- ಕೋರಮಂಗಲದ ಮುಖ್ಯ ರಸ್ತೆಯಲ್ಲಿನ ಸಾರ್ವಜನಿಕ ಶೌಚಾಲಯ ಸ್ವಚ್ಛಗೊಳಿಸುವ ಬಗ್ಗೆ.
- **ಪರಿಹಾರ:** ಕೋರಮಂಗಲದ ಫೋರಂಮಾಲ್ ಸಮೀಪದ ರಸ್ತೆಯಲ್ಲಿನ ಸಾರ್ವಜನಿಕ ಶೌಚಾಲಯ ಸೂಕ್ತ ನಿರ್ವಹಣೆ ಇಲ್ಲದೇ ದುರ್ವಾಸನೆ ಬೀರುತ್ತಿದೆ. ಸುತ್ತಲೂ ಬಿದ್ದಿರುವ ಕಸ ವಿಲೇವಾರಿ ಆಗಿಲ್ಲ ಎಂದು ಸಾರ್ವಜನಿಕರೊಬ್ಬರು ಪೋಸ್ಟ್ ಮಾಡಿದ್ದು, ಬಿಬಿಎಂಪಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆಯನ್ನು ಪರಿಹರಿಸಿದ್ದಾರೆ. ಶೌಚಾಲಯ ಸ್ವಚ್ಛಗೊಳಿಸಿ, ಕಸವಿಲೇವಾರಿ ಮಾಡಿಸಿದ್ದಾರೆ.

ಸೋನಿಯಾ ಗಾಂಧಿಗೆ ಧರ್ಮಸ್ಥಳದ ಬಗ್ಗೆ ಏನು ಗೊತ್ತು?: ವಿ. ಸೋಮಣ್ಣ

ಚಿಕ್ಕಬಳ್ಳಾಪುರ: ಸೋನಿಯಾ ಗಾಂಧಿ ಅವರಿಗೆ ಧರ್ಮಸ್ಥಳದ ಬಗ್ಗೆ ಏನು ಗೊತ್ತಿದೆ? ಅವರ ತಲೆಯಲ್ಲಿ ತಮ್ಮ ಮಗನನ್ನು ಪ್ರಧಾನಿ ಮಾಡಬೇಕು ಎನ್ನುವುದಷ್ಟೇ ಇದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು. ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂಳಲಾಗಿದ್ದು, ಈ ಪ್ರಕರಣದಲ್ಲಿ ಮಧ್ಯಪ್ರವೇಶಿಸುವಂತೆ ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಅವರಿಗೆ ಮಹಿಳಾ ಸಂಘಟನೆಗಳು ಪತ್ರ ಬರೆದಿರುವ ವಿಚಾರವಾಗಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಇದನ್ನು ಆ ಹೆಣ್ಣು ಮಕ್ಕಳಿಗೆ ಯಾರೋ ಹೇಳಿಕೊಟ್ಟು ಮಾಡಿಸಿರಬಹುದು. ಸಿದ್ದರಾಮಯ್ಯ ಮತ್ತು ಅವರ ತಂಡದ ಹೊಸ ಕಥೆಯಂತಿದೆ ಎಂದರು.

ಈದ್ ಮಿಲಾದ್ ಪ್ರಯುಕ್ತ ವಿಜಯಪುರದಲ್ಲಿ ಮುಸ್ಲಿಂ ಮುತ್ತಹೀದಾ ಕೌನ್ಸಿಲ್ ಸಹಯೋಗದಲ್ಲಿ ಶುಕ್ರವಾರ ಭವ್ಯ ಶಾಂತಿಯಾತ್ರೆ ನಡೆಯಿತು. ಯಾತ್ರೆಯಲ್ಲಿ ಸಾವಿರಾರು ಯುವಕರು ಭಾಗವಹಿಸಿದ್ದರು.

ಪೋಷಕರಿಗೆ 10 ಸಾವಿರ ಹಣ ನೀಡಿ ದೂರು ನೀಡದಂತೆ ಧಮ್ಕಿ

ಹೋಟೆಲ್ ಮಾಲೀಕರಿಂದ ಕಾರ್ಮಿಕನಿಗೆ ಥಳಿತ: ಸಾವು

ಖಾನಾಪುರ: ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನನ್ನು ಕೂಡಿಹಾಕಿ ಚಿತ್ರಹಿಂಸೆ ಕೊಟ್ಟು ಗಂಭೀರ ಹಲ್ಲೆಯಿಂದ ಗಾಯಗೊಂಡಿದ್ದ ಯುವಕ ಚಿಕಿತ್ಸೆ ಫಲಕಾರಿ ಆಗದೆ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಖಾನಾಪುರದಲ್ಲಿ ನಡೆದಿದೆ.

ಮಾಣಿಕವಾಡಿ ನಿವಾಸಿ ವೆಂಕಪ್ಪ ಮ್ಯೆಯೆಕರ್ (18) ಸಾವನ್ನಪ್ಪಿರುವ ಕಾರ್ಮಿಕ. ಖಾನಾಪುರ ಹೊರವಲಯದ ಸ್ವರಾಜ್ ಹೋಟೆಲ್‌ನಲ್ಲಿ ಮೂರು ತಿಂಗಳಿನಿಂದ ಈತ ಕೆಲಸ ಮಾಡುತ್ತಿದ್ದ. ಆ.20 ರಂದು ಯುವಕನ ಮೇಲೆ ಕಳ್ಳತನ ಆರೋಪ ಹೊರಿಸಿ, ಆತನನ್ನು ಕೂಡಿ ಹಾಕಿ ಹೋಟೆಲ್ ಮಾಲೀಕ ನಾಗೇಶ್ ಗುಂಡು ಬೆಡರೆ, ಸಹೋದರ ವಿಜಯ್ ಬೆಡರೆ ಕಿರುಕುಳ ನೀಡಿ, ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು. ತೀವ್ರ ಗಾಯಗೊಂಡ ಯುವಕನನ್ನು ಬಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಗಂಭೀರ ಗಾಯಗೊಂಡಿದ್ದ ಯುವಕ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದ. ಈ ಬಗ್ಗೆ ಪ್ರಶ್ನೆ ಮಾಡಲು ಹೋದ ಯುವಕನ ಪೋಷಕರಿಗೆ ಹೋಟೆಲ್ ಮಾಲೀಕ 10 ಸಾವಿರ ರು. ಹಣ ನೀಡಿ, ದೂರು ನೀಡದಂತೆ ಧಮ್ಕಿ ಹಾಕಿದ್ದ ಎನ್ನಲಾಗಿದೆ. ಹೋಟೆಲ್ ಮಾಲೀಕನ ಧಮ್ಕಿಗೆ ಹೆದರಿ ಪೊಲೀಸರಿಗೆ ದೂರು ನೀಡಲು ಯುವಕನ ತಂದೆ, ತಾಯಿ ಹಿಂಜರಿದಿದ್ದರು. ಈ ವಿಚಾರ ತಿಳಿದ ಗ್ರಾಮಸ್ಥರು ಯುವಕನ ತಂದೆಯ ಬೆನ್ನಿಗೆ ನಿಂತು, ಖಾನಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇದೀಗ ಪೊಲೀಸರು ಕೊಲೆ ಕೇಸ್ ದಾಖಲಿಸಿಕೊಂಡಿದ್ದಾರೆ.

ಗ್ಯಾರಂಟಿ ಫಲಾನುಭವಿಗಳಿಗೆ ಸಿಎಂ ನಿಯಮ ಮಾಡಲಿ

ದಾವಣಗೆರೆ: ಸರಕಾರದ ಐದು ಗ್ಯಾರಂಟಿ ಪಡೆಯುವ ಫಲಾನುಭವಿ ತಾಯಂದಿರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಕಡ್ಡಾಯವಾಗಿ ಸೇರಿಸಿದರೆ ಮಾತ್ರ ಐದು ಗ್ಯಾರಂಟಿ ಕೊಡುತ್ತೇವೆ ಎಂದು ನಿಯಮ ಮಾಡಿದರೆ ಸರಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಸಂಖ್ಯೆ ಹೆಚ್ಚಾಗಬಹುದು ಎಂದು ಶಾಸಕ ಬಸವಂತಪ್ಪ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದ್ದಾರೆ. ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿಎಂ ನನ್ನ ಸಲಹೆ ಅನುಷ್ಠಾನಗೊಳಿಸಿದರೆ, ಪ್ರತಿ ತಿಂಗಳು ಬರುವ ಎರಡು ಸಾವಿರ ರು. ಉಚಿತ ವಿದ್ಯುತ್ ಕೈ ತಪ್ಪುತ್ತದೆ ಎಂಬ ಭಯದಲ್ಲಾದರೂ ಫಲಾನುಭವಿಗಳು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸುತ್ತಾರೆ ಎಂದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಇವಿಎಂ Vs ಬ್ಯಾಲೆಟ್ ಪೇಪರ್ ವಿವಾದ

ಸುದ್ದಿ



ಆಲಮಟ್ಟಿ ಜಲಾಶಯ ಪೂರ್ಣ ಭರ್ತಿ

ಆಲಮಟ್ಟಿ ಡ್ಯಾಮ್‌ಗೆ ಇಂದು ಸಿಎಂ ಬಾಗಿನ

ವಿಜಯಪುರ: ಉತ್ತರ ಕರ್ನಾಟಕದ ಜೀವನದಿ ಕೃಷ್ಣಾ ನದಿ ಮೈದುಂಬಿ ಹರಿಯುತ್ತಿದ್ದು, ಉತ್ತರ ಕರ್ನಾಟಕದ ಜೀವನಾಡಿಯಾಗಿರುವ ಆಲಮಟ್ಟಿ ಜಲಾಶಯ ಸಂಪೂರ್ಣ ಭರ್ತಿಯಾಗಿದೆ. ಈ ಹಿನ್ನೆಲೆಯಲ್ಲಿ ಕೃಷ್ಣೆಯ ಜಲಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆ.6ರಂದು ಬಾಗಿನ ಅರ್ಪಿಸಲಿದ್ದಾರೆ. ಜಲಾಶಯದ ಒಳಹರಿವು ಸ್ಥಿರವಾಗಿ ಮುಂದುವರೆದಿದೆ, ಇದರಿಂದಾಗಿ ಆಲಮಟ್ಟಿ ಜಲಾಶಯ ಭರ್ತಿಯಾಗಿದೆ. ಗುರುವಾರ ಜಲಾಶಯ ತನ್ನ ಪೂರ್ಣ ಸಂಗ್ರಹ ಸಾಮರ್ಥ್ಯ 519.60 ಮೀಟರ್ ತಲುಪಿದ್ದು, ಅಣೆಕಟ್ಟಿನಲ್ಲಿ 123.081 ಟಿಎಂಸಿ ನೀರು ಸಂಗ್ರಹವಿದೆ. ಜಲಾಶಯದ ಒಳಹರಿವು 59,312 ಕ್ಯುಸೆಕ್‌ಗಳಾಗಿದ್ದು, 4 ಕ್ರಸ್ಟ್ ಗೇಟ್‌ಗಳು ಮತ್ತು ಕೆಪಿಸಿಎಲ್ ಚಾನಲ್‌ಗಳ ಮೂಲಕ 50,000 ಕ್ಯುಸೆಕ್ ನೀರು ಹೊರಹರಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಹೆಲಿಕಾಪ್ಟರ್ ಮೂಲಕ ಆಲಮಟ್ಟಿ ತಲುಪಲಿದ್ದು, ನಂತರ ಜಲಾಶಯಕ್ಕೆ ಬಾಗಿನ ಅರ್ಪಿಸಲಿದ್ದಾರೆ.

ಶಿವಮೊಗ್ಗದಿಂದ ಬಂದು ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ

ಆರೋಪದ ವಿರುದ್ಧ ಸಮಗ್ರ ತನಿಖೆಗೆ ಮುಖ್ಯಮಂತ್ರಿಗೆ ಮನವಿ

ಭೋವಿ ನಿಗಮಕ್ಕೆ ರವಿ ಕುಮಾರ್ ರಾಜೀನಾಮೆ

ಬೆಂಗಳೂರು: ಭೋವಿ ನಿಗಮದ ಅಧ್ಯಕ್ಷರ ವಿರುದ್ಧ ಕೇಳಿಬಂದಿದ್ದ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರ ತಲೆದಂಡವಾಗಿದೆ.

ಭ್ರಷ್ಟಾಚಾರ ಆರೋಪ ಕೇಳಿಬಂದ ದಿನವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಸೂಚನೆ ನೀಡಿದ್ದರೂ, ರವಿಕುಮಾರ್ ಅವರು ತಮ್ಮ ವಿರುದ್ಧ ಕೇಳಿಬಂದಿರುವ ಆರೋಪದಲ್ಲಿ ಹುರುಳಿಲ್ಲ ಎಂದು ವಾದಿಸಿದ್ದರು. ಆದರೀಗ ರಾಜೀನಾಮೆ ಸಲ್ಲಿಸಿದ್ದು, ಈ ವೇಳೆ ತಮ್ಮ ವಿರುದ್ಧ ಕೇಳಿಬಂದಿರುವ ಆರೋಪದ ಸಮಗ್ರ ತನಿಖೆಗೆ ಆಗ್ರಹಿಸಿದ್ದಾರೆ. ಇದರೊಂದಿಗೆ ರಾಜೀನಾಮೆ ನೀಡಲು ಶಿವಮೊಗ್ಗದಿಂದ ಬೆಂಗಳೂರಿಗೆ ಬಂದು ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಬರೆದಿದ್ದಾರೆ.

ಈ ಕುರಿತು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ರವಿಕುಮಾರ್, '2024ರ ಮಾರ್ಚ್ 15ರಿಂದ ಭೋವಿ ನಿಗಮದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೇನೆ. ನನ್ನ ಅವಧಿಯಲ್ಲಿ ನಿಗಮದಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ಹಿಂದಿನ ಸರಕಾರದ ಅವಧಿಯಲ್ಲಿ ನಡೆದಿದ್ದ ಅಕ್ರಮಗಳ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವುದು ಸರಿಯಾಗಿದೆ. ನಿಗಮದಲ್ಲಿ ಹಿಂದಿನಿಂದ ನಡೆದುಕೊಂಡು ಬರುತ್ತಿದ್ದ ಕೆಲವು ಅನುಚಿತ ವ್ಯವಹಾರ ಮತ್ತು ಅಶಿಸ್ತನ್ನು ನಾನು ಪತ್ತೆ ಹಚ್ಚಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದ್ದಕ್ಕೆ ನನ್ನ ವಿರುದ್ಧ ಪಿತೂರಿ ನಡೆದು ನನ್ನ ತೇಜೋವಧೆ ಮಾಡುವ ಪ್ರಯತ್ನ ನಡೆದಿದೆ.

ಈ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ಕೇಳಿಕೊಳ್ಳುತ್ತೇನೆ ಎಂದು ಆಗ್ರಹಿಸಿದ್ದಾರೆ. ಸೈಬರ್ ಪೊಲೀಸರು ಮತ್ತು ಎಫ್‌ಎಸ್‌ಎಲ್ ತಂಡದಿಂದ ತನಿಖೆ ನಡೆಸಿ ತಾಂತ್ರಿಕ ಸಲಕರಣೆಗಳನ್ನು ಬಳಸಿ ನನ್ನ ತೇಜೋವಧೆಗೆ ವಿಡಿಯೊ ಮಾಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆಯೂ ಕೇಳಿಕೊಳ್ಳುತ್ತೇನೆ ಎಂದು ಮನವಿ ಮಾಡಿದ್ದಾರೆ.

ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳು, ದಂಪತಿ ಸಾವು

ಮಂಡ್ಯ: ನಾಲ್ವರು ನೀರುಪಾಲು

ಮಂಡ್ಯ: ಜಿಲ್ಲೆಯ ಎರಡು ಕಡೆಯ ಪ್ರತ್ಯೇಕ ಪ್ರಕರಣಗಳಲ್ಲಿ ಜಲಗಂಡಾಂತರದಿಂದ ನಾಲ್ವರು ಸಾವನ್ನಪ್ಪಿದ ಘಟನೆ ಶುಕ್ರವಾರ ನಡೆದಿದೆ. ಶ್ರೀರಂಗಪಟ್ಟಣ ತಾಲೂಕಿನ ಎಡಮುರಿ ಜಲಪಾತದಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳು ಹಾಗೂ ಎಮ್ಮೆ ತೊಳೆಯುವ ವೇಳೆ ಆಯತಪ್ಪಿ ಬಾವಿಗೆ ಬಿದ್ದು ದಂಪತಿ ಮೃತಪಟ್ಟಿದ್ದಾರೆ.

ಪ್ರವಾಸಿ ತಾಣವಾಗಿರುವ ಎಡಮುರಿ ಫಾಲ್ಸ್ ನೋಡಲು ಬೆಂಗಳೂರಿನ ಡಾನ್ ಬಾಸ್ಕೋ ಪದವಿ ಕಾಲೇಜಿನ ಇಬ್ಬರು ತೆರಳಿದ್ದರು. ಕಾಲೇಜಿಗೆ ರಜೆ ಇದ್ದ ಕಾರಣ ಸ್ನೇಹಿತರೊಂದಿಗೆ ಕಾವೇರಿ ನದಿಯಲ್ಲಿ ಈಜಲು ತೆರಳಿದ್ದಾಗ ದುರ್ಘಟನೆ ನಡೆದಿದೆ. ಮೃತ ವಿದ್ಯಾರ್ಥಿಗನ್ನು ಶ್ಯಾಮ್ (20) ವೆಂಕಟೇಶ್ (20) ಎಂದು ಗುರುತಿಸಲಾಗಿದೆ. ಮೃತದೇಹಗಳನ್ನು ಅಗ್ನಿಶಾಮಕ ಸಿಬ್ಬಂದಿ ಹೊರ ತೆಗೆದಿದ್ದಾರೆ.

ಬಾವಿಗೆ ಬಿದ್ದು ದಂಪತಿ ಸಾವು: ಅದೇ ರೀತಿ ಕೆ.ಆರ್‌ಪೇಟೆ ತಾಲೂಕಿನ ಅರೆಬೊಪ್ಪನಹಳ್ಳಿ ಗ್ರಾಮದಲ್ಲಿ ಎಮ್ಮೆ ತೊಳೆಯಲು ಹೋದಾಗ ವಸಂತಮ್ಮ(65) ಹಾಗೂ ಕಾಳೇಗೌಡ (70) ಎಂಬ ದಂಪತಿ ಬಾವಿಗೆ ಬಿದ್ದು ಸಾವನ್ನಪ್ಪಿದ್ದಾರೆ.

ಎಮ್ಮೆ ತೊಳೆಯಲು ಹೋಗಿದ್ದ ವೇಳೆ ಆಯತಪ್ಪಿ ತೆರೆದ ಬಾವಿಗೆ ಬಿದ್ದ ಪತ್ನಿಯನ್ನು ರಕ್ಷಿಸಲು ಹೋದ ಪತಿ ಕೂಡ ಸಾವನ್ನಪ್ಪಿದ್ದಾರೆ. ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ವಿಶ್ವವಾಣಿ

ಸಂಪಾದಕೀಯ

ಜಟ್ಟಿಯ ಮೀಸೆ ಮಣ್ಣಾಗಲಿಲ್ಲ!

ಎಲ್ಲರದೂ ಒಂದು ದಾರಿಯಾದರೆ, ಎಡವಟ್ಟನದು ಮತ್ತೊಂದು ದಾರಿ' ಎಂಬ ರೀತಿಯಲ್ಲೇ ವರ್ತಿಸುತ್ತಿರುವ ಅಮೆರಿಕ ಅಧ್ಯಕ್ಷ ಟ್ರಂಪ್, ತಮ್ಮ ಈ ವರ್ತನೆಯ ಯಾದಿಗೆ ದಿನಕ್ಕೊಂದರಂತೆ ಹೊಸ ಚೇಷ್ಟೆಗಳನ್ನು ಸೇರಿಸುತ್ತಿದ್ದಾರೆ. 'ಅಮೆರಿಕ ಇಲ್ಲದಿದ್ದರೆ ಪ್ರಪಂಚದಲ್ಲಿರುವ ಎಲ್ಲಾ ದೇಶಗಳು ಸಾಯುತ್ತಿದ್ದವು' ಎಂಬ ಆಣಿಮುತ್ತುಗಳನ್ನು ಟ್ರಂಪ್ ಮೊನ್ನೆ ಉದುರಿಸಿರುವುದು ಇದಕ್ಕೆ ಸಾಕ್ಷಿ. ತಾವು ಹೇರಿರುವ ಸುಂಕಗಳ ಮೂಲಕ ತುಂಬಾ ದೊಡ್ಡ ಮೊತ್ತವು ಅಮೆರಿಕದ ಬೊಕ್ಕಸಕ್ಕೆ ಜಮೆಯಾಗಲಿದೆ ಎಂದೇ ನಂಬಿರುವ ಟ್ರಂಪ್, 'ಚೀನಾದ ನಂತರ ರಷ್ಯಾದ ಅತಿದೊಡ್ಡ ಕಚ್ಚಾತೈಲ ಖರೀದಿದಾರನಾಗಿರುವ ಭಾರತವು ಒಂದೊಮ್ಮೆ ಈ ಆಮದನ್ನು ಮುಂದುವರಿಸಿದರೆ ಮತ್ತಷ್ಟು ದಂಡಸುಂಕವನ್ನು ಕಟ್ಟಬೇಕಾಗುತ್ತದೆ' ಎಂದು ಹೆಚ್ಚುವರಿ ಬೆದರಿಕೆಯನ್ನು ಹಾಕಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಈ ಎಲ್ಲ ಬೆದರಿಕೆಗಳಿಗೆ ಉತ್ತರಿಸುವ ಗೋಜಿಗೆ ಹೋಗದೆ ಮೌನವನ್ನು ಕಾಯ್ದುಕೊಂಡಿರುವುದು ಗಮನಾರ್ಹ ಸಂಗತಿ. ಹೌದು, ಅಹಂಕಾರಕ್ಕೆ ಉದಾಸೀನವೇ ಮದ್ದು! ಅತಿರೇಕದ ಪ್ರತಿಸುಂಕ ವಿಧಿಸುವ ಮೂಲಕ ಭಾರತದ ಆರ್ಥಿಕತೆಯನ್ನು ಮತ್ತು ಇಲ್ಲಿನ ಉನ್ನತ ನಾಯಕತ್ವದ ಆತ್ಮವಿಶ್ವಾಸವನ್ನು ಕುಗ್ಗಿಸುವ ಹರಸಾಹಸಕ್ಕೆ ಟ್ರಂಪ್ ಮುಂದಾಗಿರುವಂತಿದೆ. ಆದರೆ, ಇಂಥ ಕಸರತ್ತುಗಳು ಇನ್ನು ಮುಂದೆ ಫಲ ಕೊಡುವುದಿಲ್ಲ ಎಂಬ ಕಹಿಸತ್ಯ ಟ್ರಂಪ್ ಅವರಿಗೆ ಇನ್ನೂ ಅರಿವಾಗದಿರುವುದು ಅಚ್ಚರಿಯ ಸಂಗತಿ. ಭಾರತ-ರಷ್ಯಾ-ಚೀನಾದಂಥ ಬೃಹತ್ ಶಕ್ತಿಗಳು ಪರಸ್ಪರ ಕೈಜೋಡಿಸಿರುವುದನ್ನು ಕಂಡು ಟ್ರಂಪ್ ಎಂಬ ಜಟ್ಟಿ ಈಗಾಗಲೇ ಬಹುತೇಕವಾಗಿ ಧರಾಶಾಯಿಯಾಗಿದ್ದಾರೆ, ಇಷ್ಟಾಗಿಯೂ 'ಮೀಸೆ ಮಣ್ಣಾಗಲಿಲ್ಲ' ಎಂಬ ಅತಿಯಾದ ಆತ್ಮವಿಶ್ವಾಸದಲ್ಲಿ ಅವರು ಮತ್ತಷ್ಟು ಸುಂಕ ಹೇರುವ ಕುರಿತು ಬಡಬಡಿಸಿದ್ದಾರೆ. ಅದು ಸಹಜವೇ. ಖಾಲಿ ಡಬ್ಬಗಳು ಹೆಚ್ಚು ಸದ್ದು ಮಾಡುತ್ತವೆ ಎಂಬ ಸಾರ್ವಕಾಲಿಕ ಸತ್ಯವನ್ನು ನೆನೆದು ಸುಮ್ಮನಾಗಿಬಿಡೋಣ!

ಸೊಂಪಾದಕೀಯ

ದೇವರ ದುಡ್ಡು

ಜನರಿಗೆ ದೇವರ ಬಗ್ಗೆ ಎಷ್ಟೇ ಭಕ್ತಿ ಇದ್ರೂ, ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನ ಆಗೋ ಕೆಲಸ ಮಾತ್ರ ಇನ್ನೂ ನಡೆಯುತ್ತಲೇ ಇದೆ. ಹಾಗಂತ ಭಗವಂತನನ್ನು ನಂಬುವವರು ಹುಂಡಿಗೆ ಹಣ ಹಾಕ್ತಾರೆ, ನಂಬದೇ ಇರುವ ಆಸ್ತಿಕರು ಹುಂಡಿಯಿಂದ ಹಣ ಕದೀತಾರೆ ಅನ್ನೋ ಹಾಗೂ ಇಲ್ಲ. ಯಾಕಂದ್ರೆ, ಕೆಲ ತಿಂಗಳ ಹಿಂದೆ ಸಿಕ್ಕಿಬಿದ್ದ ಖತರ್‌ನಾಕ್ ಕಳ್ಳನೊಬ್ಬ ಪ್ರತಿಸಲ ಕದ್ದಾಗಲೂ ತನ್ನ ಊರಿನ ದೇವಸ್ಥಾನಕ್ಕೆ ಹೋಗಿ ಅಲ್ಲಿನ ದೇವರಿಗೆ ತಪ್ಪು ಕಾಣಿಕೆ ಹಾಕಿ ಆಮೇಲೆ ಕದ್ದ ಬಂಗಾರವನ್ನು ಮಾರಾಟ ಮಾಡುತ್ತಿದ್ದನಂತೆ. ಅದಕ್ಕಿಂತ ಗಾಬರಿ ಬೀಳಿಸೋ ವಿಷಯ ಅಂದ್ರೆ, ಅವನು ಮೊದಲು ಅದೇ ದೇವಸ್ಥಾನದಲ್ಲಿ ಪೂಜಾರಿ ಆಗಿದ್ದನಂತೆ ಅನ್ನೋದು. ಹಾಗಾಗಿ ಹುಂಡಿಗೆ ಕನ್ನ ಹಾಕುವವರೆಲ್ಲ ನಾಸ್ತಿಕರು ಅನ್ನಂಗಿಲ್ಲ. ಕೆಲ ತಿಂಗಳ ಹಿಂದೆ, ಎಲ್ಲಮ್ಮದೇವಿಯ ದೇವಸ್ಥಾನದ ಹುಂಡಿಯನ್ನು ಕಳ್ಳರು ದೋಚಿದ ಮೇಲೆ 'ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ' ಅಂತ ಜನರು ಮಾತಾಡಿದ್ದು ಕೇಳಿಬಂದಿತ್ತು. ಇದನ್ನೆಲ್ಲ ನೋಡಿಯೇ ಏನೋ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿ ಗರ್ಭಗುಡಿಯ ಬಾಗಿಲ ಸಂದಿನಲ್ಲಿ ಹಾವೊಂದು ಒಂದಷ್ಟು ದಿನ ಠಿಕಾಣಿ ಹೂಡಿತ್ತು. ಹಾವುಗಳು ನಿಧಿ ಕಾಯುತ್ತವೆ ಅನ್ನೋದು ನಂಬಿಕೆ. ಹಾಗಾಗಿ ಈ ನಾಗರಾಜ ಕೂಡಾ ದೇವಸ್ಥಾನದ ಹುಂಡಿಯನ್ನು ಕಾಯುತ್ತಾ ಅಲ್ಲೇ ಮೊಕ್ಕಾಂ ಹೂಡಿದ್ದನಾ ಅನ್ನೋ ಅನುಮಾನ. ಯಾಕಂದ್ರೆ, ಉರಗ ತಜ್ಞರು ಎಷ್ಟೇ ಹರಸಾಹಸ ಮಾಡಿದರೂ ಹಾವು ಅಲ್ಲಿಂದ ಕದಲಲಿಲ್ಲವಂತೆ. ಕೊನೆಗೆ ಹಾವನ್ನು ಅದರ ಪಾಡಿಗೆ ಬಿಟ್ಟು ಜನ ಎಂದಿನಂತೆ ದೇವರ ದರ್ಶನ, ಪೂಜೆಯಲ್ಲಿ ನಿರತರಾಗಿದ್ದರು. ಆದರೆ ಹಾವಿನ ಚಲನವಲನಗಳ ಮೇಲೆ ಸಿಸಿಟಿವಿ ಮೂಲಕ ನಿಗಾ ಇಡಲಾಗಿತ್ತಂತೆ. ಆ ಹಾವು ಕೊನೆಗೂ ದೇವಾಲಯದಿಂದ ಹೊರಹೋಗಿರುವ ದೃಶ್ಯ ನಂತರ ಸಿಸಿಟಿವಿ ಫೂಟೇಜ್‌ನಿಂದ ಗೊತ್ತಾಯ್ತಂತೆ. ಆದರೆ, ಆ ನಾಗಪ್ಪ ಹುಂಡಿಗೆ ಸಿಸಿಟಿವಿ ಥರ ಕೆಲಸ ಮಾಡುತ್ತಿದ್ದನಾ ಅನ್ನೋದರ ಬಗ್ಗೆ ಮಾತ್ರ ಫೂಟೇಜ್ ಇಲ್ಲದ ಕಾರಣ ಮಾಹಿತಿ ಸಿಕ್ಕಿಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನ ನಿಲ್ದಾಣ ಕೋಡ್

ಪ್ರತಿ ವಿಮಾನ ನಿಲ್ದಾಣಕ್ಕೂ ಅದರದ್ದೇ ಆದ ಒಂದು ಕೋಡ್ ಇರುವುದು ಗೊತ್ತಿರಲಿಕ್ಕೆ ಸಾಕು. ಹಾಗಾದರೆ ಯಾರು ಈ ಕೋಡ್‌ಗಳನ್ನು ನೀಡುತ್ತಾರೆ? ಈ ಕೋಡ್‌ಗಳನ್ನು 2 ಪ್ರಮುಖ ಸಂಸ್ಥೆಗಳು ನಿರ್ಧರಿಸುತ್ತವೆ- ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (IATA) ಮತ್ತು ಇಂಟರ್‌ನ್ಯಾಷನಲ್ ಸಿವಿಲ್ ಏವಿಯೇಷನ್ ಆರ್ಗನೈಸೇಷನ್ (ICAO). ಈ ಕೋಡ್‌ಗಳು ವಿಮಾನ ಪ್ರಯಾಣದ ವ್ಯವಸ್ಥೆಯನ್ನು ಸುಲಭ ಮತ್ತು ಸುರಕ್ಷಿತವಾಗಿಸಲು ಸಹಾಯ ಮಾಡುತ್ತವೆ. ಇಂಟರ್‌ನ್ಯಾಷನಲ್ IATA ಸಂಸ್ಥೆಯು ಏರ್‌ಲೈನ್‌ಗಳು, ಪ್ರಯಾಣ ಏಜೆಂಟರು ಮತ್ತು ಇತರ ಸಂಬಂಧಿತ ವ್ಯಾಪಾರಗಳಿಗೆ ಜಾಗತಿಕ ಗುಣಮಟ್ಟಗಳನ್ನು ರೂಪಿಸುವ ಖಾಸಗಿ ಸಂಸ್ಥೆಯಾಗಿದೆ. ಸಾಮಾನ್ಯವಾಗಿ, ವಿಮಾನ ನಿಲ್ದಾಣದ ಹೆಸರು ಅಥವಾ ಅದು ಇರುವ ನಗರದ ಹೆಸರಿನ ಮೊದಲ 3 ಅಕ್ಷರಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ, ಬೆಂಗಳೂರಿನ ವಿಮಾನ ನಿಲ್ದಾಣದ ಕೋಡ್ BLR (Bengaluru), ಮುಂಬೈನದ್ದು BOM (Bombay- ಹಳೆಯ ಹೆಸರು), ದಿಲ್ಲಿಯದ್ದು DEL (Delhi). ಕೆಲವು ಕೋಡ್‌ಗಳು ನಿಲ್ದಾಣದ ಹಿಂದಿನ ಹೆಸರನ್ನು ಆಧರಿಸಿರಬಹುದು ಅಥವಾ ವಿಶಿಷ್ಟ ಕಾರಣಗಳಿಗಾಗಿ ಬೇರೆ ಅಕ್ಷರಗಳನ್ನು ಬಳಸಬಹುದು. ಸಾಮಾನ್ಯವಾಗಿ, ನಗರದ ಹೆಸರಿನ ಮೊದಲ 3 ಅಕ್ಷರಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ, BOM (Bombay), DEL (Delhi). ಒಂದೇ ನಗರದಲ್ಲಿ 2 ಅಥವಾ ಹೆಚ್ಚು ನಿಲ್ದಾಣಗಳಿದ್ದರೆ, ಕೋಡ್‌ಗಳು ಅವುಗಳ ಹೆಸರುಗಳನ್ನು ಆಧರಿಸಿರುತ್ತವೆ. ಉದಾಹರಣೆಗೆ, ಲಂಡನ್‌ನಲ್ಲಿ LHR – ಲಂಡನ್ ಹೀಥ್ರೂ (London Heathrow), LGW- ಲಂಡನ್ ಗ್ಯಾಟ್ವಿಕ್ (London Gatwick) ಮತ್ತು LCY- ಲಂಡನ್ ಸಿಟಿ ಏರ್‌ಪೋರ್ಟ್ (London City Airport). ಕೆಲವೊಮ್ಮೆ, ಕೋಡ್‌ಗಳು ನಿಲ್ದಾಣದ ಹಳೆಯ ಅಥವಾ ಐತಿಹಾಸಿಕ ಹೆಸರನ್ನು ಆಧರಿಸಿರಬಹುದು. ಉದಾಹರಣೆಗೆ, ಕೋಲ್ಕತ್ತಾ (ಕಲ್ಕತ್ತಾ) ನಿಲ್ದಾಣದ ಕೋಡ್ CCU (Calcutta). ಈ ಕೋಡ್‌ಗಳ ಮಹತ್ವವೇನು? ಇವು ಪ್ರಯಾಣಿಕರಿಗೆ, ಏರ್‌ಲೈನ್‌ಗಳಿಗೆ ಮತ್ತು ವಿಮಾನ ನಿಲ್ದಾಣ ಸಿಬ್ಬಂದಿಗೆ ಬಹಳ ಮುಖ್ಯ. ಇವನ್ನು ವಿಮಾನದ ಟಿಕೆಟ್‌ಗಳಲ್ಲಿ, ಬ್ಯಾಗೇಜ್ ಟ್ಯಾಗ್‌ಗಳಲ್ಲಿ, ಬೋರ್ಡಿಂಗ್ ಪಾಸ್‌ಗಳಲ್ಲಿ ಮತ್ತು ಪ್ರಯಾಣಿಕರ ಮಾಹಿತಿ ಫಲಕಗಳಲ್ಲಿ ಬಳಸಲಾಗುತ್ತದೆ. ಇದರಿಂದ, ವಿಮಾನ ಪ್ರಯಾಣದ ಪ್ರಕ್ರಿಯೆ ಸರಳ ಮತ್ತು ಗೊಂದಲರಹಿತವಾಗಿರುತ್ತದೆ. ಇಂಟರ್‌ನ್ಯಾಷನಲ್ ಸಿವಿಲ್ ಏವಿಯೇಷನ್ ಆರ್ಗನೈಸೇಷನ್ (ICAO) ಸಂಸ್ಥೆ ವಿಶ್ವಸಂಸ್ಥೆಯ ಒಂದು ವಿಭಾಗವಾಗಿದ್ದು, ಅದು ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನದ ನಿಯಮಗಳು ಮತ್ತು ಗುಣಮಟ್ಟಗಳನ್ನು ನಿರ್ಧರಿಸುತ್ತದೆ. ಇದು ನೀಡುವ ಕೋಡ್ 4 ಅಕ್ಷರಗಳನ್ನು ಹೊಂದಿರುತ್ತವೆ. ಅದು ಹೇಗೆ ಕೋಡ್‌ಗಳನ್ನು ನಿರ್ಧರಿಸುತ್ತದೆ? ಈ ಕೋಡ್‌ಗಳನ್ನು ಹೆಚ್ಚು ತಾಂತ್ರಿಕ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಮೊದಲ 2 ಅಕ್ಷರಗಳು ವಿಮಾನ ನಿಲ್ದಾಣವಿರುವ ದೇಶದ ಹೆಸರನ್ನು ಸೂಚಿಸಿದರೆ, ನಂತರದ 2 ಅಕ್ಷರಗಳು ಆ ನಿರ್ದಿಷ್ಟ ವಿಮಾನ ನಿಲ್ದಾಣವನ್ನು ಸೂಚಿಸುತ್ತವೆ. ಉದಾಹರಣೆಗೆ, ಬೆಂಗಳೂರು ವಿಮಾನ ನಿಲ್ದಾಣದ ಕೋಡ್ VOBL. ಇಲ್ಲಿ VOBL (ಬೆಂಗಳೂರು) – V (ದಕ್ಷಿಣ ಏಷ್ಯಾ), O (ಭಾರತ- ದಕ್ಷಿಣ ಭಾಗ), BL (ಬೆಂಗಳೂರು) ಬೆಂಗಳೂರು ವಿಮಾನ ನಿಲ್ದಾಣವನ್ನು ಸೂಚಿಸುತ್ತದೆ. ICAO ಕೋಡ್‌ಗಳನ್ನು ಪ್ರಮುಖವಾಗಿ ವಿಮಾನಗಳ ಸಂಚಾರ ನಿಯಂತ್ರಣ (Air Traffic Control), ವಿಮಾನದ ಹಾರಾಟ ಯೋಜನೆ (Flight Planning) ಮತ್ತು ಹವಾಮಾನ ವರದಿಗಳಂಥ ತಾಂತ್ರಿಕ ಕಾರ್ಯಗಳಿಗೆ ಬಳಸಲಾಗುತ್ತದೆ. ಈ ಕೋಡ್‌ಗಳು ಪ್ರಪಂಚದಾದ್ಯಂತ ಏಕರೂಪವಾಗಿರುವುದರಿಂದ, ಪೈಲಟ್‌ಗಳು ಮತ್ತು ವಾಯುಸಂಚಾರ ನಿಯಂತ್ರಕರಿಗೆ ಸಂವಹನ ಸುಲಭವಾಗುತ್ತದೆ. IATA ಕೋಡ್‌ಗಳು ಪ್ರಮುಖವಾಗಿ ವಾಣಿಜ್ಯ ಮತ್ತು ಪ್ರಯಾಣಿಕರ ಬಳಕೆಗೆ ಇದ್ದರೆ, ICAO ಕೋಡ್‌ಗಳು ಪ್ರಮುಖವಾಗಿ ತಾಂತ್ರಿಕ ಮತ್ತು ವೈಮಾನಿಕ ಕಾರ್ಯಾಚರಣೆಗಳಿಗೆ ಬಳಕೆಯಾಗುತ್ತವೆ. ಎರಡೂ ಕೋಡ್‌ಗಳು ವಿಮಾನದಲ್ಲಿನ ಸುರಕ್ಷಿತ ಮತ್ತು ಸುಗಮ ಸಂಚಾರಕ್ಕೆ ಅತ್ಯಗತ್ಯವಾಗಿವೆ. ಎರಡೂ ಕೋಡ್‌ಗಳ ನಡುವಿನ ವ್ಯತ್ಯಾಸವೇನು? IATA ಕೋಡ್ ಮುಖ್ಯವಾಗಿ ವಾಣಿಜ್ಯ ಮತ್ತು ಪ್ರಯಾಣಿಕರ ಬಳಕೆಗೆ ಸೀಮಿತವಾಗಿದ್ದು, ಅದು 3 ಅಕ್ಷರಗಳನ್ನು ಹೊಂದಿದೆ. ICAO ಕೋಡ್ ಮುಖ್ಯವಾಗಿ ತಾಂತ್ರಿಕ ಮತ್ತು ಕಾರ್ಯಾಚರಣೆಯ ಬಳಕೆಗೆ ಸೀಮಿತವಾಗಿದ್ದು 4 ಅಕ್ಷರಗಳನ್ನು ಹೊಂದಿದೆ. ಈ ಕೋಡ್‌ಗಳು ಇಲ್ಲದೇ, ಆಧುನಿಕ ವಿಮಾನಯಾನ ವ್ಯವಸ್ಥೆ ಅಸ್ತವ್ಯಸ್ತವಾಗುತ್ತದೆ. ಇವು ಜಾಗತಿಕವಾಗಿ ಪ್ರತಿದಿನ ಲಕ್ಷಾಂತರ ವಿಮಾನಗಳು ಮತ್ತು ಪ್ರಯಾಣಿಕರ ಸಂಚಾರವನ್ನು ಸುಗಮ ಮತ್ತು ಸುರಕ್ಷಿತವಾಗಿ ನಿರ್ವಹಿಸಲು ಸಹಾಯಕ.

ಭಾರತದ ಸದೃಢ ಆರ್ಥಿಕತೆಯ ಮುನ್ನೋಟ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಕಳೆದ ಹತ್ತು ವರ್ಷಗಳಲ್ಲಿ ಬ್ರೆಜಿಲ್, ಫ್ರಾನ್ಸ್, ಇಂಗ್ಲೆಂಡ್, ಜಪಾನ್ ದೇಶಗಳನ್ನು ಮೀರಿಸಿ ಭಾರತವು ಜಾಗತಿಕ ಆರ್ಥಿಕತೆಯಲ್ಲಿ ಶರವೇಗದಲ್ಲಿ ನಾಲ್ಕನೇ ಸ್ಥಾನಕ್ಕೇರಿದೆ. ಹಲವು ದಶಕಗಳಿಂದ ಪಾಶ್ಚಿಮಾತ್ಯ ದೇಶಗಳು ಜಾಗತಿಕ ಮಟ್ಟದಲ್ಲಿ ಪಾರುಪತ್ಯ ಮೆರೆದಿದ್ದವು. ಈಗ ಏಷ್ಯಾ ಖಂಡದ ದೇಶಗಳು ಮುನ್ನೆಲೆಗೆ ಬರುತ್ತಿರುವುದು ಪಾಶ್ಚಿಮಾತ್ಯ ದೇಶಗಳಿಗೆ ತಲೆನೋವಾಗಿದೆ. ಭಾರತ ಇನ್ನೆರಡು ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಿ ಮೂರನೇ ಸ್ಥಾನಕ್ಕೇರುವುದು ಖಚಿತವೆಂದು ಅನೇಕ ತಜ್ಞರು ಹೇಳುತ್ತಿದ್ದಾರೆ. ಹತ್ತು ವರ್ಷಗಳ ಹಿಂದೆ ಜಗತ್ತಿನ ಹಿಂದುಳಿದ ಆರ್ಥಿಕತೆಯ ದೇಶಗಳ ಪಟ್ಟಿಯಲ್ಲಿದ್ದ ಭಾರತವು ಇಂದು ಮುಂದುವರಿಯುತ್ತಿರುವ ದೇಶಗಳ ಪಟ್ಟಿಯಲ್ಲಿ ಮೇಲಕ್ಕೇರುತ್ತಿರುವುದು ಹಲವರ ನಿದ್ದೆಗೆಡಿಸಿದೆ. ಅಮೆರಿಕ ದೇಶವು ಭಾರತದ ಮೇಲೆ ಶೇ.50ರಷ್ಟು ಸುಂಕ ಹೇರಿದ ನಂತರ ಆತಂಕಭರಿತ ಚರ್ಚೆಗಳು ಪ್ರಾರಂಭವಾಗಿವೆ. ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಬಂದ ನಂತರ 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಎಂಬ ಶೀರ್ಷಿಕೆಯಡಿಯಲ್ಲಿ ಭಾರತದಲ್ಲಿರುವ ಅನೇಕ ಕಂಪನಿಗಳನ್ನು ವಾಪಾಸ್ ಅಮೆರಿಕಕ್ಕೆ ಬರುವಂತೆ ಕರೆಯುತ್ತಿದ್ದಾರೆ. ಆದರೆ ಟ್ರಂಪ್ ನೀಡಿದ ಆಹ್ವಾನ ಅಥವಾ ಎಚ್ಚರಿಕೆಯನ್ನು ಲೆಕ್ಕಿಸದೆ ಆ್ಯಪಲ್ ಕಂಪನಿ ಭಾರತದಲ್ಲಿ ಮತ್ತಷ್ಟು ಹೂಡಿಕೆ ಮಾಡಲು ನಿರ್ಧರಿಸಿದೆ. 2024-25ರ ಭಾರತದ ಒಟ್ಟಾರೆ ರಫ್ತು ಅಂದಾಜು 824 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು. ಇದರಲ್ಲಿ ಅಮೆರಿಕದ ಪಾಲು ಸುಮಾರು 80 ಬಿಲಿಯನ್ ಡಾಲರ್. ಭಾರತದ ಒಟ್ಟಾರೆ ರಫ್ತಿನ ಶೇಕಡಾ 10ರಷ್ಟು ಭಾಗವು ಅಮೆರಿಕಕ್ಕೆ ಮಾಡುವ ರಫ್ತಿನ ಪಾಲಾಗಿದೆ. ಭಾರತದಿಂದ ಅಮೆರಿಕಕ್ಕೆ ಹೆಚ್ಚಾಗಿ ಬಟ್ಟೆಗಳು, ಕೃತಕ ಆಭರಣಗಳು, ಮೀನುಗಾರಿಕಾ ಉತ್ಪನ್ನಗಳು ರಫ್ತಾಗುತ್ತವೆ.

ಚೀನಾ ಮಾದರಿಯಲ್ಲಿ ಭಾರತ ಹೆಚ್ಚಾಗಿ ರಫ್ತನ್ನು ನಂಬಿಕೊಂಡಿಲ್ಲ. ಭಾರತದಲ್ಲಿನ ಸ್ಥಳೀಯ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಿದರೆ ಸಾಕು, ಭಾರತದ ಆರ್ಥಿಕತೆಯ ಬೆಳವಣಿಗೆಯ ವೇಗ ಮತ್ತಷ್ಟು ಹೆಚ್ಚುತ್ತದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಬೇಕೆಂದರೆ ಜನರ ಜೇಬಿನಲ್ಲಿ ಹಣವಿರಬೇಕು, ಹೆಚ್ಚಿನ ಹಣ ಉಳಿತಾಯವಾಗಬೇಕು. ಉಳಿತಾಯವಾದ ಹಣ ಮತ್ತೆ ಮಾರುಕಟ್ಟೆಗೆ ಬರುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ಫೆಬ್ರವರಿ ತಿಂಗಳಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು 12 ಲಕ್ಷಕ್ಕೆ ಏರಿಸಲಾಗಿದೆ. ತಿಂಗಳಿಗೆ 5,000ದಿಂದ 10,000 ರುಪಾಯಿವರೆಗೂ ಟಿಡಿಎಸ್ ಕಡಿತವಾಗುವುದು ಇದರಿಂದ ಕಡಿಮೆಯಾಗಿದೆ. ಆದಾಯ ತೆರಿಗೆಯಿಂದ ಉಳಿತಾಯವಾದ ಹಣದಿಂದಾಗಿ ಜನರ 'ಖರ್ಚುಮಾಡುವ ಸಾಮರ್ಥ್ಯ' ಹೆಚ್ಚಾಗಿದೆ. ಪರಿಣಾಮ 2025-26ರ ಮೊದಲ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ. 7.8ಕ್ಕೆ ಏರಿಕೆಯಾಗಿದೆ. ಟಿಡಿಎಸ್ ಉಳಿತಾಯದ ಹಣವು ಮಧ್ಯಮ ವರ್ಗದ ಜನರ ಕಾರಿನ ಒಂದು ಇಎಂಐಗೆ ಜಮೆಯಾಗುತ್ತದೆ, ಹೊಸದೊಂದು ವಸ್ತುವನ್ನು ಮನೆಗೆ ಕೊಂಡೊಯ್ಯಬಹುದು, ಹಬ್ಬಗಳಲ್ಲಿ ಹೆಚ್ಚಾಗಿ ಖರ್ಚು ಮಾಡಬಹುದು, ಮನೆಗೆ ಹೊಸ ಟಿವಿ, ಫ್ರಿಜ್, ಮಿಕ್ಸಿ, ವಾಷಿಂಗ್ ಮಷಿನ್ ಕೊಳ್ಳಬಹುದು. ಮಧ್ಯಮ ವರ್ಗದ ಜನರ ಮತ್ತು ಬಡವರ ಕೊಳ್ಳುವ ಸಾಮರ್ಥ್ಯ ಹೆಚ್ಚಾದಂತೆ ಉತ್ಪಾದನೆ ಹೆಚ್ಚಾಗುತ್ತದೆ. ಉತ್ಪಾದನೆ ಹೆಚ್ಚಾದಂತೆ ದೇಶದ ಜಿಡಿಪಿ ಹೆಚ್ಚಾಗುತ್ತದೆ ಮತ್ತು ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ.

ಭಾರತದಲ್ಲಿ ಜಿಎಸ್‌ಟಿ ಜಾರಿಗೆ ಬಂದು ಎಂಟು ವರ್ಷವಾಯಿತು. 2017ರ ಹಿಂದೆ ಭಾರತದಲ್ಲಿ 17 ರೀತಿಯ ತೆರಿಗೆಗಳು ಮತ್ತು 13 ರೀತಿಯ ಸೆಸ್ ಇದ್ದವು. ಅನೇಕ ರಾಜ್ಯಗಳಲ್ಲಿ ಸ್ಥಳೀಯ ಮಟ್ಟದಲ್ಲಿ ವಿವಿಧ ತೆರಿಗೆಗಳಿದ್ದವು. ಮುಂಬೈ ನಗರಕ್ಕೆ ಅಂಟಿಕೊಂಡಿರುವ ಭಿವಾಂಡಿ ಪ್ರದೇಶಕ್ಕೆ ಪ್ರವೇಶ ಮಾಡುವ ವಸ್ತುಗಳ ಮೇಲೆ ಸ್ಥಳೀಯ ಮಟ್ಟದಲ್ಲಿ ತೆರಿಗೆ ಹೇರಲಾಗುತ್ತಿತ್ತು. ತಿಂಗಳಿಗೆ ಹಲವು ಸರಕಾರಿ ಕಚೇರಿಗಳಿಗೆ ವರದಿ ಸಲ್ಲಿಸಬೇಕಿತ್ತು. ಇವೆಲ್ಲವನ್ನೂ ಸರಿದೂಗಿಸಲು 'ಒಂದು ದೇಶ, ಒಂದು ತೆರಿಗೆ' ಅಡಿಯಲ್ಲಿ ದೇಶದಲ್ಲಿ ಜಿಎಸ್‌ಟಿ ಜಾರಿಗೆ ಬಂತು. ಜಿಎಸ್‌ಟಿ ಪರಿಕಲ್ಪನೆ ಮೊದಲಿಗೆ ಪ್ರಾರಂಭವಾದದ್ದು 2000ನೇ ಇಸವಿಯಲ್ಲಿ. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಂದಿನ ವಿತ್ತಸಚಿವ ಅಸಿಮ್ ದಾಸ್ ಗುಪ್ತರವರ ನೇತೃತ್ವದಲ್ಲಿ 'ಒಂದು ದೇಶ, ಒಂದು ತೆರಿಗೆ' ಪದ್ಧತಿಯ ಬಗ್ಗೆ ಅಧ್ಯಯನ ನಡೆಸುವಂತೆ ಹೇಳಲಾಗಿತ್ತು. ಹಾಗಾಗಿ ಜಿಎಸ್‌ಟಿ ಪರಿಕಲ್ಪನೆ ಇಂದು ನಿನ್ನೆಯದಲ್ಲ. ಜಗತ್ತಿನ ಬಹುತೇಕ ಮುಂದುವರಿದ ದೇಶಗಳು ಜಿಎಸ್‌ಟಿ ಪದ್ಧತಿಯನ್ನು ಅನುಸರಿಸುತ್ತವೆ. ಭಾರತದಲ್ಲಿ ಸುಮಾರು 25 ವರ್ಷಗಳ ಹಿಂದೆ ಇದರ ಬಗ್ಗೆ ಅಧ್ಯಯನ ನಡೆದಿತ್ತು. ಆದರೆ ಕಾಂಗ್ರೆಸ್ ಪಕ್ಷವು ಚಿದಂಬರಂ ಅವರ ಹೆಸರು ಹೇಳಿಕೊಂಡು ಸುಳ್ಳು ಹೇಳುತ್ತದೆ. ಸೆಪ್ಟೆಂಬರ್ ತಿಂಗಳ 22ರ ನಂತರ ಭಾರತದಲ್ಲಿ ಹಬ್ಬಗಳ ಸರತಿಸಾಲು ಪ್ರಾರಂಭವಾಗುತ್ತದೆ. ಒಂಬತ್ತು ದಿವಸಗಳ ನವರಾತ್ರಿ, ನಂತರ ದೀಪಾವಳಿ ಪ್ರಾರಂಭವಾಗುತ್ತವೆ. ಹಬ್ಬದ ಉಡುಗೊರೆಯಂತೆ ಪ್ರಧಾನಿ ಮೋದಿಯವರು ಜಿಎಸ್‌ಟಿಯಲ್ಲಿ ಮತ್ತಷ್ಟು ಸುಧಾರಣೆಯನ್ನು ಜಾರಿಗೆ ತಂದು, ದಿನನಿತ್ಯ ಬಳಸುವ ವಸ್ತುಗಳ ಮೇಲಿನ ತೆರಿಗೆಯನ್ನು ಗಣನೀಯವಾಗಿ ಇಳಿಸಿದ್ದಾರೆ. ಜಿಎಸ್‌ಟಿ ದರ ಇಳಿಕೆಯಿಂದ ಮತ್ತಷ್ಟು ಹಣ ಜನರ ಜೇಬಿನಲ್ಲಿ ಉಳಿತಾಯವಾಗಲಿದೆ.

ಉಳಿತಾಯವಾದ ಹಣ ಪುನಃ ಆರ್ಥಿಕ ವ್ಯವಸ್ಥೆಗೆ ಬಂದು ಮತ್ತಷ್ಟು ವಸ್ತುಗಳ ಬೇಡಿಕೆ ಹೆಚ್ಚಾಗಲಿದೆ. ಬೇಡಿಕೆ ಹೆಚ್ಚಾದಂತೆ ಉತ್ಪಾದನೆ ಜಾಸ್ತಿಯಾಗಿ ಆರ್ಥಿಕ ಬೆಳವಣಿಗೆಯಾಗಲಿದೆ. ಅಮೆರಿಕ ವಿಧಿಸಿದ ಸುಂಕದಿಂದ ಉಂಟಾಗುವ ನಷ್ಟವು ಭಾರತದೊಳಗೆ ಉಂಟಾಗುವ ಹೆಚ್ಚಿನ ಬೇಡಿಕೆಯಿಂದ ಸರಿದೂಗಲಿದೆ. ಮನೆ ಕಟ್ಟಲು ಬೇಕಿರುವ ಸಿಮೆಂಟ್ ಮೇಲಿನ ಜಿಎಸ್‌ಟಿ ದರದಲ್ಲಿ ಭಾರಿ ಇಳಿಕೆಯಾಗಿದ್ದು, ರಿಯಲ್ ಎಸ್ಟೇಟ್ ಉದ್ಯಮಕ್ಕೆ ಮತ್ತಷ್ಟು ವೇಗ ಸಿಕ್ಕಂತಾಗುತ್ತದೆ.

ಭಾರತದ ಆರ್ಥಿಕತೆ ಇಂದು ನಾಲ್ಕನೇ ಸ್ಥಾನಕ್ಕೆ ಏರಿರುವುದರ ಹಿಂದೆ ಹತ್ತು ವರ್ಷಗಳ ಶ್ರಮವಿದೆ. ಇದು ರಾತ್ರೋರಾತ್ರಿ ಆದಂಥ ಬದಲಾವಣೆಯಲ್ಲ. 2016ರಲ್ಲಿ ನೋಟು ಅಮಾನ್ಯೀಕರಣವಾದ ನಂತರ ಡಿಜಿಟಲ್ ಪೇಮೆಂಟ್‌ಗೆ ಹೆಚ್ಚಿನ ಒತ್ತು ನೀಡಲಾಯಿತು. ಸರಕಾರದ ಯೋಜನೆಗಳ ಹಣ ನೇರವಾಗಿ ಫಲಾನುಭವಿಗಳ ಖಾತೆಗೆ ಕೆಲವೇ ಸೆಕೆಂಡಿನಲ್ಲಿ ಜಮಾ ಆಗುತ್ತಿದೆ. ಡಿಜಿಟಲ್ ವ್ಯವಹಾರ ಹೆಚ್ಚಾಗಿರುವ ಪರಿಣಾಮ ಆರ್ಥಿಕತೆಯಲ್ಲಿ ಪಾರದರ್ಶಕತೆ ಹೆಚ್ಚಾಗಿದೆ. ಅಸಂಘಟಿತ ವಲಯದ ಆರ್ಥಿಕತೆಯ ಲೆಕ್ಕವೂ ಸಿಗುತ್ತಿದೆ. ಜೇಬಿನಲ್ಲಿ ಹಣ ಇಟ್ಟುಕೊಳ್ಳುವ ಪದ್ಧತಿ ನಿಧಾನವಾಗಿ ಕಡಿಮೆಯಾಗುತ್ತಿದೆ. ಡಿಜಿಟಲ್ ಇಂಡಿಯಾ ನಂತರ ಕೇಂದ್ರ ತೆಗೆದುಕೊಂಡ ಮತ್ತೊಂದು ಪ್ರಮುಖ ನಿರ್ಧಾರವೆಂದರೆ 'ಮೇಕ್ ಇನ್ ಇಂಡಿಯಾ'. ಇದು ಭಾರತದ ರಫ್ತನ್ನು ಗಣನೀಯವಾಗಿ ಇಳಿಸಿ, ಭಾರತದ ಒಳಗೆ ಉತ್ಪಾದನೆ ಹೆಚ್ಚಿಸುವ ಸಲುವಾಗಿ ತಂದಂಥ ಪ್ರಮುಖ ಯೋಜನೆ. ಈ ಯೋಜನೆಯಡಿಯಲ್ಲಿ ಇಂದು ಸುಮಾರು 3,00,000 ಕೋಟಿಗೂ ಅಧಿಕ ಮೌಲ್ಯದ ಮೊಬೈಲ್ ಫೋನುಗಳು ಭಾರತದೊಳಗೆ ಉತ್ಪಾದನೆಯಾಗುತ್ತಿವೆ. ಆ್ಯಪಲ್, ಸ್ಯಾಮ್‌ಸಂಗ್, ಶವೋಮಿ ಕಂಪನಿಯ ಫೋನುಗಳು ಭಾರತದಲ್ಲಿ ಉತ್ಪಾದನೆಯಾಗಿ ಬೇರೆ ದೇಶಗಳಿಗೆ ರಫ್ತಾಗುತ್ತಿವೆ. ಮಹೀಂದ್ರಾ ಮತ್ತು ಟಾಟಾ ಕಂಪನಿಯ ಕಾರುಗಳು ರಸ್ತೆಯಲ್ಲಿ ಕಣ್ಣಿಗೆ ರಾಚುತ್ತಿವೆ. ಕಿಯಾ ಕಾರುಗಳನ್ನು ಆಂಧ್ರಪ್ರದೇಶದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಪ್ರತಿಷ್ಠಿತ ರೇಂಜ್ ರೋವರ್ ಮತ್ತು ಜಾಗ್ವಾರ್ ಕಾರುಗಳನ್ನು ಭಾರತದಲ್ಲಿ ಉತ್ಪಾದಿಸಲಾಗುತ್ತಿದೆ. ಓಲಾ ಮತ್ತು ಏಥರ್ ಇಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಭಾರತದಲ್ಲಿ ಉತ್ಪಾದನೆಯಾಗುತ್ತಿವೆ. ಮೇಕ್ ಇನ್ ಇಂಡಿಯಾ ಉಪಕ್ರಮದಿಂದಾಗಿ, ಸಣ್ಣ ಸಣ್ಣ ಆಟಿಕೆಗಳು, ದಿನನಿತ್ಯದ ವಸ್ತುಗಳ ಆಮದಿನಲ್ಲಿ ಗಣನೀಯ ಇಳಿಕೆಯಾಗಿದೆ.

ಭಾರತದ ಯುವಶಕ್ತಿಯು, ದೇಶದ ಮಾರುಕಟ್ಟೆ ಹಾಗೂ ಆರ್ಥಿಕ ನೀತಿಗಳ ಬಗ್ಗೆ ಹೆಚ್ಚಿನ ಆತ್ಮವಿಶ್ವಾಸ ಹೊಂದಿರುವ ಕಾರಣಕ್ಕಾಗಿ ಭಾರತಕ್ಕೆ ಹೆಚ್ಚಿನ ವಿದೇಶಿ ಬಂಡವಾಳ ಹರಿದುಬರುತ್ತಿದೆ. ಷೇರು ಮಾರುಕಟ್ಟೆ ಸಾರ್ವಕಾಲಿಕ ದಾಖಲೆಯನ್ನು ನಿರ್ಮಿಸಿ ಮುನ್ನುಗ್ಗುತ್ತಿದೆ. ಮುಂಬೈ ಷೇರು ಸೂಚ್ಯಂಕ 80,000 ದಾಟಿದೆ. ವಿದೇಶಿ ಸಾಂಸ್ಥಿಕ ಬಂಡವಾಳಶಾಹಿಗಳು ಪ್ರತಿನಿತ್ಯ ಸಾವಿರಾರು ಕೋಟಿ ರು. ಹಣವನ್ನು ಭಾರತದ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಭಾರತದ ಮಾರುಕಟ್ಟೆ ವಿಸ್ತಾರವಾಗುತ್ತಿದೆ. ಬೆರಳ ತುದಿಯಲ್ಲಿ ವ್ಯವಹರಿಸುವ ತಂತ್ರಜ್ಞಾನಗಳು ಹಳ್ಳಿಹಳ್ಳಿಗಳನ್ನು ತಲುಪಿವೆ. ಹಳ್ಳಿಗಳನ್ನು ಸಂಪರ್ಕಿಸುವ ರಸ್ತೆಗಳ ಕಾಮಗಾರಿ ಕೆಲಸ ಬಿರುಸಿನಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಕಂಡಂಥ ವ್ಯವಹಾರಸ್ಥರಿಗೆ ಸಂಪೂರ್ಣವಾಗಿ ಬಳಕೆಯಾಗದ 'ಹಳ್ಳಿಯ ಮಾರುಕಟ್ಟೆ' ಕಾಣುತ್ತಿದೆ. ಅತ್ತ ಬ್ಯಾಂಕುಗಳು ಹೆಚ್ಚಿನ ಸಾಲವನ್ನು ಮಾರುಕಟ್ಟೆಯಲ್ಲಿ ನೀಡುವುದರಿಂದ ಆರ್ಥಿಕತೆಯ ವೇಗಕ್ಕೆ ಮತ್ತಷ್ಟು ಚಾಲನೆ ಸಿಗುತ್ತಿದೆ.

ಕಾಂಗ್ರೆಸ್ ಸರಕಾರದ ಕಾಲದಲ್ಲಿ 'ಫೋನ್ ಬ್ಯಾಂಕಿಂಗ್' ಮೂಲಕ ಸರಕಾರವು ಹೇಳಿದವರಿಗೆ ಸಾಲ ನೀಡಲಾಗುತ್ತಿತ್ತು. ಇದರ ಪರಿಣಾಮವಾಗಿ ವಿಜಯ್ ಮಲ್ಯ, ನೀರವ್ ಮೋದಿ ಹಾಗೂ ಮೆಹುಲ್ ಚೋಕ್ಸಿ ಸಾಲ ಪಡೆದು ದೇಶ ಬಿಟ್ಟು ಓಡಿಹೋದರು. ಆದರೆ ಈಗ ಹಾಗಾಗುತ್ತಿಲ್ಲ, ಸರಿಯಾದ ಭದ್ರತೆ ಹಾಗೂ ಆತ್ಮವಿಶ್ವಾಸವಿಲ್ಲದವರಿಗೆ ಅಷ್ಟು ಸುಲಭವಾಗಿ ಸಾಲ ನೀಡಲಾಗುತ್ತಿಲ್ಲ. ಒಂದು ವರದಿಯ ಪ್ರಕಾರ 1997ರವರೆಗೂ ಭಾರತದಲ್ಲಿ ಕೇವಲ 337 ಕಿಲೋಮೀಟರುಗಳಷ್ಟು ಉದ್ದದ ನಾಲ್ಕು ಪಥದ ರಸ್ತೆಗಳಿದ್ದವು. ಸ್ವಾತಂತ್ರ್ಯ ಬಂದು 50 ವರ್ಷ ಕಳೆದಿದ್ದರೂ ಇಷ್ಟು ಕಡಿಮೆಯ ನಾಲ್ಕು ಪಥದ ರಸ್ತೆಗಳಿದ್ದವೆಂದರೆ ತೆರಿಗೆ ಹಾಗೂ ಸಾಲದ ಹಣವನ್ನು ಕಾಂಗ್ರೆಸ್ ಸರಕಾರ ಯಾವ ಪುರುಷಾರ್ಥಕ್ಕೆ ಬಳಸುತ್ತಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಿ. ಅಟಲ್ ಬಿಹಾರಿ ವಾಜಪೇಯಿಯವರ ಅಧಿಕಾರಾವಧಿಯಲ್ಲಿ ಕೇವಲ ಐದು ವರ್ಷಗಳಲ್ಲಿ, 'ಸುವರ್ಣ ಚತುಷ್ಪಥ' ಯೋಜನೆಯ ಮೂಲಕ ದೇಶದ ನಾಲ್ಕು ಮಹಾನಗರಗಳನ್ನು ಸಂಪರ್ಕಿಸಲಾಯಿತು. ಇಂದಿನ ಭಾರತದ ಆರ್ಥಿಕ ಬೆಳವಣಿಗೆಯ ಪ್ರಮುಖ ರೂವಾರಿ- ಈ ಸುವರ್ಣ ಚತುಷ್ಪಥ ಯೋಜನೆ. ಅವರದ್ದೇ ದಾರಿಯಲ್ಲಿ ಸಾಗುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರು ಪ್ರತಿನಿತ್ಯ ಸುಮಾರು 38 ಕಿಲೋಮೀಟರುಗಳಷ್ಟು ಹೆದ್ದಾರಿ ಕಾಮಗಾರಿಗಳಿಗೆ ಮುಂದಾಗುವ ಮೂಲಕ ಆರ್ಥಿಕ ಬೆಳವಣಿಗೆಯ ವೇಗಕ್ಕೆ ಮತ್ತಷ್ಟು ಚುರುಕು ಮುಟ್ಟಿಸಿದ್ದಾರೆ. ಕಳೆದ 10 ವರ್ಷಗಳಲ್ಲಿ ತೆಗೆದುಕೊಂಡಂಥ ದಿಟ್ಟ ನಿರ್ಧಾರಗಳಾದ ನೋಟು ಅಮಾನ್ಯೀಕರಣ, ಜಿಎಸ್‌ಟಿ ಸುಧಾರಣೆ, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಹೆಚ್ಚಿನ ಬಂಡವಾಳ ಹೂಡಿಕೆ, ರೈಲ್ವೆ ವಲಯದ ಹೂಡಿಕೆ, ವಿಮಾನ ನಿಲ್ದಾಣ ನಿರ್ಮಾಣ, ಆದಾಯ ತೆರಿಗೆ ಸುಧಾರಣೆಯ ಫಲದಿಂದಾಗಿ ಇಂದು ಭಾರತವು ಪಾಶ್ಚಿಮಾತ್ಯ ದೇಶಗಳ ಒತ್ತಡದ ನಡುವೆಯೂ ಆರ್ಥಿಕ ವೇಗವನ್ನು ಹೆಚ್ಚಿಸಿಕೊಳ್ಳುತ್ತಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಒಳನೋಟದ ಲೇಖನ

ಹರೀಶ್ ಕೇರ ಅವರ 'ಕಾಡುದಾರಿ' ಅಂಕಣಬರಹ (ಸೆ.4) ಅದ್ಭುತವಾಗಿತ್ತು. ಲಿಯೋ ಟಾಲ್‌ಸ್ಟಾಯ್ ಹಾಗೂ ಎಪಿಕ್ಟೆಟಸ್ ಅವರ ಮಾತುಗಳು ಸಂದರ್ಭೋಚಿತವಾಗಿದ್ದವು. ಗ್ರೀಸ್‌ನ ಹೋಮರ್ ಕವಿಯ ಯೂಲಿಸಿಸ್ ಮಾಡಿದ ನೌಕಾಯಾನ, ಅಲ್ಲಿನ ಕಥೆಯ ಉಲ್ಲೇಖ, ಇಂದಿನ ಡಿಜಿಟಲ್ ಯುಗದ ಸಮೂಹಸನ್ನಿಗೆ ಏಕೆ ಅರ್ಥವಾಗುತ್ತಿಲ್ಲ ಎಂಬುದೇ ನೋವಿನ ಸಂಗತಿ. 'ಬಯಲು ಆಲಯದೊಳಗೋ, ಆಲಯವು ಬಯಲೊಳಗೋ' ಎಂಬ ಅಲ್ಲಮನ ಉಕ್ತಿಯಂತೆ, 'ಕೋಡಗನ ಕೋಳಿ ನುಂಗಿತ್ತಾ' ಎಂಬ ಷರೀಫರ ಹಾಡಿನಂತೆ, ಮುಂಬರುವ ಸೂಪರ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಯುಗದ 'ಮಿಕ' ನಾವಾಗುತ್ತಿದ್ದೇವೆ. ಈ ಒಟ್ಟೂ ಅವಸ್ಥೆಯಿಂದ ಬಿಡುಗಡೆಯ ಹಾದಿ ಸಿಗದಿದ್ದರೆ, ಮುಂದಿನ ಭೀಕರ ಸಮಾಜದ ಸೃಷ್ಟಿಗೆ ನಾವೆಲ್ಲ ಮೂಕಪ್ರೇಕ್ಷಕರಾಗಿಬಿಡುವ ಆತಂಕ ಕಾಡುತ್ತಿದೆ. ಸಮಾಜವನ್ನು ಎಚ್ಚರಿಸುವ ಈ ರೀತಿಯ ಒಳನೋಟವಿರುವ ಲೇಖನಗಳು ಅಂಕಣಕಾರರಿಂದ ಇನ್ನಷ್ಟು ಬರಲಿ. ಅವರಿಗೆ ಅಭಿನಂದನೆಗಳು.

– ಡಾ. ಎಂ.ನಾಗರಾಜ, ಹುಬ್ಬಳ್ಳಿ

ಇದಕ್ಕೆ ಮುಕ್ತಿಯೆಂದು?

ರಾಜ್ಯದ ಬಹುತೇಕ ಕಡೆ ರಸ್ತೆಗಳಲ್ಲಿ ಹೊಂಡಗಳೇ ಹೆಚ್ಚಾಗಿ ಕಾಣುತ್ತಿವೆ. ಇದರಿಂದಾಗಿ ಮಳೆಗಾಲದಲ್ಲಿ ವಾಹನ ಸವಾರರಿಗೆ ಬಿಡಿ, ಪಾದಚಾರಿಗಳಿಗೆ ನಡೆದುಕೊಂಡು ಹೋಗಲೂ ಸಾಧ್ಯವಾಗದಷ್ಟು ತೊಂದರೆಯಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ, ಚೆನ್ನಾಗಿರುವ ರಸ್ತೆಯ ಇಕ್ಕೆಲಗಳಲ್ಲಿ (ಚರಂಡಿ ಪಕ್ಕದಲ್ಲೇ) ಭೂಗತ ಕೇಬಲ್ ಅಳವಡಿಸಲು ರಸ್ತೆಯನ್ನು ಕೊರೆಯಲಾಗುತ್ತಿದೆ. ಇದರಿಂದಾಗಿ ಚರಂಡಿಗಳಲ್ಲಿ ಮಣ್ಣು ಬಿದ್ದು ಅವು ಮುಚ್ಚಿಹೋಗುತ್ತಿವೆ. ಪರಿಣಾಮವಾಗಿ ಮಳೆಯ ನೀರು ರಸ್ತೆಯ ಮೇಲೇ ಹರಿಯುವ, ಅದರಿಂದಾಗಿ ಓಡಾಟಕ್ಕೆ ಅಡ್ಡಿಯಾಗುವ ಸಮಸ್ಯೆಗಳು ಹೆಚ್ಚುತ್ತಿವೆ.

ಭೂಗತ ಕೇಬಲ್ ಅಳವಡಿಕೆಯ ವಿಷಯದಲ್ಲಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ಬಗ್ಗೆ ಸರಕಾರ ಚಿಂತನೆ ನಡೆಸಬೇಕು ಅಥವಾ ರಸ್ತೆಯನ್ನು ನಿರ್ಮಿಸುವ ಮೊದಲೇ ಕೇಬಲ್ ಅಳವಡಿಸಲು ಸೂಚನೆ ನೀಡಬೇಕು. ಅದು ಸಾಧ್ಯವಾಗದಿದ್ದರೆ, ಅಗೆದ ರಸ್ತೆಯನ್ನು ಪುನಃ ಡಾಂಬರೀಕರಣ ಮಾಡಿ ನೀಡುವಂತೆ ಸಂಬಂಧಿತ ಕಂಪನಿಗೆ ನಿರ್ದೇಶನ ನೀಡಬೇಕು.

– ಸುರೇಂದ್ರ ಪೈ, ಭಟ್ಕಳ

ಆರುತ್ತಿದೆ ಹೃದಯದೀಪ

ಪ್ರತಿದಿನ ಮುಂಜಾನೆ ಹಾಸಿಗೆಯಿಂದ ಮೇಲೆದ್ದು, ವಾಟ್ಸಾಪ್ ಸ್ಟೇಟಸ್ ಮತ್ತು ಫೇಸ್‌ಬುಕ್ ಪುಟವನ್ನು ತೆರೆದು ನೋಡಿದರೆ, 30ರಿಂದ 40ರ ಹರೆಯದ ಆಸುಪಾಸಿನಲ್ಲಿರುವ ವ್ಯಕ್ತಿಗಳು ಹೃದಯಾಘಾತದಿಂದ ಉಸಿರು ಚೆಲ್ಲಿದ ಫೋಟೋಗಳು ಕಣ್ಣಿಗೆ ರಾಚುವುದು ಮಾಮೂಲಾಗಿಬಿಟ್ಟಿದೆ. ಇದಕ್ಕೆ ಕೆಲವರು 'ಒತ್ತಡದ ಜೀವನಶೈಲಿ ಕಾರಣ' ಎಂದರೆ, ಮತ್ತೊಬ್ಬರು ಕಲಬೆರಕೆ ಮತ್ತು ಹೈಬ್ರಿಡ್ ಆಹಾರ ಪದ್ಧತಿಯ ಕಡೆಗೆ ಬೆರಳುಮಾಡಿ ತೋರಿಸುತ್ತಾರೆ. ಒಂದಷ್ಟು ಮಂದಿ ತ್ರಿಕಾಲ ಜ್ಞಾನಿಗಳು, ಕರೋನಾ ಲಸಿಕೆಯ ಮೇಲೆ ಸಂಶಯ ವ್ಯಕ್ತಪಡಿಸಿ ಕೈತೊಳೆದುಕೊಳ್ಳುತ್ತಾರೆ. ಆದರೆ ನೈಜಕಾರಣ ಏನು ಎಂಬುದು ಇನ್ನೂ ಸರಿಯಾಗಿ ಗೊತ್ತಾಗುತ್ತಿಲ್ಲ. ಸಂಬಂಧಪಟ್ಟ ಇಲಾಖೆಗಳು ಈ ನಿಟ್ಟಿನಲ್ಲಿ ಗಮನಹರಿಸಬೇಕು ಮತ್ತು ಪರಿಹಾರ ಕಂಡುಕೊಳ್ಳುವುದಕ್ಕೆ ಮುಂದಾಗಬೇಕು.

– ಸೋಮಶೇಖರ್ ಬಿ. ಕೋಳಕೂರ, ಜೇವರ್ಗಿ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಹಳ್ಳ ಹಿಡಿದಿರುವ ನಿವೃತ್ತರ ಬದುಕು: ಕೇಳುವವರು ಯಾರು?

ಪಿಂಚಣಿ ವ್ಯವಸ್ಥೆಯಲ್ಲಿನ ಲೋಪದೋಷಗಳು, ಪಿಂಚಣಿಯ ಉನ್ನತೀಕರಣ ಮುಂತಾದ ವಿಷಯಗಳಿಗೆ ಸಂಬಂಧಿಸಿ ಪಿಂಚಣಿದಾರರು ನ್ಯಾಯಾಲಯದಲ್ಲಿ ಸುದೀರ್ಘ ಅವಧಿಯವರೆಗೆ ಹೋರಾಡುವುದನ್ನು ತಪ್ಪಿಸಲು ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಅವರು ಸರಕಾರದ ಮುಂದೆ ಒಂದಿಷ್ಟು ಬೇಡಿಕೆಗಳನ್ನು ಇರಿಸಿದ್ದಾರೆ. ಸರಕಾರವು ಅವುಗಳತ್ತ ಕಣ್ಣು ಹಾಯಿಸುವುದೇ?

ಕಳಕಳಿ

ರಮಾನಂದ ಶರ್ಮಾ
vveditoped@gmail.com

ಎಲ್ಲಾ ನಿವೃತ್ತರನ್ನು, ಹಿರಿಯ ನಾಗರಿಕರನ್ನು ಕೊಂದುಬಿಡಿ. 65 ವರ್ಷ ಆದವರೆಲ್ಲರನ್ನೂ ಸಾಯಿಸಿಬಿಡಿ''- ಹೀಗೆಂದು ಶಿವಸೇನೆಯ (ಉದ್ಧವ್ ಠಾಕ್ರೆ ಬಣ) ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಅವರು ಇತ್ತೀಚೆಗೆ ಅತೀವ ಆಕ್ರೋಶ ಮತ್ತು ವ್ಯಾಕುಲದಿಂದ ಸದನದಲ್ಲಿ ಕೂಗಾಡಿದರಂತೆ. ನಿವೃತ್ತರು ದಿನನಿತ್ಯದ ಬದುಕಿನಲ್ಲಿ ಅನುಭವಿಸುವ ಅವಮಾನ, ನಿರ್ಲಕ್ಷ್ಯ, ಏಕಾಂಗಿತನ, ಆರ್ಥಿಕ ಸಂಕಷ್ಟ ಮತ್ತು ಹೀನಾಯ ಸ್ಥಿತಿಯನ್ನು ಅವರು ಮನಮಿಡಿಯುವಂತೆ ವಿಸ್ತೃತವಾಗಿ ಬಿಚ್ಚಿಟ್ಟರಂತೆ. ಅವರು ಸದನದಲ್ಲಿ ಮಾಡಿದ ಈ ಭಾಷಣವು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿ, ಭಾರಿ ಲೈಕ್‌ಗಳನ್ನು ಪಡೆಯುತ್ತಿದೆ ಎನ್ನಲಾಗುತ್ತಿದೆ.

ಸಂಜಯ್ ರಾವತ್ ಅವರು ಬಳಸಿದ 'ಕೊಂದುಬಿಡಿ' ಮತ್ತು 'ಸಾಯಿಸಿಬಿಡಿ' ಎಂಬ ಆಕ್ರೋಶದ ನುಡಿಗಳು ಸರಕಾರದ ಕಣ್ಣು ತೆರೆಸಬೇಕು. ಸಮಾಜವಾದಿ ಪಕ್ಷದ ಸದಸ್ಯೆ ಜಯಾ ಬಚ್ಚನ್ ಕೂಡ ವರ್ಷದ ಹಿಂದೆ ಸದನದಲ್ಲಿ ಹೀಗೇ ಕೂಗಾಡಿದ್ದರು. ನಿವೃತ್ತರ ಬವಣೆಯು 'ಬಡವಾ ನೀ ಮಡಗಿದಂತೆ ಇರು' ಎಂಬ ರೀತಿಯಲ್ಲಿ ಮುಂದುವರಿದಿದೆ. ಕೇರಳ ಸರಕಾರವು ಹಿರಿಯ ನಾಗರಿಕರ ಆಯೋಗ ರಚಿಸಿ, ಅವರ ಸಮಸ್ಯೆಗಳತ್ತ ಗಮನ ಹರಿಸಲು ಮುಂದಾಗಿದೆ; ಆದರೆ ದೇಶದ ಬೇರಾವ ರಾಜ್ಯವಾಗಲೀ ಅಥವಾ ಕೇಂದ್ರ ಸರಕಾರವಾಗಲೀ ಈ ನಿಟ್ಟಿನಲ್ಲಿ ಗಮನಹರಿಸಿದ ಮಾಹಿತಿಯಿಲ್ಲ.

ಈ ನಿವೃತ್ತರು ಅಥವಾ ಹಿರಿಯ ನಾಗರಿಕರು ದೇಶವನ್ನು ಕಟ್ಟಿದವರು. ತಮ್ಮ ಸೇವಾವಧಿ ಮುಗಿದು ನಿವೃತ್ತರಾದ ನಂತರ ದೊರಕುವ ಕಾಟಾಚಾರದ ಪಿಂಚಣಿಯಲ್ಲಿ (ಹಲವರಿಗೆ ಆ ಭಾಗ್ಯವೂ ಇಲ್ಲ) ಅಥವಾ ಸೇವಾವಧಿಯಲ್ಲಿ ಹೊಟ್ಟೆ-ಬಟ್ಟೆ ಕಟ್ಟಿ ಉಳಿಸಿದ ಹಣವನ್ನು ಬ್ಯಾಂಕಿನಲ್ಲಿ ಇಟ್ಟು, ಅದರಿಂದ ದೊರಕುವ ಬಡ್ಡಿಯಲ್ಲಿ ಬದುಕಿನ ಬಂಡಿಯನ್ನು ಓಡಿಸುವವರು. ಈ ಪೈಕಿ ಅದೆಷ್ಟೋ ಜನ ವೃದ್ಧಾಶ್ರಮದಲ್ಲಿ ಆಶ್ರಯ ಪಡೆದಿದ್ದಾರೆ. ಇತ್ತೀಚೆಗೆ ವೃದ್ಧಾಶ್ರಮಗಳ ಮತ್ತು ಹಿರಿಯ ನಾಗರಿಕರ ವಸತಿಗೃಹಗಳ ಸಂಖ್ಯೆಯು ಹೆಚ್ಚುತ್ತಿರುವುದು ಕಟುಸತ್ಯ. ಹಲವು ಹಿರಿಯ ಜೀವಗಳು ತಮ್ಮ ಮಕ್ಕಳಿಂದ ಒದಗುವ ಅವಮಾನ/ನಿರ್ಲಕ್ಷ್ಯದ ಹೊರತಾಗಿಯೂ, ಏನೂ ನಡೆದಿಲ್ಲವೆಂಬಂತೆ ಮುಖವಾಡ ಹಾಕಿಕೊಂಡು, ಕೊನೆಯ ದಿನಗಳನ್ನು ನಿರೀಕ್ಷಿಸುತ್ತಾ, 'ನಮ್ಮನ್ನು ನಿನ್ನ ಪಾದದಲ್ಲಿ ಬೇಗನೆ ಸೇರಿಸಿಕೋ' ಎಂದು ದೇವರನ್ನು ಬೇಡುತ್ತಾ ಕಾಲ ಕಳೆಯುತ್ತಾರೆ. ಹಾಗೆಂದ ಮಾತ್ರಕ್ಕೆ, ತಮ್ಮ ಮಕ್ಕಳು-ಮೊಮ್ಮಕ್ಕಳೊಂದಿಗೆ ಸುಖವಾಗಿ ಕಾಲಕಳೆಯುತ್ತಿರುವ ವಯೋವೃದ್ಧರು ಇಲ್ಲವೇ ಇಲ್ಲ ಎಂದೇನಲ್ಲ; ಆದರೆ ವರದಿಗಳ ಪ್ರಕಾರ ಇಂಥವರ ಸಂಖ್ಯೆ ಹೇಳಿಕೊಳ್ಳುವಷ್ಟು ಹೆಚ್ಚೇನೂ ಇಲ್ಲ. ನಿವೃತ್ತರ ಪಿಂಚಣಿ ವ್ಯವಸ್ಥೆಯಲ್ಲೂ ಬದಲಾವಣೆಯಾಗಿದ್ದು, ಎನ್‌ಪಿಎಸ್/ಯುಪಿಎಸ್ ಹೆಸರಿನಲ್ಲಿ ಮೊದಲಿನಂತೆ ನಿರ್ದಿಷ್ಟ ಪಿಂಚಣಿ ಇಲ್ಲದಂತಾಗಿದೆ. ಹೀಗಾಗಿ ಎಲ್ಲವೂ ಗೊಂದಲಮಯವಾಗಿದೆ, ಹಿರಿಯ ನಾಗರಿಕರ ಬದುಕು ಹೈರಾಣಾಗಿದೆ. ಇತ್ತೀಚೆಗೆ ಜಾರಿಮಾಡಲು ಉದ್ದೇಶಿಸಿರುವ ಯುಪಿಎಸ್ ಪಿಂಚಣಿ ವ್ಯವಸ್ಥೆಗೆ ಸ್ಪಂದನೆಯೇ ಇಲ್ಲ ಎನ್ನಲಾಗುತ್ತದೆ.

ಹಿರಿಯ ನಾಗರಿಕರಿಗೆ ಅಮರಿಕೊಳ್ಳುವ ಅನಾರೋಗ್ಯದ ಸಮಸ್ಯೆ ಎಲ್ಲರಿಗೂ ತಿಳಿದ ವಿಷಯವೇ. 70 ವರ್ಷ ಆದವರಿಗೆ ಆರೋಗ್ಯವಿಮೆ ಭಾಗ್ಯವಿಲ್ಲ, ಅಕಸ್ಮಾತ್ ಇದ್ದರೂ ಹಲವು ಷರತ್ತುಗಳಿಗೆ ಅದು ಒಳಪಟ್ಟಿರುತ್ತದೆ. ಅವರು ಯಾವುದೇ ಸಾಲಕ್ಕೆ ಅರ್ಹರಿರುವುದಿಲ್ಲ, ವಾಹನ ಚಾಲನಾ ಪರವಾನಗಿ/ಅನುಮತಿಯನ್ನು ಪಡೆಯಲಾಗುವುದಿಲ್ಲ. ಅವರಿಗೆ ಯಾರೂ ಉದ್ಯೋಗವನ್ನು ನೀಡುವುದಿಲ್ಲವಾದ್ದರಿಂದ, ಬದುಕಿನ ಬಂಡಿಯನ್ನು ಎಳೆಯಲು ಅವರು ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕಾಗುತ್ತದೆ. ಅವರು ತಮ್ಮ ಸೇವಾವಧಿ ಪೂರ್ತ (60-65 ವರ್ಷದವರೆಗೆ) ಸರಕಾರಕ್ಕೆ



ತೆರಿಗೆಯನ್ನೂ, ಆರೋಗ್ಯ-ಜೀವವಿಮಾ ಪ್ರೀಮಿಯಂ ಅನ್ನೂ ಕಟ್ಟಿರುತ್ತಾರೆ; ಆದರೂ ನಿವೃತ್ತಿಯ ನಂತರವೂ ಅವರು ಎಲ್ಲಾ ರೀತಿಯ ತೆರಿಗೆಯನ್ನು ನೀಡಬೇಕು. ವಿಶೇಷವೆಂದರೆ, ಜೀವನರಥ ಓಡಿಸಲೆಂದು ನೀಡಲಾಗುವ ಅಲ್ಪಮೊತ್ತದ ಪಿಂಚಣಿಗೂ ತೆರಿಗೆ ನೀಡಬೇಕು. ಹೀಗಾಗಿ 'ಇದು ಸಂಬಳವಲ್ಲ, ಬದುಕಲು ನೀಡುವ ಜೀವನಾಂಶ. ಇದಕ್ಕೂ ತೆರಿಗೆಯೇ?' ಎಂದು ಹಲವು ವಯೋವೃದ್ಧರು ಕೇಳುತ್ತಿದ್ದಾರೆ.

ನಿವೃತ್ತರಿಗೆಂದು ಯಾವುದೇ ರೀತಿಯ ವಿನಾಯಿತಿ ಅಥವಾ ಸ್ಕೀಮ್‌ಗಳು ಇಲ್ಲ. ಬ್ಯಾಂಕ್ ಠೇವಣಿ ಮೇಲಿನ ಬಡ್ಡಿದರವು ಇಳಿಯುತ್ತಿರುವುದರಿಂದ ಅವರ ಆದಾಯದಲ್ಲಿ ಕುಸಿತವಾಗುತ್ತಿದೆ. 'ಬಾಗಿದ ಬೆನ್ನಿನ ಮೇಲೆ ಇನ್ನೊಂದು ಗುದ್ದು' ಎನ್ನುವಂತೆ ಈ ಬಡ್ಡಿ ಆದಾಯಕ್ಕೆ ತೆರಿಗೆ ಬೇರೆ! ಒಂದು ಕಾಲಕ್ಕೆ, ಹಿರಿಯರು ಇರಿಸುವ ಠೇವಣಿ ಮೇಲೆ ಶೇ.1ರಷ್ಟು ಹೆಚ್ಚುವರಿ ಬಡ್ಡಿ ನೀಡಲಾಗುತ್ತಿತ್ತು, ಅದನ್ನೀಗ ಶೇ.0.50ಕ್ಕೆ ಇಳಿಸಲಾಗಿದೆ. ಸರಕಾರವು ಜನಕಲ್ಯಾಣಕ್ಕಾಗಿ ಸಾಕಷ್ಟು ಅನುದಾನವನ್ನು ನೀಡುತ್ತದೆ. ಆದರೆ ಹಿರಿಯ ನಾಗರಿಕರಿಗೆ ಸಂಬಂಧಿಸಿ ಯಾವುದೇ ಸ್ಕೀಮ್ ಇರುವುದಿಲ್ಲ. ಇವರಿಗೆ ರೈಲು ಮತ್ತು ವಿಮಾನ ಪ್ರಯಾಣದಲ್ಲಿ ನೀಡಲಾಗುತ್ತಿದ್ದ ಶೇ.50ರ ವಿನಾಯಿತಿಯನ್ನೂ ತೆಗೆದುಹಾಕಲಾಗಿದೆ. ಅದನ್ನು ಮರಳಿ ನೀಡಲಾಗುವುದೆಂಬ ಮಾತು ಕೇವಲ ಭರವಸೆಯಾಗಿಯೇ ಉಳಿದಿದೆ. ಈ ವಿಷಯದಲ್ಲಿ ಏನಾದರೂ ಕೇಳಿದರೆ, 'ಇಂದಲ್ಲದಿದ್ದರೆ ನಾಳೆ ಆಗುತ್ತದೆ' ಎಂಬ ಉತ್ತರ ಸಿಗುತ್ತದೆ. ಆ ನಾಳೆಗಾಗಿ ನಿವೃತ್ತರು ಕಾಯುತ್ತಿದ್ದಾರೆ...

ನಿವೃತ್ತರಿಗೆ ನೀಡುವ ಪಿಂಚಣಿಯಲ್ಲಿ ಏಕರೂಪತೆ ಇರುವುದಿಲ್ಲ. ಕೆಲವರಿಗೆ ಹಳೆಯ ಪಿಂಚಣಿ ಸ್ಕೀಮ್, ಹಲವರಿಗೆ ಹೊಸ ಸ್ಕೀಮ್, ಮತ್ತೆ ಕೆಲವರಿಗೆ ಇತ್ತೀಚಿನ ಯುಪಿಎಸ್ ಸ್ಕೀಮ್. ಕೆಲವರ್ಗದ ಪಿಂಚಣಿದಾರರಿಗೆ, ಪ್ರತಿ ಬಾರಿ ವೇತನ ಪರಿಷ್ಕರಣೆಯಾದ ನಂತರ ಪಿಂಚಣಿಯೂ ಪರಿಷ್ಕರಣೆಯಾಗುತ್ತದೆ. ಆದರೆ ಮತ್ತೆ ಕೆಲವರಿಗೆ ಮೊದಲ ತಿಂಗಳು ತೆಗೆದುಕೊಂಡ ಪಿಂಚಣಿಯು ಕೊನೆಯ ಉಸಿರು ಇರುವವರೆಗೂ ಹಾಗೆಯೇ ಇರುತ್ತಿದ್ದು, ಆಗೊಮ್ಮೆ ಈಗೊಮ್ಮೆ ತುಟ್ಟಿಭತ್ಯೆ ರೀತಿಯಲ್ಲಿ ಸ್ವಲ್ಪ 'ಕಾಳು' ಹಾಕಲಾಗುತ್ತದೆ. ಬ್ಯಾಂಕ್‌ನ ನಿವೃತ್ತ ಉದ್ಯೋಗಿಗಳಿಗೆ ಪಿಂಚಣಿಯ ಉನ್ನತೀಕರಣದ ಭಾಗ್ಯವಿಲ್ಲ, ಅದಕ್ಕಾಗಿ ಅವರು ಎರಡು ದಶಕಗಳಿಂದ ಹೋರಾಡುತ್ತಿದ್ದಾರೆ. 'ಇಂದಲ್ಲ ನಾಳೆ ಆಗುತ್ತದೆ' ಎಂದು ಶಬರಿಯಂತೆ ನಿರೀಕ್ಷಿಸಿದ ಇಂಥ ಸಾವಿರಾರು ಮಂದಿ ಇಹಲೋಕ ತ್ಯಜಿಸಿದ್ದಾರೆ.

ನಮ್ಮ ದೇಶದಲ್ಲಿ ಪಿಂಚಣಿ ವಿಷಯದಲ್ಲಿ ಜನಪ್ರತಿನಿಧಿಗಳಿಗೊಂದು ನಿಯಮಾವಳಿಯಾದರೆ, ಜನಸಾಮಾನ್ಯರಿಗೊಂದು ನಿಯಮಾವಳಿ. ಜನಪ್ರತಿನಿಧಿಗಳು ತಮ್ಮ ಹುದ್ದೆಗೆ ಅನುಸಾರವಾಗಿ ಪಿಂಚಣಿ ಪಡೆಯುತ್ತಾರಂತೆ. ಶಾಸಕರಾಗಿ ಒಂದು ಪಿಂಚಣಿ, ಮಂತ್ರಿಯಾಗಿ ಒಂದು, ಉಪರಾಷ್ಟ್ರಪತಿಯಾಗಿ ಒಂದು, ಪ್ರಧಾನಿಯಾಗಿ ಒಂದು ಮತ್ತು ರಾಷ್ಟ್ರಪತಿಯಾಗಿ ಒಂದು ಹೀಗೆ ಎಲ್ಲಾ ಹುದ್ದೆಗಳಿಗೆ ಪಿಂಚಣಿ ಪಡೆಯುತ್ತಾರಂತೆ. ಉಪರಾಷ್ಟ್ರಪತಿ ಸ್ಥಾನಕ್ಕೆ ಇತ್ತೀಚೆಗಷ್ಟೇ ರಾಜೀನಾಮೆ ನೀಡಿದ ಜಗದೀಪ್ ಧನಕರ್ ಅವರು, ಹಿಂದೊಮ್ಮೆ ರಾಜಸ್ಥಾನದಲ್ಲಿ ಶಾಸಕರಾಗಿದ್ದರು; ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ, ರಾಜಸ್ಥಾನದಲ್ಲಿ ಶಾಸಕರಾಗಿದ್ದ ಬಾಬತ್ತನ್ನೂ ಮುಂದಿಟ್ಟುಕೊಂಡು ಅವರು ಪಿಂಚಣಿಗೆ ಅರ್ಜಿ ಗುಜರಾಯಿಸಿದ್ದಾರೆ. ಅದು ಸದ್ಯದಲ್ಲಿಯೇ ಒಪ್ಪಿಗೆ ಪಡೆಯುವ ಸಾಧ್ಯತೆ ಇದೆಯಂತೆ! ಮಾಧ್ಯಮಗಳ ವರದಿಯ ಪ್ರಕಾರ ಅವರು ಶಾಸಕರಾಗಿ 42,000 ರುಪಾಯಿ, ಲೋಕಸಭಾ ಸದಸ್ಯರಾಗಿ 45,000 ರುಪಾಯಿ, ಉಪರಾಷ್ಟ್ರಪತಿಯಾಗಿ 2,00,000 ರುಪಾಯಿ- ಹೀಗೆ ಮೂರು ರೀತಿಯ ಪಿಂಚಣಿಯನ್ನು ಪಡೆಯುತ್ತಾರಂತೆ. ಸಾಲದೆಂಬಂತೆ, 3-4 ಜನ ಸಿಬ್ಬಂದಿಗಳು, ಬಂಗಲೆ, ವೈದ್ಯರ ಸೌಲಭ್ಯಗಳು ಬೇರೆ! ಹಾಗೆಯೇ, ಇಂಥ ಜನಪ್ರತಿನಿಧಿಗಳ ವಯಸ್ಸು 70 ವರ್ಷವನ್ನು ಮೀರಿದರೆ, ಪಿಂಚಣಿಯನ್ನು ಶೇ.20ರಷ್ಟು ಹೆಚ್ಚಿಸಲಾಗುವುದು, ಕಾಲಕಾಲಕ್ಕೆ ಪಿಂಚಣಿಯಲ್ಲಿ ಉನ್ನತೀಕರಣ ಬೇರೆ. ಜನಸಾಮಾನ್ಯರಿಗೆ ಇದು ಸಾಧ್ಯವೇ? ಒಂದು ಪಿಂಚಣಿಯೇ ಕನಸಾಗಿರುವಾಗ ಮೂರು ಬಗೆಯ ಪಿಂಚಣಿಗಳು ನನಸಾಗುವುದೆಲ್ಲಿಂದ ಬಂತು! 'ಜನಪ್ರತಿನಿಧಿಯೇತರ' ಪಿಂಚಣಿದಾರರಿಗೆ ಇಂಥ ಹೆಚ್ಚಳ ಮತ್ತು ಉನ್ನತೀಕರಣ ಗಗನಕುಸುಮವೇ!

'ಪಿಂಚಣಿಯ ಉನ್ನತೀಕರಣ ಮತ್ತು ಹೆಚ್ಚಳವು ಯಾವುದೇ ಪಿಂಚಣಿದಾರರ ಹಕ್ಕು' ಎನ್ನುವ ನ್ಯಾಯಾಲಯದ ಮಹತ್ವದ ತೀರ್ಪು ಇದೆ ಎಂದು ಹೇಳಲಾಗುತ್ತಿದ್ದು, ಅದನ್ನು ಪಡೆಯಲು ಹೋರಾಡಬೇಕು. ಏಕೆಂದರೆ, ಎಷ್ಟೇ ವರ್ಷ ಸೇವೆ ಸಲ್ಲಿಸಿರಲಿ, 80-90 ವರ್ಷ ವಯಸ್ಸಾಗಿರಲಿ, ಅಂಥ ಜನಸಾಮಾನ್ಯರಿಗೆ ಪಿಂಚಣಿಯ ಉನ್ನತೀಕರಣವಿಲ್ಲ. ಕೆಲವು ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಗಳು ಈ ವಿಷಯವನ್ನು ಚರ್ಚಿಸಲು ನಿವೃತ್ತರೊಡನೆ contractual relationship ಇಲ್ಲ ಎಂದು ಹೇಳಿ ನುಣುಚಿಕೊಳ್ಳುತ್ತಿವೆಯಂತೆ. ಸೇವೆಗೆ ಸಂಬಂಧಪಟ್ಟ ಪ್ರಕರಣಗಳು ಇತ್ಯರ್ಥಗೊಳ್ಳಲು ಸುದೀರ್ಘ ಸಮಯ ಹಿಡಿಯುತ್ತಿದೆ. ಅಂತೆಯೇ, ಇಂಥ ಹಿರಿಯ ನಾಗರಿಕರ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆಗೆ ತೆಗೆದುಕೊಳ್ಳುವಂತೆ ಸಂಜಯ್ ರಾವತ್ ಹೀಗೆ ಗಟ್ಟಿದನಿಯಲ್ಲಿ ಒತ್ತಾಯಿಸಿದಂತೆ ಕಾಣುತ್ತದೆ.

ಪಿಂಚಣಿದಾರರ ಸಮಸ್ಯೆಗಳು, ಪಿಂಚಣಿ ವ್ಯವಸ್ಥೆಯಲ್ಲಿನ ಲೋಪದೋಷಗಳು, ಪಿಂಚಣಿಯ ಉನ್ನತೀಕರಣ ಮುಂತಾದ ವಿಷಯಗಳಿಗೆ ಸಂಬಂಧಿಸಿ ಪಿಂಚಣಿದಾರರು ನ್ಯಾಯಾಲಯದಲ್ಲಿ ಸುದೀರ್ಘ ಅವಧಿಯವರೆಗೆ ಹೋರಾಡುವುದನ್ನು ತಪ್ಪಿಸಲು ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಅವರು ಒಂದಿಷ್ಟು ಬೇಡಿಕೆಗಳನ್ನು/ಸಲಹೆಗಳನ್ನು ಸರಕಾರದ ಸಮ್ಮುಖದಲ್ಲಿ ಮಂಡಿಸಿದ್ದಾರೆ. ''60 ವರ್ಷ ದಾಟಿದ ಪ್ರತಿಯೊಬ್ಬರಿಗೂ ಪಿಂಚಣಿ ನೀಡಬೇಕು, ಪಿಂಚಣಿದಾರರ ಸ್ಟೇಟಸ್ ಪ್ರಕಾರ ಪಿಂಚಣಿ ನೀಡಬೇಕು, ಪಿಂಚಣಿದಾರರ ಕೊನೆಯುಸಿರು ಇರುವವರೆಗೆ ಅವರಿಗೆ ವಿಮಾ ಸೌಲಭ್ಯನೀಡಿ ಸರಕಾರವೇ ಅದರ ಪ್ರೀಮಿಯಂ ಅನ್ನು ಭರಿಸಬೇಕು, ಆದ್ಯತೆಯ ಮೇರೆಗೆ ಹಿರಿಯ ನಾಗರಿಕರ ಪ್ರಕರಣಗಳನ್ನು ನ್ಯಾಯಾಲಯಗಳು ವಿಚಾರಣೆಗೆ ತೆಗೆದುಕೊಂಡು ತೀರ್ಪು ನೀಡಬೇಕು, ಎಲ್ಲಾ ಪಟ್ಟಣ-ನಗರಗಳಲ್ಲಿ ಹಿರಿಯ ನಾಗರಿಕರಿಗಾಗಿ ವಸತಿ ಸೌಲಭ್ಯ ಕಲ್ಪಿಸಬೇಕು'' ಎಂದು ತಿಳಿಸಿರುವ ಸಂಜಯ್ ರಾವತ್ ಅವರು, ''ಹಿರಿಯ ನಾಗರಿಕರ ಬಳಿ ಇರುವ ವಾಹನಗಳು ಹೆಚ್ಚು ಬಳಕೆಯಾಗದೆ ಇರುವುದರಿಂದ, 10-15 ವರ್ಷಕ್ಕೆ ಕಾರುಗಳನ್ನು ಸ್ಕ್ರ್ಯಾಪ್ ಮಾಡುವ ನಿಯಮಾವಳಿಯನ್ನು ಹಿರಿಯ ನಾಗರಿಕರಿಗೆ ಅನ್ವಯಿಸಬಾರದು'' ಎಂದೂ ಸರಕಾರವನ್ನು ಆಗ್ರಹಿಸಿದ್ದಾರೆ.

ಹಾಗೆ ನೋಡಿದರೆ, ನಿವೃತ್ತರ ಮತ್ತು ಹಿರಿಯ ನಾಗರಿಕರ ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಸರಕಾರದ ಮುಂದೆ ನಿರಂತರವಾಗಿ ಮಂಡಿಸಲಾಗುತ್ತಿದೆ. ಸಂಸದರ ಮೂಲಕ ನೂರಾರು ಮನವಿಗಳನ್ನು ಸಂಬಂಧಪಟ್ಟ ಸಚಿವರಿಗೆ ಸಲ್ಲಿಸಲಾಗಿದೆ. ಆದರೆ ಬಹುತೇಕ ಸಂಸದರು ಸಂಜಯ್ ರಾವತ್ ಅವರ ರೀತಿಯಲ್ಲಿ ಹೀಗೆ ಗಟ್ಟಿದನಿ ಎತ್ತಿ ಸರಕಾರದ ಗಮನ ಸೆಳೆದಿರಲಿಲ್ಲ. ಸರಕಾರವು ಈ ಬಾರಿಯಾದರೂ, ನಿರ್ಲಕ್ಷಿಸಲ್ಪಟ್ಟ ನಿವೃತ್ತರ ಮತ್ತು ಹಿರಿಯ ನಾಗರಿಕರ ಸಮಸ್ಯೆಗಳತ್ತ ಕಣ್ಣು ಹಾಯಿಸಬಹುದೇ ಎಂದು ಕಾತರದಿಂದ ಎದುರುನೋಡಲಾಗುತ್ತಿದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಶಾಲು, ಕಾಮನ ಕೊಪ್ಪಲು**
ಭಟ್ರೇ, ಭಾರತವು ರಷ್ಯಾದಿಂದ ಎಣ್ಣೆ ತರಿಸುತ್ತಿರುವುದನ್ನು ಕಂಡು ಕಣ್ಣು ಕೆಂಪು ಮಾಡಿಕೊಂಡಿರುವ ಟ್ರಂಪ್ ಅನುಸರಿಸುತ್ತಿರುವ ನೀತಿ?
– **ಎಣ್ಣೆ-ಸೀಗೆಕಾಯಿ ನೀತಿ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಗಣೇಶೋತ್ಸವ ಆಚರಣೆಯಲ್ಲಿ ಗಣೇಶ ಸ್ತೋತ್ರವನ್ನು ಹಾಡಬೇಕಾ?
– **ಯಾವ ಕಾಲದಲ್ಲಿದ್ದೀಯಾ? 'ಬ್ಯಾಂಗಲ್ ಬಂಗಾರಿ' ಹಾಡಿ ನೋಡು!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, 'ಆ್ಯಂಕರ್' ಅನುಶ್ರೀ ತಮ್ಮ ಹೆಸರನ್ನು ಹೇಗೆ ಕಡೆಗೂ ಸಾರ್ಥಕಪಡಿಸಿಕೊಂಡರು?
– **ದಾಂಪತ್ಯದಲ್ಲಿ ಲಂಗರು ಹಾಕಿದ್ದರಿಂದ!**

- **ಚಂಚಲಾ ಚಿಟಗುಪ್ಪಿ, ಮೈಸೂರು**
ಭಟ್ರೇ, ಸ್ವಾಮಿಗಳು ಕಲೆತುಹೋದರೆ ಅದು ನಿಯೋಗ, ಮಠದ ಪೌಳಿಯಲ್ಲಿ ಮೂಗು ಹಿಡಿದು ಕೂತರೆ ಯೋಗ, ಸರಕಾರದ ಕೆಂಗಣ್ಣಿಗೆ ಗುರಿಯಾದರೆ?
– **ವಿಚಾರಣಾ ಆಯೋಗ!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಮುಂಜಾನೆ ನೀವು ನನ್ನೊಂದಿಗೆ ಈಜಿಪ್ಟ್ ಮರಳು ಗಾಡಿನಲ್ಲಿ ಒಂಟೆ ಸವಾರಿ ಮಾಡುತ್ತಿದ್ದ ಕನಸು?
– **ದಿನವಿಡೀ 'ಪ್ರವಾಸಿ ಪ್ರಪಂಚ' ಓದಿದ್ದರ ಪ್ರಭಾವ!**

- **ರಾಘಣ್ಣ, ಮೈಸೂರು**
ಭಟ್ರೇ, ಸಾಹಿತಿಗಳನ್ನು ಹದ್ದು'ಬಸ್ತಿ'ನಲ್ಲಿ ಇಡುವುದು ಅಂದರೆ ಏನು?
– **ದೀಪಾ ಬಸ್ತಿಯವರ ಪಾಡನ್ನು ನೋಡಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ!**

- **ಸಂತೋಷ ಹೆಗ್ಗಾರ, (ಇಮೇಲ್ ಮೂಲಕ)**
ಭಟ್ರೇ, ಚಹಾ ಕುಡಿಯುವುದರ ಅನುಭವವೇನು?
– **ಅದು ಬಿಸ್ಕತ್ ತಿನ್ನುವುದಕ್ಕೆ ರಹದಾರಿ!**

- **ವೆಂಕಟೇಶ ಜೋಶಿ, ಮಂಡ್ಯ**
ಭಟ್ರೇ, ಹೊಣೆಯರಿತು ಕುಡಿಯಬೇಕು ಅಂತಾರಲ್ಲ?
– **ಒಂದು ಹನಿಯನ್ನೂ ಚೆಲ್ಲದೇ ಕುಡಿ ಅಂತ ಅರ್ಥ!**

- **ವಿನೋದ ನಾಯಕ, ಶಿವಮೊಗ್ಗ**
ಭಟ್ರೇ, ಕೆಲವು ಸಲ ನಾನು ವರ್ಕ್ ಔಟ್ ಮಾಡ್ತೇನೆ, ಕೆಲ ಸಲ ಬಿಯರ್ ಕುಡಿಯುತ್ತೇನೆ, ನೀವು?
– **ನಾನು ಎರಡನ್ನೂ ಒಟ್ಟಿಗೇ ಮಾಡುತ್ತೇನೆ!**

- **ಶಂಕರ ಬಿ., ಗುಬ್ಬಿ**
ಭಟ್ರೇ, ಯಾವುದೇ ಸಮಸ್ಯೆಯಿಂದ ಹೇಗೆ ಜಾರಿಕೊಳ್ಳಬಹುದು?
– **ಎಣ್ಣೆಯಿಂದ!**

- **ಯೋಗೀಶ ಪಂಜೆ, ಉಡುಪಿ**
ಭಟ್ರೇ, ಅರ್ಥವಿಲ್ಲದ ಕ್ರಿಯೆ ಅಂದುಕೊಂಡರೂ ಏನಾದರೂ ಅರ್ಥವಿರಲು ಸಾಧ್ಯವಾ?
– **ಮಿಸ್ಡ್ ಕಾಲ್ ಕೊಟ್ಟು ನೋಡು!**

ಸರಳೀಕೃತ ತೆರಿಗೆ: ವಿಕಸಿತ ಭಾರತದತ್ತ ದಿಟ್ಟಹೆಜ್ಜೆ!

ಜನಸಾಮಾನ್ಯರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಹೊಸ ಸರಳೀಕೃತ ಮತ್ತು ಅಗ್ಗದ ತೆರಿಗೆ ವ್ಯವಸ್ಥೆಯನ್ನು ಘೋಷಿಸಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಜನಸಾಮಾನ್ಯರು, ಮಧ್ಯಮ ಆದಾಯದ ಕುಟುಂಬಗಳು, ರೈತ ಸಮುದಾಯ, ಸಣ್ಣ ಉದ್ದಿಮೆದಾರರು ಪ್ರಯೋಜನ ಪಡೆಯಲಿದ್ದಾರೆ.



ನವಪರ್ವ

ರವೀ ಸಜಂಗದ್ದೆ
vveditoped@gmail.com

2047ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುವ ಸಂಕಲ್ಪದೊಂದಿಗೆ ನಮ್ಮ ಕೇಂದ್ರ ಸರಕಾರವು ಕಾಲಕಾಲಕ್ಕೆ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಇದರ ಜತೆಗೆ, 2038ರ ವೇಳೆಗೆ ಅಮೆರಿಕವೂ ಸೇರಿದಂತೆ ಇತರ ದೇಶಗಳನ್ನು ಹಿಂದಿಕ್ಕಿ ಜಗತ್ತಿನ ಎರಡನೆಯ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವಲ್ಲಿನ ತಯಾರಿ ಮತ್ತು ಕಾರ್ಯತಂತ್ರ ಈಗಾಗಲೇ ಜಾರಿಯಲ್ಲಿದೆ. ದೇಶದ ಸರ್ವತೋಮುಖ ಅಭಿವೃದ್ಧಿ ಮತ್ತು ಜನರ ಖರೀದಿ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಬಹುತೇಕ ದಿನಬಳಕೆಯ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸುವ ಮೂಲಕ ನವರಾತ್ರಿಯ ಸಂಭ್ರಮವನ್ನು ಜಿಎಸ್‌ಟಿ ಮಂಡಳಿ ಹೆಚ್ಚಿಸಿದೆ. ಈ ಸರಕು ಮತ್ತು ಸೇವಾ ತೆರಿಗೆಯ ಕಡಿತವನ್ನು 'ಸ್ವಾತಂತ್ರ್ಯೋತ್ತರ ಭಾರತದ ಅತಿ ದೊಡ್ಡ ಸುಧಾರಣೆ' ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ತೆರಿಗೆ ಇಳಿಕೆಯಿಂದಾಗಿ ಸರಕಾರಗಳ ಬೊಕ್ಕಸಕ್ಕೆ 84,000 ಕೋಟಿ ರುಪಾಯಿಗಳಷ್ಟು ನಷ್ಟ ಆಗಬಹುದೆಂದು ಅಂದಾಜಿಸಲಾಗಿದ್ದರೂ ಸರಕಾರದ ವಿಶ್ಲೇಷಣೆಗಳ ಪ್ರಕಾರ ಅದು ಸುಮಾರು 48,000 ಕೋಟಿಯಾಗಿದೆ. ತಿಂಗಳಿಗೆ ಸರಾಸರಿ 1.55 ಲಕ್ಷ ಕೋಟಿ ರುಪಾಯಿಗಳ ಆದಾಯವಿರುವುದರಿಂದ ಮತ್ತು 'ಜನರ ಹಿತ ಕಾಪಾಡುವ ಧ್ಯೇಯ'ದ ಮುಂದೆ ಇದು ಸಣ್ಣ ಮೊತ್ತ! ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದ ಖರೀದಿ, ವಹಿವಾಟು ವೃದ್ಧಿಯು ಈ ಮೊತ್ತವನ್ನು ಸರಿದೂಗಿಸಬಹುದು ಎನ್ನುವುದು ಸದ್ಯದ ನಿರೀಕ್ಷೆ. ಒಟ್ಟಿನಲ್ಲಿ ನಿರಂತರ ಬೆಲೆ ಏರಿಕೆ ಮತ್ತು ದಿನಬಳಕೆಯ ವಸ್ತುಗಳ ದುಬಾರಿ ದರಗಳಿಂದ ಹೈರಾಣಾಗಿದ್ದ ದೇಶದ ನಾಗರಿಕರು ಒಂದಷ್ಟು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಈ ನವೀಕೃತ ಮತ್ತು ಕಡಿತಗೊಂಡ/ಶೂನ್ಯಗೊಂಡ ತೆರಿಗೆ ದರಗಳು ನವರಾತ್ರಿಯ ಸಂಭ್ರಮದ ಮೊದಲ ದಿನವಾದ ಇದೇ ಸೆಪ್ಟೆಂಬರ್ 22ರಿಂದ ಜಾರಿಯಾಗಲಿವೆ. ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಕೆಂಪುಕೋಟೆಯಿಂದ ಮಾತನಾಡುವಾಗ ನರೇಂದ್ರ ಮೋದಿಯವರು, ದೀಪಾವಳಿ ಸಂದರ್ಭದಲ್ಲಿ ಹಲವು ವಸ್ತು ಮತ್ತು ಸೇವೆಗಳ ತೆರಿಗೆ ಇಳಿಸುವ ಸೂಚನೆ ನೀಡಿದ್ದರು. ಕೇಂದ್ರದ ಬಹುತೇಕ ಯೋಜನೆಗಳನ್ನು ಉದ್ದೇಶಿತ ದಿನಕ್ಕಿಂತ ಮೊದಲೇ ಪೂರ್ಣಗೊಳಿಸಿ ಜನರ ಅನುಕೂಲಕ್ಕೆ ಅನುವುಮಾಡುವ ಪರಿಪಾಠ ಬೆಳೆಸಿಕೊಂಡಿರುವಂತೆ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ದೀಪಾವಳಿಗಿಂತ ಒಂದು ತಿಂಗಳು ಮೊದಲೇ ತೆರಿಗೆ ಕಡಿತವನ್ನು ಕಾರ್ಯಗತಗೊಳಿಸಿದ್ದಾರೆ! ಅಲ್ಲಿಗೆ 'ಸೆಪ್ಟೆಂಬರ್ ಕ್ರಾಂತಿ' ನಿಜವಾಗಿದೆ! ಪ್ರಗತಿ ಸ್ನೇಹಿ, ವ್ಯವಹಾರ ಸ್ನೇಹಿ, ಜನಸ್ನೇಹಿ ಮತ್ತು ಪ್ರಕ್ರಿಯೆ ಸ್ನೇಹಿ ಎಂದು ಸದ್ಯದ 'ಜಿಎಸ್‌ಟಿ-2' ಸುಧಾರಣಾ ಕ್ರಮಗಳು ಕರೆಸಿಕೊಳ್ಳುತ್ತಿವೆ, ಮತ್ತದು ದಿಟವೂ ಹೌದು! ಮುಂದಿನ ದಿನಗಳಲ್ಲಿ, ದೇಶದ ಆರ್ಥಿಕತೆಯ ವೇಗ ಹೆಚ್ಚಿಸುವಲ್ಲಿ ಇಂಥಾ ಸುಧಾರಣಾ ಕ್ರಮಗಳು ಹೆಚ್ಚಿನ ಪುಷ್ಟಿ ನೀಡಲಿವೆ. ಹಬ್ಬದ ದಿನಗಳಿಂದಲೇ ಈ ಪ್ರಯೋಜನವನ್ನು ಜನರು ಬಳಸುವುದರಿಂದ ಹಬ್ಬದ ಮೆರುಗು ಮತ್ತಷ್ಟು ಹೆಚ್ಚಾಗಲಿದೆ. ತೆರಿಗೆ ಕಡಿತದಿಂದಾಗಿ ಕೃಷಿ, ವೈದ್ಯಕೀಯ ಸೇವೆ, ಇನ್ಶೂರೆನ್ಸ್, ಆಟೊಮೊಬೈಲ್, ಎಫ್‌ಎಂಸಿಜಿ ಉದ್ಯಮಕ್ಕೆ ಹೆಚ್ಚಿನ ಶಕ್ತಿ ಮತ್ತು ವ್ಯವಹಾರ ಬರಲಿದೆ. ಹೀಗೆ ಒದಗಲಿರುವ ತೆರಿಗೆ ಕಡಿತವು ಜನರಿಗೆ ಒಂದಷ್ಟು ಹೆಚ್ಚಿನ ಹಣವನ್ನು ವಿನಿಯೋಗಿಸುವ ಸಾಮರ್ಥ್ಯವನ್ನು ಪರೋಕ್ಷವಾಗಿ ತುಂಬಲಿದೆ- ಅಂದರೆ, ಅದು ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಎಲ್ಲಾ ಸಕಾರಣಗಳಿಂದಾಗಿ ಮುಂದಿನ ಎರಡು-ಮೂರು ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ.1ರಿಂದ 1.2ರಷ್ಟು ಹೆಚ್ಚಾಗಬಹುದೆಂಬುದು ಆರ್ಥಿಕ ವಿಶ್ಲೇಷಕರ ಸದ್ಯದ ಲೆಕ್ಕಾಚಾರ.

ತೆರಿಗೆ ಸುಧಾರಣಾ ಕ್ರಮದ ಭಾಗವಾಗಿ 2017ರ ಜುಲೈ 1ರಿಂದ ದೇಶಾದ್ಯಂತ ಹೊಸ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಾಯಿತು. 'ಗಬ್ಬರ್ ಸಿಂಗ್ ಟ್ಯಾಕ್ಸ್' ಎಂದು ಈ ವ್ಯವಸ್ಥೆಯನ್ನು ಪ್ರತಿಪಕ್ಷಗಳು ಟೀಕಿಸಿದವು. ಹೊಸತರಲ್ಲಿ ಶೇ.5, ಶೇ.12, ಶೇ. 18, ಶೇ. 28, ಹೀಗೆ ನಾಲ್ಕು ಸ್ತರಗಳು ಇದ್ದವು. ದಿನಬಳಕೆಯ ವಸ್ತು ಮತ್ತು ಸೇವೆಗಳಲ್ಲಿ ಹೆಚ್ಚಿನವು ಶೇ.12 ಮತ್ತು ಶೇ.28ರ ಸ್ತರದ ತೆರಿಗೆಯಡಿ ಆರಂಭದ ದಿನಗಳಲ್ಲಿ ಕಾಣಿಸಿಕೊಂಡವು. ಹೋಟೆಲ್ ತಿಂಡಿಗಳ ಮೇಲೆ ಆರಂಭದ ದಿನಗಳಲ್ಲಿ ಶೇ.18 ತೆರಿಗೆ ಇದ್ದಂತೆ ನೆನಪು ಮತ್ತು ಜನರು ಇಂಥಾ ಅಪಸವ್ಯಗಳಿಂದಾಗಿ ಹೆಚ್ಚು

ಮೊತ್ತವನ್ನು ಖರ್ಚು ಮಾಡಬೇಕಾಯಿತು. ಆಗ ನನ್ನನ್ನೂ ಸೇರಿದಂತೆ ಹೆಚ್ಚಿನವರು ಈ ವ್ಯವಸ್ಥೆಯ ಕುರಿತು ಹಿಡಿಶಾಪ ಹಾಕಿದ್ದರು.

ತಿಂಗಳುಗಳು ಕಳೆದಂತೆ, ವರ್ಷಗಳು ಕಳೆದಂತೆ ದಿನಬಳಕೆಯ ವಸ್ತು ಮತ್ತು ಸೇವೆಗಳು ಕಡಿಮೆ ತೆರಿಗೆಯ ವ್ಯಾಪ್ತಿಗೆ ಬಂದವು. ಜನರು ಸರಕಾರದ ಈ ನಡೆಯನ್ನು ಸ್ವಾಗತಿಸಲು ಆರಂಭಿಸಿದರು. ಇನ್ನೂ ಹೆಚ್ಚಿನ ತೆರಿಗೆ ಕಡಿತದ ಕೂಗು ಆಗೀಗ ಬರುತ್ತಿತ್ತು. ಆದರೆ ಹೆಚ್ಚಿನ ರಾಜ್ಯ ಸರಕಾರಗಳು ತಮ್ಮ ಪಾಲಿನ ತೆರಿಗೆ ಆದಾಯಕ್ಕೆ ಕತ್ತರಿ ಬೀಳುವ ಭೀತಿಯಿಂದ ತೆರಿಗೆ ಕಡಿತವನ್ನು ವಿರೋಧಿಸುತ್ತಲೇ ಬಂದವು. ಮೊನ್ನೆ ನಡೆದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಮಹತ್ವದ ನಿರ್ಣಯ ತೆಗೆದುಕೊಂಡು ಜನರಿಗೆ ಮತ್ತಷ್ಟು ನಿರುಮ್ಮಳ ಭಾವವನ್ನು ಕೊಡಲಾಯಿತು. ಈ ಕ್ರಾಂತಿಕಾರಿ ತೆರಿಗೆ ಇಳಿಕೆಯಿಂದ ಆಗುವ ನಷ್ಟದಲ್ಲಿ ಶೇ.50ರಷ್ಟು ಪಾಲು ರಾಜ್ಯ ಸರಕಾರದ್ದು. ಈ ನಷ್ಟವನ್ನು ಭರಿಸುವ, ಸರಿದೂಗಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಸದ್ಯಕ್ಕೆ ಯಾವುದೇ ಸ್ಪಷ್ಟ ನಿರ್ಧಾರ ಮತ್ತು ನಿರ್ಣಯವನ್ನು ತೆಗೆದುಕೊಂಡಂತೆ ಕಾಣುತ್ತಿಲ್ಲ. ತಮ್ಮ ಪಾಲಿನ ತೆರಿಗೆ ಆದಾಯದ ಮೊತ್ತವನ್ನು ಕೇಂದ್ರ ಸರಕಾರ ಸರಿಯಾಗಿ ನೀಡುತ್ತಿಲ್ಲ ಎನ್ನುವ ಕೂಗನ್ನು 'ಎನ್‌ಡಿಎ'ಯೇತರ ರಾಜ್ಯ ಸರಕಾರಗಳು ನಿರಂತರ ಮಾಡುತ್ತಿವೆ. ಈ ತೆರಿಗೆ ಕಡಿತವು ಎಲ್ಲಾ ರಾಜ್ಯ ಸರಕಾರಗಳ ತೆರಿಗೆ ಆದಾಯವನ್ನು ಕಡಿಮೆ ಮಾಡಿರುವುದು ಸದ್ಯಕ್ಕೆ ರಾಜ್ಯ ಸರಕಾರಗಳ ದೊಡ್ಡ ತಲೆನೋವು!

ಮೊದಲ ವರ್ಷಗಳ ಹಲವಾರು ಅಡೆತಡೆ, ಟೀಕೆಗಳ ಹೊರತಾಗಿ ಮತ್ತು ಕಾಲಕಾಲಕ್ಕೆ ನಿರಂತರ ಮತ್ತು ಜನಪರ ದರ ಪರಿಷ್ಕರಣೆ ಮತ್ತು ವಿವಿಧ ಸರಕು ಮತ್ತು ಸೇವೆಗಳ ದರ ಕಡಿತಗೊಳಿಸುವ ಮೂಲಕ ಜಿಎಸ್‌ಟಿ ಸರಳವಾಗುತ್ತ, ಜನಸ್ನೇಹಿಯಾಗಿ ಮಾರ್ಪಾಡಾಗಿದೆ ಎಂದರೆ ಖಂಡಿತ ಅತಿಶಯೋಕ್ತಿಯಲ್ಲ. ಲಭ್ಯ ವಿವರಗಳ ಪ್ರಕಾರ, 2017-18ರಲ್ಲಿ ಸರಾಸರಿ ಜಿಎಸ್‌ಟಿ ದರ ಶೇ.14.4ರಷ್ಟು ಇತ್ತು. 2019-20ರ ವೇಳೆಗೆ ಅದು ಶೇ.11.6ಕ್ಕೆ ಇಳಿಯಿತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಕಟಿಸಿರುವ ಸಂಶೋಧನಾ ವರದಿಯ ಪ್ರಕಾರ ಜಿಎಸ್‌ಟಿ-2 ಸುಧಾರಣಾ ನೀತಿಯಿಂದಾಗಿ ದೇಶದ ಸರಾಸರಿ ತೆರಿಗೆ ಶೇ.9.5ಕ್ಕೆ ಇಳಿಯಲಿದೆ. ಎಂಟು ವರ್ಷಗಳಲ್ಲಿ ಸರಾಸರಿ ಜಿಎಸ್‌ಟಿ ದರ ಅಂದಾಜು ಶೇ.40ರಷ್ಟು ಕಡಿಮೆಯಾಗಿ ಅಷ್ಟು ಹಣ ಜನರ ಉಳಿತಾಯವಾಗಿದೆ, ವ್ಯಯಿಸುವ ಸಾಮರ್ಥ್ಯ ವೃದ್ಧಿಸಿದೆ! ಈವರೆಗೆ ನಾಲ್ಕು ಇದ್ದ ತೆರಿಗೆ ಸ್ತರಗಳು ಇನ್ನು ಕೇವಲ ಶೇ.5, ಶೇ,12 ಆಗಿ ಎರಡಕ್ಕಿಳಿಯಲಿವೆ. ಇದನ್ನು ಆತ್ಮ ನಿರ್ಭರ ಭಾರತದತ್ತ ಮಹತ್ವದ ಹೆಜ್ಜೆ, ಮುಂದಿನ ಪೀಳಿಗೆಯ ಜಿಎಸ್‌ಟಿ, ಎರಡು ಸ್ಲ್ಯಾಬ್ ಕ್ರಾಂತಿ, ಸರಳೀಕೃತ ಅನುಸರಣೆಗಳು ಮತ್ತು ವರ್ಧಿತ ಜಾಗತಿಕ ಸ್ಪರ್ಧಾತ್ಮಕತೆ ಎಂದು ಸರಕಾರ ವ್ಯಾಖ್ಯಾನಿಸಿದೆ.

ಇನ್ನು ಕರ್ನಾಟಕದ ವಿಷಯಕ್ಕೆ ಬರುವುದಾದರೆ, ಜಿಎಸ್‌ಟಿ ಜಾರಿಯ ಬಳಿಕ ರಾಜ್ಯದ ಆದಾಯವು ವಾರ್ಷಿಕ 70,000 ಕೋಟಿ ರು.ನಷ್ಟು ಖೋತಾ ಆಗಿದ್ದು ಈ ಹೊಸ ತೆರಿಗೆ ಕಡಿತವು ಹೆಚ್ಚುವರಿಯಾಗಿ 15,000 ಕೋಟಿ ರು.ನಷ್ಟು ಆದಾಯ ನಷ್ಟವನ್ನು ಉಂಟುಮಾಡಲಿದೆ ಎಂಬುದು ರಾಜ್ಯ ಸರಕಾರದ ಕಳವಳ. ಜಿಎಸ್‌ಟಿಗೂ ಮೊದಲು ಶೇ.13ರಷ್ಟು ಇದ್ದ ರಾಜ್ಯದ ಆದಾಯದ ಪ್ರಗತಿಯು ಜಿಎಸ್‌ಟಿ ಜಾರಿಯಾದ ಬಳಿಕ ಶೇ.11ಕ್ಕೆ ಇಳಿದಿದೆ ಎಂದು ಅಂಕಿ-ಅಂಶಗಳು ಹೇಳುತ್ತಿವೆ. 2016-17ರಿಂದ 2024-25ಕ್ಕೆ ಹೋಲಿಸಿದಾಗ ಕೇಂದ್ರದಿಂದ ತೆರಿಗೆ ಹಂಚಿಕೆಯಲ್ಲಿ ವಾರ್ಷಿಕವಾಗಿ ಕರ್ನಾಟಕಕ್ಕೆ 21,197 ಕೋಟಿ ರುಪಾಯಿಗಳಷ್ಟು ಕಡಿತವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಪರದಾಡುತ್ತಿರುವ ಈ ಸಂದರ್ಭದಲ್ಲಿ ಹೀಗೆ ಉಂಟಾದ ತೆರಿಗೆ ನಷ್ಟವು ಗಾಯದ ಮೇಲಿನ ಬರೆಯೇ ಸರಿ. ಈಗ ಘೋಷಿಸಿರುವ ತೆರಿಗೆ ಕಡಿತವು ರಾಜ್ಯದ ಆದಾಯದ ಪಾಲಿಗೆ ಮತ್ತಷ್ಟು ಹೊಡೆದ ನೀಡಲಿದೆ.

ಮುಂದೆ ಆಗಬೇಕಾಗಿರುವುದು ಏನು?: ತೆರಿಗೆಯ ಒಟ್ಟು ಆದಾಯ ಸಂಗ್ರಹದ ಪ್ರಮಾಣದಲ್ಲಿ ರಾಜ್ಯಗಳಿಗೆ ತೆರಿಗೆಯ ಹಣವನ್ನು ಕೇಂದ್ರ ಸರಕಾರ ಬಿಡುಗಡೆ ಮಾಡುತ್ತಿಲ್ಲ ಎನ್ನುವುದು ದಕ್ಷಿಣದ ಬಹುತೇಕ ರಾಜ್ಯಗಳ ಅಳಲು. ನಮ್ಮಿಂದ ಜಿಎಸ್‌ಟಿ ರೂಪದಲ್ಲಿ ಹಣ ಸಂಗ್ರಹಿಸಿ ಬಹುಪಾಲು ಉತ್ತರದ ರಾಜ್ಯಗಳಿಗೆ ವಿನಿಯೋಗ ಮಾಡಲಾಗುತ್ತಿದೆ. ಕೇಂದ್ರದ ತಾರತಮ್ಯ ನೀತಿಯ ವಿರುದ್ಧ 'ನಮ್ಮ ತೆರಿಗೆ ನಮ್ಮ ಹಕ್ಕು' ಮುಂತಾದ ಹೆಸರಿನಲ್ಲಿ ಕರ್ನಾಟಕ ಸರಕಾರ ಪ್ರತಿಭಟಿಸುತ್ತಾ, ವಿವಿಧ ವೇದಿಕೆಗಳಲ್ಲಿ ಧ್ವನಿ ಎತ್ತುತ್ತಾ ಬಂದಿದೆ. ಹೌದು ಈ ವಿಚಾರದಲ್ಲಿ ಕೇಂದ್ರ ಸರಕಾರ ವಿವರವಾದ, ಸ್ಪಷ್ಟ ಮತ್ತು ಎಲ್ಲರಿಗೂ ಸಲ್ಲುವ ತೆರಿಗೆ ಮೊತ್ತ ವಿತರಣೆಯ, ಬಹುತೇಕ ರಾಜ್ಯಗಳು ಒಪ್ಪುವ ಮಾನದಂಡವನ್ನು ಪ್ರಕಟಿಸಿ ಜಾರಿಗೆ ತರಬೇಕಿದೆ. ಸದ್ಯದ ಜಿಎಸ್‌ಟಿ ಸರಳೀಕರಣದಿಂದ ರಾಜ್ಯ ಸರಕಾರಗಳಿಗೆ ಆಗುವ ಆದಾಯದ ನಷ್ಟವನ್ನು ಯಾವ ರೀತಿಯಲ್ಲಿ ಮತ್ತು ಯಾವ್ಯಾವ ಮೂಲಗಳಿಂದ ಸರಿದೂಗಿಸಬಹುದು ಎಂಬುದರ ಕುರಿತು ಕೇಂದ್ರ ಸರಕಾರ ಯಾವುದೇ ಮಾಹಿತಿಯನ್ನು ನೀಡಲಿಲ್ಲ. ನೇರ ತೆರಿಗೆ, ಆದಾಯ ತೆರಿಗೆ, ಡಿವಿಡೆಂಡ್, ಕಸ್ಟಮ್ಸ್ ಮತ್ತು ನಾನಾ ರೂಪದ ಸೆಸ್‌ಗಳು ಕೇಂದ್ರದ ಪ್ರಮುಖ ಆದಾಯದ ಮೂಲಗಳು. ರಾಜ್ಯಗಳು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಬೇಕಾದ ಆದಾಯವನ್ನು ಸಂಗ್ರಹಿಸಲು ಹೆಚ್ಚಿನ ಪ್ರಮಾಣದಲ್ಲಿ ಜಿಎಸ್‌ಟಿ ಆದಾಯವನ್ನೇ ನೆಚ್ಚಿಕೊಂಡಿವೆ. ನಿರೀಕ್ಷಿತ ಆದಾಯವನ್ನು ಕೇಂದ್ರ ಕೊಡದಿರುವುದು ಒಂದೆಡೆಯಾದರೆ, ಈಗ ಸರಳೀಕೃತ ತೆರಿಗೆಯು ರಾಜ್ಯಗಳ ತೆರಿಗೆ ಆದಾಯವು ಮತ್ತಷ್ಟು ಕುಸಿಯುವಂತೆ ಮಾಡಲಿದೆ. ಹೀಗೆ ಆದಾಯ ನಷ್ಟವಾದರೆ ರಾಜ್ಯಗಳ ಆರ್ಥಿಕ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಕಸಿದಂತಾಗಲಿದೆ. ಜಿಎಸ್‌ಟಿ ವ್ಯವಸ್ಥೆಯು ಆರ್ಥಿಕ ಚಟುವಟಿಕೆಗಳನ್ನು ಮತ್ತಷ್ಟು ಪ್ರೋತ್ಸಾಹಿಸಿ ಕೇಂದ್ರ ಮತ್ತು ರಾಜ್ಯಗಳ ಆದಾಯವನ್ನು ದ್ವಿಗುಣಗೊಳಿಸುವ ಗುರಿಯಾಗಿತ್ತು. ಕೇಂದ್ರದ ಆದಾಯವೇನೋ ಗಣನೀಯವಾಗಿ ಹೆಚ್ಚಿದೆ, ಆದರೆ ಅದರ ನಿರೀಕ್ಷಿತ ಪಾಲು ಕರ್ನಾಟದಂಥ ರಾಜ್ಯಗಳಿಗೆ ಸಿಗುತ್ತಿಲ್ಲ ಎನ್ನುವುದು ಆರೋಪ. ಕೇಂದ್ರವು ಈ ನಿಟ್ಟಿನಲ್ಲಿ ಪಾರದರ್ಶಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಬದಲಾವಣೆ ಜಗದ ನಿಯಮ. ಜನಸಾಮಾನ್ಯರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಈ ಹೊಸ ಸರಳೀಕೃತ ಮತ್ತು ಅಗ್ಗದ ತೆರಿಗೆ ವ್ಯವಸ್ಥೆಯನ್ನು ಘೋಷಿಸಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಜನಸಾಮಾನ್ಯರು, ಮಧ್ಯಮ ಆದಾಯದ ಕುಟುಂಬಗಳು, ರೈತ ಸಮುದಾಯ, ಸಣ್ಣ ಉದ್ದಿಮೆದಾರರು ಪ್ರಯೋಜನ ಪಡೆಯಲಿದ್ದಾರೆ. ತಿಂಗಳ ಆದಾಯದಲ್ಲಿ ಖರ್ಚು ಮಾಡುವ ಹಣವು ತೆರಿಗೆ ಕಡಿತದಿಂದ ಒಂದಷ್ಟು ಇಳಿದು ಆ ಹಣವು ಉಳಿತಾಯವಾಗಿ ಅಥವಾ ಮತ್ಯಾವುದಕ್ಕೋ ಖರ್ಚಾಗಲಿರುವುದು ಖಂಡಿತ. ಎರಡೂ ಪ್ರಕಾರಗಳು ದೇಶದ ಆರ್ಥಿಕತೆಗೆ ಮತ್ತಷ್ಟು ಬಲ ನೀಡಲಿವೆ. ಭಾರತವು ಮುಂದಿನ ದಿನಗಳಲ್ಲಿ ಬೃಹತ್ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವುದು ನಿಸ್ಸಂಶಯ. ಆದಾಯ ತೆರಿಗೆಯಲ್ಲಿ ಕಡಿತ, ಫಾಸ್ಟ್ಯಾಗ್ ವಾರ್ಷಿಕ ಪಾಸ್ ಮೂಲಕ ಟೋಲ್ ಪಾವತಿಯಲ್ಲಿ ಉಳಿತಾಯ, ಈಗ ತೆರಿಗೆ ಕಡಿತ- ಹೀಗೆ ಹಲವು ಜನಪರ ಯೋಜನೆಗಳು ಕಳೆದ ಕೆಲವು ತಿಂಗಳುಗಳಲ್ಲಿ ಜಾರಿಯಾಗಿವೆ. 'ಜನಪರ, ಜನೋಪಯೋಗಿ ಮತ್ತು ಜನರಿಗೆ ಅನುಕೂಲವಾಗುವ ಯೋಜನೆಗಳನ್ನು ತರಲು ಚುನಾವಣೆಗಳು ಬರಬೇಕಿಲ್ಲ' ಎನ್ನುವುದನ್ನು ಈಗಿನ ಕೇಂದ್ರ ಸರಕಾರ ಹಲವಾರು ಬಾರಿ ಸಾಬೀತುಪಡಿಸಿದೆ! ಜಿಎಸ್‌ಟಿ ಕಡಿತದ ಪಾಲು ನೇರವಾಗಿ ಜನಸಾಮಾನ್ಯರಿಗೆ ಸಿಗುವಂತಾದಾಗ ಮಾತ್ರ ಇಂಥ ಸುಧಾರಣಾ ಕ್ರಮಗಳು ಯಶಸ್ವಿಯಾಗಿವೆ. ಹಾಗಾಗಲಿ ಎಂಬುದು ಸರ್ವರ ಆಶಯ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಪ್ರತಿಸ್ಪಂದನ

ಸುಜಯ ಆರ್. ಕೊಣ್ಣೂರ್

ಚಾಲಕ-ನಿರ್ವಾಹಕರು ಎಲ್ಲದಕ್ಕೂ ಹೊಣೆಯಲ್ಲ

ಬಿಎಂಟಿಸಿ ವಿರುದ್ಧ 10 ಸಾವಿರ ದೂರು' ಮುಖಪುಟ ವರದಿಯನ್ನು (ಸೆ.5) ಓದಿದ ನಂತರ, ಒಂದಷ್ಟು ಕಹಿವಾಸ್ತವವನ್ನು ತಿಳಿಸುವ ಸಲುವಾಗಿ ಈ ಬರಹ. ನಾನು ಬಿಎಂಟಿಸಿ ಬಸ್‌ನಲ್ಲಿ 35 ವರ್ಷಗಳಿಂದ ಪ್ರಯಾಣಿಸುತ್ತಿದ್ದೇನೆ. ಇದರಲ್ಲಿ ಯಾರದು ತಪ್ಪು, ಯಾರದು ಸರಿ ಎಂಬುದನ್ನು ಖಚಿತವಾಗಿ ವಿಶ್ಲೇಷಿಸುವಷ್ಟು ವಿಷಯಗಳು ನನ್ನಲ್ಲಿವೆ.

ಈಗ ಹೆಣ್ಣು ಮಕ್ಕಳಿಗೆ ಉಚಿತ ಪ್ರಯಾಣದ ಸೌಲಭ್ಯ ಇರುವುದರಿಂದ ಬಸ್ಸುಗಳಲ್ಲಿ ಅವರ ಸಂಖ್ಯೆ ವಿಪರೀತ ಹೆಚ್ಚಾಗಿದೆ. ಇದರಿಂದಾಗಿ ನಿರ್ವಾಹಕರಿಗೆ 'ಶೂನ್ಯ ಟಿಕೆಟ್' ಕೊಡಲು ಸಮಯ ಸಾಲುತ್ತಿಲ್ಲ. ಅಷ್ಟರಲ್ಲಿ ಇನ್ನೊಂದು ಸ್ಟೇಜ್ ಬಂದುಬಿಡುತ್ತದೆ. ಕೆಲ ಹೆಣ್ಣು ಮಕ್ಕಳೂ ಆಧಾರ್‌ಕಾರ್ಡ್ ಅಥವಾ ಮತದಾರರ ಚೀಟಿ ತೋರಿಸುವ ತಮ್ಮ ಹೊಣೆಗಾರಿಕೆಯ ನಿರ್ವಹಣೆಯನ್ನು ನಿರ್ಲಕ್ಷ್ಯ ಮಾಡುತ್ತಾರೆ, ಕೆಲವೊಮ್ಮೆ ಮೊಬೈಲ್‌ನಲ್ಲೇ ಮುಳುಗಿರುತ್ತಾರೆ. ಟಿಕೆಟ್ ಕೊಡುವ/ಪಡೆಯುವ ಪ್ರಕ್ರಿಯೆ ತಡವಾದಲ್ಲಿ, ಮುಂದಿನ ಸ್ಟೇಜ್‌ನಲ್ಲಿ ಚೆಕಿಂಗ್ ಸ್ಕ್ವಾಡ್ ಬಂದಾಗ, ನಿರ್ವಾಹಕರು ಮೆಮೋ ಪಡೆಯಬೇಕಾಗುತ್ತದೆ ಅಥವಾ ದಂಡವನ್ನು ಪೀಕಬೇಕಾಗುತ್ತದೆ. ಇದನ್ನು ಹೆಣ್ಣುಮಕ್ಕಳು ಅರ್ಥಮಾಡಿಕೊಳ್ಳುವುದಿಲ್ಲ. ಕೆಲವೊಮ್ಮೆ, ಟಿಕೆಟ್ ಪಡೆದ ಉದ್ದೇಶಿತ ನಿಲ್ದಾಣಗಳಲ್ಲಿ ಇಳಿಯದೇ, ತಮ್ಮ ಅನುಕೂಲಕ್ಕೆ ಇನ್ನೆಲ್ಲೋ ಇಳಿಯುತ್ತಾರೆ. ಕೇಳಿದರೆ, 'ಫ್ರೀ ತಾನೇ? ನಿಮಗೇನು ಕಷ್ಟ? ನಾವು ಎಲ್ಲಾದರೂ ಇಳಿಯಬಹುದು'

ಎಂಬ ಉಡಾಫೆಯ ಉತ್ತರ ಬರುತ್ತದೆ. ಅವರಿಗೆ ಅರ್ಥಮಾಡಿಸಲು ನಿರ್ವಾಹಕರು ಹೆಣಗುತ್ತಿರುತ್ತಾರೆ. ಇದನ್ನು ಚೆಕಿಂಗ್ ಅಧಿಕಾರಿಗಳೂ ಅರ್ಥಮಾಡಿಕೊಳ್ಳಬೇಕು, ಪ್ರತಿಬಾರಿಯೂ ನಿರ್ವಾಹಕರದ್ದೇ ತಪ್ಪಿರುವುದಿಲ್ಲ.

'ಶಕ್ತಿ' ಯೋಜನೆಯಿಂದಾಗಿ ಬಸ್ಸಿನಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿ, ಎಲ್ಲಾ ಆಸನಗಳನ್ನೂ ಆಕ್ರಮಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಗಂಡಸರು ನಿಂತು ಪಯಣಿಸುವಂತಾಗಿದೆ ಹಾಗೂ ಬಸ್ಸುಗಳಲ್ಲಿ ಜಗಳ ಹೆಚ್ಚಾಗಿದೆ. ಇದನ್ನು ಸುಧಾರಿಸುವ ಹೊಣೆಯೂ ನಿರ್ವಾಹಕರ ಮೇಲೆಯೇ. ಎಷ್ಟೋ ಕಡೆ ಬಹಳ ಹಳೆಯ ಬಸ್‌ಗಳಿವೆ, ಅದರಲ್ಲಿನ ಸಮಸ್ಯೆಗಳನ್ನೆಲ್ಲಾ ಸುಧಾರಿಸಿಕೊಂಡು ಚಾಲಕರು ಕಾರ್ಯನಿರ್ವಹಿಸುತ್ತಾರೆ. ಸಂಚಾರ ದಟ್ಟಣೆಯಿಂದಾಗಿ ಎಷ್ಟೋ ಬಾರಿ ಚಾಲಕ-ನಿರ್ವಾಹಕರಿಗೆ ಸಮಯಕ್ಕೆ ಸರಿಯಾಗಿ ಊಟ ಮಾಡಲೂ ಆಗುವುದಿಲ್ಲ. ಏಕೆಂದರೆ, ಸಕಾಲಕ್ಕೆ ನಿರ್ದಿಷ್ಟ ನಿಲ್ದಾಣವನ್ನು ತಲುಪದಿದ್ದರೆ ಅದಕ್ಕೂ ಪ್ರಯಾಣಿಕರು ದೂರು ಕೊಡುತ್ತಾರಲ್ಲಾ! ಹೀಗೆ ಚಾಲಕರು-ನಿರ್ವಾಹಕರ ಕಷ್ಟಗಳನ್ನೂ ನಾವು ಅರ್ಥಮಾಡಿಕೊಳ್ಳಬೇಕು.

ಗುಂಡಿಬಿದ್ದ ರಸ್ತೆಗಳಲ್ಲಿ ಸಂಚರಿಸುವ ವಾಹನ ಸವಾರರು, ಅದನ್ನು ತಪ್ಪಿಸಲು ಇದ್ದಕ್ಕಿದ್ದಂತೆ ಪಕ್ಕಕ್ಕೆ ಸರಿಯುತ್ತಾರೆ. ಆಗ ಹಿಂದೆ ಬರುತ್ತಿರುವ ಬಸ್ಸುಗಳ ಚಾಲಕರಿಗೆ ಕಂಟ್ರೋಲ್ ಮಾಡುವುದು ಕಷ್ಟವಾಗುತ್ತದೆ, ಅಪಘಾತಗಳಾಗುತ್ತವೆ. ಹೀಗಾಗಿ ಮೊದಲು ರಸ್ತೆಗಳು ಸರಿಯಾಗಬೇಕು. ಇನ್ನು, ರಾತ್ರಿ ವೇಳೆ ಬಸ್ಸುಗಳಲ್ಲಿ ಮಲಗುವ ಚಾಲಕ-ನಿರ್ವಾಹಕರಿಗೆ ಸರಿಯಾದ ವ್ಯವಸ್ಥೆಯಾಗಲೀ ಭದ್ರತೆಯಾಗಲೀ ಇರುವುದಿಲ್ಲ. ತಮಗಿರುವ ಕೆಲಸದ ಒತ್ತಡದಿಂದಾಗಿ ಇಂಥ ಎಷ್ಟೋ ಸಿಬ್ಬಂದಿ ಆರೋಗ್ಯ ಸಮಸ್ಯೆಗಳಿಗೆ ಬಲಿಯಾಗಿದ್ದಾರೆ. ಕೆಲವು ಸೂಕ್ಷ್ಮ ವಿಷಯಗಳು ಎಲ್ಲರಿಗೂ ಅರ್ಥವಾಗುವುದಿಲ್ಲ. ಹೀಗಾಗಿ, ಯಾರೇ ಆಗಲಿ ಸಾರಿಗೆ ಸಿಬ್ಬಂದಿಯ ಮೇಲೆ ದೂರು ನೀಡುವ ಮೊದಲು ಸ್ವಲ್ಪ ಯೋಚಿಸಬೇಕು. ಕೈಯಲ್ಲಿ ಮೊಬೈಲಿದೆ, ನಂಬರ್ ಸಿಗುತ್ತದೆ ಎಂಬ ಘಮಂಡಿತನದಲ್ಲಿ ದೂರು ನೀಡುವುದು ತರವೇ?

ಮೇಲೆ ಉಲ್ಲೇಖಿಸಿದ ವ್ಯವಸ್ಥೆಗಳು ಮೊದಲು ಸರಿಯಾಗಬೇಕು. ಯಾರೇ ದೂರು ನೀಡಿದರೂ, ಅಧಿಕಾರಿಗಳು ಅದನ್ನು ಸರಿಯಾದ ರೀತಿಯಲ್ಲಿ ವಿವೇಚಿಸಿ, ತನಿಖೆ ಮಾಡಿ ಯಥೋಚಿತ ಕ್ರಮ ಕೈಗೊಳ್ಳಬೇಕೇ ಹೊರತು, ಎಲ್ಲಾ ದೂರುಗಳಿಗೂ ಚಾಲಕ-ನಿರ್ವಾಹಕರನ್ನು ಹೊಣೆಮಾಡುವುದು ಸರಿಯಲ್ಲ.

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಜಿಎಸ್‌ಟಿ ಮನ್ವಂತರ: ಉಳಿತಾಯ ಮತ್ತು ಸಮೃದ್ಧಿಯ ಅವಕಾಶ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಆಡಳಿತಕ್ಕೆ ಬಂದ ದಿನದಿಂದಲೂ ಜನರ ಕಲ್ಯಾಣಕ್ಕಾಗಿ 'ಸುಲಭ ಜೀವನ-ಸುಖೀ ಜೀವನ' ಧ್ಯೇಯಕ್ಕೆ ಬದ್ಧವಾದ ಕಾರ್ಯಯೋಜನೆಗಳೊಂದಿಗೆ ಹೆಜ್ಜೆ ಹಾಕುತ್ತಿದೆ. 'ಆಯುಷ್ಮಾನ್ ಭಾರತ್' ಯೋಜನೆ ಮೂಲಕ ಬಡವರಿಗೆ ಉಚಿತ ಆರೋಗ್ಯ ಸೇವೆ, 'ಪ್ರಧಾನಮಂತ್ರಿ ಆವಾಸ್' ಯೋಜನೆ ಮೂಲಕ ಕೋಟ್ಯಂತರ ಬಡ ಕುಟುಂಬಗಳಿಗೆ ಮನೆ ಮತ್ತು ಇದೀಗ 'NEXT GEN GST' ಮೂಲಕ ಆರ್ಥಿಕ ಸಮಾನತೆ ಕಲ್ಪಿಸಿದ ಜನಪರ ಸರಕಾರವಾಗಿದೆ.

ಕ್ರಾಂತಿಪರ್ವ

ಪ್ರಲ್ಹಾದ ಜೋಶಿ
vveditoped@gmail.com

ಭಾರತದ ಅರ್ಥವ್ಯವಸ್ಥೆಗೆ ಸುಭದ್ರ ಬುನಾದಿ ಹಾಕಿಕೊಟ್ಟ ಜಿಎಸ್‌ಟಿ ಇದೀಗ ಒಂಬತ್ತನೇ ಹಣಕಾಸು ವರ್ಷವನ್ನು ಪ್ರವೇಶಿಸಿದೆ. ಭಾರತವು ವಿಶ್ವದ 3ನೇ ಬಲಿಷ್ಠ ಆರ್ಥಿಕತೆಯ ಹೊಸ್ತಿಲಲ್ಲಿರುವಾಗ 'ಸರ್ವೇ ಜನಾಃ ಸುಖಿನೋ ಭವಂತು, ಸರ್ವೇ ಸಂತು ನಿರಾಮಯಾಃ' ಎನ್ನುವುದಕ್ಕೆ ಅನ್ವರ್ಥಕವಾಗಿ ಹೊಸ ಸ್ವರೂಪ ಪಡೆದುಕೊಂಡಿದೆ. ನಾಡಹಬ್ಬ 'ನವರಾತ್ರಿ'ಗೆ ನರೇಂದ್ರ ಮೋದಿಯವರು 'ಜನೋಪಯೋಗಿ ಜಿಎಸ್‌ಟಿ-2' ಅನ್ನು ಉಡುಗೊರೆ ರೂಪದಲ್ಲಿ ನೀಡಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಆಡಳಿತಕ್ಕೆ ಬಂದ ದಿನದಿಂದಲೂ ಜನರ ಕಲ್ಯಾಣಕ್ಕಾಗಿ 'ಸುಲಭ ಜೀವನ-ಸುಖೀ ಜೀವನ' ಧ್ಯೇಯಕ್ಕೆ ಬದ್ಧವಾದ ಕಾರ್ಯಯೋಜನೆಗಳೊಂದಿಗೆ ಹೆಜ್ಜೆ ಹಾಕುತ್ತಿದೆ. 'ಆಯುಷ್ಮಾನ್ ಭಾರತ್' ಯೋಜನೆ ಮೂಲಕ ಬಡವರಿಗೆ ಉಚಿತ ಆರೋಗ್ಯ ಸೇವೆ, 'ಜಲ್ ಜೀವನ್ ಮಿಷನ್' ಮೂಲಕ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು, 'ಪ್ರಧಾನಮಂತ್ರಿ ಆವಾಸ್' ಯೋಜನೆ ಮೂಲಕ ಕೋಟ್ಯಂತರ ಬಡ ಕುಟುಂಬಗಳಿಗೆ ಮನೆ ಮತ್ತು ಇದೀಗ 'NEXT GEN GST' ಮೂಲಕ ಆರ್ಥಿಕ ಸಮಾನತೆ ಕಲ್ಪಿಸಿದ ಜನಪರ ಸರಕಾರವಾಗಿದೆ.

ಎನ್‌ಡಿಎ ಸರಕಾರವು ಮೂರನೇ ಅವಧಿಯ ಆಡಳಿತದಲ್ಲೂ ಜನಸಾಮಾನ್ಯರ ಜೀವನಮಟ್ಟ ಸುಲಭಗೊಳಿಸುವ ಮಹತ್ವದ ನಿರ್ಣಯಗಳನ್ನು ಕೈಗೊಂಡಿದೆ. ಜನಹಿತದ 'NEXT GEN GST'ಯೇ ಇದಕ್ಕೆ ಸಾಕ್ಷಿ. ಭವಿಷ್ಯದ ಪೀಳಿಗೆಗೆ (Next Gen) ವರದಾನ ಎನ್ನುವಂತೆ ಸರಳ-ಸುಲಭ 'ಜಿಎಸ್‌ಟಿ-2' ತೆರಿಗೆ ವ್ಯವಸ್ಥೆಯನ್ನು ಸಾಕಾರಗೊಳಿಸಲು ಶ್ರೀಕಾರ ಹಾಡಿದೆ. ದಿನಬಳಕೆಯ ಶೇ.99ರಷ್ಟು ವಸ್ತುಗಳನ್ನು ಶೂನ್ಯ ಮತ್ತು ಶೇ.5ರ ತೆರಿಗೆ ದರ ವ್ಯಾಪ್ತಿಗೆ ತರಲಾಗಿದೆ. ಜೀವನ ಭದ್ರತೆಯ ವಿಮೆ ಸೇರಿದಂತೆ ದಿನೋಪಯೋಗಿ ಶಾಂಪೂ, ಸಾಬೂನು, ವಾಷಿಂಗ್ ಪೌಡರ್ ಹೀಗೆ ಸಾಕಷ್ಟು ವಸ್ತುಗಳು ಶೂನ್ಯ ಮತ್ತು ಅತ್ಯಂತ ಅಗ್ಗದ ಶೇ.5ರ ಕರವ್ಯಾಪ್ತಿಗೆ ಒಳಪಟ್ಟಿವೆ. ಈ ಮೂಲಕ ಸಮಸ್ತ ನಾಗರಿಕರಿಗೂ ಉಳಿತಾಯ-ಆದಾಯ ಹಾಗೂ ಖರೀದಿಯನ್ನು ಸುಗಮಗೊಳಿಸಿ ಜೀವನ ಮಟ್ಟವನ್ನು ಉತ್ತಮಗೊಳಿಸುವಲ್ಲಿ ಮುಂದಡಿ ಇಟ್ಟಿದೆ ಮೋದಿ ಸರಕಾರ.

'ಒಂದು ರಾಷ್ಟ್ರ, ಒಂದು ತೆರಿಗೆ' ಪರಿಕಲ್ಪನೆಯಲ್ಲಿ 2017ರ ಜುಲೈ 1ರಿಂದ ಜಾರಿಗೊಂಡ ಜಿಎಸ್‌ಟಿ ದೇಶದಲ್ಲಿ ಹೊಸ ಇತಿಹಾಸವನ್ನೇ ಸೃಷ್ಟಿಸಿತ್ತು. ಆರ್ಥಿಕ ತಳಮಟ್ಟದಲ್ಲಿದ್ದ, ದುರ್ಬಲ ಐದು (Fragile Five) ರಾಷ್ಟ್ರಗಳಲ್ಲಿ ಒಂದು ಎಂದು ಕರೆಯಲ್ಪಡುತ್ತಿದ್ದ ಭಾರತಕ್ಕೆ ಸಕಾಲಿಕವಾಗಿ ಅರ್ಥ ಚೈತನ್ಯ ತುಂಬಿ ಜಗತ್ತಿನ 4ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ನಿರೂಪಿಸುವಲ್ಲಿ ತನ್ನದೇ ಆದ ಕೊಡುಗೆಯನ್ನು ಜಿಎಸ್‌ಟಿ ನೀಡಿತ್ತು. ಇದೀಗ ಮತ್ತೊಂದು ಹಂತದ ಮೇಲ್ಪಂಕ್ತಿಗೇರುವ ಗುರಿಯೊಂದಿಗೆ 'NEXT GEN GST' ರೂಪಾಂತರವು ಆರ್ಥಿಕ ಅಲೆಯನ್ನು ಎಬ್ಬಿಸಲಿದೆ.

'NEXT GEN GST' ಸುಧಾರಣೆಯು ತೆರಿಗೆ ದರದ ಬದಲಾವಣೆ ಮಾತ್ರವಲ್ಲ; ಇದು ಪ್ರತಿಯೊಬ್ಬರ ಜೀವನಮಟ್ಟವನ್ನು ಸುಧಾರಿಸುವ, ಉಳಿತಾಯವನ್ನು ವೃದ್ಧಿಸುವ, ಆರ್ಥಿಕತೆಯನ್ನು ಬಲಪಡಿಸುವ ಒಂದು ಸಮಗ್ರನೋಟ. ಬಡವರು, ಯುವಕರು, ರೈತರು, ಮಹಿಳೆಯರು ಮತ್ತು ಮಧ್ಯಮ ವರ್ಗ ಹೀಗೆ ಎಲ್ಲರಿಗೂ ಲಾಭ ತೋರುವ 'ಸರ್ವ ಸಮಾನತೆ'ಯ ಅರ್ಥವಿನ್ಯಾಸದ ಪ್ರತೀಕವಾಗಿದೆ. ಭಾರತ-ಭಾರತೀಯರೆಲ್ಲರ ಪಾಲಿಗೆ ಒಂದು ರೀತಿ 'ಅಕ್ಷಯ ಪಾತ್ರೆ'ಯಾಗುವ ಆಶಾಭಾವನೆಯನ್ನು ಹುಟ್ಟು ಹಾಕಿದೆ.

ವಿಕಸಿತ ಭಾರತಕ್ಕೆ ಪ್ರೇರಣೆ: ಕಳೆದೆಂಟು ವರ್ಷಗಳಿಂದ ಸರಕು-ಸೇವಾ ತೆರಿಗೆಯು ಭಾರತದ ನಾಗರಿಕತೆ, ಆರ್ಥಿಕತೆ ಜತೆಗೆ ಔದ್ಯಮಿಕವಾಗಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿತು. ಭವಿಷ್ಯದಲ್ಲಿ 'NEXT GEN GST' ಸಹ ವಿಶೇಷವಾಗಿ ಬಡವರು, ಮಹಿಳೆಯರು, ಯುವಕರು, ಕೃಷಿಕರು ಹಾಗೂ ಸಣ್ಣ ಮತ್ತು ಮಧ್ಯಮ ಉದ್ಯಮಿಗಳಿಗೆ ಉತ್ತೇಜನ ನೀಡಲಿದೆ. ಭಾರತೀಯ ನಾಗರಿಕರ ಜೀವನ ಮಟ್ಟವನ್ನು ಉನ್ನತೀಕರಿಸುವುದರ

ಜತೆಗೆ ಪ್ರತಿ ಉತ್ಪನ್ನಗಳ ಬಳಕೆ, ಉದ್ಯಮಗಳ ಬೆಳವಣಿಗೆಯನ್ನೂ ಉತ್ತೇಜಿಸುತ್ತದೆ. ವ್ಯಾಪಾರ-ವಹಿವಾಟಿನಲ್ಲಿ ಹೂಡಿಕೆಯನ್ನು ಹೆಚ್ಚಿಸುತ್ತದೆ. ಸಕಲ ವಲಯಗಳಲ್ಲೂ ಯುವ ಸಮುದಾಯಕ್ಕೆ ಬೃಹತ್ ಉದ್ಯೋಗಾವಕಾಶವನ್ನು ಇದು ಸೃಷ್ಟಿಸಲಿದೆ. ಈ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ 'ವಿಕಸಿತ ಭಾರತ'ದ ನಿರ್ಮಾಣಕ್ಕೆ ಪ್ರೇರಣೆಯಾಗಲಿದೆ.

ದೇಶದ ತೆರಿಗೆ ವ್ಯವಸ್ಥೆಯಲ್ಲಿ 'ಏಕೀಕರಣ'ದ ಹೊಸ ಅಧ್ಯಾಯ ಬರೆದ ಜಿಎಸ್‌ಟಿಯು ಆಮೂಲಾಗ್ರ ಬದಲಾವಣೆ ತಂದು ಬಲಿಷ್ಠ ಆರ್ಥಿಕತೆಗೆ ನಾಂದಿ ಹಾಡಿತು. ಯುದ್ಧದ ಬಿಕ್ಕಟ್ಟಿನ ಸನ್ನಿವೇಶದಲ್ಲಿ ವಿಶ್ವವೇ ಆರ್ಥಿಕ ಸಂದಿಗ್ಧತೆಗೆ ಸಿಲುಕಿ ನಲುಗುತ್ತಿದ್ದರೆ, ನಮ್ಮ ದೇಶವು ಜಗತ್ತಿನ ಅರ್ಥಪಟದಲ್ಲಿ 4ನೇ ಸ್ಥಾನದಲ್ಲಿ ಪ್ರಜ್ವಲಿಸುತ್ತಿದೆ. ಪ್ರಸ್ತುತ ಜಿಡಿಪಿ ಸಹ ಶೇ.7.8ಕ್ಕೆ ವೃದ್ಧಿಸಿದೆ. ಹೀಗೆ ಆರ್ಥಿಕತೆಯ ಅಮೃತ ಗಳಿಗೆಯಲ್ಲಿ ಸಾಗಿರುವ ಭಾರತವು ಇದೀಗ 'NEXT GEN GST' ಎಂಬ ಮಗದೊಂದು ಕಲ್ಪವೃಕ್ಷವನ್ನು ನೆಟ್ಟಿದೆ.

ಭಾರತವನ್ನು ನಂ.1 ಆಗಿಸುವ ಮುನ್ನುಡಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದ್ವಿಸ್ತರದ ಜಿಎಸ್‌ಟಿ-2 ಅನ್ನು ಪರಿಚಯಿಸಿದ್ದಾರೆ. ಪ್ರಸ್ತುತ ಶೇ.5, ಶೇ.12, ಶೇ.18 ಮತ್ತು ಶೇ.28ರ ಚತುಸ್ತರದಲ್ಲಿದ್ದ ಜಿಎಸ್‌ಟಿಯನ್ನು, 'ಶೇ.5' ಮತ್ತು 'ಶೇ.18'ರ ದ್ವಿಸ್ತರಕ್ಕಿಳಿಸಿ ಜನೋಪಯೋಗಿಯಾಗುವತ್ತ ಅದನ್ನು ಕೊಂಡೊಯ್ಯುವಲ್ಲಿ ಮಹತ್ತರ ಹೆಜ್ಜೆಯಿರಿಸಿದ್ದಾರೆ. ಹೀಗಾಗಿ ಭವಿಷ್ಯದಲ್ಲಿನ್ನು 'NEXT GEN GST' ಸರಕಾರ ಮತ್ತು ಜನಸಾಮಾನ್ಯರಿಗೆ 'ಆದಾಯ-ಉಳಿತಾಯ'ದ ಹೊಸ ಸರಕಾಗಲಿದೆ ಎಂಬುದು ಸಂಶಯಾತೀತ.

ಜಿಎಸ್‌ಟಿಯು ಅನುಷ್ಠಾನಕ್ಕೆ ಬಂದಾಗಿನಿಂದ ಆದಾಯ ಕ್ರೋಡೀಕರಣ ಮತ್ತು ಮೂಲ ತೆರಿಗೆ ವಿಸ್ತರಣೆಯಲ್ಲಿ ಪ್ರಬಲ ಬೆಳವಣಿಗೆಯನ್ನು ತೋರುತ್ತಲೇ ಬಂದಿದೆ. ವ್ಯಾಟ್, ವಾಣಿಜ್ಯ ತೆರಿಗೆ, ಸೇವಾ ತೆರಿಗೆ, ಮಾರಾಟ ತೆರಿಗೆ ಹೀಗೆ ನಾನಾ ವಿಧದಲ್ಲಿ ಜನಸಾಮಾನ್ಯರ ಮೇಲೆ ಬೀಳುತ್ತಿದ್ದ ಕರಭಾರವನ್ನು ಇದು ಇಳಿಸಿತ್ತು. ಅಂತೆಯೇ ಈಗ ಮಗದೊಮ್ಮೆ ಜನಸಾಮಾನ್ಯರ ಮೇಲಿನ ತೆರಿಗೆ ಹೊರೆಯನ್ನು ಗರಿಷ್ಠ ಪ್ರಮಾಣದಲ್ಲಿ ಇಳಿಸುವ ದಿಸೆಯಲ್ಲಿ ಹೊಸ ಸ್ವರೂಪವನ್ನು ಇದು ಪಡೆದುಕೊಂಡಿದೆ.

ಶೇ.99ಕ್ಕೂ ಅಧಿಕ ವಸ್ತುಗಳ ಬೆಲೆಭಾರ ಇಳಿಕೆ: ದ್ವಿಸ್ತರದ ಜಿಎಸ್‌ಟಿ ಜಾರಿಯಿಂದ ಪ್ರತಿ ಉತ್ಪನ್ನಗಳ ಬೆಲೆಯೂ ಇಳಿಕೆಯಾಗಲಿದೆ. ಪರಿಷ್ಕೃತ ಜಿಎಸ್‌ಟಿಯಲ್ಲಿ ಶೇ.12ರ ಸ್ತರದಲ್ಲಿದ್ದ ಶೇ.99ರಷ್ಟು ವಸ್ತುಗಳು ಶೇ.5ರ ವ್ಯಾಪ್ತಿಗೆ ಮತ್ತು ಶೇ.28ರ ಸ್ತರದಲ್ಲಿದ್ದ ಶೇ.90ರಷ್ಟು ಉತ್ಪನ್ನಗಳು ಶೇ.18ರ ವ್ಯಾಪ್ತಿಗೆ ಬರುವುದರಿಂದ ಶೇ.99ರಷ್ಟು ದಿನಬಳಕೆ, ಅಗತ್ಯ ವಸ್ತುಗಳು ಶೇ.5ರ ಅಥವಾ ಶೂನ್ಯ ಸ್ತರದೊಳಗೆ ಬರಲಿವೆ. ಇದರಿಂದ ಜನಸಾಮಾನ್ಯರಿಗೆ ಉಳಿತಾಯ ಮತ್ತು ಉತ್ಪನ್ನ-ಉದ್ಯಮ, ವಹಿವಾಟು ಹೆಚ್ಚಾಗುವ ಎಲ್ಲ ಸಾಧ್ಯತೆ ಇದೀಗ ಸೃಷ್ಟಿ ಆಗಿದೆ.

ಶೂನ್ಯ ತೆರಿಗೆ ದರದಲ್ಲಿ ಆರೋಗ್ಯ-ಆಹಾರೋತ್ಪನ್ನ ವಲಯ: ಹೊಸ ಜಿಎಸ್‌ಟಿ-2 ಜನಸಾಮಾನ್ಯರ ಜೀವನದ ಮೇಲೆ ಸಕಾರಾತ್ಮಕವಾಗಿ ನೇರ ಪರಿಣಾಮ ಬೀರುತ್ತದೆ. ಹಾಲು, ಹಣ್ಣು, ತರಕಾರಿ, ಬ್ರೆಡ್, ಗೋಧಿ ಹಿಟ್ಟು, ಖಾದ್ಯ ತೈಲ, ಸಕ್ಕರೆ, ತಿಂಡಿ-ತಿನಿಸುಗಳು ಅನೇಕಾನೇಕ ಆಹಾರ ಪದಾರ್ಥ-ಆಹಾರ ಧಾನ್ಯಗಳೆಲ್ಲ ಶೂನ್ಯ ತೆರಿಗೆ ದರಕ್ಕೆ ಒಳಪಡಲಿವೆ. 33 ಜೀವರಕ್ಷಕ ಔಷಧಗಳಿಗೂ ಶೂನ್ಯ ತೆರಿಗೆ ಅನ್ವಯವಾಗಲಿದೆ. ಹೀಗೆ ಆರೋಗ್ಯ-ಆಹಾರೋತ್ಪನ್ನಗಳ ಬೆಲೆ ಅಗ್ಗವಾಗಿ ಪ್ರತಿ ಕುಟುಂಬಗಳ ಮಾಸಿಕ ವೆಚ್ಚದಲ್ಲಿ ಕನಿಷ್ಠ ನಾಲ್ಕು ಪ್ರತಿಶತದಷ್ಟು ಉಳಿತಾಯವಾಗಲಿದೆ. ಇದು ಕಡುಬಡವರ ಏಳಿಗೆಗೆ ಹೊಸ ಸ್ಪರ್ಶ ನೀಡುವತ್ತ ಪ್ರಧಾನಿ ನರೇಂದ್ರ ಮೋದಿ ಅವರು ಇರಿಸಿರುವ ಐತಿಹಾಸಿಕ ಹೆಜ್ಜೆಯಾಗಿದೆ.

ನವೀಕೃತ ಇಂಧನ-ಹಸಿರು ಶಕ್ತಿಗೆ ಉತ್ತೇಜನ: 'ಜಿಎಸ್‌ಟಿ-2' ಪರಿಸರ ಸ್ನೇಹಿ ಯೋಜನೆಗಳಿಗೆ ಪೂರಕವಾಗಿದೆ. ವಿದ್ಯುತ್ ಚಾಲಿತ ವಾಹನಗಳನ್ನು ಶೇ.28ರಿಂದ ಶೇ.12ರ ಕರವ್ಯಾಪ್ತಿಗೆ ತಂದಿದ್ದು, ಈವರೆಗೆ ದುಬಾರಿ ದರದಲ್ಲಿದ್ದ ಇವಿಎಂ ಬೈಕ್, ಆಟೋ, ಕಾರುಗಳು, ಅವುಗಳ ಬಿಡಿಭಾಗಗಳ ಮೌಲ್ಯ ಅಗ್ಗವಾಗಲಿದೆ. ಮನೆ ಮನೆಗಳಲ್ಲಿ ಸೌರಶಕ್ತಿಯೂ ಬೆಲೆ ಇಳಿಕೆಯ ಬೆಳಕು ಬೀರಲಿದೆ. ವಿಶ್ವದ ಅತಿದೊಡ್ಡ ಸೌರಶಕ್ತಿ ಮೇಲ್ಚಾವಣಿ ಯೋಜನೆ 'ಸೂರ್ಯ ಘರ್' ಪರಿಕರಗಳು ಸಹ ಶೇ.5ರ ತೆರಿಗೆಗೊಳಪಟ್ಟಿದ್ದು, ಅಗ್ಗದ ಬೆಲೆಯಲ್ಲಿ ಇವು ಪ್ರಖರ ಬೆಳಕು ಚೆಲ್ಲಲಿವೆ. ಭವಿಷ್ಯದಲ್ಲಿ 1 ಕೋಟಿ ಸೌರ ಮೇಲ್ಚಾವಣಿ ಗುರಿ ಮೀರಿಸುವ ಸಾಧನೆಗೆ ಹಾಗೂ 17 ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಗೆ ನಾಂದಿಯಾಗಲಿದೆ. ಹಸಿರು ಹೈಡ್ರೋಜನ್ ಮತ್ತು ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಅತ್ಯುತ್ತಮ ಬೆಂಬಲ ನೀಡುವ ಭಾರತದ ದ್ವಿಸ್ತರದ ಜಿಎಸ್‌ಟಿ ಜಗತ್ತಿನ ಶುದ್ಧ ಇಂಧನ ಬೇಡಿಕೆಗೇ ಸ್ವಚ್ಛಂದದ ಬೆಳಕು ತೋರಲಿದೆ.

ಅನ್ನದಾತರಿಗೂ ಶೂನ್ಯ ತೆರಿಗೆಯ ವರದಾನ: ವಿಶ್ವದಲ್ಲೇ ಅತಿ ದೊಡ್ಡ ಕೃಷಿ ಭೂಮಿ ಮತ್ತು ನೀರಾವರಿ ಪ್ರದೇಶ ಹೊಂದಿರುವ ನಮ್ಮೀ ಕೃಷಿ ಪ್ರಧಾನ ದೇಶದಲ್ಲಿ ಜಿಎಸ್‌ಟಿ-2 ಕೃಷಿ ವಲಯದ ಅಭ್ಯುದಯ, ಕೃಷಿ ವೈವಿಧ್ಯೀಕರಣದ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸಲಿದೆ. ಸೌರ ಪಂಪ್‌ಸೆಟ್‌ಗಳು, ಸೋಲಾರ್ ವಿದ್ಯುತ್ ಘಟಕದ ಪರಿಕರಗಳು ಶೇ.5ರ ತೆರಿಗೆ ದರಕ್ಕೆ ತಗ್ಗಿ ನೇಗಿಲಯೋಗಿಗಳಿಗೆ ವರದಾನವಾಗಲಿವೆ. ಕೃಷಿ ಮೂಲಸೌಕರ್ಯಗಳ ವೆಚ್ಚ ಕಡಿಮೆಯಾಗಿ ಉತ್ಪನ್ನ ಮತ್ತು ಆದಾಯ ವೃದ್ಧಿಸಲಿದೆ. ಟ್ರ್ಯಾಕ್ಟರ್ ಸೇರಿದಂತೆ ಕೃಷಿ ಯಂತ್ರೋಪಕರಣ, ಗೊಬ್ಬರ, ಬೀಜ ಮತ್ತು ಔಷಧಿಗಳೆಲ್ಲ ಅಗ್ಗವಾಗಿ ರೈತರ ಹೆಗಲ ಮೇಲಿದ್ದ ಬೆಲೆ ಏರಿಕೆ ಭಾರ ಇಳಿಯಲಿದೆ. ಒಟ್ಟಿನಲ್ಲಿ, ಅತ್ಯಂತ ಕಡಿಮೆ ದರದಲ್ಲಿ ಕೃಷಿ ಸಾಮಗ್ರಿಗಳು ಕೈಗೆಟುಕಿ ಅನ್ನದಾತರ ಬಾಳು ಹಸನಾಗುವುದರಲ್ಲಿ ಸಂದೇಹವಿಲ್ಲ.

ಯುವ ಕೈಗಳಿಗೆ ಉದ್ಯೋಗಾವಕಾಶ: ದೇಶದ ಜನಸಂಖ್ಯೆಯಲ್ಲಿ ಶೇ.31ಕ್ಕೂ ಅಧಿಕವಿರುವ ಯುವ ಕೈಗಳಿಗೆ ಉದ್ಯೋಗಭಾಗ್ಯ ಸೃಷ್ಟಿಯಾಗಲಿದೆ. ನವೋದ್ಯಮಗಳು, ಜವಳಿ, ಕೃಷಿ, ಇಲೆಕ್ಟ್ರಾನಿಕ್ಸ್, ಶಿಕ್ಷಣ, ಮೆಡಿಕಲ್, ಆಟೋಮೊಬೈಲ್, ಹೀಗೆ ಸರ್ವರಂಗಗಳಲ್ಲೂ ಹೊಸ ಉದ್ಯಮಗಳ ಸ್ಥಾಪನೆ ಹೆಚ್ಚಿ ಅಧಿಕ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ. ಸದ್ಯಕ್ಕೆ 65 ಕೋಟಿ ಸನಿಹದಲ್ಲಿರುವ ಉದ್ಯೋಗಿಗಳ ಸಂಖ್ಯೆ ಮತ್ತಷ್ಟು ಅಧಿಕಗೊಳ್ಳುತ್ತದೆ. ಎಂಎಸ್‌ಎಂಇಗಳ ಸಂಖ್ಯೆಯೂ ದ್ವಿಗುಣಗೊಳ್ಳಲಿದ್ದು, ಯುವೋದ್ಯಮಿಗಳ ಉದ್ಯಮಾಕಾಂಕ್ಷೆಗೆ ಅದು ಉತ್ತೇಜಕವಾಗಲಿದೆ. ಸ್ಟಾರ್ಟ್-ಅಪ್ ಉದ್ಯಮಗಳಿಗೆ ಹೊಸ ಬಾಗಿಲು ತೆರೆಯುತ್ತಿರುವ 'ನ್ಯೂ ಇಂಡಿಯಾ' ಯುವಕರಿಗೆ ಭವಿಷ್ಯದ ಭರವಸೆ ಮೂಡಿಸುತ್ತಿದೆ.

ಶೇ.48 ಮಹಿಳೆಯರಿಗೆ ದ್ವಿಸ್ತರದ ಜಿಎಸ್‌ಟಿ ಲಾಭ: ಭಾರತದ ಜನಸಂಖ್ಯೆಯಲ್ಲಿ ಶೇ.48ರಷ್ಟಿರುವ ಮಹಿಳೆಯರು ಈ ದ್ವಿಸ್ತರದ ಜಿಎಸ್‌ಟಿ ಲಾಭದಲ್ಲಿ ಪಾಲುದಾರರು ಎನ್ನುವುದೇ ವಿಶೇಷ. ಕುಟುಂಬ ನಿರ್ವಹಣೆ ಮತ್ತು ಆಯ-ವ್ಯಯದಲ್ಲಿ ಮಹತ್ತರ ಪಾತ್ರಧಾರಿಗಳಾದ ಸ್ತ್ರೀಯರಿಗೇ ಇದು ಹೆಚ್ಚು ಕೊಡುಗೆಯನ್ನು ಕಲ್ಪಿಸಿದೆ. ಅಡುಗೆ ಸಾಮಾನು, ಬಟ್ಟೆ, ದಿನಬಳಕೆ ಅಗತ್ಯ ವಸ್ತುಗಳ ಮೇಲಿನ ಕರಭಾರ ಹಗುರವಾಗಲಿದೆ.

ಇನ್ನೊಂದೆಡೆ, ಸ್ವ-ಸಹಾಯ ಸಂಘಗಳ ಮೂಲಕ ಸಣ್ಣ ಉದ್ಯಮ ನಡೆಸುತ್ತಿರುವ ಲಕ್ಷಾಂತರ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಇದು ಬಲ ತುಂಬಲಿದೆ. ಭಾರತೀಯ ಉದ್ಯಮಗಳಲ್ಲಿ ಇಂದು ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಜಿಎಸ್‌ಟಿ ವ್ಯಾಪ್ತಿಗೊಳಪಟ್ಟು ಗಣನೀಯ ಪ್ರಮಾಣದ ಆದಾಯ ಗಳಿಸುತ್ತಿದ್ದಾರೆ. ಜವಳಿ, ಆಭರಣ, ಬ್ಯೂಟಿ ಪಾರ್ಲರ್, ಗಾರ್ಮೆಂಟ್ಸ್, ಮೆಡಿಕಲ್, ಆಹಾರೋತ್ಪನ್ನ ಹಾಗೂ ಕೃಷಿ ಸಂಬಂಧಿತ ಉದ್ದಿಮೆಗಳಲ್ಲಿ ತಮ್ಮದೇ ಛಾಪು ಮೂಡಿಸುತ್ತಿರುವ ನಾರಿಶಕ್ತಿಗೆ ಜಿಎಸ್‌ಟಿ-2 ಪ್ರೇರಕ ಶಕ್ತಿಯಾಗಿದೆ.

ಎಸ್‌ಬಿಐ ವರದಿ ಪ್ರಕಾರ ದೇಶದ ಒಟ್ಟು ತೆರಿಗೆದಾರರಲ್ಲಿ ಶೇ.20ಕ್ಕೂ ಅಧಿಕ ಮಹಿಳಾ ಉದ್ಯಮಿಗಳ ಪಾಲಿದೆ. ಪ್ರಸ್ತುತ ಜಿಎಸ್‌ಟಿ ನೋಂದಣಿಯಲ್ಲಿ ಸ್ತ್ರೀಯರು ತಮ್ಮದೇ ಆದ ಹೆಜ್ಜೆಗುರುತು ಮೂಡಿಸಿದ್ದು, ಮಹಿಳಾ ಮಾಲೀಕತ್ವದ ಎಂಎಸ್‌ಎಂಇಗಳ ಸಂಖ್ಯೆಯೂ ಹೆಚ್ಚಿದೆ. ಭವಿಷ್ಯದಲ್ಲಿ ಭಾರತದ ಅರ್ಥವ್ಯವಸ್ಥೆಗೆ ಹೊಸ ಭಾಷ್ಯ ಬರೆಯುವ ಈ ಮಹಿಳಾ ಸಮೂಹಕ್ಕೆ ವಿಶಿಷ್ಟ ಕೊಡುಗೆಯಾಗಿದೆ ಈ ದ್ವಿಸ್ತರದ ಜಿಎಸ್‌ಟಿ.

(ಲೇಖಕರು ಸಚಿವರು, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು, ಹೊಸ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:235

ಸಮಾಚಾರ ಸಣ್ಣದಲ್ಲ

ಹರ್ಷಿತ್ ದುಬೈನಿಂದ ಭಾರತಕ್ಕೆ ಹಸ್ತಾಂತರ

ದೆಹಲಿ: ಪ್ರಮುಖ ಜಂಟಿ ಕಾರ್ಯಾಚರಣೆಯಲ್ಲಿ ಗುಜರಾತ್ ಪೊಲೀಸರು ಮತ್ತು ಸಿಬಿಐ ಗುಜರಾತ್‌ನ ಅತಿದೊಡ್ಡ 2300 ಕೋಟಿ ರು.ಗೂ ಹೆಚ್ಚಿನ ಮೊತ್ತದ ಕ್ರಿಕೆಟ್ ಬೆಟ್ಟಿಂಗ್ ಹಗರಣದ ಪರಾರಿಯಾಗಿದ್ದ ಮಾಸ್ಟರ್ ಮೈಂಡ್ ಹರ್ಷಿತ್ ಜೈನ್‌ನನ್ನು ಪತ್ತೆಹಚ್ಚಿ ವಾಪಸ್ ಕರೆತಂದಿವೆ. ಮಾರ್ಚ್ 2023ರಲ್ಲಿ ಪೊಲೀಸ್ ದಾಳಿಯ ನಂತರ ದುಬೈಗೆ ಪಲಾಯನ ಮಾಡಿದ್ದ ಜೈನ್‌ರನ್ನು ಇಂಟರ್‌ಪೋಲ್ ಹೊರಡಿಸಿದ ರೆಡ್ ಕಾರ್ನರ್ ನೋಟಿಸ್ ನಂತರ ಅಹಮದಾಬಾದ್‌ಗೆ ಹಸ್ತಾಂತರಿಸಲಾಯಿತು. ಸೌರಭ್ ಚಂದ್ರಕರ್ ಅಲಿಯಾಸ್ ಮಹಾದೇವ್ ಬುಕ್ಕಿಯೊಂದಿಗೆ ಸಂಬಂಧ ಹೊಂದಿದ್ದ, ಹರ್ಷಿತ್ ಬಾಬುಲಾಲ್ ಜೈನ್‌ನನ್ನು ದುಬೈನಲ್ಲಿ ಬಂಧಿಸಲಾಗಿದ್ದ ಅಂತರ ಸಂಸ್ಥೆಯ ಕ್ರಮದ ನಂತರ ಸೆಪ್ಟೆಂಬರ್ 5ರಂದು ಭಾರತಕ್ಕೆ ಕರೆತರಲಾಯಿತು. ಬೆಟ್ಟಿಂಗ್ ದಂಧೆಯ ಪ್ರಮುಖ ಆರೋಪಿ ಹರ್ಷಿತ್ ಜೈನ್ ಭಾರತದಿಂದ ಪರಾರಿಯಾಗಿದ್ದನು. ಜೈನ್ ಅಡಗಿದ್ದ ಮಾಹಿತಿ ನಂತರ ಗುಜರಾತ್ ಗೃಹ ಸಚಿವಾಲಯ, ಗೃಹ ವ್ಯವಹಾರ ಸಚಿವಾಲಯ ಮತ್ತು ವಿದೇಶಾಂಗ ಸಚಿವಾಲಯದ ಮೂಲಕ ದುಬೈ ಅಧಿಕಾರಿಗಳಿಗೆ ಅವರನ್ನು ಭಾರತಕ್ಕೆ ಮರಳಿ ಕರೆತರಲು ಔಪಚಾರಿಕ ಪ್ರಸ್ತಾವನೆಯನ್ನು ಕಳುಹಿಸಲಾಯಿತು.

ನೇಪಾಳ: ಸಾಮಾಜಿಕ ಜಾಲತಾಣಗಳಿಗೆ ನಿಷೇಧ

ಕಠ್ಮಂಡು: ನೇಪಾಳದಲ್ಲಿ ಫೇಸ್ಬುಕ್, ಟ್ವಿಟರ್, ಯೂಟ್ಯೂಬ್ ಸೇರಿದಂತೆ 26 ಸಾಮಾಜಿಕ ಜಾಲತಾಣಗಳ ಮೇಲೆ ನಿಷೇಧ ಹೇರಲಾಗಿದೆ. ಅಲ್ಲಿನ ಸರಕಾರದ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಲ್ಲಿ ನೋಂದಾಯಿಸಲು ವಿಫಲವಾದ ಹಿನ್ನೆಲೆ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸಾಪ್, ಯೂಟ್ಯೂಬ್ ಸೇರಿದಂತೆ 26 ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಲಾಗಿದೆ ಎಂದು ತಿಳಿದುಬಂದಿದೆ ಮಾಹಿತಿ ತಂತ್ರಜ್ಞಾನ ಸಚಿವಾಲಯದಡಿ ನೋಂದಣಿಗೆ ನೇಪಾಳ ಸರಕಾರ ಆ.28ರಂದು 7 ದಿನಗಳ ಗಡುವು ನೀಡಿತ್ತು. ಆ ಸಮಯ ಅಂತ್ಯ ಹಿನ್ನೆಲೆಯಲ್ಲಿ ಮೆಟಾ ಒಡೆತನದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸಾಪ್, ಯುಟ್ಯೂಬ್, ಎಕ್ಸ್, ರೆಡ್ಡಿಟ್, ಲಿಂಕ್ಸ್ ಇನ್, ಟಿಕ್‌ಟಾಕ್ ಸೇರಿದಂತೆ 26 ಸಾಮಾಜಿಕ ವೇದಿಕೆ ಗಳಿಗೆ ನಿರ್ಬಂಧ ವಿಧಿಸಿದೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಸರಕಾರ ಈ ನಿರ್ಧಾರ ಕೈಗೊಂಡಿದೆ. ಆದರೆ ಈ ಬಗ್ಗೆ ಮೆಟಾ ಸೇರಿದಂತೆ ಯಾವ ಸಂಸ್ಥೆಗಳೂ ಪ್ರತಿಕ್ರಿಯೆ ನೀಡಿಲ್ಲ.

ರಕ್ಷಣಾ ಕಾರ್ಯಕ್ಕಿಳಿದ ಹಾಕಿ ಆಟಗಾರರು

ದೆಹಲಿ: ಪ್ರವಾಹದಿಂದ ತತ್ತರಿಸಿರುವ ಪಂಜಾಬ್‌ನಲ್ಲಿ ರಕ್ಷಣಾ ಕಾರ್ಯಾಚರಣೆಗೆ ಭಾರತೀಯ ಹಾಕಿ ತಂಡದ ಆಟಗಾರರಾದ ರೂಪೀಂದರ್ ಪಾಲ್ ಸಿಂಗ್, ಗುರುವಿಂದರ್ ಸಿಂಗ್ ಚಾಂಡಿ ಮತ್ತು ಮಾಜಿ ಆಟಗಾರ ಜುಗರಾಜ್ ಸಿಂಗ್ ಧುಮುಕಿದ್ದಾರೆ. ರಾಜ್ಯದ 23 ಜಿಲ್ಲೆಗಳ 1900ಕ್ಕೂ ಹೆಚ್ಚು ಗ್ರಾಮಗಳು ಪ್ರವಾಹ ಪರಿಸ್ಥಿತಿ ಎದುರಿಸುತ್ತಿವೆ. ಈವರೆಗೂ 40 ಜನ ಮೃತಪಟ್ಟು 3.5 ಲಕ್ಷಕ್ಕೂ ಅಧಿಕ ಮಂದಿ ಬಾಧಿತರಾಗಿದ್ದಾರೆ. ಡ್ರಾಗ್ ಫ್ಲಿಕರ್ ಜುಗರಾಜ್ ಸಿಂಗ್ ಮತ್ತು ರುಪಿಂದರ್ ಪಾಲ್ ಸಿಂಗ್ ಮತ್ತು ಗುರುವಿಂದರ್ ಸಿಂಗ್ ಚಾಂಡಿ ಅವರು ಗುರುದಾಸಪುರದಲ್ಲಿ ಪ್ರವಾಹ ಸಂತ್ರಸ್ತರ ನೆರವಿಗಾಗಿ ಅಖಾಡಕ್ಕೆ ಇಳಿದಿದ್ದಾರೆ. 'ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಗಡಿ ಭದ್ರತಾ ಪಡೆ, ಸೇನೆ, ಪೊಲೀಸ್, ಸ್ಥಳೀಯ ಆಡಳಿತ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡಗಳು ಜತೆಗೂಡಿ ಯುದ್ಧೋಪಾದಿಯಲ್ಲಿ ಕೆಲಸ ಆರಂಭಿಸಿವೆ.

ಬಾಲಕಿಗೆ 40 ದಿನಗಳಲ್ಲಿ 13 ಬಾರಿ ಹಾವು ಕಡಿತ

ಲಖನೌ: ಕಳೆದ 40 ದಿನಗಳ ಅವಧಿಯಲ್ಲಿ ಕಪ್ಪು ಬಣ್ಣದ ಹಾವೊಂದು ತನಗೆ 13 ಬಾರಿ ಕಚ್ಚಿದೆ ಎಂದು 15 ವರ್ಷದ ಬಾಲಕಿಯೊಬ್ಬಳು ದೂರು ನೀಡಿರುವ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಕೌಶಂಬಿ ಜಿಲ್ಲೆಯ ಬಸ್ತಿ ಭೈಸಾ ಎಂಬ ಸಣ್ಣ ಹಳ್ಳಿಯಲ್ಲಿ ನಡೆದಿದೆ. ಬಾಲಕಿಯ ಈ ಹೇಳಿಕೆಯಿಂದ ಗ್ರಾಮಸ್ಥರು ಭೀತಿಗೊಂಡಿದ್ದಾರೆ. ಅದೇ ಒಂದು ಹಾವು ತನಗೆ ಪದೇ ಪದೇ ಬಂದು ಕಚ್ಚುತ್ತಿದೆ ಎಂದು ಬಾಲಕಿ ಹೇಳಿದ್ದಾಳೆ. ಸುಮಾರು 300 ಜನರು ವಾಸಿಸುವ ಕಾಲೋನಿಯ ನಿವಾಸಿಯಾಗಿರುವ ಆ ಹುಡುಗಿ, ಅದೇ ಹಾವು ಪದೇ ಪದೇ ತನ್ನನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿದ್ದಾಳೆ. ಕಪ್ಪು ಹಾವೊಂದು ನನ್ನನ್ನು ಹಿಂಬಾಲಿಸುತ್ತಿದೆ, ದಯವಿಟ್ಟು ನನ್ನನ್ನು ಉಳಿಸಿ ಎಂದು ಬೇಡಿಕೊಂಡಿದ್ದಾಳೆ. ಪ್ರತಿ ಬಾರಿ ಅದು ಕಚ್ಚಿದಾಗಲೂ ವಿದ್ಯುತ್ ಆಘಾತದಂತೆ ಭಾಸವಾಗುತ್ತದೆ. ಅದರ ಹಲ್ಲಿನ ಗುರುತುಗಳು ನನ್ನ ದೇಹದ ಮೇಲೆ ಉಳಿಯುತ್ತವೆ ಎಂದು ಹೇಳಿದ್ದಾಳೆ. ದಿನಗೂಲಿ ಕೃಷಿ ಕಾರ್ಮಿಕನಾಗಿರುವ ಆಕೆಯ ತಂದೆ ರಾಜೇಂದ್ರ, ಜುಲೈ 22ರಂದು ಮೊದಲ ಹಾವು ಕಡಿತ ಸಂಭವಿಸಿದೆ ಎಂದು ಹೇಳಿದರು. ಅಂದಿನಿಂದ, ಅವರು ವೈದ್ಯಕೀಯ ಚಿಕಿತ್ಸೆಗಾಗಿ 4 ಲಕ್ಷ ರು.ಗಳಿಗೂ ಹೆಚ್ಚು ಖರ್ಚು ಮಾಡಿದ್ದಾರೆ ಎಂದೂ ಹೇಳಲಾಗುತ್ತಿದೆ.

{ ಮುಖೇಶ್ ಅಂಬಾನಿ } ರಿಲಯನ್ಸ್ ಗ್ರೂಪ್ ಅಧ್ಯಕ್ಷ

ನಮ್ಮ ದೇಶದ ಜನರಿಗೆ ದೀಪಾವಳಿ ಉಡುಗೊರೆ ನೀಡುವ ಭರವಸೆಯನ್ನು ಈಡೇರಿಸಿದ್ದಕ್ಕಾಗಿ ಮೋದಿ ಅವರಿಗೆ ನನ್ನ ಅಭಿನಂದನೆಗಳು. ಗ್ರಾಹಕರಿಗೆ ಉತ್ಪನ್ನಗಳು ಮತ್ತು ಸೇವೆಗಳನ್ನು ಹೆಚ್ಚು ಕೈಗೆಟುಕುವಂತೆ ಮಾಡುವ, ವ್ಯವಹಾರ ಹೆಚ್ಚಿಸುವ ಸಂಕೀರ್ಣತೆಯನ್ನು ಸರಾಗಗೊಳಿಸುವ ಜಿಎಸ್‌ಟಿ ತರ್ಕಬದ್ಧಗೊಳಿಸುವಿಕೆಯು ಒಂದು ಪ್ರಗತಿಪರ ಹೆಜ್ಜೆ.



4 ದಿನಗಳಿಂದಲೂ ಮುಂದುವರಿಯುತ್ತಿರುವ ಮಳೆ | ಅಪಾಯದ ಮಟ್ಟ ಮೀರಿದ ಯಮುನಾ ನದಿ

ನಿರಂತರ ಮಳೆ: ಉತ್ತರ ಭಾರತವಿಡೀ ಅಸ್ತವ್ಯಸ್ತ

ದೆಹಲಿ: ಉತ್ತರ ಭಾರತದಲ್ಲಿ ನಿರಂತರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಕಾಶ್ಮೀರದಿಂದ ದೆಹಲಿಯ ವರೆಗೆ ಭಾರೀ ಮಳೆ ಮತ್ತು ಪ್ರವಾಹಗಳು ಅಪಾರ ಹಾನಿಯನ್ನುಂಟುಮಾಡಿವೆ, ಹಾಗಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಶಿಕ್ಷಣ ಸಂಸ್ಥೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿವೆ, ವ್ಯವಹಾರಗಳು ಸ್ತಬ್ಧಗೊಂಡಿವೆ ಮತ್ತು ರಸ್ತೆ, ರೈಲು ಸಂಪರ್ಕಗಳು ತೀವ್ರವಾಗಿ ಹಾನಿಗೊಳಗಾಗಿವೆ. ದೆಹಲಿಯಲ್ಲಿ ಯಮುನಾ ನದಿ ಇನ್ನೂ ಅಪಾಯದ ಮಟ್ಟಕ್ಕಿಂತ ಮೇಲಿದ್ದು, ಭೂಕುಸಿತಗಳು ಮತ್ತು ಮೇಲೇರಿರುವ ನದಿ ಮಟ್ಟಗಳು ಜನರಲ್ಲಿ ಆತಂಕವನ್ನು ಹೆಚ್ಚಿಸಿವೆ.

ನೈಸರ್ಗಿಕ ವಿಕೋಪಗಳಿಂದ ಬಳಲುತ್ತಿರುವ ಹಿಮಾಚಲ ಪ್ರದೇಶದ ಕುಲು ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತದಿಂದ ಎರಡು ಮನೆಗಳು ಕುಸಿದು ಬಿದ್ದಿದ್ದು, ಒಬ್ಬರು ಸಾವನ್ನಪ್ಪಿದ್ದಾರೆ ಮತ್ತು ಆರು ಮಂದಿ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿ ಮೂವರನ್ನು ಹೊರತೆಗೆಯುವಲ್ಲಿ ಯಶಸ್ವಿಯಾದರು, ಆದರೆ ನಿರಂತರ ಮಳೆಯಿಂದಾಗಿ ಶೋಧ ಕಾರ್ಯ ಕಷ್ಟಕರವಾಗಿದೆ.

ಹಿಮಾಚಲದಲ್ಲಿ ಒಟ್ಟು 1,292 ರಸ್ತೆಗಳು ಮುಚ್ಚಲ್ಪಟ್ಟಿವೆ. ಮಂಡಿ, ಕುಲ್ಲು ಮತ್ತು ಶಿಮ್ಲಾ ಜಿಲ್ಲೆಗಳು ಹೆಚ್ಚು ಹಾನಿಗೊಳಗಾದ ಜಿಲ್ಲೆಗಳಾಗಿವೆ ಎಂದು ರಾಜ್ಯ ತುರ್ತು ಕಾರ್ಯಾಚರಣಾ ಕೇಂದ್ರ ತಿಳಿಸಿದೆ. ಜೂನ್ 20ರಿಂದ ಮುಂಗಾರು ಮಳೆ ರಾಜ್ಯಕ್ಕೆ ಕಾಲಿಟ್ಟ ದಿನದಿಂದ ಶುಕ್ರವಾರದ ವರೆಗೆ ಹಿಮಾಚಲ ಪ್ರದೇಶದಲ್ಲಿ 95 ಬಾರಿ ಪ್ರವಾಹ, 45 ಬಾರಿ ಮೇಘಸ್ಫೋಟ ಮತ್ತು 127 ಪ್ರಮುಖ ಭೂಕುಸಿತಗಳು ಸಂಭವಿಸಿವೆ. ಮಳೆ ಸಂಬಂಧಿತ ಅಪಘಾತಗಳು ಮತ್ತು ಅವಘಡಗಳು ಇದುವರೆಗೆ ಕನಿಷ್ಠ 343 ಜನರನ್ನು ಬಲಿ ತೆಗೆದುಕೊಂಡಿವೆ ಮತ್ತು ರಾಜ್ಯವು ಅಂದಾಜು 3,690 ಕೋಟಿ ರು.ನಷ್ಟವನ್ನು ಅನುಭವಿಸಿದೆ. ವಾರಾಂತ್ಯದಲ್ಲಿ ಮತ್ತಷ್ಟು ಗುಡುಗು ಮತ್ತು ಮಿಂಚಿನಿಂದ ಕೂಡಿದ ಮಳೆಯಾಗುವ ಸಾಧ್ಯತೆ ಇದೆ ಎಂದು ಸ್ಥಳೀಯ ಹವಾಮಾನ ಇಲಾಖೆಯಿಂದ ಎಚ್ಚರಿಕೆ ನೀಡಿದೆ.

ದೆಹಲಿಯಲ್ಲಿ ಭಾರೀ ಮಳೆಗೆ ಮುಳುಗಿರುವ ಕಟ್ಟಡಗಳು

- ಹಿಮಾಚಲದಲ್ಲಿ ಮುಚ್ಚಲ್ಪಟ್ಟ 1292 ರಸ್ತೆಗಳು
- ಈ ವರ್ಷದ ಮಳೆಗೆ ಒಟ್ಟು 343 ಬಲಿ
- ಕೇಂದ್ರ ಕೃಷಿ ಸಚಿವರಿಂದ ಅವಲೋಕನ

ಸಂಪರ್ಕ ಕಡಿತಗೊಂಡ ಕಾಶ್ಮೀರ: ತೀವ್ರ ಮಳೆ ಮತ್ತು ಭೂಕುಸಿತಗಳ ಕಾರಣದಿಂದ ಎಲ್ಲಾ ಪ್ರಮುಖ ರಸ್ತೆ ಜಾಲಗಳು ಉಳಿದ ಭಾಗಗಳಿಂದ ಸಂಪರ್ಕ ಕಡಿತಗೊಂಡಿದೆ. ಜಮ್ಮು-ಶ್ರೀನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ (ಎನ್‌ಹೆಚ್-44) ಕಾಶ್ಮೀರ ಮತ್ತು ಕಥುವಾ ನಡುವೆ 3,500ಕ್ಕೂ ಹೆಚ್ಚು ವಾಹನಗಳು ಸಿಲುಕಿಕೊಂಡಿರುವುದರಿಂದ ಹಲವಾರು ರಸ್ತೆಗಳು ಮುಚ್ಚಿಹೋಗಿವೆ. ಹಳಿಗಳಿಗೆ ವ್ಯಾಪಕ ಹಾನಿಯಾಗಿರುವ ಕಾರಣ ಜಮ್ಮು ವಿಭಾಗದಲ್ಲಿ ರೈಲ್ವೆ ಸಂಪರ್ಕವನ್ನು ಒಂಬತ್ತು ದಿನಗಳವರೆಗೆ ಸ್ಥಗಿತಗೊಳಿಸಲಾಗಿದೆ

ಪಂಜಾಬ್ ಮತ್ತು ಹರಿಯಾಣದಲ್ಲೂ ಆತಂಕ: ಪಂಜಾಬ್ ಮೂರು ದಶಕಗಳಲ್ಲಿಯೇ ಅತ್ಯಂತ ಭೀಕರ ಪ್ರವಾಹ ದುರಂತವನ್ನು ಎದುರಿಸುತ್ತಿದೆ, ಸಟ್ಲೆಜ್, ಬಿಯಾಸ್ ಮತ್ತು ರಾವಿ ಮುಂತಾದ ನದಿಗಳು ಉಕ್ಕಿ ಹರಿಯುತ್ತಿವೆ. ಪ್ರವಾಹವು 37 ಜೀವಗಳನ್ನು ಬಲಿ ತೆಗೆದುಕೊಂಡಿದೆ, 3.55 ಲಕ್ಷಕ್ಕೂ ಹೆಚ್ಚು ಜನರನ್ನು ಬಾಧಿಸಿದ್ದು, 1.75 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಬೆಳೆಗಳನ್ನು ನಾಶಮಾಡಿದೆ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಅಮೃತಸರ ಮತ್ತು ಗುರುದಾಸ್‌ಪುರದ ನೆರೆ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ ಹಾನಿ ಕೈಗೊಂಡರು. ಪಂಜಾಬ್ ಶಾಲಾ ಮತ್ತು ಕಾಲೇಜು ರಜಾದಿನಗಳನ್ನು ಸೆಪ್ಟೆಂಬರ್ 7ರ ವರೆಗೆ ವಿಸ್ತರಿಸಿದೆ. ನೆರೆಯ ರಾಜ್ಯವಾದ ಹರಿಯಾಣ ಕೂಡ ಕಟ್ಟೆಚ್ಚರದಲ್ಲಿದ್ದು, ತ್ವರಿತ ನೀರು ಸರಬರಾಜು ಮತ್ತು ರಾಜ್ಯಾದ್ಯಂತ ಕುಡಿಯುವ ನೀರಿನ ನಿರಂತರ ಪೂರೈಕೆಗೂ ಆದೇಶಿಸಲಾಗಿದೆ.

ಯಮುನೆಯ ಅಬ್ಬರ: ಮುಳುಗಿದ ದೆಹಲಿ

ರಾಷ್ಟ್ರ ರಾಜಧಾನಿ ದೆಹಲಿಯ ಸುತ್ತಮುತ್ತ ಕಳೆದ ಒಂದು ವಾರದಿಂದ ಎಡೆಬಿಡದೆ ಸುರಿಯುತ್ತಿರುವ ಭಾರೀ ಮಳೆಯಿಂದ ಅಕ್ಷರಶಃ ದೆಹಲಿ ಮುಳುಗುವ ಸ್ಥಿತಿಗೆ ತಲುಪಿದೆ. ಯಮುನಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿರು ವುದರಿಂದ ರಾಷ್ಟ್ರ ರಾಜಧಾನಿಯಲ್ಲಿ ಗಂಭೀರ ಪ್ರವಾಹ ಎದುರಾಗಿದೆ. ಭಾರೀ ಮಳೆ ಮತ್ತು ನದಿಯ ಉಕ್ಕಿ ಹರಿಯುವಿಕೆಯಿಂದಾಗಿ ಯಮುನಾ ಬಜಾರ್, ಗೀತಾ ಕಾಲೋನಿ, ಮಜ್ನು ಕಾ ತಿಲಾ ಮತ್ತು ಮಯೂರ್ ವಿಹಾರ್‌ನಂತಹ ಅನೇಕ ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು, 14,000ಕ್ಕೂ ಹೆಚ್ಚು ನಿವಾಸಿಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ದೆಹಲಿ ಸಂಚಾರ ಪೊಲೀಸರು ಹಳೆಯ ಯಮುನಾ ಕಬ್ಬಿಣದ ಸೇತುವೆ (ಲೋಹೆ ಕಾ ಪುಲ್) ಅನ್ನು ವಾಹನ ಮತ್ತು ಪಾದಚಾರಿ ಸಂಚಾರಕ್ಕೆ ಸ್ಥಗಿತಗೊಳಿಸಿದ್ದಾರೆ. ವಾಹನಗಳ ಹರಿವನ್ನು ನಿಯಂತ್ರಿಸಲು ತಿರುವು ಮಾರ್ಗಗಳನ್ನು ಸ್ಥಾಪಿಸಲಾಗಿದೆ. ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದ್ದು, ರಕ್ಷಣಾ ತಂಡಗಳು ಹೆಚ್ಚು ಹಾನಿಗೊಳಗಾದ ಪ್ರದೇಶ ಗಳಿಂದ ಜನರನ್ನು ಸ್ಥಳಾಂತರಿಸಲು ಪ್ರಯತ್ನಿಸುತ್ತಿವೆ. ಯಮುನಾ ಬಜಾರ್‌ನಲ್ಲಿ ಸ್ಥಾಪಿಸಲಾದ ಪರಿಹಾರ ಶಿಬಿರಗಳು ಸಹ ನೀರಿನಿಂದ ತುಂಬಿ ಹೋಗಿರುವುದರಿಂದ ರಕ್ಷಣಾ ಕಾರ್ಯಗಳು ಕಠಿಣವಾಗಿದ್ದು, ನಾಗರಿಕರು ಹತಾಶೆಯ ಮನೋಭಾವದಲ್ಲಿದ್ದಾರೆ.

ಪ್ರವಾಹಕ್ಕೆ ಕೊಚ್ಚಿಕೊಂಡ ಹೋದ ರಸ್ತೆಗಳು.

ಮಳೆ ನೀರಿನಲ್ಲಿ ಮುಳುಗಿರುವ ವಾಹನಗಳು.

ಟೆಸ್ಲಾ ಕಾರು ಖರೀದಿಸಿದ ಮಹಾರಾಷ್ಟ್ರ ಸಾರಿಗೆ ಸಚಿವ

ಮುಂಬೈ: ಭಾರತದಲ್ಲಿ ಮೊದಲ ಟೆಸ್ಲಾ ಕಾರು ಮಾರಾಟವಾಗಿದ್ದು, ಅದನ್ನು ಮಹಾರಾಷ್ಟ್ರದ ಸಚಿವರೊಬ್ಬರು ಖರೀದಿಸಿದ್ದಾರೆ. ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ ಟೆಸ್ಲಾ ಎಕ್ಸ್‌ಪೀರಿ ಯೆನ್ಸ್ ಸೆಂಟರ್‌ನಿಂದ ಕಾರು ಮಾರಾಟವಾಗಿದೆ. ರಾಜ್ಯದ ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ಅವರಿಗೆ ಹಸ್ತಾಂತರಿಸಲಾಗಿದೆ. ಭಾರತದಲ್ಲಿ ಮೊದಲನೆಯದಾದ ಟೆಸ್ಲಾ ಎಕ್ಸ್‌ಪೀರಿಯೆನ್ಸ್ ಸೆಂಟರ್ ಅನ್ನು ಜುಲೈ 15ರಂದು ಉದ್ಘಾಟಿಸಲಾ ಗಿತ್ತು. 'ಭಾರತದ ಮೊದಲ ಟೆಸ್ಲಾ ಕಾರು ಮಾಡೆಲ್ ವೈ ಖರೀದಿಸಲು ನನಗೆ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ'ಎಂದು ಮಹಾರಾಷ್ಟ್ರ ಸಾರಿಗೆ ಸಚಿವ ಮತ್ತು ಭಾರತದ ಮೊದಲ ಟೆಸ್ಲಾ ಕಾರಿನ ಮಾಲೀಕ ಪ್ರತಾಪ್ ಸರ್ನಾಯಕ್ ಸಂತಸ ವ್ಯಕ್ತಪಡಿಸಿದ್ದಾರೆ.

ಶಿಲ್ಪಾ ಶೆಟ್ಟಿ ದಂಪತಿಗೆ ನೋಟೀಸ್

ಮುಂಬೈ: 60 ಕೋಟಿ ರುಪಾಯಿ ವಂಚನೆ ಪ್ರಕರಣದಲ್ಲಿ ನಟಿ ಶಿಲ್ಪಾ ಶೆಟ್ಟಿ ಮತ್ತು ಅವರ ಪತಿ ರಾಜ್ ಕುಂದ್ರಾ ವಿರುದ್ಧ ಮುಂಬೈ ಪೊಲೀಸರು ಲುಕ್ ಔಟ್ ನೋಟೀಸ್ ಹೊರಡಿಸಿದ್ದಾರೆ. ಬೆಸ್ಟ್ ಡೀಲ್ ಪ್ರೈವೇಟ್ ಲಿಮಿಟೆಡ್ ಹೂಡಿಕೆ ಒಪ್ಪಂದಕ್ಕೆ ಸಂಬಂಧಿಸಿ ಉದ್ಯಮಿಯೊಬ್ಬರಿಗೆ 60 ಕೋಟಿ ರುಪಾಯಿ ವಂಚನೆ ಮಾಡಿರುವ ಆರೋಪ ಕೇಳಿಬಂದಿದೆ. ದೂರಿನ ಆಧಾರದ ಮೇಲೆ ಮುಂಬೈ ಪೊಲೀಸರ ಆರ್ಥಿಕ ಅಪರಾಧ ವಿಭಾಗ ಪ್ರಕರಣ ದಾಖಲಿಸಿದೆ. ಅಧಿಕಾರಿಗಳು ದಂಪತಿಯ ಜೊತೆಗೆ ಸಂಸ್ಥೆಯ ಲೆಕ್ಕಪರಿಶೋಧನಾಧಿಕಾರಿಗಳನ್ನೂ ತನಿಖೆಗೆ ಕರೆದಿದ್ದಾರೆ.

ಉದ್ಯಮಿ ದೀಪಕ್ ಕೊಠಾರಿ ಅವರು 2015-2023 ರವರೆಗೆ ವ್ಯವಹಾರ ವಿಸ್ತರಣೆಗಾಗಿ 60.48 ಕೋಟಿ ರುಗಳನ್ನು ನೀಡಿದ್ದರು. ಆದರೆ ಕುಂದ್ರಾ ದಂಪತಿ ಅದನ್ನು ತಮ್ಮ ವೈಯಕ್ತಿಕ ವೆಚ್ಚಗಳಿಗೆ ಖರ್ಚು ಮಾಡಿದ್ದಾರೆ ಎಂದು ಉದ್ಯಮಿ ಆರೋಪಿಸಿದ್ದಾರೆ. ದಂಪತಿ ಹಣವನ್ನು ಆರಂಭದಲ್ಲಿ ಸಾಲ ಎಂದು ಪಡೆದಿದ್ದರು. ನಂತರ ಹೂಡಿಕೆ ಎಂದು ಟ್ಯಾಕ್ಸ್ ಸೇವಿಂಗ್ಸ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಉದ್ಯಮಿ ಕೋಠಾರಿ ಪ್ರಕಾರ, ಶಿಲ್ಪಾ ಶೆಟ್ಟಿ ದಂಪತಿ ಪಡೆದಿದ್ದ ಹಣವನ್ನು ಶೇಕಡಾ 12ರಷ್ಟು ಬಡ್ಡಿಯೊಂದಿಗೆ ನಿರ್ದಿಷ್ಟ ಅವಧಿಗೆ ಹಿಂತಿರುಗಿಸಬೇಕಾಗಿತ್ತು. 2016ರಲ್ಲಿ ಈ ಬಗ್ಗೆ ಆ ದಂಪತಿ ಲಿಖಿತ ಪತ್ರದ ಮೂಲಕ ಭರವಸೆ ಕೂಡ ನೀಡಿತ್ತು. ಆದರೆ ಇಷ್ಟು ದಿನವಾದರೂ ಹಣ ವಾಪಾಸ್ ನೀಡಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಮುಂಬೈಗೆ ಉಗ್ರರ ಬೆದರಿಕೆ

ಮುಂಬೈ: ಹಿಂದೆಂದಿಗಿಂತಲೂ ಕಂಡು ಕೇಳರಿಯದ ಉಗ್ರ ದಾಳಿ ನಡೆಸುವುದಾಗಿ ಮುಂಬೈ ಸಂಚಾರ ಪೊಲೀಸ್ ಠಾಣೆಗೆ ಶುಕ್ರವಾರ ವಾಟ್ಸಪ್ ಬೆದರಿಕೆ ಸಂದೇಶ ಬಂದಿದೆ. ಅನಾಮಿಕ ವ್ಯಕ್ತಿಯೊಬ್ಬ ನಿಂದ ಬೆದರಿಕೆ ಸಂದೇಶ ಬಂದಿದ್ದು, ನಗರದ್ಯಾಂತ ಭಾರೀ ಕಟ್ಟೆಚ್ಚರ ವಹಿಸಲಾಗಿದೆ.

ಪಾಕಿಸ್ತಾನ ಮೂಲದ ಜಿಹಾದಿ ಗುಂಪಿನ ಸದಸ್ಯನಿಂದ ಬೆದರಿಕೆ ಬಂದಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಪಾಕಿಸ್ತಾನ ಲಷ್ಕರ್-ಎ-ಜಿಹಾದಿ ಸಂಘಟನೆಯ 14 ಉಗ್ರರು ಭಾರತ ಪ್ರವೇಶಿಸಿದ್ದಾರೆ. 400 ಕೆ.ಜಿ ಆರ್‌ಡಿಎಕ್ಸ್ ಸ್ಫೋಟಿಸಿ ಜನರನ್ನು ಹತ್ಯೆಗೆಯ್ಯಲಿದ್ದಾರೆ, ಅಲ್ಲದೇ ನಗರಾದ್ಯಂತ 34 ವಾಹನಗಳಲ್ಲಿ ಮಾನವ ಬಾಂಬ್ ಸ್ಫೋಟಿಸ ಲಾಗುವುದು ಎಂದು ಎಚ್ಚರಿಕೆ ಸಂದೇಶ ಕಳಿಸಿ ರುವುದಾಗಿ ಮುಂಬೈ ಪೊಲೀಸರು ತಿಳಿಸಿ ದ್ದಾರೆ. ಬೆದರಿಕೆ ಸಂದೇಶ ಬಂದ ಕೂಡಲೇ ಮುಂಬೈ ಟ್ರಾಫಿಕ್ ಪೊಲೀಸರು, ಅಪರಾಧ ವಿಭಾಗಕ್ಕೆ ಮಾಹಿತಿ ರವಾನಿಸಿದ್ದಾರೆ. ಮುಂಬೈ ಪೊಲೀಸರು ಫುಲ್ ಅಲರ್ಟ್ ಆಗಿದ್ದು, ಇಡೀ ರಾಜ್ಯದಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಅಲ್ಲದೇ ಬೆದರಿಕೆಯ ಪ್ರತಿಯೊಂದು ಸಾಧ್ಯತೆ ಮತ್ತು ಮೂಲವನ್ನು ತನಿಖೆ ಮಾಡಲಾಗುತ್ತಿದೆ.

ಮುಂಬೈನಲ್ಲಿ ಗಣೇಶ ವಿಸರ್ಜನೆ ಕಾರ್ಯಕ್ರಮಗಳು ನಡೆಯುತ್ತಿವೆ. ಹೀಗಾಗಿ ಅದನ್ನೇ ಗುರಿ ಮಾಡಲಾಗಿದೆಯೇ ಎಂಬ ಅನುಮಾನಗಳೂ ಹುಟ್ಟಿಕೊಂಡಿದೆ. ಕಳೆದ ಆಗಸ್ಟ್ 29ರಂದು ಪಾಟ್ನಾ ಸಿವಿಲ್ ನ್ಯಾಯಾ ಲಯದ ಅಧಿಕಾರಿಗಳಿಗೆ ಇ-ಮೇಲ್ ಮೂ ಲಕ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ಶೇ.40ರಷ್ಟು ಗಾಜಾ ಭೂಮಿ ಇಸ್ರೇಲ್ ವಶ

ಗಾಜಾ: ಇಸ್ರೇಲ್ ಸೇನೆಯು ಗಾಜಾ ನಗರದ 40% ಭಾಗವನ್ನು ತನ್ನ ವಶದಲ್ಲಿಟ್ಟುಕೊಂಡಿದೆ ಎಂದು ಘೋಷಿಸಿದ್ದು, ಮುಂದಿನ ದಿನಗಳಲ್ಲಿ ದಾಳಿಯನ್ನು ವಿಸ್ತರಿಸಿ ತೀವ್ರಗೊಳಿಸಲಿದೆ ಎಂದು ತಿಳಿಸಿದೆ. ಇಸ್ರೇಲ್‌ನ ವೈಮಾನಿಕ ದಾಳಿಗಳಿಂದ ಗಾಜಾ ನಗರದಲ್ಲಿ 30ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಗಾಜಾದ ಸಿವಿಲ್ ಡಿಫೆನ್ಸ್ ಏಜೆನ್ಸಿ ವರದಿ ಮಾಡಿದೆ. ಒಟ್ಟಾರೆ ಗಾಜಾ ಪಟ್ಟಿಯಲ್ಲಿ ಕನಿಷ್ಠ 64 ಪ್ಯಾಲೆಸ್ಟೀನಿಯರು ಹತರಾಗಿದ್ದಾರೆಂದು ತಿಳಿದುಬಂದಿದೆ.

ಇಸ್ರೇಲ್ ಸೇನೆಯ ವಕ್ತಾರ ಬ್ರಿಗೇಡಿಯರ್ ಜನ ರಲ್ ಎಫೀ ಡೆಫ್ರಿನ್, 'ಗಾಜಾ ನಗರದ 40% ಭೂಭಾಗ ವನ್ನು ನಾವು ವಶಪಡಿಸಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ದಾಳಿಯನ್ನು ತೀವ್ರಗೊಳಿಸುತ್ತೇವೆ ಎಂದು ಹೇಳಿದ್ದಾರೆ. 2023ರ ಅಕ್ಟೋಬರ್‌ನಲ್ಲಿ ಹಮಾಸ್‌ನ ದಾಳಿಯಿಂದ ಉಂಟಾದ ಯುದ್ಧವನ್ನು ಸಂಪೂರ್ಣ ವಾಗಿ ಗೆಲ್ಲುವ ವರೆಗೆ ಹಮಾಸ್ ಮೇಲಿನ ಒತ್ತಡವನ್ನು ಹೆಚ್ಚಿಸುತ್ತೇವೆ' ಎಂದು ಡೆಫ್ರಿನ್ ಶಪಥ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ, ಗಾಜಾ ನಗರದ ಉತ್ತರ ಭಾಗ ದಲ್ಲಿ ಇಸ್ರೇಲ್ ತೀವ್ರ ಬಾಂಬ್ ದಾಳಿಗಳನ್ನು ನಡೆಸಿದೆ, ಆದರೂ ಅಂತಾರಾಷ್ಟ್ರೀಯ ಒತ್ತಡದ ಹೊರತಾಗಿಯೂ ಈ ಕಾರ್ಯಾಚರಣೆಯನ್ನು ಮುಂದುವರಿಸಲಾಗುತ್ತಿದೆ.

ಜಿಎಸ್‌ಟಿ ಇಳಿಕೆ ಪ್ರಯೋಜನ ಗ್ರಾಹಕರಿಗೆ: ಗೋಯಲ್

ಪರಿಷ್ಕೃತ ಜಿಎಸ್‌ಟಿ ಮೇಲೆ ಕೇಂದ್ರ ನಿಗಾ

ದೆಹಲಿ: ಜಿಎಸ್‌ಟಿ ದರಗಳ ಪರಿಷ್ಕರಣೆಯ ಪ್ರಯೋಜನಗಳನ್ನು ಗ್ರಾಹಕರಿಗೆ ಸಂಪೂರ್ಣವಾಗಿ ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸರಕಾರ ನಿಗಾವಹಿಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಶುಕ್ರವಾರ ಹೇಳಿದರು.

ವಿವಿಧ ವಸ್ತುಗಳ ಮೇಲಿನ ತೆರಿಗೆ ಇಳಿಕೆಯು ಅವುಗಳ ಬೆಲೆಗಳಲ್ಲಿ ಪ್ರತಿಫಲಿಸಲಿವೆ ಎಂಬ ಭರವಸೆಯನ್ನು ಉದ್ಯಮ ಕ್ಷೇತ್ರ ನೀಡಿರುವುದಾಗಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ನಿತ್ಯ ಬಳಕೆಯ ಹತ್ತು ಹಲವು ಉತ್ಪನ್ನಗಳು, ಸೇವೆಗಳ ಮೇಲಿನ ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ಇತ್ತೀಚೆಗೆ ತೆಗೆದುಕೊಂಡಿದ್ದು, ಈ ತೀರ್ಮಾನಗಳು ನವರಾತ್ರಿಯ ಮೊದಲ ದಿನವಾದ ಇದೇ 22ರಿಂದಲೇ ಜಾರಿಗೆ ಬರಲಿವೆ.

'ಭಾರತದ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ವಿಧಿಸಿದ್ದರಿಂದ ಮೋದಿ ಸರಕಾರವು ಜಿಎಸ್‌ಟಿ ಸುಧಾರಣೆ ಕೈಗೊಂಡಿರಬಹುದು ಎಂಬ ವಾದವನ್ನು ಗೋಯಲ್ ಇದೇ ವೇಳೆ ತಿರಸ್ಕರಿಸಿದರು. ಕೇಂದ್ರ ಮತ್ತು ರಾಜ್ಯ ಸರಕಾರಗಳ ಹಣಕಾಸು ಸಚಿವರು, ಕಾರ್ಯದರ್ಶಿಗಳ ನಡುವೆ ವರ್ಷಪೂರ್ತಿ ನಡೆದ ಸಮಾಲೋಚನೆಯ ಪರಿಣಾಮದಿಂದ ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಇತರ ದೇಶದ ನಿರ್ಧಾರಕ್ಕೂ ನಮ್ಮ ಜಿಎಸ್‌ಟಿ ವ್ಯವಸ್ಥೆಯಲ್ಲಿನ ಸುಧಾರಣೆಗೂ ಸಂಬಂಧವಿಲ್ಲ' ಎಂದು ಅವರು ಹೇಳಿದರು. ತೆರಿಗೆ ಇಳಿಕೆಯ ಪೂರ್ಣ ಪ್ರಯೋಜನ ಗ್ರಾಹಕರಿಗೆ ದೊರೆಯುವಂತಾಗಬೇಕು. ಇದನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸಿದ್ಧ ಎಂದೂ ಘೋಯಲ್ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಸಂಘ ಪ್ರೇರಿತ ಸಂಸ್ಥೆಗಳ ಸಭೆ

ಆರ್‌ಎಸ್‌ಎಸ್ ರಾಷ್ಟ್ರೀಯ ಸಮನ್ವಯ ಸಭೆ

ಜೋಧಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಸಂಘ ಪ್ರೇರಿತ ಸಂಸ್ಥೆಗಳ ಅಖಿಲ ಭಾರತ ಪದಾಧಿಕಾರಿಗಳ ಮೂರು ದಿನಗಳ ಸಭೆ ಜೋಧಪುರದ ಲಾಲ್ ಸಾಗರ್‌ನಲ್ಲಿರುವ ಆದರ್ಶ ವಿದ್ಯಾ ಮಂದಿರದಲ್ಲಿ ಪ್ರಾರಂಭವಾಯಿತು. ಸರಸಂಘಚಾಲಕ್ ಡಾ. ಮೋಹನ್ ಭಾಗವತ್ ಮತ್ತು ದತ್ತಾತ್ರೇಯ ಹೊಸಬಾಳೆ ಅವರು ಮೊದಲ ಅಧಿವೇಶನದಲ್ಲಿ ಭಾರತ ಮಾತೆಯ ಫೋಟೋದ ಮುಂದೆ ಪುಷ್ಪನಮನ ಅರ್ಪಿಸಿದರು. ಈ ಸಭೆಯು ಸಂಘಟನೆಯ ಮಂತ್ರದ ಸಾಮೂಹಿಕ ಪಠಣದೊಂದಿಗೆ ಪ್ರಾರಂಭವಾಯಿತು. ಸೆಪ್ಟೆಂಬರ್ 7ರವರೆಗೆ ನಡೆಯುತ್ತಿರುವ ಸಭೆಯಲ್ಲಿ 32 ಸಂಸ್ಥೆಗಳ ಅಖಿಲ ಭಾರತ ಪದಾಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಕೂಡ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಎಲ್ಲಾ 6 ಸಹ ಕಾರ್ಯದರ್ಶಿಗಳು ಹಾಗೂ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಅಲೋಕ್ ಕುಮಾರ್, ಸಂಘಟನಾ ಸಚಿವ ಮಿಲಿಂದ್ ಪರಾಂಡೆ, ರಾಷ್ಟ್ರ ಸೇವಿಕಾ ಸಮಿತಿಯ ಮುಖ್ಯ ಸಂಚಾಲಕಿ ಶಾಂತಾ ಅಕ್ಕ, ಮುಖ್ಯ ಕಾರ್ಯಕರ್ತೆ ಎ. ಸೀತಾ ಗಾಯತ್ರಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಡಾ. ರಾಜಶರಣ ಶಾಹಿ, ಸಂಘಟನೆಯ ಸಚಿವರಾದ ಆಶೀಶ್‌ರಕ್ ಚೌಹಾಣ್, ಸಂಘಟನೆ ಸಚಿವ ಡಾ. ಮಾಜಿ ಸೈನಿಕ ಸೇವಾ ಮಂಡಳಿ ಅಧ್ಯಕ್ಷ ಲೆಫ್ಟಿನೆಂಟ್ ಜನರಲ್ ವಿಷ್ಣುಕಾಂತ್ ಚತುರ್ವೇದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ, ಬಿ.ಎಲ್. ಸಂತೋಷ್, ವನ ವಾಸಿ ಕಲ್ಯಾಣ ಆಶ್ರಮದ ಅಧ್ಯಕ್ಷ ಸತ್ಯೇಂದ್ರ ಸಿಂಗ್, ಸಂಘಟನೆ ಸಚಿವ ಅತುಲ್ ಜೋಗ್, ಸೀಮಾ ಜಾಗರಣ ಮಂಚ್ ಸಂಚಾಲಕ ಮುರಳೀಧರ್ ಈ ವೇಳೆ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಈ ಸಮನ್ವಯ ಸಭೆಯಲ್ಲಿ ಪಂಚ ಪರಿವರ್ತನ ಸಾಮಾಜಿಕ ಸಾಮರಸ್ಯ, ಕುಟುಂಬ ಜ್ಞಾನೋದಯ, ಪರಿಸರ ಸ್ನೇಹಿ ಜೀವನ, ಸ್ವ-ಆಧಾರಿತ ಸೃಷ್ಟಿ, ನಾಗರಿಕ ಕರ್ತವ್ಯ ಅನುಸರಣೆ, ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಯತ್ನಗಳನ್ನು ಚರ್ಚಿಸಲಾಗುವುದು.

ಚೀನಾಗೆ ಬುದ್ಧಿ ಕಲಿಸಲು ಹೋಗಿ ಭಾರೀ ನಿರಾಶೆ | ಬೇಸರ ವ್ಯಕ್ತಪಡಿಸಿ ಟ್ರಂಪ್ ಟ್ವೀಟ್

ಭಾರತ-ರಷ್ಯಾವನ್ನು ನಾನು ಕಳೆದುಕೊಂಡೆ

ವಾಷಿಂಗ್ಟನ್: ತೆರಿಗೆಯನ್ನು ಹೇರಿ ಭಾರತದ ಮೇಲೆ ಸಮರ ಸಾರಿದ್ದ ಟ್ರಂಪ್ ಇದೀಗ ನಿರಾಶರಾಗಿದ್ದಾರೆ. ಭಾರತ-ಚೀನಾ ಹಾಗೂ ರಷ್ಯಾ ಒಗ್ಗಟ್ಟಾಗಿ ನಿಂತು ಅಮೆರಿಕವನ್ನು ಎದುರಿಸಿದೆ. ಇದೀಗ ಸ್ವತಃ ಟ್ರಂಪ್ ಅವರೇ ತಮ್ಮ ಮೂರ್ಖತನದ ಕುರಿತು ಮಾತನಾಡಿದ್ದಾರೆ. ಈ ವಾರ ಚೀನಾದ ಟಿಯಾಂಜಿನ್‌ನಲ್ಲಿ ನಡೆದ ಶಾಂಘೈ ಟಿ20 ಸಭೆಯಲ್ಲಿ ಪ್ರಧಾನಿ ಮೋದಿ, ರಷ್ಯಾದ ಅಧ್ಯಕ್ಷ ವ್ಲಾದ್ಲಿಮಿರ್ ಪುಟಿನ್ ಮತ್ತು ಚೀನಾದ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಇರುವ ಫೋಟೋವನ್ನು ಟ್ರಂಪ್ ಹಂಚಿಕೊಂಡಿದ್ದಾರೆ. ಅಷ್ಟೇ ಅಲ್ಲದೇ, ಕೆಲ ಸಾಲುಗಳನ್ನೂ ಟ್ರಂಪ್ ಎಕ್ಸ್‌ನಲ್ಲಿ ಬರೆದಿದ್ದಾರೆ.

'ಚೀನಾದ ಮೇಲಿನ ಹಗೆತನಕ್ಕೋಸ್ಕರ ಭಾರತ ಹಾಗೂ ರಷ್ಯಾವನ್ನು ಕಳೆದುಕೊಂಡೆ' ಎಂದು ಟ್ರಂಪ್ ಬೇಸರವನ್ನು ಹೊರಗೆಡವಿದ್ದಾರೆ. ಅವರು ಒಟ್ಟಿಗೆ ದೀರ್ಘ ಮತ್ತು ಸಮೃದ್ಧ ಭವಿಷ್ಯವನ್ನು ಹೊಂದಿರಲಿ ಎಂದು ಅವರು ಹಾರೈಸಿದ್ದಾರೆ. ಈ ವಾರದ ಆರಂಭದಲ್ಲಿ, ಮೋದಿ ಮತ್ತು ಪುಟಿನ್ ಸೇರಿದಂತೆ ವಿಶ್ವ ನಾಯಕರು ಚೀನಾದ ಟಿಯಾಂಜಿನ್‌ನಲ್ಲಿ ಶೃಂಗಸಭೆಗಾಗಿ ಒಟ್ಟುಗೂಡಿದರು. ಆ ಸಭೆಯಲ್ಲಿ ನಾಯಕರು ಅಮೆರಿಕದ ಸುಂಕದ ಕುರಿತು ಮಾತುಕತೆ ನಡೆಸಿದ ಬಳಿಕ, ಟ್ರಂಪ್ ಅವರಿಂದ ಈ ಹೇಳಿಕೆ ಬಂದಿದೆ.

'ನಾವು ಭಾರತ ಮತ್ತು ರಷ್ಯಾವನ್ನು ಅತ್ಯಂತ ಕರಾಳ ಚೀನಾಕ್ಕೆ ಕಳೆದುಕೊಂಡಂತೆ ಕಾಣುತ್ತಿದೆ. ಅವರು ಒಟ್ಟಿಗೆ ದೀರ್ಘ ಮತ್ತು ಸಮೃದ್ಧ ಭವಿಷ್ಯವನ್ನು ಹೊಂದಿರಲಿ'ಎಂದು ಟ್ರಂಪ್ ತಮ್ಮ ಟ್ರುತ್ ಸೋಶಿಯಲ್ ಪೋಸ್ಟ್‌ಗೆ ಶೀರ್ಷಿಕೆ ನೀಡಿದ್ದಾರೆ. ಅದರೊಂದಿಗೆ ಟಿಯಾಂಜಿನ್ ಸಭೆಯಲ್ಲಿ ಪುಟಿನ್ ಮತ್ತು ಜಿನ್‌ಪಿಂಗ್ ಅವರೊಂದಿಗೆ ಪ್ರಧಾನಿ ಮೋದಿ ಕಾಣಿಸಿಕೊಂಡಿರುವ ಚಿತ್ರವನ್ನು ಹಂಚಿಕೊಂಡು ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ತಿಂಗಳು ಟ್ರಂಪ್ ಭಾರತದ ಮೇಲೆ ವಿಧಿಸಿದ ಶೇ.50ರಷ್ಟು ಸುಂಕದ ನಂತರ ಭಾರತ-ಅಮೆರಿಕ ದ್ವಿಪಕ್ಷೀಯ ಸಂಬಂಧಗಳು ಹಳಸಿವೆ. ರಷ್ಯಾ ತೈಲವನ್ನು ಭಾರತ ನಿರಂತರವಾಗಿ ಖರೀದಿಸುವುದರ ಮೇಲೆ ಅಮೆರಿಕ ಶೇ.25ರಷ್ಟು ಮೂಲ ಸುಂಕ ಮತ್ತು ಹೆಚ್ಚುವರಿಯಾಗಿ ಶೇ.25ರಷ್ಟು ದಂಡವನ್ನು ವಿಧಿಸಿದೆ. ಟ್ರಂಪ್ ಚೀನಾ ಮೇಲೆಯೂ ಅಧಿಕ ಸುಂಕವನ್ನು ಹೇರಿದ್ದಾರೆ.

ನಾದೆಳ್ಳ, ಪಿಚೈ ಗುಣಗಾನಗೈದ ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್: ಭಾರತ ಮೂಲದ ಮೈಕ್ರೋಸಾಫ್ಟ್ ಸಿಇಒ ಸತ್ಯ ನಾದೆಳ್ಳ ಮತ್ತು ಗೂಗಲ್ ಸಿಇಒ ಸುಂದರ್ ಪಿಚೈ ಅವರ ಕಾರ್ಯವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶ್ಲಾಘಿಸಿದ್ದಾರೆ. ಇದೇವೇಳೆ, ಭಾರತೀಯ ಅಮೆರಿಕನ್ ಸಿಇಒಗಳು, ಅವರ(ಟ್ರಂಪ್) ನಾಯಕತ್ವಕ್ಕಾಗಿ ಧನ್ಯವಾದ ಅರ್ಪಿಸಿದರು. ತಂತ್ರಜ್ಞಾನ ಮತ್ತು ಎಐ ವಲಯಗಳಿಗೆ ಟ್ರಂಪ್ ಅವರ ನೀತಿಗಳನ್ನು ಪ್ರಶಂಸಿದರು. ಶ್ವೇತಭವನದಲ್ಲಿ ತಂತ್ರಜ್ಞಾನ ದೈತ್ಯ ಸಂಸ್ಥೆಗಳ ಸಿಇಒಗಳಿಗಾಗಿ ಟ್ರಂಪ್ ಔತಣಕೂಟವನ್ನು ಆಯೋಜಿಸಿದ್ದರು. ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್, ಮೈಕ್ರೋಸಾಫ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಮತ್ತು ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್ ಮುಂತಾದವರು ಭೋಜನಕೂಟದಲ್ಲಿ ಉಪಸ್ಥಿತರಿದ್ದರು. ಈ ವೇಳೆ ಮಾತನಾಡಿದ ಗೂಗಲ್ ಸಿಇಒ ಸುಂದರ್ ಪಿಚೈ, ನಮ್ಮ ಜೀವಿತಾವಧಿಯಲ್ಲಿ ಅತ್ಯಂತ ಪರಿವರ್ತನಾಶೀಲ ಪ್ರಗತಿಯಾಗಿದೆ. ಈ ಪ್ರಗತಿಯಲ್ಲಿ ಅಮೆರಿಕ ಮುಂಚೂಣಿಯಲ್ಲಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಟ್ರಂಪ್ ಆಡಳಿತವು ಕೃತಕ ಬುದ್ಧಿಮತ್ತೆ (ಎಐ) ವಲಯದಲ್ಲಿ ಬಹಳಷ್ಟು ಹೂಡಿಕೆ ಮಾಡುತ್ತಿದೆ. ಜುಲೈನಲ್ಲಿ ಶ್ವೇತಭವನವು ಅನಾವರಣಗೊಳಿಸಿ 'ಎಐ ಕ್ರಿಯಾ ಯೋಜನೆ'ಯು ಉತ್ತಮ ಆರಂಭ ಎಂದು ಹೇಳಿದರು. ಸತ್ಯ ನಾದೆಲ್ಲ ಅವರನ್ನು ಉದ್ದೇಶಿಸಿ. ಮೈಕ್ರೋಸಾಫ್ಟ್ 'ಸಿಇಒ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಅವರು ಅಧಿಕಾರ ಸ್ವೀಕರಿಸಿದಾಗ 28 ಡಾಲರ್‌ನಪ್ಪಿದ್ದ ಮೈಕ್ರೋಸಾಫ್ಟ್ ಷೇರು ಬೆಲೆ ಈಗ 300 ಡಾಲರ್ ಆಗಿದೆ, ಎಂತಹ ಅದ್ಭುತ ಸಾಧನೆ ಮಾಡಿದ್ದೀರಿ' ಎಂದು ಟ್ರಂಪ್ ಕೊಂಡಾಡಿದ್ದಾರೆ.



ಉಕ್ರೇನ್ ಸಮರಕ್ಕೆ ಭಾರತದ ಕಳವಳ

ದೆಹಲಿ: ಇಂಧನ ಬೆಲೆ ಏರಿಕೆ ಸೇರಿದಂತೆ ಉಕ್ರೇನ್ ಸಂಘರ್ಷದ ಪ್ರತಿಕೂಲ ಪರಿಣಾಮದ ಕುರಿತು ವಿಶ್ವಸಂಸ್ಥೆಯ ಸಭೆಯಲ್ಲಿ ಭಾರತ ಕಳವಳ ವ್ಯಕ್ತಪಡಿಸಿದೆ. ಯುದ್ಧದ ಪರಿಣಾಮವು ಜಾಗತಿಕ ದಕ್ಷಿಣ ದೇಶಗಳ ಮೇಲೆ ತೀವ್ರವಾಗಿ ಆಗುತ್ತಿದ್ದು, ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು. ರಾಜತಾಂತ್ರಿಕ ಪ್ರಯತ್ನಗಳಿಂದ ಯುದ್ಧ ಕೊನೆಗೊಳಿಸುವ ಮತ್ತು ಶಾಶ್ವತ ಶಾಂತಿ ಮೂಡಿಸುವ ಭರವಸೆ ಇದೆ ಎಂದು ಭಾರತ ತಿಳಿಸಿದೆ.

ಅಮಾಯಕ ಜೀವಗಳ ಹಾನಿಯು ಸ್ವೀಕರಾರ್ಹವಲ್ಲ ಎಂದು ಉಕ್ರೇನ್‌ನ ಪರಿಸ್ಥಿತಿ ಬಗ್ಗೆ ಭಾರತ ಕಳವಳ ವ್ಯಕ್ತಪಡಿಸಿದೆ. ಯುದ್ಧದಿಂದ ಯಾವುದೇ ಪರಿಹಾರ ಸಾಧ್ಯವಿಲ್ಲ ಎಂದು ವಿಶ್ವಸಂಸ್ಥೆಯ ಭಾರತದ ಶಾಶ್ವತ ಪ್ರತಿನಿಧಿ ರಾಯಭಾರಿ ಪರ್ವತನೇನಿ ಹರೀಶ್ ತಿಳಿಸಿದರು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಸಂಘರ್ಷದ ಪರಿಣಾಮವಾಗಿ ಇಂಧನ ಬೆಲೆಗಳೂ ಸೇರಿದಂತೆ ಸಂಘರ್ಷದ ಪರಿಣಾಮಗಳು ಜಗತ್ತಿನಾದ್ಯಂತ ಪ್ರಭಾವ ಬೀರುತ್ತಿದ್ದು, ವಿಶೇಷವಾಗಿ ಜಾಗತಿಕ ದಕ್ಷಿಣ ದೇಶಗಳ ಮೇಲೆ ಪರಿಣಾಮ ಬೀರಿದೆ. ಈ ನಿಟ್ಟಿನಲ್ಲಿ ಇತ್ತೀಚೆಗಿನ ಸಕಾರಾತ್ಮಕ ಬೆಳವಣಿಗೆಗಳನ್ನು ಭಾರತ ಸ್ವಾಗತಿಸುವುದಾಗಿ ಹೇಳಿದರು. ಕಳೆದ ತಿಂಗಳು ಅಲಾಸ್ಕಾದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವಿನ ಶೃಂಗಸಭೆಯನ್ನು ದೆಹಲಿ ಅನುಮೋದಿಸಿದ್ದು, ಶೃಂಗಸಭೆಯಲ್ಲಿ ಸಾಧಿಸಿದ ಪ್ರಗತಿಗೆ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ಹರೀಶ್ ಉಲ್ಲೇಖಿಸಿದರು.

ಸಮಾಚಾರ ಸಣ್ಣದಲ್ಲ

ಪಂಜಾಬ್ ಸಿಎಂ ಆಸ್ಪತ್ರೆಗೆ ದಾಖಲು

ಚಂಡೀಗಢ: ಆರೋಗ್ಯ ಸುಧಾರಿಸದ ಹಿನ್ನೆಲೆಯಲ್ಲಿ ಪಂಜಾಬ್ ಸಿಎಂ ಭಗವಂತ್ ಸಿಂಗ್ ಮಾನ್ ಶುಕ್ರವಾರ ಸಂಜೆ ಮೊಹಾಲಿಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. 51 ವರ್ಷದ ಮಾನ್ ಅವರು ಕಳೆದ

ಎರಡು ದಿನಗಳಿಂದ ವೈರಲ್ ಜ್ವರ ಮತ್ತು ಜೀರ್ಣಕ್ರಿಯೆಗೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿದ್ದರು. ಸಂಜೆಯಾದರೂ ಅವರ ಸ್ಥಿತಿ ಸುಧಾರಿಸದ ಕಾರಣ ಅವರನ್ನು ಮೊಹಾಲಿಯ ಫೋರ್ಟಿಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆಸ್ಪತ್ರೆಯಲ್ಲಿ ವೈದ್ಯರ ತಂಡ ಅವರನ್ನು ಪರೀಕ್ಷಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಅವರ ಅನಾರೋಗ್ಯದ ಸುದ್ದಿ ಬಂದ ನಂತರ, ಆಮ್ ಆದಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜಿವಾಲ್ ಗುರುವಾರ ಮಾನ್ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದರು. ಪ್ರವಾಹ ಪರಿಸ್ಥಿತಿಯನ್ನು ನಿರ್ಣಯಿಸಲು ಕೇಜಿವಾಲ್ ಬುಧವಾರ ಸಂಜೆ ಪಂಜಾಬ್‌ಗೆ ಆಗಮಿಸಿದ್ದರು. ಮುಖ್ಯಮಂತ್ರಿಯೊಂದಿಗೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಬೇಕಿತ್ತು. ಆದರೆ ಮಾನ್ ಅವರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಕೇಜಿವಾಲ್ ಒಬ್ಬರೇ ಭೇಟಿ ಕೈಗೊಂಡಿದ್ದರು. ಕಳೆದ ವರ್ಷವೂ ಇದೇ ಸಮಯದಲ್ಲಿ ಸೋಂಕಿನ ಸಮಸ್ಯೆಗೆ ತುತ್ತಾಗಿದ್ದ ಮಾನ್, ಮೊಹಾಲಿಯ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿ ಕೆಲ ದಿನಗಳು ಚಿಕಿತ್ಸೆ ಪಡೆದಿದ್ದರು.

ವಿಷಾನಿಲ ಸೋರಿಕೆ: 40 ಮಂದಿ ಅಸ್ವಸ್ಥ

ಕಡಲ್ಲೂರು: ಸಮೀಪದ ಸಿಪ್ಕಾಟ್ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಉತ್ಪಾದನಾ ಘಟಕದಿಂದ ವಿಷಕಾರಿ ಅನಿಲ ಸೋರಿಕೆಯಾಗಿದ್ದು, 40 ಮಂದಿ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ಬೆಳಿಗ್ಗೆ ಅನಿಲ ಸೋರಿಕೆಯಾಗಿದ್ದು, ಸುತ್ತಮುತ್ತಲಿನ ನಿವಾಸಿಗಳು ಕಣ್ಣಿನ ಉರಿ ಮತ್ತು ಉಸಿರಾಟದ ತೊಂದರೆ ಬಗ್ಗೆ ಹೇಳಿಕೊಂಡಿದ್ದಾರೆ. ರಾಸಾಯನಿಕ ಘಟಕದೊಳಗಿನ ಸ್ಟೀಮ್ ವಾಲ್‌ನಿಂದ ಅನಿಲ ಸೋರಿಕೆ ಉಂಟಾಗಿರುವ ಬಗ್ಗೆ ಶಂಕಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ನಂತರ ಸೋರಿಕೆಯನ್ನು ನಿಯಂತ್ರಣಕ್ಕೆ ತರಲಾಗಿದೆ. 'ಸುಮಾರು 43 ಜನರು ಕಣ್ಣಿನ ಉರಿ ಮತ್ತು ಉಸಿರುಗಟ್ಟುವಿಕೆಯಿಂದ ಬಳಲುತ್ತಿದ್ದರು. ಅವರನ್ನು ಚಿಕಿತ್ಸೆಗಾಗಿ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅವರು ಹೇಳಿದರು. ಕಡಲ್ಲೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಯಕುಮಾರ್ ಅವರು, ಕಂದಾಯ ಇಲಾಖೆ ಮತ್ತು ತಮಿಳುನಾಡು ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಅಧಿಕಾರಿಗಳೊಂದಿಗೆ ಕಾರ್ಖಾನೆಯನ್ನು ಪರಿಶೀಲಿಸಿದರು.

ಗುಂಡಿನ ಚಕಮಕಿ: ಓರ್ವ ನಕ್ಸಲ್ ಹತ್ಯೆ

ರಾಯ್ಪುರ: ಛತ್ತೀಸಗಢದ ನಾರಾಯಣಪುರ ಮತ್ತು ದಂತೇವಾಡ ಜಿಲ್ಲೆಯ ಗಡಿಪ್ರದೇಶದ ಅರಣ್ಯದಲ್ಲಿ ಭದ್ರತಾ ಪಡೆಯೊಂದಿಗೆ ಶುಕ್ರವಾರ ನಡೆದ ಎನ್‌ಕೌಂಟರ್‌ನಲ್ಲಿ ಒಬ್ಬ ನಕ್ಸಲ್ ಮೃತಪಟ್ಟಿದ್ದಾನೆ. ನಾರಾಯಣಪುರ ಮತ್ತು ದಂತೇವಾಡ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಮತ್ತು ರಾಜ್ಯ ಪೊಲೀಸ್ ಪಡೆಯ ವಿಶೇಷ ಕಾರ್ಯಪಡೆಯ (ಎಸ್‌ಟಿಎಫ್) ಜಂಟಿ ತಂಡವು ಅಂತರ ಗಡಿ ಜಿಲ್ಲಾ ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುವಾಗ ಈ ಎನ್‌ಕೌಂಟರ್ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನಾ ಸ್ಥಳದಲ್ಲಿ ಒಬ್ಬ ನಕ್ಸಲ್‌ನ ಮೃತದೇಹ ಪತ್ತೆಯಾಗಿದೆ ಮತ್ತು ಕಾರ್ಯಾಚರಣೆ ಮುಂದುವರಿದಿದೆ ಎಂದು ಅವರು ತಿಳಿಸಿದರು.

ಮೈಸೂರು ದಸರಾ ಈ ಬಾರಿ ಮತ್ತಷ್ಟು ಜಗಮಗ

ನಗರದ 136 ಕಿಮೀ ರಸ್ತೆ, 118 ವೃತ್ತಗಳಿಗೆ ದೀಪಾಲಂಕಾರಕ್ಕೆ ನಿರ್ಧಾರ

ಮೈಸೂರು: ನಾಡಹಬ್ಬ ದಸರಾ ಆಚರಣೆಯ ವೇಳಾ ಪಟ್ಟಿ ಹೊರ ಬಿದ್ದಿದೆ. ಈ ಬಾರಿ ಮತ್ತಷ್ಟು ಅದ್ದೂರಿಯಾಗಿ ನಾಡ ಹಬ್ಬ ಆಚರಣೆಗೆ ಸಿದ್ಧತೆ ನಡೆದಿದೆ. ಅರಮನೆಯನ್ನು ದೀಪಾಲಂಕಾರದಲ್ಲಿ ಮತ್ತೊಮ್ಮೆ ಜಗಮಗಿಸಲು ಸೆಸ್ಕ್ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಈ ಬಾರಿ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಬೆಳಕನಲ್ಲಿ ಜಗಮಗಿಸಲಿದೆ. 136 ಕಿ.ಮೀ ರಸ್ತೆ, 118 ವೃತ್ತಗಳಿಗೆ ದೀಪಾಲಂಕಾರ ಮಾಡಲಾಗುತ್ತಿದೆ. ಅಲ್ಲದೆ, ವಿವಿಧೆಡೆ ವರ್ಣರಂಜಿತ ಲೈಟ್‌ಗಳಲ್ಲಿ 60ಕ್ಕೂ ಹೆಚ್ಚು ಪ್ರತಿಕೃತಿಗಳು ಪ್ರವಾಸಿಗರ ಕಣ್ಮನ ಸೆಳೆಯಲಿವೆ. ಪ್ರತಿ ವರ್ಷಕ್ಕಿಂತ ಈ ಬಾರಿ ಮೈಸೂರು ಮತ್ತಷ್ಟು ಹೊಳೆಯಲಿದೆ.

ದಸರಾ ದೀಪಾಲಂಕಾರವನ್ನು ಅಚ್ಚುಕಟ್ಟಾಗಿ ನೆರವೇರಿಸಲು ಈಗಾಗಲೇ ಜಿಲ್ಲಾಧಿಕಾರಿ ಹಾಗೂ ದಸರಾ ವಿಶೇಷಾಧಿಕಾರಿಗಳಾದ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲ ರಾಜ್ ಪೂರ್ವಭಾವಿ ಸಭೆ ನಡೆಸಿ, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದರು. ಅಲ್ಲದೆ, ದೀಪಾಲಂಕಾರ ಸೊಬಗು ಹೆಚ್ಚಿಸುವ ಶೈಲಿಯ ವಿನ್ಯಾಸ ಮತ್ತು ಅಂತಹ ಬಲ್ಬ್‌ಗಳನ್ನೇ ಬಳಸಲು ಆಯ್ಕೆ ಮಾಡಲಾಗಿತ್ತು. ದಸರಾ ಉದ್ಘಾಟನೆಗೆ ಕೆಲವೇ ದಿನಗಳು ಉಳಿದಿದ್ದು, ದೀಪಾಲಂಕಾರದ ಸಿದ್ಧತೆಗಳು ಭರದಿಂದ ಸಾಗಿವೆ.

ಅತೀ ಹೆಚ್ಚು ಆಕರ್ಷಣೆ: ಮೈಸೂರಿನ ಪ್ರಮುಖ ರಸ್ತೆ ಸೇರಿದಂತೆ ವಿವಿಧೆಡೆ ಈ ಬಾರಿ ಒಟ್ಟು 136 ಕಿ.ಮೀ. ದೀಪಾಲಂಕಾರ ಮಾಡಲಾಗುತ್ತಿದೆ. ಮೈಸೂರಿನ ಹೃದಯ ಭಾಗದ ಪ್ರಮುಖ ವೃತ್ತ ಸೇರಿದಂತೆ ವಿವಿಧ ಬಡಾವಣೆಗಳಲ್ಲಿರುವ ದೊಡ್ಡಕೆರೆ ಮೈದಾನ, ಗನ್ ಹೌಸ್ ವೃತ್ತ, ರಾಮಸ್ವಾಮಿ ವೃತ್ತ, ಕೌಟಿಲ್ಯ ವೃತ್ತ, ಎಲ್.ಐ.ಸಿ ಕಚೇರಿ ವೃತ್ತ, ಮುಡಾ ವೃತ್ತ, ದೇವರಾಜ ಅರಸು ರಸ್ತೆ-ಜೆ.ಎಲ್.ಬಿ ರಸ್ತೆ ಜಂಕ್ಷನ್, ರೈಲ್ವೆ ನಿಲ್ದಾಣದ ವೃತ್ತ, ಚಲುವಾಂಬ ಆಸ್ಪತ್ರೆ ವೃತ್ತ, ಸರಕಾರಿ ಆಯುರ್ವೇದ ಕಾಲೇಜು ವೃತ್ತ, ಹೈವೇ ವೃತ್ತ, ಫೌಂಟೇನ್ ವೃತ್ತ ಸೇರಿದಂತೆ 118 ವೃತ್ತಗಳು ವರ್ಣರಂಜಿತ ಲೈಟಿಂಗ್‌ಗಳಿಂದ ಕಂಗೊಳಿಸಲಿವೆ.

ಸುರಕ್ಷತೆಗೆ ಹೆಚ್ಚಿನ ಆದ್ಯತೆ: ದೀಪಾಲಂಕಾರದ ವೇಳೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚನೆ ನೀಡಲಾಗಿದೆ. ವೀಕ್ಷಣೆಗೆ ಪ್ರವಾಸಿಗರು ಮುಗಿಬೀಳುವುದರಿಂದ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಲು ಹಾಗೂ ವಿದ್ಯುತ್ ಅವಘಡ ತಪ್ಪಿಸಲು ಕಟ್ಟೆಚ್ಚರ ವಹಿಸಬೇಕು. ಜೋತು ಬೀಳುವ ವಯರ್‌ಗಳು ಎಲ್ಲಿಯೂ ಡ್ಯಾಮೇಜ್ ಆಗಿರದಂತೆ ನೋಡಿಕೊಳ್ಳುವಂತೆ, ದೀಪಾಲಂಕಾರದ ವೇಳೆ ಪ್ರತಿದಿನ ಸಂಜೆ ತಪಾಸಣೆ ಮಾಡುವಂತೆ ಸೆಸ್ಕ್ ಎಂಡಿ ಮುನಿಗೋಪಾಲರಾಜ್ ಅವರು ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.



2.50 ಲಕ್ಷ ಯುನಿಟ್ ಬಳಕೆ

ಈ ಬಾರಿ ದೀಪಾಲಂಕಾರಕ್ಕೆ ಲಕ್ಷಾಂತರ ವಿದ್ಯುತ್ ಬಲ್ಬ್ ಬೆಳಗುವುದರಿಂದ 2.50 ಲಕ್ಷ ಯುನಿಟ್ (3 ಮೆಗಾವ್ಯಾಟ್) ವಿದ್ಯುತ್ ಖರ್ಚಾಗಲಿದೆ. ಅಲ್ಲದೆ, ದಸರಾ ದೀಪಾಲಂಕಾರಕ್ಕಾಗಿ ಈ ಬಾರಿ 6 ಕೋಟಿ ರೂ. ವೆಚ್ಚವಾಗಲಿದೆ. ಈಗಾಗಲೇ ವಿವಿಧ ಕಾಮಗಾರಿ ವಿಂಗಡಿಸಿ, ಟೆಂಡರ್ ಕರೆದು ಗುತ್ತಿಗೆದಾರರಿಗೆ ದೀಪಾಲಂಕಾರದ ಜವಾಬ್ದಾರಿ ನೀಡಲಾಗಿದೆ.

ಕೋಲ್ಕತ್ತಾದಿಂದ ಬಲ್ಬ್ ಆಮದು

ದೀಪಾಲಂಕಾರದ ಸೊಬಗು ಹೆಚ್ಚಿಸಲು ಈ ಬಾರಿ ಹೊರ ರಾಜ್ಯಗಳಿಂದ ಅತ್ಯಾಕರ್ಷಕ ವಿದ್ಯುತ್ ಬಲ್ಬ್ ತರಿಸಲಾಗುತ್ತಿದೆ. ಈಗಾಗಲೇ ಪ್ರಾತ್ಯಕ್ಷಿಕೆ (ಡೆಮೋ) ವೇಳೆ ನೋಡಿರುವ ಹೊರ ರಾಜ್ಯಗಳಿಂದ ತಂದಿರುವ ಅಲಂಕಾರಿಕ ಬಲ್ಬ್‌ಗಳನ್ನೇ ದೀಪಾಲಂಕಾರದಲ್ಲಿ ಬಳಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ. ಇದರಿಂದಾಗಿ ಕೋಲ್ಕತ್ತಾ ಹಾಗೂ ಇನ್ನಿತರ ರಾಜ್ಯಗಳಿಂದ ತಂದಂತಹ ಅತ್ಯಾಕರ್ಷಕ ಲಕ್ಷಕ್ಕೂ ಅಧಿಕ ಬಲ್ಬ್‌ಗಳು ನವರಾತ್ರಿ ವೇಳೆ ಮೈಸೂರನ್ನು ಬೆಳಗಲಿವೆ. ಈ ಬಲ್ಬ್ ಗಳು ಚಲಿಸುವಂತೆ ಭಾಸವಾಗುವುದರಿಂದ ಆಕೃತಿಗಳಿಗೆ ಜೀವಕಳೆ ಬಂದಂತೆ ಕಾಣುತ್ತದೆ. ಜೊತೆಗೆ ತ್ರಿವರ್ಣ ಧ್ವಜ ಹಾರಾಡುವಂತೆ, ವಾಹನಗಳ ಆಕೃತಿಯಲ್ಲಿ ಚಕ್ರಗಳು ಚಲಿಸುವಂತೆ, ವಿವಿಧ ಗೊಂಬೆ ಆಕೃತಿಗಳು ಚಲನಶೀಲತೆಯಿಂದ ಕಾಣುವಂತೆ ಮಾಡುವುದು ಈ ಬಲ್ಬ್‌ಗಳ ವಿಶೇಷತೆ.

2025ರ ದಸರಾ ದೀಪಾಲಂಕಾರ ಅದ್ದೂರಿ, ವೈಭವಯುತವಾಗಿ ಇರಲಿದೆ. 136 ಕಿ.ಮೀ ರಸ್ತೆ, 118 ವೃತ್ತಕ್ಕೆ ದೀಪಾಲಂಕಾರದ ಜೊತೆಗೆ ವರ್ಣರಂಜಿತ ಬಲ್ಬ್‌ಗಳಲ್ಲಿ 60 ಆಕೃತಿಗಳನ್ನು ರೂಪಿಸಿ ವಿವಿಧೆಡೆ ಅಳವಡಿಸಲಾಗುತ್ತಿದೆ. ಈಗಾಗಲೇ ದೀಪಾಲಂಕಾರಕ್ಕೆ ಸಿದ್ಧತೆ ಆರಂಭಿಸಲಾಗಿದ್ದು, ವಾರದೊಳಗೆ ಪೂರ್ಣ ಪ್ರಮಾಣದಲ್ಲಿ ದೀಪಾಲಂಕಾರ ಕಾಮಗಾರಿ ಪೂರ್ಣಗೊಳ್ಳಲಿದೆ.

-ಮುನಿಗೋಪಾಲರಾಜು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ

ಕುಂಭಮೇಳದಲ್ಲಿ ಸಾವನ್ನಪ್ಪಿದ ಮಗನ ಹುಟ್ಟುಹಬ್ಬದ ದಿನದಂದು ಬೆಂಗಳೂರಿನ ದಂಪತಿ ಸಮಾಜಸೇವೆ

ಪುತ್ರನ ಹೆಸರಿನಲ್ಲಿ ಹದಿನೈದು ಸಂಸ್ಥೆಗಳಿಗೆ ಪೋಷಕರ ದೇಣಿಗೆ

ಸಾವನ್ನಪ್ಪಿದ ಪುತ್ರನ ಹುಟ್ಟು ಹಬ್ಬದ ಜ್ಞಾಪಕಾರ್ಥ ವಾಸುಕಿ ಆಚಾರ್ಯ-ಶುಭ ವಾಸುಕಿ ದಂಪತಿ 15 ಸಂಸ್ಥೆಗಳಿಗೆ ದೇಣಿಗೆ ನೀಡಿದರು.

ಬೆಂಗಳೂರು: ಸಮಾಜಮುಖಿ ಕೆಲಸ ಮಾಡುತ್ತಿರುವ 15 ಸಂಸ್ಥೆಗಳಿಗೆ ದೇಣಿಗೆ ನೀಡುವ ಮೂಲಕ ಅಕಾಲಿಕ ಮರಣ ಹೊಂದಿದ ಪುತ್ರನ ಹುಟ್ಟುಹಬ್ಬವನ್ನು ಪೋಷಕರು ಸ್ಮರಣೀಯವಾಗಿ ಆಚರಿಸಿದರು.

ಬೆಂಗಳೂರಿನ ಬನಶಂಕರಿ ಎರಡನೇ ಹಂತದಲ್ಲಿರುವ ಶಾಸಕರ ಭವನದ ಆರ್.ಅಶೋಕ್ ಸಭಾಂಗಣ ಶುಕ್ರವಾರ ಈ ವಿಶಿಷ್ಟ ಕಾರ್ಯಕ್ರಮ 'ಅಂತರಿಕ್ಷ ಹೊಂಗಿರಣ' ಸಾಕ್ಷಿಯಾಯಿತು.

ಕಳೆದ ವರ್ಷ ಕುಂಭಮೇಳಕ್ಕೆ ಹೋದ ಸಂದರ್ಭ ಪ್ರಯಾಗ್‌ರಾಜ್‌ನಲ್ಲಿ ತಮ್ಮ ಏಕೈಕ ಪುತ್ರ ಅಂತರಿಕ್ಷನನ್ನು ಪೋಷಕರಾದ ವಾಸುಕಿ ಆಚಾರ್ಯ ಮತ್ತು ಶುಭ ವಾಸುಕಿ ಕಳೆದುಕೊಂಡಿದ್ದರು. ಪುತ್ರ ವಿಯೋಗದಿಂದ ದು:ಖತಪ್ತರಾದರೂ, ವಿಚಲಿತರಾಗದ ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಈ ದಂಪತಿ, ಬೆಂಗಳೂರಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಮಾಜದ ಅಭ್ಯುದಯಕ್ಕಾಗಿ ಕೆಲಸ ಮಾಡುವ ಸಂಸ್ಥೆಯನ್ನು ಆಯ್ಕೆ ಮಾಡಿ, ದೇಣಿಗೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶುಭಾ ವಾಸುಕಿಯವರು, ಮಹಾಕುಂಭ ಮೇಳಕ್ಕೆ ಹೋದ ಮಗ ವಸಂತಪಂಚಮಿಯಂದು ಗಂಗಾ ತಟದಲ್ಲಿ ಅಗಲಿದ ಕ್ಲಿಷ್ಟ ಸವಾಲಿನ ಸಮಯದಲ್ಲಿ ತಮಗೆ ಧೈರ್ಯ ತುಂಬಿ ಸಾಂತ್ವನ ನೀಡಿದ ಹಲವರ ಸಹಕಾರವನ್ನು ನೆನೆದು ಕೃತಜ್ಞತೆ ಸಲ್ಲಿಸಿದರು. ಸಂಸದ ತೇಜಸ್ವಿ ಸೂರ್ಯ, ಬ್ರಿಗೇಡಿಯರ್ ಎಸ್. ಪಿ. ಸಿಂಗ್ ,ಲೆಫ್ಟಿನೆಂಟ್ ಕರ್ನಲ್ ಸತೀಶ್ ಶರ್ಮ ಹಾಗೂ ಭಾರತೀಯ ಸ್ಟೇಟ್‌ಬ್ಯಾಂಕಿನ ಸಹೋದ್ಯೋಗಿಗಳು ನೀಡಿದ ಸಹಕಾರ ಮಹತ್ತರವಾದುದು ಎಂದರು.

ಈ ವೇಳೆ ಡಾ. ಆರ್. ಕೆ. ಪದ್ಮನಾಭ, ಲೇಖಕಿ ಡಾ.ದೀಪಾ ಫಡ್ಕೆ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷ ರವೀಂದ್ರ, ಯೋಗಪಟು ಚೇತಕ್, ರವಿ ಕುಸುಬಿ ಉಪಸ್ಥಿತರಿದ್ದರು. ರಂಗರಾಜನ್, ರೇಣುಕಾ ದೇಸಾಯಿ, ಒಲಿಂಪಿಯನ್ ಹಾಕಿ ಪಟು ಪೂಣಚ್ಚ, ಸ್ಟಾರ್ ಕನ್ನಡ ನೆಟ್‌ವರ್ಕ್‌ನ ಅಸ್ಲಾಮ್, ಗುರುರಾಜ್ ಶಾಸ್ತ್ರಿ, ಅನಂತ ಪದ್ಮನಾಭ ಮತ್ತಿತರರು ಭಾಗವಹಿಸಿದ್ದರು.

ಭಾರತ ಕ್ಷಮೆ ಕೇಳಿ ಬರಲಿದೆ: ಅಮೆರಿಕ

ವಾಷಿಂಗ್ಟನ್: ಅಮೆರಿಕ ಭಾರತೀಯ ಉತ್ಪನ್ನಗಳ ಮೇಲೆ ಶೇ.50ರಷ್ಟು ತೆರಿಗೆ ವಿಧಿಸಿರುವುದು ನಂತರದ ದಿನಗಳಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ರಷ್ಯಾ, ಚೀನಾಗೆ ಹತ್ತಿರವಾಗಿರುವ ಬೆಳವಣಿಗೆಗಳ ಬಗ್ಗೆ ಅಮೆರಿಕ ವಾಣಿಜ್ಯ ಸಚಿವ ಲುಟ್ನಿಕ್ ಪ್ರತಿಕ್ರಿಯೆ ನೀಡಿದ್ದಾರೆ.

ಭಾರತವು ವಾಷಿಂಗ್ಟನ್ ಜೊತೆ ಮಾತುಕತೆಗೆ ಮರಳಲಿದೆ, ಕ್ಷಮೆಯಾಚಿಸುತ್ತದೆ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಲಿದೆ ಎಂದು ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಹೇಳಿದ್ದಾರೆ. ಒಂದು ಅಥವಾ ಎರಡು ತಿಂಗಳಲ್ಲಿ ಭಾರತ ಮಾತುಕತೆಗೆ ಬರಲಿದೆ ಎಂದು ನಾನು ಭಾವಿಸುತ್ತೇನೆ. ಅವರು ಕ್ಷಮಿಸಿ ಎಂದು ಹೇಳಲಿದ್ದಾರೆ ಮತ್ತು ಡೊನಾಲ್ಡ್ ಟ್ರಂಪ್ ಜೊತೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಲಿದ್ದಾರೆ ಎಂದು ಲುಟ್ನಿಕ್ ಬ್ಲೂಮ್‌ಬರ್ಗ್‌ಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಕಾರಾಗೃಹದಲ್ಲಿ ಮೊಬೈಲ್ ನೀಡಿ ಹಣ ಗಳಿಕೆ ಆರೋಪ

ವಾರ್ಡನ್ ವಿರುದ್ಧದ ಆರೋಪ ಪಟ್ಟಿ ರದ್ದತಿಗೆ ನಿರಾಕರಿಸಿದ ಹೈಕೋರ್ಟ್

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ತನಿಖೆ ವೇಳೆ, ಜೈಲು ಅಧಿಕಾರಿಗಳೇ ಕೈದಿಗಳಿಗೆ ಕಳ್ಳ ಮಾರ್ಗದಲ್ಲಿ ಮೊಬೈಲ್ ಫೋನ್ ಬಳಕೆಗೆ ಅವಕಾಶ ನೀಡಿ ಪ್ರತಿ ತಾಸಿಗೆ 300 ರು.ಗಳನ್ನು ಲಂಚದ ರೂಪದಲ್ಲಿ ಪಡೆಯುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದ್ದು, ಈ ಸಂಬಂಧ ವಾರ್ಡನ್ ಒಬ್ಬರ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿದ್ದ ಆರೋಪ ಪಟ್ಟಿ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ತಮ್ಮ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣ ಮತ್ತು ಆರೋಪ ಪಟ್ಟಿ ರದ್ದು ಕೋರಿ ಬೆಂಗಳೂರಿನ ಕೇಂದ್ರ ಕಾರಾಗೃಹದ ಮುಖ್ಯ ವಾರ್ಡನ್ ಆಗಿದ್ದ ಬಸವರಾಜ ಆರ್. ಉಪ್ಪಾರ ಎಂಬುವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಜೆ.ಎಂ.ಖಾಜಿ ಅವರಿದ್ದ ನ್ಯಾಯಪೀಠ, ಪ್ರಕರಣದ ಸಂಬಂಧ ಎಫ್‌ಐಆರ್ ಮತ್ತು ತನಿಖಾಧಿಕಾರಿಗಳು ಸಲ್ಲಿಸಿದ್ದ ಆರೋಪ ಪಟ್ಟಿ ರದ್ದುಪಡಿಸಲು ನಿರಾಕರಿಸಿ, ಅರ್ಜಿಯನ್ನು ತಿರಸ್ಕರಿಸಿದೆ.

ಅಲ್ಲದೆ, ಅರ್ಜಿದಾರರಾಗಿರುವ ಆರೋಪಿಯ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಮೇಲ್ನೋಟಕ್ಕೆ ಅಗತ್ಯ ಸಾಕ್ಷ್ಯಾಧಾರಗಳಿವೆ. ಅಲ್ಲದೆ, ಪ್ರಕರಣದಲ್ಲಿ ಅರ್ಜಿದಾರರು ಸೇರಿದಂತೆ ಇತರ ಆರೋಪಿಗಳ ವಿರುದ್ಧ ತನಿಖೆಗೆ ಸಕ್ಷಮ ಪ್ರಾಧಿಕಾರ ಅನುಮತಿ ನೀಡಿದೆ. ಆದ್ದರಿಂದ ಆರೋಪ ಸಾಬೀತು ಪಡಿಸುವುದಕ್ಕೆ ತನಿಖಾಧಿಕಾರಿಗಳಿಗೆ ಅವಕಾಶ ನೀಡಬೇಕಾಗಿದೆ ಎಂದು ಪೀಠ ಹೇಳಿದೆ. ಜತೆಗೆ, ಪ್ರಕರಣದಲ್ಲಿ ಎಲ್ಲ ಆರೋಪಿಗಳ ವಿರುದ್ಧ ತನಿಖೆ ನಡೆಯುತ್ತಿದ್ದು, ಅರ್ಜಿದಾರರ ವಿರುದ್ಧದ ಕ್ರಿಮಿನಲ್ ಪ್ರಕರಣವು ನ್ಯಾಯಾಂಗ ಪ್ರಕ್ರಿಯೆಯ ದುರುಪಯೋಗವಾಗುತ್ತದೆ ಎಂಬ ಅರ್ಜಿದಾರರ ವಾದ ಪುರಸ್ಕರಿಸಲಾಗದು ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೂ ಹೇಳಿಕೆಗೆ ಚಾಟಿ

ಅಮೆರಿಕಕ್ಕೆ ಭಾರತ ತಿರುಗೇಟು

ದೆಹಲಿ: ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವ ಮೂಲಕ ಬ್ರಾಹ್ಮಿನ್ಸ್ ಭಾರತೀಯ ಜನರ ವೆಚ್ಚದಲ್ಲಿ ಶ್ರೀಮಂತರಾಗುತ್ತಿದ್ದಾರೆಂದು ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್‌ನವರೂ ಇತ್ತೀಚಿನ ಹೇಳಿಕೆಯನ್ನು ಭಾರತ ಬಲವಾಗಿ ತಿರಸ್ಕರಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಸೂಕ್ತವಲ್ಲದ, ಹಾದಿ ತಪ್ಪಿಸುವ ಹೇಳಿಕೆಯನ್ನು ಪೀಟರ್ ನವರೂ ನೀಡಿದ್ದಾರೆ, ಖಂಡಿತವಾಗಿಯೂ ನಾವು ಅದನ್ನು ತಿರಸ್ಕರಿಸುತ್ತೇವೆ ಎಂದಿದ್ದಾರೆ.

ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ್ದ ಪೀಟರ್ ನವರೂ, ಬ್ರಾಹ್ಮಣರು ಭಾರತೀಯ ಜನರ ವೆಚ್ಚದಲ್ಲಿ ಲಾಭ ಗಳಿಸುತ್ತಿದ್ದಾರೆ ಎಂದು ವಿವಾದಾತ್ಮಕ ಹೇಳಿಕೆ ನೀಡುವ ಮೂಲಕ ಭಾರತದ ಮೇಲೆ ಟ್ರಂಪ್ ಅವರ ಶೇ. 50ರಷ್ಟು ಸುಂಕ ನೀತಿಯನ್ನು ಸಮರ್ಥಿಸಿಕೊಂಡಿದ್ದರು.

ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಕೇಂದ್ರ ಸರಕಾರಕ್ಕೆ ಪ್ರಮುಖವಾದದ್ದು ಎಂದು ಹೇಳಿದ ಜೈಸ್ವಾಲ್, ಉಭಯ ದೇಶಗಳು ಸಮಗ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಹೊಂದಿವೆ ಎಂದು ವಿವರಿಸಿದರು.

ಅಮೆರಿಕ ಮತ್ತು ಭಾರತದ ನಡುವಿನ ಈ ಸಂಬಂಧ ನಮಗೆ ಬಹಳ ಮುಖ್ಯವಾಗಿದೆ. ಉಭಯ ದೇಶಗಳು ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಹಂಚಿಕೊಳ್ಳುತ್ತವೆ. ಇದು ನಮ್ಮ ಹಿತಾಸಕ್ತಿಗಳು, ಪ್ರಜಾಪ್ರಭುತ್ವ ಮೌಲ್ಯಗಳು ಮತ್ತು ದೃಢವಾದ ಜನರ ನಡುವಿನ ಸಂಬಂಧಗಳಲ್ಲಿ ಆಧಾರವಾಗಿದೆ ಎಂದು ಜೈಸ್ವಾಲ್ ಹೇಳಿದರು.

ಬಹು ಸವಾಲುಗಳು ಮತ್ತು ಸ್ಥಿತ್ಯಂತರಗಳನ್ನು ಪಾಲುದಾರಿಕೆ ಸಹಿಸಿಕೊಂಡಿದ್ದು, ಎರಡೂ ದೇಶಗಳೂ ದ್ವಿಪಕ್ಷೀಯ ಕಾರ್ಯಸೂಚಿಯನ್ನು ಮುಂದುವರಿಸುವತ್ತ ಗಮನಹರಿಸಿವೆ. ಪರಸ್ಪರ ಗೌರವ ಮತ್ತು ಹಂಚಿಕೆಯ ಹಿತಾಸಕ್ತಿ ಆಧಾರದ ಮೇಲೆ ಸಂಬಂಧ ಮುಂದುವರಿಯುತ್ತದೆ ಎಂದು ನಾವು ಭಾವಿಸುತ್ತೇವೆ. ಅಲಾಸ್ಕಾದಲ್ಲಿ ಭಾರತ-ಅಮೆರಿಕ ಸೇನೆಯ ಜಂಟಿ ಸಮರಾಭ್ಯಾಸ ನಡೆಯುತ್ತಿದೆ. ಕೆಲ ದಿನಗಳ ಎರಡು ರಾಷ್ಟ್ರಗಳ ಉನ್ನತ ಅಧಿಕಾರಿಗಳ ಸಭೆ ನಡೆದಿತ್ತು ಎಂದು ಅವರು ಹೇಳಿದರು.

ಬೆಂಗಳೂರಿನ ಟ್ಯಾನರಿ ರಸ್ತೆಯಲ್ಲಿ ಶುಕ್ರವಾರ ಈದ್ ಮಿಲಾದ್ ಹಬ್ಬದ 1500ನೇ ವರ್ಷದ ಆಚರಣೆಯ ಪ್ರಯುಕ್ತ ಮುಸ್ಲಿಂ ಬಾಂಧವರು ಮೆರವಣಿಗೆ ನಡೆಸಿದರು. ಚಿತ್ರ: ಸುಧಾಕರ್ ದೇವರಾಜ್

ಬೆಂಗಳೂರಿನಲ್ಲಿ ಖರೀದಿಸಿ ಡೇಟಿಂಗ್ ಆ್ಯಪ್‌ನಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿ

ಬೃಹತ್ ಮಾದಕ ವಸ್ತು ಜಾಲ ಪತ್ತೆ

ಹೈದರಾಬಾದ್: ಡೇಟಿಂಗ್ ಆ್ಯಪ್ ಮೂಲಕ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದ್ದ ಬೃಹತ್ ಡ್ರಗ್ಸ್ ಮಾರಾಟ ಜಾಲವೊಂದನ್ನು ಹೈದರಾಬಾದ್‌ನಲ್ಲಿ ಪತ್ತೆಹಚ್ಚಲಾಗಿದೆ. ಈ ಜಾಲ ನಡೆಸುತ್ತಿದ್ದ ಇಬ್ಬರು ಮಾರಾಟಗಾರರು ಹಾಗೂ 7 ಗ್ರಾಹಕರು ಸೇರಿ 9 ಮಂದಿಯನ್ನು ಹೈದರಾಬಾದ್‌ನ ವಿಶೇಷ ಕಾರ್ಯಪಡೆ ಬಂಧಿಸಿದೆ.

ಎಂ. ರಮಾಕಾಂತ್ ಅಲಿಯಾಸ್ ಕಿರಣ್ (44) ಮತ್ತು ಮುದವತ್ ಪ್ರಸಾದ್ (30) ಬಂಧಿತ ಡ್ರಗ್ಸ್ ಮಾರಾಟಗಾರರು. ರಮಾಕಾಂತ್ ಖಾಸಗಿ ಉದ್ಯೋಗಿಯಾಗಿದ್ದರೆ, ಮುದವತ್ ವ್ಯಾಕ್ಯೂಮ್ ಕ್ಲೀನರ್ ತಂತ್ರಜ್ಞನಾಗಿದ್ದ. ಇಬ್ಬರೂ ಕಳೆದ ವರ್ಷ ಜುಲೈನಲ್ಲಿ ಡ್ರಗ್ಸ್ ಮಾರಾಟ ಕೇಸ್‌ನಲ್ಲಿ ಜೈಲು ಸೇರಿ, ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಬಿಡುಗಡೆಯಾಗುತ್ತಿದ್ದಂತೆ ಮತ್ತೆ ಹಳೇ ಚಾಳಿ ಶುರು ಮಾಡಿಕೊಂಡಿದ್ದರು.

ಬಂಧಿತರು ಡೇಟಿಂಗ್ ಆ್ಯಪ್‌ಗಳ ಮೂಲಕ ತಮ್ಮ ಪ್ರೊಫೈಲ್‌ಗಳಲ್ಲಿ 'ರಾಕೆಟ್' 'ಪಾರಿವಾಳ' ಎಂಬ ಕೋಡ್ ವರ್ಡ್ ಬಳಸಿ ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಬೆಂಗಳೂರಿನ ನೈಜೀರಿಯಾ ಮೂಲದವರಿಂದ ಪ್ರತಿ ಗ್ರಾಂ ಎಂಡಿಎಂಎಗೆ 10,000 ರು.ಗಳಿಗೆ ಖರೀದಿಸಿ, ಹೈದರಾಬಾದ್‌ನಲ್ಲಿ ಪ್ರತಿ ಗ್ರಾಂಗೆ 15,000 ರು.ಗಳಿಗೆ ಮಾರಾಟ ಮಾಡುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ

ಹೈದರಾಬಾದ್ ವಿಶೇಷ ಕಾರ್ಯಪಡೆಯ ಅಧಿಕಾರಿಗಳು ಕಾರ್ಯಾಚರಣೆ ಸಂದರ್ಭದಲ್ಲಿ ಪತ್ತೆಹಚ್ಚಿದ್ದಾರೆ. ಬಂಧಿತರಿಂದ 100 ಗ್ರಾಂ ಎಂಡಿಎಂಎ, 10 ಮೊಬೈಲ್ ಫೋನ್‌ಗಳು ಹಾಗೂ ಒಂದು ತೂಕದ ಯಂತ್ರವನ್ನು ವಶಪಡಿಸಿಕೊಂಡಿದ್ದಾರೆ. ಇದರ ಮೌಲ್ಯ ಒಟ್ಟು 15 ಲಕ್ಷ ರು. ಇದೆ.

ಇದರೊಂದಿಗೆ 7 ಗ್ರಾಹಕರನ್ನೂ ಬಂಧಿಸಲಾಗಿದ್ದು, ಬಂಧಿತರಲ್ಲಿ ಓರ್ವ ಹೆಚ್‌ಐವಿ ಸೋಂಕಿತನಾಗಿದ್ದಾನೆ ಎಂದು ತಿಳಿದುಬಂದಿದೆ. ಹೆಚ್ಚಿನ ತನಿಖೆಗಾಗಿ ಎಲ್ಲಾ ಆರೋಪಿಗಳನ್ನು ಚಿಲ್ಕಲ್ಗುಡ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ಐಪಿಎಸ್ ಅಧಿಕಾರಿಗೆ ಅಜಿತ್ ಪವಾರ್ ಬೆದರಿಕೆ: ಸುಪ್ರಿಯ ಸುಳೆ ಖಂಡನೆ

ಡಿಸಿಎಂ ಅಜಿತ್ ಪ್ರಕರಣ: ಕುಟುಂಬದಲ್ಲಿಯೇ ಬಿರುಕು

ಮುಂಬೈ: ಸೋಲಾಪುರ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಂಡಿದ್ದಕ್ಕಾಗಿ ಮಹಿಳಾ ಐಪಿಎಸ್ ಅಧಿಕಾರಿಯನ್ನು ಅಜಿತ್ ಪವಾರ್ ಖಂಡಿಸಿದ ವಿಡಿಯೊ ಕಾಣಿಸಿಕೊಂಡ ನಂತರ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರನ್ನು ಸಮರ್ಥಿಸಿಕೊಳ್ಳುವ ಬಗ್ಗೆ ಮಾಜಿ ಕೇಂದ್ರ ಸಚಿವ ಶರದ್ ಪವಾರ್ ಅವರ ಎನ್‌ಸಿಪಿ (ಎಸ್‌ಪಿ) ಮತ್ತು ಪವಾರ್ ಕುಟುಂಬವು ವಿಭಜನೆಯಾಗಿದೆ.

ಡಿಸಿಎಂ ಅಜಿತ್ ಪವಾರ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪ್ರತಿಪಕ್ಷಗಳು ಒತ್ತಾಯಿಸಿದವು, ಆದರೆ ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) ಶಾಸಕ ಮತ್ತು ಹೊಸದಾಗಿ ನೇಮಕಗೊಂಡ ಪ್ರಧಾನ ಕಾರ್ಯದರ್ಶಿ ರೋಹಿತ್ ಪವಾರ್ ತಮ್ಮ ಸಂಬಂಧಿ ಅಜಿತ್ ಪವಾರ್ ಅವರ ರಕ್ಷಣೆಗೆ ಧಾವಿಸಿದ್ದಾರೆ.

ಅಜಿತ್ ಪವಾರ್ ಅವರನ್ನು ಸಮರ್ಥಿಸಿಕೊಂಡ ಎನ್‌ಸಿಪಿ (ಎಸ್‌ಪಿ) ನಾಯಕ ರೋಹಿತ್ ಪವಾರ್, ರಾಜ್ಯದಲ್ಲಿ ರೈತರ ಸಾಲಮನ್ನಾ, ಅಕಾಲಿಕ ಮಳೆಯಿಂದ ಉಂಟಾದ ಹಾನಿ ಮುಂತಾದ ಹಲವು ಸಮಸ್ಯೆಗಳಿವೆ, ಆದರೆ ಈ ನಿರ್ಣಾಯಕ ವಿಷಯಗಳನ್ನು ಚರ್ಚಿಸುವ ಬದಲು, ದುರದೃಷ್ಟವಶಾತ್ ಮರಳು ಗಣಿಗಾರಿಕೆ ಕುರಿತು ಮಹಿಳಾ ಪೊಲೀಸ್ ಅಧಿಕಾರಿ ಮತ್ತು ಅಜಿತ್‌ದಾದಾ ನಡುವಿನ ಸಂಭಾಷಣೆಯ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತಿರುವಂತೆ ತೋರುತ್ತಿದೆ ಎಂದು ಹೇಳಿದ್ದಾರೆ.

ಮತ್ತೊಂದೆಡೆ, ಹಿರಿಯ ಎನ್‌ಸಿಪಿ (ಎಸ್‌ಪಿ) ಲೋಕಸಭಾ ಸಂಸದೆ ಮತ್ತು ಶರದ್ ಪವಾರ್ ಅವರ ಪುತ್ರಿ ಸುಪ್ರಿಯ ಸುಳೆ, ಅಜಿತ್ ಪವಾರ್ ಅವರ ಹೆಸರನ್ನು ಉಲ್ಲೇಖಿಸದೆ, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರನ್ನು ಬಿಜೆಪಿ ನೇತೃತ್ವದ ಮಹಾಯುತಿ ಸರ್ಕಾರದ ಡಿಸಿಎಂ ಮಹಿಳಾ ಐಪಿಎಸ್ ಅಧಿಕಾರಿಯನ್ನು ಬೆದರಿಸುವ ಮತ್ತು ಹಲ್ಲೆ ಮಾಡುವುದನ್ನು ಗಮನಿಸಬೇಕೆಂದು ಕೇಳಿಕೊಂಡಿದ್ದಾರೆ.

'ಆಡಳಿತ ಮಂಡಳಿಯ ಸದಸ್ಯರು ಐಪಿಎಸ್ ಅಂಜನಾ ಕೃಷ್ಣ ಅವರ ಅರ್ಹತೆಗಳ ಮೇಲೆ ದಾಳಿ ಮಾಡುವುದು ನಮ್ಮ ಸಂವಿಧಾನದ ಮೇಲೆ ಗಂಭೀರ ಹಲ್ಲೆಯಾಗಿದೆ. ಚುನಾಯಿತ ಅಧಿಕಾರಿಗಳು ವ್ಯಕ್ತಿತ್ವ ವಿನಾಶವನ್ನು ಸಂಘಟಿಸಿದಾಗ, ಅದು ಕಾನೂನಿನ ನಿಯಮ, ವಿಧಿ 14 ಮತ್ತು 311 ಅನ್ನು ದುರ್ಬಲಗೊಳಿಸುತ್ತದೆ' ಎಂದು ಅವರು ಹೇಳಿದರು.

ದೇಶದ ನ್ಯಾಯಾಂಗ ವ್ಯವಸ್ಥೆ ನಂಬಿಕೆ ಕಳೆದುಕೊಳ್ಳುತ್ತಿದೆ

ಎಸ್‌ವಿಕೆಎಂ ಘಟಿಕೋತ್ಸವದಲ್ಲಿ ನಿವೃತ್ತ ನ್ಯಾ. ಗೋಪಾಲ ಗೌಡ ಅಭಿಮತ

ಎಸ್‌ವಿಕೆಎಂ ಬೆಂಗಳೂರು ಕೇಂದ್ರದ ಘಟಿಕೋತ್ಸವ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು.

ಬೆಂಗಳೂರು: ಎಸ್‌ವಿಕೆಎಂನ ಎನ್‌ಎಂಐಎಂಎಸ್ ಬೆಂಗಳೂರು ಕೇಂದ್ರದ ಕಾನೂನು, ವಾಣಿಜ್ಯ ಮತ್ತು ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ಘಟಿಕೋತ್ಸವ ಕಾರ್ಯಕ್ರಮವು ಇತ್ತೀಚೆಗೆ ಆಯೋಜನೆಗೊಂಡಿತ್ತು. ಕಾರ್ಯಕ್ರಮದಲ್ಲಿ ಕಾನೂನು ಮತ್ತು ತಂತ್ರಜ್ಞಾನ ಕ್ಷೇತ್ರದ ಗಣ್ಯ ವ್ಯಕ್ತಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸುಪ್ರೀಕೋರ್ಟ್‌ನ ನಿವೃತ್ತ ನ್ಯಾಯಾಧೀಶ ವಿ. ಗೋಪಾಲ ಗೌಡ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, 'ಪ್ರತೀ ಬಾರಿ ವಕೀಲರು ನಿಯಮಗಳನ್ನು ಮೀರಿದಾಗ ಅಥವಾ ತಪ್ಪುದಾರಿಗೆ ಹೋದಾಗ, ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಮಾಜವು ನಂಬಿಕೆ ಕಳೆದು ಕೊಳ್ಳುತ್ತದೆ. ನ್ಯಾಯ, ಸಮಾನತೆ, ಸ್ವಾಯತ್ತತೆ ಮತ್ತು ಭ್ರಾತೃತ್ವದ ನಿಯಮಗಳನ್ನು ಎಲ್ಲರೂ ರೂಢಿಸಬೇಕು' ಎಂದು ಅವರು ಕರೆ ನೀಡಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಕೆ.ಜಿ. ರಾಘವನ್ ಅತಿಥಿಗಳಾಗಿ ಪಾಲ್ಗೊಂಡು, 'ವಿದ್ಯಾರ್ಥಿಗಳು ಪರಿಣಿತಿ ಸಾಧಿಸಲು ಸದಾ ಪ್ರಯತ್ನಿಸಬೇಕು. ತಂತ್ರಜ್ಞಾನ ಜೀವನಕ್ಕೆ ಮಾರ್ಗದರ್ಶನವಾಗಿರಲಿ' ಎಂದು ಕಿವಿಮಾತು ಹೇಳಿದ್ದಾರೆ.

ವಾಣಿಜ್ಯ ಮತ್ತು ಅರ್ಥಶಾಸ್ತ್ರ ವಿದ್ಯಾಲಯದ ಪದವೀಧರರನ್ನು ಉದ್ದೇಶಿಸಿ ಮಾತನಾಡಿದ ಟಾಟಾ ಎಲೆಕ್ಸಿ ಸ್ಟ್ರಾಟಜಿಕ್ ರಿಲೇಶನ್ಸ್‌ನ ಜಾಗತಿಕ ಮುಖ್ಯಸ್ಥ ಭಾಸ್ಕರ ದತ್ 'ವಿಶ್ವದ ಪರಿಣಿತರ ಎಲ್ಲಾ ಯೋಚನೆಗಳು ಒಟ್ಟಿಗೆ ಸೇರಿದಾಗ ಅನ್ವೇಷಣೆ ಕಾರ್ಯಗತವಾಗುತ್ತದೆ. ಆಧುನಿಕ ಜಗತ್ತಿನಲ್ಲಿ ನಾವೀನ್ಯತೆ ಹೇಗೆ ಯಶಸ್ಸನ್ನು ರೂಪಿಸುತ್ತವೆ ಎಂಬುದನ್ನು ನೋಡಿದ್ದೇವೆ. ನಮ್ಮ ಯೋಜನೆಗಳು ಲಕ್ಷಾಂತರ ಜನರನ್ನು ತಲುಪಲು ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮವನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು' ಎಂದು ಅವರು ಕರೆ ನೀಡಿದರು.

ಕ್ಯಾಂಪಸ್ ನಿರ್ದೇಶಕಿ ಡಾ. ನಾರಾಯಣಿ ರಾಮಚಂದ್ರನ್ 2024-25ರ ವಾರ್ಷಿಕ ವರದಿಯನ್ನು ಬಿಡುಗಡೆಗೊಳಿಸಿದರು.

'ಎನ್‌ಎಂಐಎಂಎಸ್‌ನಲ್ಲಿನ ಕಲಿಕೆಯು ವಿದ್ಯಾರ್ಥಿಗಳ ಮಟ್ಟಿಗೆ ಯಾವಾಗಲೂ ಸಮರ್ಥ ವೃತ್ತಿಪರರ ಉತ್ತಮ ಶೈಕ್ಷಣಿಕ ಕೇಂದ್ರವಾಗಿದೆ' ಎಂದು ಸಹ ಉಪಕುಲಪತಿ ಡಾ. ಮೀನಾ ಚಿಂತಾಮಣಿ ಹೇಳಿದರು.

ಎನ್‌ಎಂಐಎಂಎಸ್ ಬೆಂಗಳೂರು ಕ್ಯಾಂಪಸ್ ನಿರ್ದೇಶಕಿ ಡಾ. ನಾರಾಯಣಿ ರಾಮಚಂದ್ರನ್ ತಮ್ಮ ಶೈಕ್ಷಣಿಕ ಕೇಂದ್ರದ ಬದ್ಧತೆಯನ್ನು ತಿಳಿಸಿದರು.

ಏಷ್ಯಾ ಕಪ್: ಯಂಗ್ ಇಂಡಿಯಾ ಫೇವರಿಟ್

ಏಷ್ಯನ್ ದೇಶಗಳ ನಡುವಿನ 'ಏಷ್ಯಾ ಕಪ್ ಕ್ರಿಕೆಟ್' ಕದನಕ್ಕೆ ದಿನಗಣನೆ ಶುರುವಾಗಿದೆ. ಮುಂದಿನ ವಾರ, ಅಂದರೆ ಸೆ. 9ರಿಂದ ಯುಎಇಯಲ್ಲಿ ಪಂದ್ಯಾವಳಿಯು ಪ್ರಾರಂಭವಾಗಲಿದೆ. ಒಟ್ಟು 8 ತಂಡಗಳು ಈ ಸಲ ಪ್ರಶಸ್ತಿಗಾಗಿ ಕಾದಾಟ ನಡೆಸಲಿದ್ದು, ಟಿ20 ಮಾದರಿಯಲ್ಲಿ ಟೂರ್ನಿಯು ನಡೆಯಲಿದೆ. ಸೂರ್ಯಕುಮಾರ್ ಯಾದವ್ ನಾಯಕತ್ವದ 'ಟೀಮ್ ಇಂಡಿಯಾ' ಟ್ರೋಫಿ ಗೆಲ್ಲುವತ್ತ ತನ್ನ ಚಿತ್ತ ನೆಟ್ಟಿದೆ. ಹಾಗಾಗಿ ಅದು ಏಷ್ಯಾ ಕಪ್ ಟ್ರೋಫಿ ಗೆಲ್ಲುವ ಫೇವರಿಟ್ ತಂಡ ಆಗಲಿದೆ ಎಂಬ ನಿರೀಕ್ಷೆ ಗರಿಗೆದರಿದೆ.

ನರೇಂದ್ರ ಪಾರೆಕಟ್

ಅದು 1983ನೇ ಇಸವಿ. ದಕ್ಷಿಣ ಏಷ್ಯಾದ ನೆರೆಯ ದೇಶಗಳಾದ ಭಾರತ, ಪಾಕಿಸ್ತಾನ ಮತ್ತು ಶ್ರೀಲಂಕಾ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸಲು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಸ್ಥಾಪನೆಯಾಯಿತು. ಅದರ ನೇತೃತ್ವದಲ್ಲೇ ಮರುವರ್ಷವೇ, ಅಂದರೆ 1984ರಲ್ಲಿ ಚೊಚ್ಚಲ ಏಷ್ಯಾಕಪ್ ಪಂದ್ಯಾವಳಿ ಶುರುವಾಯಿತು. ಮೊದಲ ಆವೃತ್ತಿಯ ಏಷ್ಯಾಕಪ್ ಅನ್ನು ಯುಎಇ ಆಯೋಜಿಸಿತ್ತು.

1983ರ ಐಸಿಸಿ ವಿಶ್ವಕಪ್ ಕ್ರಿಕೆಟ್ ವಿಜೇತ ತಂಡವಾದ ಭಾರತವು ಮೊದಲ ಏಷ್ಯಾ ಕಪ್‌ನಲ್ಲಿ ಭಾಗವಹಿಸಿದ್ದರಿಂದ ಆ ಪಂದ್ಯಾವಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಿತು. ಆದರೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಿಶ್ವಕಪ್ ವಿಜೇತ ಸಂಪೂರ್ಣ ತಂಡವನ್ನು 1984ರಲ್ಲಿ ನಡೆದಿದ್ದ ಚೊಚ್ಚಲ ಏಷ್ಯಾ ಕಪ್ ಪಂದ್ಯಾವಳಿಗೆ ಕಳುಹಿಸಿರಲಿಲ್ಲ. ಕಪಿಲ್ ದೇವ್, ಕೆ. ಶ್ರೀಕಾಂತ್, ಸೈಯದ್ ಕಿರ್ಮಾನಿ ಮತ್ತು ಮೊಹಿಂದರ್ ಅಮರನಾಥ್ ಅವರಂತಹ ಅಂದಿನ ಸ್ಟಾರ್ ಆಟಗಾರರಿಗೆ ವಿಶ್ರಾಂತಿ ನೀಡಲಾಯಿತು. ಅವರ ಸ್ಥಾನದಲ್ಲಿ ಮನೋಜ್ ಪ್ರಭಾಕರ್, ಚೇತನ್ ಶರ್ಮಾ ಮತ್ತು ಸುರಿಂದರ್ ಖನ್ನಾ ಅವರಂತಹ ಆಟಗಾರರು ಆ ಏಷ್ಯಾಕಪ್‌ನಲ್ಲಿ ಭಾಗವಹಿಸಿದ್ದರು. ಸುನಿಲ್ ಗವಾಸ್ಕರ್ ನೇತೃತ್ವದ ಭಾರತೀಯ ತಂಡವು ಶ್ರೀಲಂಕಾ ವಿರುದ್ಧದ ಮೊದಲ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ತೋರಿತು. ಆ ಚೊಚ್ಚಲ ಆವೃತ್ತಿಯಲ್ಲಿ ಭಾರತ, ಶ್ರೀಲಂಕಾ ಮತ್ತು ಪಾಕಿಸ್ತಾನ ಮಾತ್ರ ಭಾಗವಹಿಸಿದ್ದವು. ಫೈನಲ್ ಪಂದ್ಯದಲ್ಲಿ ಶ್ರೀಲಂಕಾವನ್ನು ಸೋಲಿಸಿದ್ದ ಭಾರತ ತಂಡ 1984ರ ಮೊದಲ ಏಷ್ಯಾಕಪ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿತ್ತು.

ಏಷ್ಯಾ ಕಪ್ ಪಂದ್ಯಾವಳಿಯು 1984ರಿಂದ 2023ರ ವರೆಗೆ ಒಟ್ಟು 16 ಬಾರಿ ನಡೆದಿದೆ. ಪಂದ್ಯಾವಳಿಯ ಇತಿಹಾಸದಲ್ಲಿ ಭಾರತವು ಎಂಟು ಬಾರಿ ಚಾಂಪಿಯನ್ ಆಗಿದೆ. ಏಕದಿನ ಸ್ವರೂಪದಲ್ಲಿ 7 ಬಾರಿ ಹಾಗೂ ಒಮ್ಮೆ ಟಿ20 ಸ್ವರೂಪದಲ್ಲಿ ಪ್ರಶಸ್ತಿ ಗೆದ್ದಿದೆ.

ಏಷ್ಯಾಕಪ್ ಮೇಲೆ ಐಸಿಸಿ ಹಸ್ತಕ್ಷೇಪ: ಏಷ್ಯಾ ಕಪ್‌ಗೆ ಸಂಬಂಧಿಸಿದಂತೆ 2015ರಲ್ಲಿ ಒಂದು ಪ್ರಮುಖ ಬೆಳವಣಿಗೆ ನಡೆಯಿತು. ಪಂದ್ಯಾವಳಿಯನ್ನು ಆಯೋಜಿಸುವ ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನ ಅಧಿಕಾರವನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕಡಿತಗೊಳಿಸಿತು. ಅಂದಿನಿಂದ ಏಷ್ಯಾ ಕಪ್ ಅನ್ನು ಪ್ರತೀ ಎರಡು ವರ್ಷಗಳಿಗೊಮ್ಮೆ ಏಕದಿನ ಮತ್ತು ಟಿ20 ಸ್ವರೂಪಗಳಲ್ಲಿ ಸರದಿ ವ್ಯವಸ್ಥೆಯಲ್ಲಿ ನಡೆಸಲು ಅನುಮತಿ ನೀಡಿತು. ಏಷ್ಯಾ ಕಪ್ ಅನ್ನು ಐಸಿಸಿ ಪಂದ್ಯಾವಳಿಗಳಿಗೆ ಅನುಗುಣವಾಗಿ ನಡೆಸಲಾಗುವುದು ಎಂದು ಅದು ಹೇಳಿತು,

ಏಷ್ಯಾ ಕಪ್: ಭಾರತ ತಂಡ

ಸೂರ್ಯ ಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ (ಕೀಪರ್), ಜಸ್ಪ್ರೀತ್ ಬುಮ್ರಾ, ಅರ್ಶದೀಪ್ ಸಿಂಗ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಸಂಜು ಸ್ಯಾಮ್ಸನ್ (ಕೀಪರ್), ಹರ್ಷಿತ್ ರಾಣಾ.

ಆ ಪರಿಣಾಮವಾಗಿ 2016ರಲ್ಲಿ ಮೊದಲ ಬಾರಿಗೆ ಏಷ್ಯಾ ಕಪ್ ಅನ್ನು ಟಿ20 ಸ್ವರೂಪದಲ್ಲಿ ಆಯೋಜಿಸಲಾಯಿತು. ಅದು ಟಿ20 ವಿಶ್ವಕಪ್ ಪಂದ್ಯಾವಳಿಗೆ ಮೊದಲು ಅಭ್ಯಾಸ ಪಂದ್ಯಾವಳಿಯಾಗಿ ನೆರವಾಗಲೂ ಕಾರಣವಾಯಿತು. ಆ ಬಾರಿಯ ಪ್ರಶಸ್ತಿ ಭಾರತದ ಮುಡಿಗೇರಿತ್ತು.

ಟೀಮ್ ಇಂಡಿಯಾದ್ದೇ ಮೇಲುಗೈ: 1984ರಲ್ಲಿ ನಡೆದ ಚೊಚ್ಚಲ ಏಷ್ಯಾಕಪ್ ಗೆಲುವಿನ ಬಳಿಕ, 1988ರಲ್ಲಿ, 1990-91ರಲ್ಲಿ ಮತ್ತು 1995ರ ಟೂರ್ನಿಯಲ್ಲಿ ಶ್ರೀಲಂಕಾ ತಂಡದ ವಿರುದ್ಧ ಫೈನಲ್ ಪಂದ್ಯದಲ್ಲಿ ಗೆದ್ದು ಏಷ್ಯಾ ಕಪ್ ಹ್ಯಾಟ್ರಿಕ್ ಪ್ರಶಸ್ತಿಯನ್ನೂ ಭಾರತ ತಂಡ ತನ್ನ ಮುಡಿಗೇರಿಸಿತ್ತು. ಬಳಿಕ 2010, 2016, 2018 ಮತ್ತು 2023ರಲ್ಲೂ ಟೀಮ್ ಇಂಡಿಯಾ ಏಷ್ಯಾ ಕಪ್ ಟೂರ್ನಿಯಲ್ಲಿ ಪ್ರಾಬಲ್ಯ ಮೆರೆದು ಪಂದ್ಯಾವಳಿಯ ಫೇವರಿಟ್ ತಂಡ ಎನಿಸಿಕೊಂಡಿತ್ತು.

ಭಾರತವನ್ನು ಹೊರತುಪಡಿಸಿ, ಶ್ರೀಲಂಕಾ ಆರು ಬಾರಿ ಮತ್ತು ಪಾಕಿಸ್ತಾನವು ಎರಡು ಬಾರಿ ಏಷ್ಯಾ ಕಪ್ ಟ್ರೋಫಿಯನ್ನು ಗೆದ್ದಿದೆ. ಹೀಗೆ ಭಾರತ, ಶ್ರೀಲಂಕಾ ಮತ್ತು ಪಾಕಿಸ್ತಾನ ತಂಡಗಳನ್ನು ಹೊರತುಪಡಿಸಿ, ಏಷ್ಯಾ ಖಂಡದ ಬೇರೆ ಯಾವ ದೇಶಗಳೂ ಇದುವರೆಗೂ ಏಷ್ಯಾ ಕಪ್ ಗೆದ್ದಿಲ್ಲ.

ಟೂರ್ನಿಯ ಸ್ವರೂಪ: ಟಿ20 ಮಾದರಿಯಲ್ಲಿ ನಡೆಯುವ ಈ ಸಲದ ಏಷ್ಯಾ ಕಪ್‌ನ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವ ತಂಡಗಳೆಂದರೆ ಭಾರತ, ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾದೇಶ, ಯು.ಎ.ಇ, ಅಫ್ಘಾನಿಸ್ತಾನ, ಹಾಂಗ್‌ಕಾಂಗ್ ಮತ್ತು ಒಮಾನ್. 8 ತಂಡಗಳನ್ನು ಎ ಮತ್ತು ಬಿ ಬಣಗಳಾಗಿ ವರ್ಗೀಕರಿಸಲಾಗಿದ್ದು, ಭಾರತ, ಪಾಕಿಸ್ತಾನ, ಒಮಾನ್ ಮತ್ತು ಯು.ಎ.ಇ ಎ-ಬಣದಲ್ಲಿ ಸ್ಥಾನ ಪಡೆದಿದ್ದರೆ, ಶ್ರೀಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ ಮತ್ತು ಹಾಂಗ್‌ಕಾಂಗ್ ತಂಡಗಳು ಬಿ-ಬಣದಲ್ಲಿವೆ.

ಸೆಪ್ಟೆಂಬರ್-9ರಿಂದ 19ರ ತನಕ ಗ್ರೂಪ್ ಪಂದ್ಯಗಳು ನಡೆಯಲಿದ್ದು, ಸೆಪ್ಟೆಂಬರ್-20ರಿಂದ 26ರ ತನಕ ಸೂಪರ್ ಫೋರ್ ಪಂದ್ಯಗಳು ಹಾಗೂ ಸೆಪ್ಟೆಂಬರ್-28ರಂದು ಫೈನಲ್ ಪಂದ್ಯ ಈ ಸಲ ನಡೆಯಲಿವೆ.

ಈ ಟೂರ್ನಿಯಲ್ಲೂ ಭಾರತವೇ ಫೇವರಿಟ್: ಭಾರತ ತಂಡದ ನಾಯಕರಾಗಿದ್ದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಟೆಸ್ಟ್ ಮತ್ತು ಟಿ20 ಪಂದ್ಯಗಳಿಗೆ ವಿದಾಯ ಹೇಳಿದ್ದ ಕಾರಣಕ್ಕಾಗಿ ಜುಲೈ ತಿಂಗಳಿನಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಗೆ ಟೀಮ್ ಇಂಡಿಯಾ ಹೊರಟಿದ್ದಾಗ, ಅಲ್ಲಿ ವೈಟ್ ವಾಶ್ ಮುಖಭಂಗವಾಗಿ ಮರಳಿ ಬರುವುದೇನೋ ಎಂದೇ ಭಾರತೀಯ ಕ್ರಿಕೆಟ್‌ಪ್ರೇಮಿಗಳು ಅಂದುಕೊಂಡಿದ್ದರು. ಆದರೆ ಸಂಘಟಿತ ಪ್ರಯತ್ನದ ಮೂಲಕ ಟೀಮ್ ಇಂಡಿಯಾ ಟೆಸ್ಟ್ ಸರಣಿಯನ್ನು 2-2 ಅಂತರದಲ್ಲಿ ಡ್ರಾ ಮಾಡಿದಾಗ ಎಲ್ಲರೂ ಹುಬ್ಬೇರಿಸಿದ್ದರು.

ಸೂರ್ಯಕುಮಾರ್ ನಾಯಕತ್ವದ ಯುವ ತಂಡವು ಈ ಏಷ್ಯಾ ಕಪ್‌ನಲ್ಲಿ ಈ ಬಾರಿ ಇತರ ತಂಡಗಳ ವಿರುದ್ಧ ಸೆಣಸಾಡಲಿದ್ದು, ಶುಭ್‌ಮನ್ ಗಿಲ್ ಉಪ ನಾಯಕರಾಗಿದ್ದಾರೆ. ಬ್ಯಾಟಿಂಗ್‌ನಲ್ಲಿ ಸ್ಫೋಟಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ, ಅಕ್ಷರ್ ಪಟೇಲ್ ಶಿವಂ ದುಬೆ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಜಸ್ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್ ಉತ್ತಮ ನಿರ್ವಹಣೆಯ ನಿರೀಕ್ಷೆಯಲ್ಲಿದ್ದಾರೆ. ಹಾಗೆಯೇ ತಂಡದಲ್ಲಿರುವ ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ ಮತ್ತು ವರುಣ್ ಚಕ್ರವರ್ತಿ ಹಲವಾರು ಟಿ20 ಪಂದ್ಯಗಳಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಿ, ನಿರ್ಣಾಯಕ ಪಂದ್ಯಗಳನ್ನು ಗೆಲ್ಲಿಸಿಕೊಡುವ ಸಾಮರ್ಥ್ಯ ಹೊಂದಿರುವ ಕಾರಣಕ್ಕೆ ಈ ಟೂರ್ನಿಯಲ್ಲೂ ಮಿಂಚುವ ನಿರೀಕ್ಷೆ ಇದೆ. ಈ ಕಾರಣಕ್ಕಾಗಿಯೇ ಯಂಗ್ ಇಂಡಿಯಾ ಈ ಸಲ ಏಷ್ಯಾ ಕಪ್ ಗೆಲ್ಲುವ ಫೇವರಿಟ್ ತಂಡ ಎಂದೆನಿಸಿದೆ.

ಭಾರತ-ಪಾಕ್ ಹೈ ವೋಲ್ಟೇಜ್ ಕದನ

ಈ ಏಷ್ಯಾ ಕಪ್ ಪಂದ್ಯಾವಳಿಯಲ್ಲಿ ಭಾರತ-ಪಾಕ್ ಮುಖಾಮುಖಿಯ ಬಗ್ಗೆ ಹಲವಾರು ತಿಂಗಳಿನಿಂದ ಚರ್ಚೆಗಳು ನಡೆದಿದ್ದವು. ಕೊನೆಗೂ ಇದೊಂದು ಬಹುರಾಷ್ಟ್ರೀಯ ಪಂದ್ಯಾವಳಿ ಆಗಿರುವುದರಿಂದ ಕೇಂದ್ರ ಸರಕಾರವು ಪಾಕ್ ವಿರುದ್ಧ ಆಡಲು ಕೊನೆಗೂ ಅನುಮತಿ ನೀಡಿತ್ತು. ಹಾಗಾಗಿ ಭಾರತ-ಪಾಕ್ ಹೈ ವೋಲ್ಟೇಜ್ ಪಂದ್ಯದ ಬಗ್ಗೆ ಅಭಿಮಾನಿಗಳ ಕಣ್ಣು ನೆಟ್ಟಿದೆ. ಭಾರತ ಮತ್ತು ಪಾಕಿಸ್ತಾನ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿವೆ. ಅಂತಹ ಪರಿಸ್ಥಿತಿಯಲ್ಲಿ, ಈ ಪಂದ್ಯಾವಳಿಯಲ್ಲಿ ಎರಡು ತಂಡಗಳ ನಡುವೆ ಒಟ್ಟು 3 ಪಂದ್ಯಗಳು ನಡೆಯಬಹುದು. ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ ಗ್ರೂಪ್ ಪಂದ್ಯದಲ್ಲಿ ಭಾರತವು ಸೆ.14ರಂದು ಪಾಕಿಸ್ತಾನವನ್ನು ದುಬೈನಲ್ಲಿ ಎದುರಿಸಲಿದೆ. ಎರಡೂ ತಂಡಗಳು ಮುಂದಿನ ಸುತ್ತನ್ನು ತಲುಪಿದರೆ, ಸೆಪ್ಟೆಂಬರ್ 21, ಭಾನುವಾರದಂದು ಭಾರತ ಮತ್ತು ಪಾಕಿಸ್ತಾನ ಮತ್ತೆ ಪರಸ್ಪರ ಮುಖಾಮುಖಿಯಾಗಲಿವೆ. ಅಲ್ಲಿಂದಲೂ ಎರಡೂ ತಂಡಗಳು ಫೈನಲ್ ತಲುಪುವಲ್ಲಿ ಯಶಸ್ವಿಯಾದರೆ, ಸೆಪ್ಟೆಂಬರ್ 28ರಂದು ನಡೆಯುವ ಫೈನಲ್ ಪಂದ್ಯದಲ್ಲಿ ಮತ್ತೆ ಎರಡೂ ತಂಡಗಳು ಪರಸ್ಪರ ಮುಖಾಮುಖಿಯಾಗಲಿವೆ.

ಏಷ್ಯಾ ಕಪ್ ವೇಳಾಪಟ್ಟಿ

- ಸೆಪ್ಟೆಂಬರ್: 9 — ಅಫ್ಘಾನಿಸ್ತಾನ, ಹಾಂಗ್‌ಕಾಂಗ್
- ಸೆಪ್ಟೆಂಬರ್: 10 — ಭಾರತ, ಯುಎಇ
- ಸೆಪ್ಟೆಂಬರ್: 11 — ಬಾಂಗ್ಲಾದೇಶ, ಹಾಂಗ್‌ಕಾಂಗ್
- ಸೆಪ್ಟೆಂಬರ್: 12 — ಪಾಕಿಸ್ತಾನ, ಒಮನ್
- ಸೆಪ್ಟೆಂಬರ್: 13 — ಬಾಂಗ್ಲಾದೇಶ, ಶ್ರೀಲಂಕಾ
- ಸೆಪ್ಟೆಂಬರ್: 14 — ಭಾರತ, ಪಾಕಿಸ್ತಾನ
- ಸೆಪ್ಟೆಂಬರ್: 15 — ಯುಎಇ, ಒಮನ್
- ಸೆಪ್ಟೆಂಬರ್: 15 — ಶ್ರೀಲಂಕಾ, ಹಾಂಗ್‌ಕಾಂಗ್
- ಸೆಪ್ಟೆಂಬರ್: 16 — ಬಾಂಗ್ಲಾದೇಶ, ಅಫ್ಘಾನಿಸ್ತಾನ
- ಸೆಪ್ಟೆಂಬರ್: 17 — ಪಾಕಿಸ್ತಾನ, ಯುಎಇ
- ಸೆಪ್ಟೆಂಬರ್: 18 — ಶ್ರೀಲಂಕಾ, ಅಫ್ಘಾನಿಸ್ತಾನ
- ಸೆಪ್ಟೆಂಬರ್: 19 — ಭಾರತ, ಒಮನ್

- ಸೆಪ್ಟೆಂಬರ್: 20-28 — ಸೂಪರ್ ಫೋರ್ ಪಂದ್ಯಗಳು
- ಸೆಪ್ಟೆಂಬರ್: 28 — ಫೈನಲ್, ದುಬೈ

ಎಲ್ಲಾ ಏಷ್ಯಾ ಕಪ್‌ನಲ್ಲೂ ಲಂಕಾ ಭಾಗಿ

ಇದುವರೆಗೆ ನಡೆದ 16 ಏಷ್ಯಾಕಪ್ ಪಂದ್ಯಾವಳಿಗಳಲ್ಲಿ ಆಡಿದ ಏಕೈಕ ತಂಡ ಎಂದರೆ ಶ್ರೀಲಂಕಾ. ಭಾರತ ಮತ್ತು ಪಾಕಿಸ್ತಾನ ಮತ್ತು ಬಾಂಗ್ಲಾ ತಂಡಗಳು ತಲಾ 15 ಏಷ್ಯಾ ಕಪ್ ಪಂದ್ಯಾವಳಿಯಲ್ಲಿ ಭಾಗವಹಿಸಿವೆ. ಶ್ರೀಲಂಕಾದೊಂದಿಗಿನ ದ್ವಿಪಕ್ಷೀಯ ಸಂಬಂಧ ಹದಗೆಟ್ಟ ಕಾರಣ ಭಾರತವು ಲಂಕಾದಲ್ಲಿ ನಡೆದಿದ್ದ 1986ರ ಪಂದ್ಯಾವಳಿಯನ್ನು ಬಹಿಷ್ಕರಿಸಿತ್ತು. ಹಾಗೆಯೇ ಭಾರತ ಆಯೋಜಿಸಿದ್ದ 1990-91ರ ಏಷ್ಯಾ ಕಪ್ ಅನ್ನು ಪಾಕಿಸ್ತಾನ ಬಹಿಷ್ಕರಿಸಿತು. ಅದೇ ಕಾರಣಕ್ಕಾಗಿ, 1993ರಲ್ಲಿ ಏಷ್ಯಾ ಕಪ್ ನಡೆಯಲಿಲ್ಲ

ರಾಜ್ಯದ ಸಾವಿರಾರು ಆಸ್ಪತ್ರೆಗಳಿಗೆ ಹಿಂದಿಕ್ಕಿ ಸಾಧನೆ.। ಸರಕಾರಿ ಆಸ್ಪತ್ರೆಯೆಂದರೆ ತಾತ್ಸಾರಗಳಿಗಿದು ಉತ್ತರ ಸಾಧನೆ ತೋರಿದ ಜಿಲ್ಲೆಯ ಕೆಂಭಾವಿ ಆರೋಗ್ಯ ಕೇಂದ್ರ। ಜಿಲ್ಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಕೇಂದ್ರ ತಂಡ

ಜಿಲ್ಲೆಯ ಸರಕಾರಿ ಆಸ್ಪತ್ರೆಗಳಿಗೆ ರಾಷ್ಟ್ರೀಯ ಪ್ರಶಸ್ತಿ ಗರಿ

ವೀರೇಶ ಎಸ್.ಕೆಂಭಾವಿ, ಯಾದಗಿರಿ

ಸರಕಾರಿ ಆಸ್ಪತ್ರೆಯೆಂದರೆ ತಾತ್ಸಾರ ಭಾವನೆಯಿಂದ ನೋಡುವರೆ ಹೆಚ್ಚು, ಆದರೀಗ ಅವರೆಲ್ಲರೂ ಮೂಗಿನ ಮೇಲೆ ಬೆರಳಿಟ್ಟು ನೋಡುವ ಹಾಗೇ ಗಿರಿಜಿಲ್ಲೆಯ

ಸರಕಾರಿ ಆಸ್ಪತ್ರೆಗಳು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿವೆ.

ಎನ್‌ಕ್ಯೂಎಎಸ್ ಗುಣಮಟ್ಟ ಖಾತ್ರಿ ಕಾರ್ಯಕ್ರಮದಡಿಯಲ್ಲಿ ರಾಜ್ಯದಿಂದ ಆಯ್ಕೆಯಾಗಿರುವ ಕೇವಲ ನಾಲ್ಕು ಆಸ್ಪತ್ರೆಯಲ್ಲಿ ಜಿಲ್ಲೆಯ ಸುರಪುರ ತಾಲೂಕಿನ ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ನಾಲ್ಕು ಆರೋಗ್ಯ ಉಪಕೇಂದ್ರಗಳ ಪೈಕಿ ಹಾಗೂ ವಡಗೇರಾ ತಾಲೂಕಿನ ತುಮಕೂರು ಉಪಕೇಂದ್ರ ಆಯ್ಕೆಯಾಗುವ ಮೂಲಕ ಆರೋಗ್ಯ ಸೇವೆಯಲ್ಲಿ ಯಾದಗಿರಿಯಲ್ಲೂ ಬದಲಾವಣೆ ಕಾಣಬಹುದು ಎನ್ನುವುದನ್ನು ನಿರೂಪಿಸಿವೆ.

ರಾಷ್ಟ್ರ ಮಟ್ಟದ ಪ್ರಶಸ್ತಿ

ಅತ್ಯುತ್ತಮ ಆಸ್ಪತ್ರೆ ನಿರ್ವಹಣೆಗಾಗಿ ರಾಷ್ಟ್ರ ಮಟ್ಟದಲ್ಲಿ ನೀಡಲಾಗುವ ನ್ಯಾಷನಲ್ ಕ್ವಾಲಿಟಿ ಅಶ್ಯುರೇನ್ಸ್ ಸ್ಟ್ಯಾಂಡರ್ಡ್ಸ್ (ಎನ್ ಕ್ಯೂಎಎಸ್) ಗೆ ಹೋಗಿ ರಾಜ್ಯದಿಂದ ಆಯ್ಕೆಯಾಗಿರುವ ನಾಲ್ಕು ಆಸ್ಪತ್ರೆಗಳ ವಿಭಾಗದಲ್ಲಿ ಜಿಲ್ಲೆಯ ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ತುಮಕೂರು ಉಪ ಕೇಂದ್ರಗಳನ್ನು ಎಲ್ಲಾ ರೀತಿಯ ಗುಣಮಟ್ಟದ ಅಂಶಗಳಲ್ಲಿ 95ಕ್ಕೂ ಅಧಿಕ ಅಂಕ ಪಡೆಯುವ ಮೂಲಕ ಪ್ರಶಸ್ತಿಗೆ ಪರಿಗಣನೆ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಜಿಲ್ಲೆಯ ಆಸ್ಪತ್ರೆಯೊಂದಕ್ಕೆ ಎನ್ ಕ್ಯೂ ಎ ಎಸ್ ಪ್ರಶಸ್ತಿ ದೊರಕಿದೆ.

ಕೇಂದ್ರ ತಂಡಪರಿಶೀಲನೆ

ಕೆಂಭಾವಿ ಸಮುದಾಯ ಆಸ್ಪತ್ರೆ ಸೇರಿ ಇತರೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ ಹೋಗಿದ್ದ ಎನ್ ಕ್ಯೂಎ ಎಸ್ ತಂಡದ ಅಧಿಕಾರಿಗಳು ಇಲ್ಲಿನ ಆಸ್ಪತ್ರೆಯಲ್ಲಿ ಎನ್‌ಕ್ಯೂಎ ಎಸ್ ಅನ್ವಯವಾಗುವ ಈ ಮಾನದಂಡಗಳಾದ ಸೇವಾ ನಿಬಂಧನೆ, ರೋಗಿಗಳ ಹಕ್ಕುಗಳು, ಇನ್‌ಪುಟ್‌ಗಳು, ಬೆಂಬಲ ಸೇವೆಗಳು, ಕ್ಲಿನಿಕಲ್ ಆರೈಕೆ, ಸೋಂಕು ನಿಯಂತ್ರಣ, ಗುಣಮಟ್ಟ ನಿರ್ವಹಣೆ ಅಳವಡಿಸಿಕೊಂಡಿರುವುದನ್ನು ಪರಿಗಣಿಸಿ ಕೆಂಭಾವಿ ಆಸ್ಪತ್ರೆಗೆ ಎರಡನೇಯ ಸ್ಥಾನ ನೀಡಿದೆ.

ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರದ ಹೊರನೋಟ



ಯಾದಗಿರಿ ಜಿಲ್ಲೆಯ ನನ್ನ ಶಹಾಪುರ ಮತಕ್ಷೇತ್ರದ ದೊಡ್ಡ ಹೋಬಳಿ ಕೇಂದ್ರವಾದ ಕೆಂಭಾವಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ ಬಂದಿರುವುದು ನನಗೆ ಹರ್ಷ ತಂದಿದೆ. ಕೆಂಭಾವಿ ಆರೋಗ್ಯ ಕೇಂದ್ರದ ವೈದ್ಯರಿಗೆ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಅಭಿನಂದನೆ ಹೇಳುವೆ.

-ಶರಣಬಸಪ್ಪ ದರ್ಶನಾಪುರ, ಜಿಲ್ಲಾ ಉಸ್ತುವಾರಿ ಸಚಿವರು

ಅತ್ಯುತ್ತಮ ನಿರ್ವಹಣೆ

ಜಿಲ್ಲೆಯಲ್ಲಿ ಮೊದಲ ಬಾರಿಗೆ ಎನ್ ಕ್ಯೂ ಎ ಎಸ್ ನಲ್ಲಿ ಸಾಧನೆ ತೋರಿ ಆಯ್ಕೆಯಾಗಿರುವ ಮೊದಲ ಆಸ್ಪತ್ರೆ ಕೆಂಭಾವಿ ಸಮುದಾಯ ಆಸ್ಪತ್ರೆಯಾಗಿದೆ. ಇಡೀ ರಾಜ್ಯದಲ್ಲಿರುವ ಸಾವಿರಾರು ಸರಕಾರಿ ಆಸ್ಪತ್ರೆಗಳನ್ನು ಹಿಂದಿಕ್ಕಿ ಅತ್ಯುತ್ತಮ ನಿರ್ವಹಣೆ ತೋರಿ ಈ ಸಾಧನೆಗೆ ಕಾರಣರಾದ ಆಸ್ಪತ್ರೆಯ ಆಡಳಿತ ವರ್ಗ ಹಾಗೂ ಸಿಬ್ಬಂದಿಗಳ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ವಡಗೇರಾ ತಾಲೂಕಿನ ತುಮಕೂರು ಆರೋಗ್ಯ ಕ್ಷೇಮ ಕೇಂದ್ರ ಕೂಡಾ ಇತಂಹದ್ದೆ ಸಾಧನೆ ತೋರುವ ಮೂಲಕ ಯಾದಗಿರಿ ಜಿಲ್ಲೆಯ ಗೌರವ ಹೆಚ್ಚಿಸಿದಂತಾಗಿದೆ.

ಪುರಸಭೆ ಸೇರಿ 12 ಹಳ್ಳಿಗಳು ಕೆಂಭಾವಿ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸುಮಾರು 45,000 ಜನಸಂಖ್ಯೆಯುಳ್ಳ ಇಲ್ಲಿ ತಿಂಗಳಿಗೆ ಪ್ರತಿಶತ ಸರಾಸರಿ ಎಂಟರಿಂದ ಒಂಬತ್ತು ಸಾವಿರ ರೋಗಿಗಳು ಚಿಕಿತ್ಸೆ ಪಡೆಯುತ್ತಾರೆ. ಅಷ್ಟೇ ಅಲ್ಲದೆ ಪ್ರತಿ ತಿಂಗಳು ಸರಾಸರಿ 45 ರಿಂದ 50 ಹೆರಿಗೆಗಳು ಈ ಆಸ್ಪತ್ರೆಯಲ್ಲಿ ಆಗುತ್ತಿವೆ. ಅಲ್ಲದೇ ಅತೀ ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆ ಅಪಘಾತದ ಚಿಕಿತ್ಸೆ ಆಗುತ್ತಿವೆ. ಇಲ್ಲಿ 24X7 ಸೇವೆ ರೋಗಿಗಳಿಗೆ ಚಿಕಿತ್ಸೆ ಲಭಿಸುತ್ತಿದೆ.ಎಲ್ಲಾ ಆಯಾಮದಲ್ಲೂ ಪ್ರಾಥಮಿಕ ಆರೋಗ್ಯ ಕೇಂದ್ರ ಒಂದು ಹೆಜ್ಜೆ ಮುಂದೆ ಇದೆ.

-ಸಂಜೀವರಾವ ಕುಲಕರ್ಣಿ, ಅಧ್ಯಕರು, ಕೆಂಭಾವಿ ಹಿತರಕ್ಷಣಾ ಸಮಿತಿ

ಏನಿದು ಎನ್‌ಕ್ಯೂಎಎಸ್

ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಸುಧಾರಿಸಲು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಅಭಿವೃದ್ಧಿಪಡಿಸಿದ ಸಮಗ್ರ ಚೌಕಟ್ಟು ಎನ್ ಕ್ಯೂಎಎಸ್ ಆಗಿದೆ. ವಿವಿಧ ಹಂತದ ಆರೋಗ್ಯ ಸೇವೆಗಳಿಗೆ (ಜಿಲ್ಲಾ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು) ಅನ್ವಯವಾಗುತ್ತವೆ. ಹಲವು ಮನದಂಡಗಳಡಿ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಹುಲಿ ಪ್ರತ್ಯಕ್ಷ :ಅರಣ್ಯ ಇಲಾಖೆಯಿಂದ ಕೂಂಬಿಂಗ್

ಚಾಮರಾಜನಗರ: ಜಿಲ್ಲೆಯ ಕಗ್ಗಲಹುಂಡಿ ಗ್ರಾಮದಲ್ಲಿ ಮತ್ತೆ ಹುಲಿ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆಮಾಡಿದೆ.

ಈಗಾಗಲೇ ಸಾಕಷ್ಟು ಬಾರಿ ಜನರಿಗೆ ಹುಲಿ ದರ್ಶನವಾಗಿದೆ. ಹುಲಿ ಸೆರೆ ಹಿಡಿಯಲು ಮುಂದಾಗದ ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರು ಕಿಡಿಕಾರಿದ್ದಾರೆ. ಜನರ ಆಕ್ರೋಶಕ್ಕೆ ಮಣಿದು ಸದ್ಯ ಕೂಂಬಿಂಗ್ ನಡೆಸಲು ಅರಣ್ಯ ಇಲಾಖೆ ಮುಂದಾಗಿದೆ.

ಬಂಡೀಪುರದಲ್ಲಿ ಹುಲಿ ಸಂಖ್ಯೆ ಹೆಚ್ಚಳ ಹಿನ್ನೆಲೆ ಕಾಡಂಚಿನ ಗ್ರಾಮದಲ್ಲಿ ಹುಲಿಗಳು ಕಾಣಿಸಿಕೊಳ್ಳುತ್ತಿವೆ. ಇದೀಗ ಗುಂಡ್ಲುಪೇಟೆ ತಾಲೂಕಿನ ಕಗ್ಗಲಹುಂಡಿ ಗ್ರಾಮದ ಜಮೀನಿನಲ್ಲಿ ಹುಲಿ ಕಾಣಿಸಿಕೊಂಡಿದೆ. ನಿನ್ನೆ ರಾತ್ರಿಯಿಂದಲೂ ಬಂಡೀಪುರ ಪೊಲೀಸರು ಅಲರ್ಟ್ ಆಗಿದ್ದಾರೆ.

ಸಾವಿರಾರು ಮಕ್ಕಳ ಬಾಳಿಗೆ ಬೆಳಕಾದ ನಡುತೋಟ ಕುಟುಂಬ

ಒಂದೇ ಕುಟುಂಬದಲ್ಲಿ ಹದಿಮೂರು ಮಂದಿ ಶಿಕ್ಷಕರು!

ಸುಬ್ರಹ್ಮಣ್ಯ: ಸುಬ್ರಹ್ಮಣ್ಯ ಸಮೀಪದ ಬಿಳಿನೆಲೆ ಕೈಕಂಬ ಬಳಿಯ ನಡುತೋಟ ಕುಟುಂಬ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಮನೆತನ. ಇದರಲ್ಲಿ ಏನು ವಿಶೇಷ ಎಂದರೆ, ಈ ಕುಟುಂಬದ ಬಹುತೇಕರು ಅಧ್ಯಾಪನ ವೃತ್ತಿಗಾಗಿ ಬದುಕನ್ನೇ ಮುಡಿಪಾಗಿಟ್ಟಿದ್ದಾರೆ. ಶಿಕ್ಷಣ ವೃತ್ತಿ ಎಂದರೆ ಈ ಕುಟುಂಬಕ್ಕೆ ಎಲ್ಲಿಲ್ಲದ ಪ್ರೀತಿ. ಇದರಿಂದಾಗಿಯೇ ಈ ಕುಟುಂಬದಲ್ಲಿ 13 ಮಂದಿ ಶಿಕ್ಷಕ ವೃತ್ತಿಯನ್ನು ಅವಲಂಭಿಸಿದ್ದು, ಮಕ್ಕಳ ಬಾಳಿಗೆ ಬೆಳಕನ್ನು ನೀಡುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.

ನೀಲಪ್ಪ ಗೌಡ ಪ್ರೇರಣೆ

ಇದಕ್ಕೆ ಮೂಲ ಕಾರಣ ಕುಟುಂಬದ ಹಿರಿಯ ಸದಸ್ಯ ನೀಲಪ್ಪ ಗೌಡ ನಡುತೋಟ ಅವರು, 40 ವರ್ಷ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ತಾವು ಕಲಿತಿದ್ದ ಸುಬ್ರಹ್ಮಣ್ಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ್ದ ಅವರು, ಜೊತೆಯಲ್ಲೇ ಉನ್ನತ ಶಿಕ್ಷಣವನ್ನೂ ಪಡೆದು ಹರಿಹರ ಪಲ್ಲತಡ್ಕ ಪದವಿಪೂರ್ವ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕರಾಗಿ ನಿವೃತ್ತರಾಗಿದ್ದಾರೆ. ಬಳಿಕ, ಒಂದು ವರ್ಷ ಕಡಬದ ಏಮ್ಸ್ ಖಾಸಗಿ ಪದವಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು. ಕುಟುಂಬದ ಹೆಚ್ಚಿನ ಸದಸ್ಯರು ಶಿಕ್ಷಕ ವೃತ್ತಿಯನ್ನೇ ಆರಿಸುವುದಕ್ಕೆ ನೀಲಪ್ಪ ಗೌಡರೇ ಪ್ರೇರಣೆ. ಸಹೋದರರಿಗೆ ಮತ್ತು ಸಹೋದರಿಯರಿಗೆ ವಿದ್ಯಾಭ್ಯಾಸ ಕೊಡಿಸಿ ಸಕಲ ನೆರವನ್ನೂ ನೀಡಿದ್ದರು.

ನೀಲಪ್ಪ ಗೌಡರ ಪತ್ನಿ ಶಾಂತಿ:

ನೀಲಪ್ಪ ಗೌಡರ ಪತ್ನಿ ಶಾಂತಿ ಅವರು ಸುಬ್ರಹ್ಮಣ್ಯದ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ನೀಲಪ್ಪ ಗೌಡ ಅವರ ಸಹೋದರ ದಿ.ದಿವಾಕರ ಗೌಡ ಅವರು ಸುಂಕದಕಟ್ಟೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದರು. ಸೇವೆಯಲ್ಲಿರುವಾಗಲೇ ವಿದ್ಯುದಾಘಾತದಿಂದ ಮೃತಪಟ್ಟಿದ್ದರು. ದಿವಾಕರ ಅವರ ಪತ್ನಿ ಸುಮತಿಯವರು ಬಿಳಿನೆಲೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕಿ ಯಾಗಿ ನಿವೃತ್ತರಾಗಿದ್ದಾರೆ.

ಇನ್ನೊಬ್ಬ ಸಹೋದರ:

ನೀಲಪ್ಪ ಗೌಡ ಅವರ ಇನ್ನೊಬ್ಬ ಸಹೋದರ ವಿಶ್ವನಾಥ ಗೌಡ ಅವರು ಸುಬ್ರಹ್ಮಣ್ಯದ ಸುಬ್ರಹ್ಮಣೇಶ್ವರ ಪದವಿ ಪೂರ್ವ ಕಾಲೇಜಿನ ವೃತ್ತಿ

ಶಿಕ್ಷಣ ವಿಭಾಗದ ಸ್ಥಾಪಕ ಉಪನ್ಯಾಸಕರಾಗಿ, ಮುಖ್ಯಸ್ಥರಾಗಿ ಅತ್ಯುತ್ತಮ ವೃತ್ತಿ ಶಿಕ್ಷಣ ಉಪನ್ಯಾಸಕ ರಾಷ್ಟ್ರ ಪ್ರಶಸ್ತಿಯನ್ನು ಪಡೆದು ನಿವೃತ್ತರಾಗಿದ್ದಾರೆ. ವಿಶ್ವನಾಥ ಅವರ ಪತ್ನಿ ಲೀಲಾ ಕುಮಾರಿ ಪಂಜದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕಿ.

ಮತ್ತೊಬ್ಬ ಸಹೋದರ :

ನೀಲಪ್ಪಗೌಡ ಅವರ ಮತ್ತೊಬ್ಬ ಸಹೋದರ ವಿಜಯ್ ಕುಮಾರ್ ಅವರು ಸಿರಿಬಾಗಿಲು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ನಿವೃತ್ತರಾದವರು. ವಿಜಯ್ ಕುಮಾರ್ ಅವರ ಪತ್ನಿ ಗೀತಾ ದೈಹಿಕ ಶಿಕ್ಷಣ ಶಿಕ್ಷಕಿ. ನೀಲಪ್ಪ ಗೌಡರ ಸಹೋದರಿ ಉಮಾ ಗುರುವಾಯನಕೆರೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕಿ. ಅವರ ಪತಿ ಧರ್ಣಪ್ಪ ಗೌಡ ಸೋಣಂದೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಇವರ ಸೊಸೆ ಶಿಲ್ಪಾ ಆದರ್ಶ್ ಇವರು ಗುರುವಾಯನಕೆರೆ ಎಕ್ಸೆಲ್ ಪಿಯು ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ.

ಪುತ್ರಿ-ಸೊಸೆ ಉಪನ್ಯಾಸಕಿಯರು:

ನೀಲಪ್ಪಗೌಡ ಅವರ ಪುತ್ರಿ ವಿದ್ಯಾಶ್ರೀ ಬೆಂಗಳೂರು ಬೃಂದಾವನ ಇಂಜಿನಿಯರಿಂಗ್ ಕಾಲೇಜಲ್ಲಿ ಉಪನ್ಯಾಸಕಿಯಾಗಿದ್ದಾರೆ. ಸೊಸೆ ರೇಷ್ಮಾ ದೇವರಗುಂಡ ಅವರು ಸುಳ್ಯ ನೆಹರು ಮೆಮೊರಿಯಲ್ ಪದವಿ ಪೂರ್ವ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಷಯದ ಉಪನ್ಯಾಸಕಿಯಾಗಿದ್ದಾರೆ. ಹೀಗೆ ಒಂದೇ ಮನೆಯ ಹಲವು ತಲೆಮಾರುಗಳ ಈ 'ವಸುದೈವ ಶಿಕ್ಷಕ ಕುಟುಂಬ' ಎಲ್ಲರಿಗೂ ಮಾದರಿಯಾಗಲಿ. ಇದು ತಲೆಮಾರಿನಿಂದ ತಲೆಮಾರಿಗೆ ಜ್ಞಾನ ದಾಟಿಸುವ ಈ ಪರಂಪರೆ ಹೀಗೆ ಮುಂದುವರಿಯಲಿ ಎಂದು ಆಶಿಸುತ್ತೇವೆ.

ವಿಶ್ವವಾಣಿ
@vishwavaninews
ಬೆಂಗಳೂರು
06-09-2025
ಶನಿವಾರ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಕಾಯುವಿಕೆಯ ಹಿಂದಿನ ಮರ್ಮ

ಒಂದು ಬೇಸಗೆಯಲ್ಲಿ ಬುದ್ಧ ತನ್ನ ಶಿಷ್ಯ ಆನಂದನೊಂದಿಗೆ ಒಂದು ಹಳ್ಳಿ ಯಿಂದ ಮತ್ತೊಂದು ಹಳ್ಳಿಗೆ ನಡೆದುಕೊಂಡು ಹೋಗುತ್ತಿದ್ದ. ದಾರಿಯಲ್ಲಿ ಬುದ್ಧನಿಗೆ ಬಾಯಾರಿಕೆಯಾಯಿತು. ಅವನು ಆನಂದನಿಗೆ, ''ನನಗೆ ತುಂಬಾ ಬಳಲಿಕೆಯಾಗಿದೆ. ನಿನಗೆ ನೆನಪಿದೆಯಾ, ಈಗ ನಾವು ಬಂದ ದಾರಿಯಲ್ಲಿ ಒಂದು ಸಣ್ಣ ತೊರೆ ಹರಿಯುತ್ತಿತ್ತು. ನೀರು ಕುಡಿಯಲು ನಾನು ಮತ್ತೆ ಅಲ್ಲಿಗೆ ಹಿಂದಿರುಗಿ ಹೋಗಲಾರೆ. ನೀನು ಹೋಗಿ ಅಲ್ಲಿಂದ ನನಗೆ ಕುಡಿಯಲು ನೀರು ತರುತ್ತೀಯಾ?'' ಅಂತ ಕೇಳಿದ.

ಆನಂದ ಅಚ್ಚರಿಯಿಂದ, ''ಇದೇಕೆ ಹೀಗೆ ನನ್ನನ್ನು ಬೇಡುವಿರಿ, ನಿಮ್ಮ ಸೇವೆ ಮಾಡುವುದು ನನ್ನ ಕರ್ತವ್ಯ ಮತ್ತು ಅದು ನನಗೆ ಖುಷಿ ಕೊಡುವ ವಿಚಾರ. ಇಲ್ಲೇ ಈ ಮರದಡಿ ವಿಶ್ರಾಂತಿ ತೆಗೆದುಕೊಳ್ಳುತ್ತಿರಿ. ನಾನು ಬೇಗ ಹೋಗಿ ನೀರು ತಂದುಬಿಡುವೆ'' ಅಂದು ಅಲ್ಲಿಂದ ಹೊರಟ. ಆನಂದ ಅಲ್ಲಿ ಹೋಗಿ ನೋಡಿದಾಗ ಅದೇ ತಾನೇ ಒಂದು ಎತ್ತಿನ ಗಾಡಿ

ನೀರಿನ ಮೇಲೇ ಹೋಗಿದ್ದರಿಂದ ನೀರು ಬಹಳ ರಾಡಿಯಾಗಿದ್ದು, ಅದರಲ್ಲಿ ತಳದ ಕೆಸರು, ಕಸಕಡ್ಡಿಗಳು ಇದ್ದುದನ್ನು ಕಂಡು, ಇದು ಕುಡಿಯಲು ಯೋಗ್ಯವಲ್ಲ ಅನಿಸಿ ಆನಂದ ನೀರು ತರದೇ ಬರಿಗೈಯಲ್ಲಿ ಹಿಂದಿರುಗಿ ಬಂದು ಬುದ್ಧನಿಗೆ, ''ಆ ನೀರು ಕುಡಿಯಲು ಯೋಗ್ಯವಲ್ಲ, ಇಲ್ಲಿಂದ ಇನ್ನೊಂದು ದಿಕ್ಕಿನಲ್ಲಿ ಅಲ್ಲಿ ಸ್ವಚ್ಛವಾಗಿ ನದಿ ಹರಿಯುತ್ತಿದೆ. ಅಲ್ಲಿಂದ ನೀರು ತರುತ್ತೇನೆ'' ಅಂದ.

ಆಗ ಬುದ್ಧ, ''ಬೇಡ, ನನಗೆ ಆ ತೊರೆಯ ನೀರೇ ಬೇಕು, ಅದೇ ನೀರನ್ನು ತೆಗೆದುಕೊಂಡು ಬಾ'' ಅಂದ. ಮತ್ತೆ ಆನಂದ, ''ಆ ನೀರು ರಾಡಿಯಾಗಿದೆ ಅದನ್ನು ಹೇಗೆ ತಂದು ನಿಮಗೆ ಕುಡಿಯಲು ಕೊಡಲಿ?'' ಅಂದ. ಆಗ ಬುದ್ಧ, ''ಇರಲಿ, ನನಗೆ ಅದೇ ನೀರು ಬೇಕು'' ಅಂದ. ಆನಂದನಿಗೆ ಬುದ್ಧನ ಮಾತುಗಳನ್ನು ಮೀರು ವುದು ಸಾಧ್ಯವಿರಲಿಲ್ಲ. ಹೀಗಾಗಿ ಮತ್ತೆ ಅದೇ ತೊರೆಗೆ ಹೋದ. ಈ ಸಲ ಅವನು ಅಲ್ಲಿಗೆ ಹೋದಾಗ ನೀರು ತಿಳಿಯಾಗಿತ್ತು. ರಾಡಿಯೆಲ್ಲಾ ಕೆಳಕ್ಕೆ ಹೋಗಿತ್ತು. ಮತ್ತೆ ಹಿಂದಿರುಗಿ ಹೋಗು ಎಂದ ಬುದ್ಧನ ಮಾತು ಆನಂದ ನಿಗೆ ಯಾವುದೋ ಹೊಸ ಸಂದೇಶವನ್ನು ಕೊಡುತ್ತಿತ್ತು.

ಆನಂದ ತಿಳಿಯಾದ ನೀರಿನೊಂದಿಗೆ ಹಿಂದಿರುಗಿ ದಾಗ ಬುದ್ಧ, ''ಇದರ ಸಂದೇಶ ತಿಳಿಯಿತೇ?'' ಅಂತ ಕೇಳಿದ. ಅಷ್ಟೊತ್ತಿಗೆ ಬುದ್ಧನ ಸಂದೇಶವನ್ನು ಅರಿತಿದ್ದ ಆನಂದ, ''ನಾನು ಅಲ್ಲೇ ಇದ್ದು ಇನ್ನೂ ಸ್ವಲ್ಪ ಹೊತ್ತು ಕಾಯಬೇಕಿತ್ತು. ಕಾಯುವುದಕ್ಕಿಂತ ಇನ್ನೊಂದು ತಪಸ್ಸಿಲ್ಲ, ಮನಸ್ಸಿನ ತೊರೆಯಲ್ಲೂ ಆಗಾಗ ಕೆಸರು ರಾಡಿಗಳೇಳುತ್ತವೆ. ಅಂಥ ರಾಡಿಯನ್ನು ತೊಡೆದು ಹಾಕಲು ನಾವು ಪ್ರಯತ್ನಿಸಿದಷ್ಟೂ ಅವು ಇನ್ನೂ ಹೆಚ್ಚಾಗುತ್ತವೆ. ನಾನು ಧ್ಯಾನಿಸುವಾಗ ಈ ಕಾಯುವ ನೀತಿಯನ್ನು ಅಳವಡಿಸಿಕೊಳ್ಳದೇ ಇನ್ನೂ ಹತಾಶನಾಗಿ ಬದುಕುತ್ತಿದ್ದೆ. ಈಗ ತೊರೆಯ ತಿಳಿನೀರನ್ನು ಕಂಡ ಮೇಲೆ ನನಗೆ ಹೊಸ ಒಳನೋಟವೊಂದು ದೊರಕಿ ದಂತಾಗಿದೆ'' ಎಂದು ಕೃತಜ್ಞತಾಭಾವದಿಂದ ತಿಳಿಸಿದ.

ಆಗ ಬುದ್ಧ, ''ನನಗೆ ಬಾಯಾರಿಕೆಯೇನೂ ಆಗಿರಲಿಲ್ಲ, ಕಾಯುವಿಕೆಯ ಫಲಶ್ರುತಿಯನ್ನು ನಿನಗೆ ಅರ್ಥ ಮಾಡಿಸೋಣ ಎಂದು ನಾನು ನಿನ್ನನ್ನು ಪುನಃ ಅಲ್ಲಿಗೆ ಕಳಿಸಿದನೇ ಹೊರತು, ನನಗೆ ನೀರು ತರಲೆಂದಲ್ಲ. ನಮಗೆ ಎದುರಾಗಿ ಗಾಡಿ ಬಂದಿದ್ದನ್ನು ನಾನು ನೋಡಿದ್ದೆ. ಆ ಬಂಡಿ ಗಳು ತೊರೆಯನ್ನು ದಾಟುವುವೆಂದೂ ತಿಳಿದಿದ್ದೆ. ಅದೇ ಸಮಯವನ್ನು ಅಂದಾಜಿಸಿಕೊಂಡು ನಿನ್ನನ್ನು ನೀರು ತರಲು ಕಳಿಸಿದೆ'' ಎಂದ. ಸತ್ಯ ಎಂದರೆ, ಲೋಕದಲ್ಲಿ ಮನುಷ್ಯನ ಮನಃಸ್ಥಿತಿಯನ್ನೂ ಒಳಗೊಂಡಂತೆ ಯಾವುದೂ ಶಾಶ್ವತವಾಗಿ ಉಳಿಯುವುದಿಲ್ಲ, ಅವುಗಳಿಂದ ಮುಕ್ತಿ ಹೊಂದಲು ಕಾಯುವುದು ಒಂದು ಪ್ರಮುಖ ಸಾಧನ. ಇಂಥ ಕಾಯುವಿಕೆಯನ್ನು ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

• ಬೇಲೂರು ರಾಮಮೂರ್ತಿ

ಬಲ್ಲಿರಾ ಗೆಳೆತನದ ಘಮಲು?

• ಮಂಜೇಶ್ ದೇವಗಳ್ಳಿ, ಮೈಸೂರು

ರಕ್ತಸಂಬಂಧಗಳು ನಮ್ಮ ಬದುಕನ್ನು ಹಸನಾಗಿಸುವುದು ಗೊತ್ತಿರುವ ಸಂಗತಿಯೇ. ಇದೇ ರೀತಿಯಲ್ಲಿ 'ಗೆಳೆತನ' ಎಂಬ ಸುಂದರ ಭಾವದ ಬಾಂಧವ್ಯವೂ ಪಾತ್ರ ವಹಿಸುತ್ತದೆ. ಕೆಲವರ ಬದುಕಿನಲ್ಲಂತೂ ಇದು ಮರುಭೂಮಿಯಲ್ಲಿನ 'ಓಯಸಿಸ್'ನಂತೆ ಒದಗಿ, ಆಹ್ಲಾದಕಾರ ಅನುಭವವನ್ನು ನೀಡುತ್ತದೆ.

ಪರಸ್ಪರರ ಬಾಳನ್ನು ಹಸನಾಗಿ ಕಟ್ಟಿಕೊಳ್ಳುವಲ್ಲಿ ನೆರವಾಗಿ, ಒಳಿತಿನ ಬಾಂಧವ್ಯವನ್ನು ಉಳಿಸಿ, ನವಿರಾದ ನೆನಪನ್ನು ಹಸಿರಾಗಿ ಅಚ್ಚೊತ್ತಿ ಬಿಡುವುದು ಗೆಳೆತನದ ವೈಶಿಷ್ಟ್ಯ. ಗೆಳೆತನ ಎಂದರೆ ಜತೆಗೆ ಕೂತು ಸವಿದ ಹೂರಣವಷ್ಟೇ ಅಲ್ಲ, ಬೀದಿಗಳನ್ನು ಅಲೆದು, ಬೆಟ್ಟ-ಗುಡ್ಡಗಳನ್ನು ಸುತ್ತಿ, ನಿರಾಳತೆಯ ಉಸಿರುಬಿಟ್ಟು, ನಕ್ಕು-ನಲಿದು, ಹೆಗಲ ಮೇಲೆ ಕೈಹಾಕಿ ಕುಳಿತದ್ದಷ್ಟೇ ಅಲ್ಲ, ಸೋಲುಗಳ ನಡುವೆ ಸಿಲುಕಿದಾಗ ಭರವಸೆಯ ಹೆಗಲಾಗಿ ನಿಂತು, 'ನಿನ್ನ ಜತೆಗೆ ನಾನಿದ್ದೇನೆ' ಎಂದು ಧೈರ್ಯ ತುಂಬಿದ್ದಷ್ಟೇ ಅಲ್ಲ. ಗೆಳೆತನ ಎಂಬುದು ಇಂಥ ಇನ್ನೂ ಅನೇಕ ಅನುಪಮ ಅಂಶಗಳ ಸಮ್ಮಿಲನ.

ಗೆಳೆತನ ಎಂದಾಕ್ಷಣ ನೆನಪಾಗುವುದು ಕೃಷ್ಣ ಮತ್ತು ಸುಧಾಮರ ನಡುವಿನ ಪರಿಶುದ್ಧ ಬಾಂಧವ್ಯ. ಬಾಲ್ಯದಲ್ಲಿ ಇವರಿಬ್ಬರೂ ಆಟವಾಡುತ್ತಿರುವಾಗ

ಇವರಿಗೆ ಹಸಿವಾಗುತ್ತದೆ. ಕೃಷ್ಣ ವಾಸವಿದ್ದ ಜಾಗದ ಪಕ್ಕದಲ್ಲೇ ಒಂದು ಗುಡಿಸಲಿದ್ದು, ಅದರಲ್ಲಿ ಒಬ್ಬ ಬಡ ಅಜ್ಜಿ ವಾಸವಿರುತ್ತಾಳೆ. ಕೃಷ್ಣ-ಸುಧಾಮರು ಗುಡಿಸಲಿನ ಬಳಿ ಆಡಲಿಕ್ಕೆ ಹೋದಾಗ ಅಲ್ಲಿದ್ದ ಪುಟ್ಟ ಕೈಚೀಲದಲ್ಲಿ ಕಡಲೇಬೀಜ ಇರುವುದನ್ನು ಕಂಡು ಕೈಗೆತ್ತಿಕೊಳ್ಳುತ್ತಾರೆ. ಆಟವಾಡಿ ಹಸಿವಾಗಿದ್ದ ಸುಧಾಮನು ಕೃಷ್ಣನಿಗೆ ಒಂದೂ ಕಡಲೇಬೀಜವನ್ನು ಕೊಡದೆ ತಿಂದುಹಾಕುತ್ತಾನೆ.

ವಾಸ್ತವವಾಗಿ, ಆ ಅಜ್ಜಿಯು ತನಗೆ ಊಟಕ್ಕೆ ಏನೂ ಇಲ್ಲದೆ ಒಂದಿಷ್ಟು ಕಡಲೇಬೀಜವನ್ನು ತಂದು ಕೈಚೀಲದಲ್ಲಿ ಕಟ್ಟಿ ಅದನ್ನು ತನ್ನ ಗುಡಿಸಲಿನಲ್ಲಿ ಇಟ್ಟುಕೊಂಡಿರುತ್ತಾಳೆ. ಆದರೆ ಹಿಂದಿನ ರಾತ್ರಿಯಷ್ಟೇ ಆಕೆಯ ಗುಡಿಸಲಿಗೆ ನುಗ್ಗಿದ ಕಳ್ಳರು ಎಲ್ಲಾ ಕಡೆ ಹುಡುಕಿ ಏನೂ ಸಿಗದೆ, ಕೊನೆಗೆ ಆ ಕತ್ತಲೆಯಲ್ಲಿ ಗೊತ್ತಾಗದೆ ಆ ಕೈಚೀಲದಲ್ಲಿ ಚಿನ್ನವಿರಬಹುದೆಂದು ಭಾವಿಸಿ ಅದನ್ನು ಎಗರಿಸುತ್ತಾರೆ. ಗುಡಿಸಲಿನ ಹೊರಗೆ ಬಂದು ನೋಡಲಾಗಿ ಅದರಲ್ಲಿ ಕಡಲೇಬೀಜ ಇರುವುದನ್ನು ಕಂಡು ಅಲ್ಲೇ ಬಿಸಾಡಿ ಹೋಗಿರುತ್ತಾರೆ. ಅಜ್ಜಿಗೆ ಹಸಿವಾಗಿ ತಿನ್ನಲು ಕೈಚೀಲವನ್ನು ಹುಡುಕಿದಾಗ ಅದು ಸಿಗದೆ, ಯಾರೋ ಕಳ್ಳರು ಅದನ್ನು ಎಗರಿಸಿದ್ದಾರೆ ಎಂದು ಭಾವಿಸಿ, 'ಆ ಚೀಲದಲ್ಲಿರುವ ಕಡಲೇಬೀಜವನ್ನು ತಿಂದವರಿಗೆ ದಾರಿದ್ರ್ಯ ಬರಲಿ' ಎಂದು ಹಿಡಿಶಾಪ ಹಾಕಿರುತ್ತಾಳೆ. ಸದರಿ ಕೈಚೀಲವು ಹಸಿದ ಸುಧಾಮನಿಗೆ ದೊರೆತ ಕ್ಷಣವೇ, ಅಜ್ಜಿಯು ಶಾಪ ಹಾಕಿರುವುದು ದಿವ್ಯದೃಷ್ಟಿಯಿಂದ ಗೊತ್ತಾಗುತ್ತದೆ. ಅದರಲ್ಲಿನ ಕಡಲೇಬೀಜವನ್ನು ಕೃಷ್ಣನೂ ತಿಂದರೆ ಅವನಿಗೆ ದಾರಿದ್ರ್ಯ ಬರುತ್ತದೆ ಎಂದು ಭಾವಿಸಿ, ಕೃಷ್ಣನಿಗೆ ಒಂದು ಬೀಜವನ್ನೂ ಕೊಡದೆ ಒಬ್ಬನೇ ತಿನ್ನುತ್ತಾನೆ. ಇದರಿಂದಾಗಿ ಸುಧಾಮನನ್ನು ದಾರಿದ್ರ್ಯವು ಆವರಿಸುತ್ತದೆ. ಗೆಳೆಯನ ಒಳಿತಿಗಾಗಿ ಹೀಗೆ ತನ್ನ ಜೀವನವನ್ನೇ ಕಠಿಣ ಹಾದಿಗೆ ತಾನಾಗಿಯೇ ದೂಡಿಕೊಂಡ ಸುಧಾಮನ ಸ್ವಭಾವ ಸ್ಮರಣೀಯ. ಇದರ ಹಿನ್ನೆಲೆಯಲ್ಲಿ ಕೆಲಸ ಮಾಡಿದ್ದು 'ಗೆಳೆತನ' ಎಂಬ ಅಮೂಲ್ಯ ಭಾವ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಗೆಳೆತನ ಎಂದರೆ ಮಿತ್ರನಿಗೆ ಸೂಕ್ತ ಸಮಯದಲ್ಲಿ ಒಳ್ಳೆಯ ಸಲಹೆ ನೀಡಿ, ಆತನ ಬದುಕನ್ನು ಹಸನಾಗಿಸುವುದು. ಗೆಳೆತನಕ್ಕೆ ಶ್ರೀಮಂತಿಕೆ ಅಥವಾ ಬಡತನ ಎಂಬುದು ಅಡ್ಡಿಯಾಗುವುದಿಲ್ಲ; ಇದಕ್ಕೆ ಶ್ರೀಕೃಷ್ಣ ಮತ್ತು ಸುಧಾಮರ ನಡುವಿನ ಸ್ನೇಹವೇ ಸಾಕ್ಷಿ. ಗೆಳೆತನವು ಪ್ರೀತಿ ಮತ್ತು ಕರುಣೆಯನ್ನು ಗುರುತಿಸುತ್ತದೆ. ನಿಜವಾದ ಗೆಳೆಯನು ನಿರ್ಣಾಯಕ ಸಮಯದಲ್ಲಿ ಸಹಾಯಕ್ಕೆ ಬರುತ್ತಾನೆ. ಹೀಗಾಗಿ ಗೆಳೆತನ ಎಂಬುದು, ಒಬ್ಬರು ಕೇಳುವ ಅಗತ್ಯವಿಲ್ಲದ ಮತ್ತು ಇನ್ನೊಬ್ಬರು ವಿವರಿಸುವ ಅಗತ್ಯವಿಲ್ಲದ ಬಂಧ. ನಿಜವಾದ ಗೆಳೆಯನಿಗೆ ತನ್ನ ಮಿತ್ರನು ತೊಂದರೆಯಲ್ಲಿದ್ದಾನೆ ಎಂಬುದು ತಿಳಿಯುತ್ತದೆ ಮತ್ತು ಆ ತೊಂದರೆಯನ್ನು ನಿವಾರಿಸಲು ಸಾಧ್ಯವಿರುವ ಎಲ್ಲ ಯತ್ನಗಳನ್ನೂ ಆತ ಮಾಡುತ್ತಾನೆ. ಗೆಳೆತನದ ವಾತ್ಸಲ್ಯ ಇರುವಲ್ಲಿ ಅವಮಾನ ಅಥವಾ ಮುಜುಗರಕ್ಕೆ ಸ್ಥಳವಿಲ್ಲ, ಅಲ್ಲಿ ಅಗಾಧವಾದ ಪರಸ್ಪರ ಪ್ರೀತಿ ಮತ್ತು ಗೌರವಗಳು ಮಾತ್ರ ಇರುತ್ತವೆ. ಸಂಪತ್ತು ಮತ್ತು ಅಂತಸ್ತನ್ನು ಮೀರಿದ, ಪ್ರೀತಿ ಮತ್ತು ವಿಶ್ವಾಸದ ಬಂಧವೇ ನಿಜವಾದ ಸ್ನೇಹ.

ಸರ್ವಸ್ಯ ಸರ್ವಂ

• ಮಾಯಾ ಬಾಲಚಂದ್ರ

ವ್ಯಕ್ತಿತ್ವ ನಿರ್ಮಾಣದ ಬಗ್ಗೆ ಬಹು ಚರ್ಚೆ ನಡೆಯುತ್ತಿರುವ, ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತಿರುವ ಕಾಲಮಾನವಿದು. ನಮ್ಮ ಭಾವನೆಗಳು, ಚಿಂತನೆಗಳು, ಕನಸು- ಕಲ್ಪನೆಗಳು, ಅಭೀಪ್ಸೆ, ತರ್ಕ, ಶ್ರದ್ಧೆ, ಸಂದೇಹ, ಹಂಬಲ, ರಾಗ-ದ್ವೇಷ, ನಿರೀಕ್ಷೆ, ಅಪೇಕ್ಷೆಗಳೆಲ್ಲವೂ ಅಗೋಚರವಾ ದಂಥವೇ. ಇವೆಲ್ಲವೂ ನಮ್ಮ ವ್ಯಕ್ತಿತ್ವದ ಮೂಲದ್ರವ್ಯಗಳು. ಈ ಮೂಲದ್ರವ್ಯಗಳನ್ನು ಆವರಿಸಿರುವುದು 'ನಾನು' ಎಂಬ ಅಹಂಭಾವ.

'ನಾನು' ಎಂಬ ಪ್ರತ್ಯೇಕ ಭಾವವು ಮಗುವಿಗೆ ಸುಮಾರು ಎರಡು ವರ್ಷ ವಯಸ್ಸಾಗುವ ಸಂದರ್ಭದಲ್ಲಿ ಚಿಗುರೊಡೆಯಲು ಆರಂಭಿಸುತ್ತದೆ ಎಂದು ಅಧ್ಯಯನಗಳು ತಿಳಿಸುತ್ತವೆ. 'ನಾನು' ಬಂದ ಮೇಲೆ, ನೀನು, ಅವನು, ಅವಳು ಎಂಬೆಲ್ಲಾ ಭಿನ್ನತೆ ಗಳನ್ನು ಅದು ಕಾಣಲಾರಂಭಿಸುತ್ತದೆ. ಹೀಗಾಗಿ ಈ 'ನಾನು' ಎಂಬುದೇ ಪ್ರತಿಯೊಬ್ಬರಲ್ಲೂ ಪ್ರಮುಖವಾಗಿ ಬೆಳೆಯುತ್ತಾ ಬಲಿಯುತ್ತಾ ಹೋಗುತ್ತದೆ.
ಈ 'ನಾನು'ವಿಗೆ ಹಲವು ಬಗೆಯ ಉಪಾಧಿಗಳು ಜತೆಯಾಗಿ, ಕಾಲಕ್ರಮೇಣ ವ್ಯಕ್ತಿತ್ವದ ನಿರ್ಮಾಣವಾಗುತ್ತದೆ. ಈ 'ನಾನು' ಅತ್ಯಂತ ಪ್ರಮುಖ ಅಂಶವೆನಿಸಿ, ಜೀವನ ಗಾಥೆಯ ಕಥಾ ನಾಯಕ ಅಥವಾ ಕಥಾನಾಯಕಿಯಾಗಿ ಅಂತಿಮ ಕ್ಷಣದ ವರೆಗೂ ಮುಂದುವರಿಯುತ್ತದೆ. ನೀನು, ಅವನು, ಅವಳು, ಅವರಿವರೆಲ್ಲರೂ ಪಡೆಯುವುದು ನಂತರದ ಸ್ಥಾನಗಳನ್ನೇ. ಇಂಥವರು ನಮ್ಮ ಜೀವನದಲ್ಲಿನ ಪ್ರಮುಖ ವ್ಯಕ್ತಿ ಎಂದು ಕೊಂಡವರಿಗೂ ನಾವು ನೀಡುವ ಸ್ಥಾನವು 'ನಾನು'ವಿನ ನಂತರದ್ದು. ಇದು ನಿಜಕ್ಕೂ ಸೋಜಿಗದ ಸಂಗತಿ.

ಬಾಹ್ಯ ಜಗತ್ತಿಗೆ ಕಂಡುಬರುವುದು ಬಾಹ್ಯ ಶರೀರ ಮಾತ್ರವೇ. ದೇಹದ ಆಕಾರ, ಬಣ್ಣ, ಬಾಹ್ಯೇಂದ್ರಿಯಗಳು, ಚಲನೆಗಳು ಎಲ್ಲವೂ ಹೊರಗಣ್ಣಿಗೆ ಕಾಣುವಂಥವು. ಇದೇ ಮಾನವನ ನಿಜವಾದ ವ್ಯಕ್ತಿತ್ವವಲ್ಲ. ನಿಜವಾದ ವ್ಯಕ್ತಿತ್ವವು ಬಾಹ್ಯ ದೃಷ್ಟಿಗೆ ನಿಲುಕದೆ, ಕೇವಲ ಅನುಭವ ಗ್ರಾಹ್ಯವಾಗುವಂಥದ್ದು. ಆಗ ಹೊಸ ಅನೂಹ್ಯ ಪ್ರಪಂಚವೇ ಬದುಕಿಗೆ ತೆರೆದುಕೊಳ್ಳುತ್ತದೆ. ಇದರಿಂದ ಬಾಹ್ಯ ಜಗತ್ತಿನ ಸೌಂದರ್ಯ, ಸಂತೋಷಗಳ ನಶ್ವರತೆ ತಿಳಿವಿಗೆ ಬರುತ್ತದೆ. ಅರಿವಿನಿಂದ ಗ್ರಹಿಸುವಾಗ, ಆಂತರ್ಯದ ಜಗತ್ತೇ ಹೊರಪ್ರಪಂಚವನ್ನು ಕಾಣಲು ಬೆಳಕಾಗುತ್ತದೆ. ಆಗ ನಿಲುಕುವ ನಿಚ್ಚಳ ನೋಟವು ನಿಜವಾದ ಸೌಂದರ್ಯವನ್ನು ತೋರಲಾರಂಭಿಸುತ್ತದೆ. 'ಸರ್ವಸ್ಯ ಸರ್ವಂ' ಎನ್ನುವುದು ವೇದ್ಯವಾಗುತ್ತದೆ. ಒಳ್ಳೆಯದು- ಕೆಟ್ಟದ್ದು, ಇಷ್ಟಾ ನಿಷ್ಟಗಳು ಎಲ್ಲವನ್ನೂ ಸೃಷ್ಟಿಯೇ ಬೆರೆಸಿ ಕೊಟ್ಟಿದೆ ಎನ್ನುವುದು ಅರಿವಿಗೆ ಬರುತ್ತದೆ. ತಥ್ಯ-ಮಿಥ್ಯ ಗಳಿಂದಲೇ ಈ ಸೃಷ್ಟಿ ಎನ್ನುವ ಅರಿವಾದಾಗ ನಿಜವಾದ ಸೌಂದರ್ಯ ಕಣ್ತೆರೆಸುತ್ತದೆ. ಅಂತರಂಗದಿಂದಲೂ, ಬಹಿರಂಗ ದಿಂದಲೂ ನಿತ್ಯನೂತನ ಸೌಂದರ್ಯವನ್ನು ಆಸ್ವಾದಿಸಬಲ್ಲ ವ್ಯಕ್ತಿತ್ವವು ಸುಂದರ ವ್ಯಕ್ತಿತ್ವವಾಗಿ ರೂಪುಗೊಳ್ಳುತ್ತದೆ.

ನಾವಿಕದ ಮಿನುಗುವ ಮಿಂಚುವ ತಾರಾಲೋಕ

• ಡಾ. ಯಶವಂತ ಸರದೇಶಪಾಂಡೆ

ಕನ್ನಡ ಚಿತ್ರರಂಗಕ್ಕ ತೊಂಬತ್ತು ವರ್ಷ ತುಂಬಿದ ಸಂದರ್ಭದಾಗ ಅಮೇರಿಕಾದ ಒರ್ಲಾಂಡೋ ಕನ್ನಡ ಸಂಘದವರು 'ತಾರಾ ಲೋಕ' ಎಂಬ ವಿನೂತನ ಕಾರ್ಯಕ್ರಮವನ್ನ, 8ನೇ ನಾವಿಕ ಸಮಾವೇಶ ದಾಗ ಪ್ರಸ್ತುತಿ ಮಾಡಿದರು. ಬೆಂಗಳೂರಿನಿಂದ ಬಂದಂತಹ ತಾರಾದಂಪತಿ ನಮಿತಾ ರಾವ್ ಮತ್ತ ವಿಕ್ರಂ ಸೂರಿ ಅವರ ನಿರ್ದೇಶನದಾಗ ರಂಗಕ್ಕೆ ಬಂದ 60 ಜನ ಅಮೆರಿಕೆಯ ಕನ್ನಡಿಗರು, ಅವರವರಿಗೆ ನೀಡಿದ ಪಾತ್ರಗಳಿಗೆ ಜೀವ ತುಂಬಿದರು. ಅಮೆರಿಕಾದಾಗ ಡಾಕ್ಟರಕಿ, ಇಂಜಿನಿಯರ್, ವ್ಯವಹಾರ- ವ್ಯಾಪಾರ ಮಾಡುವ, ಓದುವ, ಮನೆಗೆಲಸ ಮಾಡಿಕೊಂಡಿರುವ ಕನ್ನಡಿಗರು ಎಲ್ಲಾ ಮರೆತು ಕುಣಿದು ಕುಪ್ಪಳಿಸಿ, ಆನಂದಿಸಿ ರಂಗದ ಮ್ಯಾಲೆ ಕನ್ನಡತವನ್ನ ಮೆರೆದರು ಮತ್ತ ತುಂಬಿದ ಪ್ರೇಕ್ಷಾಗ್ರಹದಲ್ಲಿಯ ಪ್ರತಿ ಯೊಬ್ಬರಿಗೂ ಕನ್ನಡ ಚಿತ್ರರಂಗದ ಸವಿ ನೆನಪುಗಳನ್ನ ಕೆದಕಿ ಕೊಟ್ಟರು.

ಒಟ್ಟ 65 ಮಿನಿಟಿನ ಪ್ರಸ್ತುತಿಯೊಳಗ, ಒಂದು ದೃಶ್ಯದಿಂದ ಇನ್ನೊಂದು ದೃಶ್ಯಕ್ಕ ಸಂಬಂಧ ಕಲ್ಪಿಸುವುದರೊಳಗ ನಿರ್ದೇಶಕ ಯಶಸ್ವಿ ಆಗ್ಯಾರ. ಡಾ ರಾಜ್, ಡಾ ವಿಷ್ಣು, ಡಾ ಅಂಬರೀಷ್, ನಾಗ್ ಸಹೋದರರ, ದ್ವಾರಕೀಶ್, ರವಿಚಂದ್ರನ್, ಭಾರತಿ, ಜಯಂತಿ, ಮಂಜುಳಾ, ಸೌಂದರ್ಯ ಮುಂತಾದ ಹಿರಿಯ ಕಲಾವಿದರ ಲುಕ್ ಅಲೈಕ್ ಗಳನ್ನ ಹುಡುಕಿ, ಅವರಿಗೆ ತಕ್ಕದಾದ ವೇಷ ಭೂಷಣ ತೊಡಿಸಿ, ತಾಲೀಮ ಮಾಡಿಸಿ, ಯೋಗ್ಯ ರಂಗಪರಿಕಗಳೊಂದಿಗೆ ರಂಗಕ್ಕ ತಂದದ್ದರ ಹಿರಿಮೆ ಒರ್ಲಾಂಡೋ ಕನ್ನಡ ಸಂಘದ ಸಕಲರಿಗೂ ಸಲ್ಲತದ. ಇದರಾಗ ತಾರಾ ದಂಪತಿಗಳ ನೇತೃತ್ವ ಹಿರೇತನ ಎದ್ದು ಕಾಣತದ.

ಸಿಕ್ಕಿರುವ ಅವಕಾಶ ಸದುಪಯೋಗಪಡಿಸಿ ಕೊಂಡು, ಕನ್ನಡ ಚಿತ್ರರಂಗದ ಸೂಕ್ಷ್ಮ ಮಾಹಿತಿಯನ್ನ ಮುಂದಿನ ಪೀಳಿಗೆಗೆ ತಲುಪಿಸುವ ಈ ಶ್ರಮ ಶ್ಲಾಘನೀಯ. ಇನ್ನು ನಾಲ್ಕಾರು ಕಡೆ ಈ ಪ್ರದರ್ಶನ ಆದರ, ಕಲಾವಿದರ-ನಿರ್ದೇಶಕ ದ್ವಯರ ಪರಿಶ್ರಮಕ್ಕ ಹೆಚ್ಚಿನ ಮಾನ್ಯತೆ-ಗೌರವ ಸಿಕ್ಕಂಗ ಆಗತದ. ವೇದಿಕೆಗೆ ಬಂದ ಶಂಕರನಾಗ್, ವಿಷ್ಣುವರ್ಧನ್, ದ್ವಾರಕೀಶ್, ಅಂಬರೀಷ್, ಜಯಂತಿ, ಸೌಂದರ್ಯ ಮತ್ತ ಗಂಧದ ಗುಡಿಯ ಡಾ ರಾಜ್, ಸಂಪತ್ತಿಗೆ ಸವಾಲ್ ಚಿತ್ರದ ಮಂಜುಳಾ, ಓಬವ್ವನ ಪಾತ್ರ, ಬಂಗಾರದ ಮನುಷ್ಯದ ಭಾರತಿ, ಆಪ್ತಮಿತ್ರದ ಸೌಂದರ್ಯ, ಪಾತ್ರ ಧಾರಿಗಳ ಅಭಿನಯ ಭಾಳ ದಿನ ನೆನಪಿಡುವಂತ ಹವು. ಇಂದಿನ ಕಾಲದ ಅವಸರ, ಗಡಿಬಿಡಿ, ಕೆಲಸದೊತ್ತಡ, ಫ್ಯಾಮಿಲಿ ಟೆನ್ಷನ್‌ಗಳ ನಡುವ ಟೈಮ್ ಹೊಂದಿಸಿ 60 ಕಲಾವಿದರು ಒಂದಾಗಿ, ಕೆಲವಷ್ಟು ದಿನ ರಿಹರ್ಸಲ್ ಮಾಡಿ, ಒಂದು ಸಾರ್ಥಕ ರಂಗ ಪ್ರಯೋಗ ಮಾಡಿದ್ದು ಹೆಮ್ಮೆಯ ವಿಷಯ. ಭಾಗವಹಿಸಿದ ಪ್ರತಿಯೊಬ್ಬರಿಗೂ ಅಭಿನಂದನೆಗಳು..!

ಮೂಲವ್ಯಾಧಿಗೆ ಮದ್ದು: ಸಹಜ ಶಂಖಮುದ್ರೆ

• ಡಾ.ಸುಧಾಕರ ಜಿ. ಲಕ್ಕವಳ್ಳಿ

ಸಹಜ ಶಂಖಮುದ್ರೆಯು ಯೋಗದ ಕೈಸನ್ನೆಯಾಗಿದ್ದು, ಇದು ಮೂಲವ್ಯಾಧಿಯನ್ನು ಅಥವಾ ಮೂಲವ್ಯಾಧಿಗೆ ಸಂಬಂಧಿಸಿದ ಲಕ್ಷಣ ಗಳನ್ನು ನಿವಾರಿಸುವಲ್ಲಿ ಸಹಕಾರಿಯಾಗಿದೆ.



ಈ ಮುದ್ರೆಯನ್ನು ಶಂಖ ಚಿಪ್ಪಿನ ಮುದ್ರೆ ಎಂದೂ ಕರೆಯಲಾಗುತ್ತದೆ. ಮುದ್ರೆಗಳು ದೇಹದೊಳಗಿನ ಶಕ್ತಿಯ ಹರಿವಿನ ಮೇಲೆ ಪ್ರಭಾವ ಬೀರುತ್ತವೆ ಮತ್ತು ನಿರ್ದಿಷ್ಟ ಪ್ರದೇಶಗಳನ್ನು ಗುರಿಯಾಗಿಸಿ ಸಮತೋಲನ ಮತ್ತು ಗುಣ ಪಡಿಸುವಿಕೆ ಯನ್ನು ಉತ್ತೇಜಿಸುತ್ತವೆ ಎಂದು ಭಾವಿಸಲಾಗಿದೆ. ಆದಾಗ್ಯೂ, ಮುದ್ರೆ ಗಳು ಸಮಗ್ರ ಅಭ್ಯಾಸಗಳ ಭಾಗವಾಗಿದ್ದರೂ, ಅವು ವೈದ್ಯಕೀಯ ಚಿಕಿತ್ಸೆಗೆ ಬದಲಿಯಾಗಿಲ್ಲ ಎಂಬುದನ್ನು ಗಮನಿಸಬೇಕಾದ್ದು ಅತ್ಯಗತ್ಯ.

• **ಅಭ್ಯಾಸ ಕ್ರಮ:** ಆರಾಮದಾಯಕ ಆಸನ ಅಥವಾ ಪರಿಣಾಮಕಾರಿ ಪ್ರಯೋಜನಕ್ಕಾಗಿ ವಜ್ರಾಸನ ಭಂಗಿಯಲ್ಲಿ ನೇರವಾಗಿ ಕುಳಿತುಕೊಳ್ಳಿ. ಎರಡೂ ಕೈಗಳನ್ನು ಒಟ್ಟಿಗೆ ಸೇರಿಸಿ, ಬೆರಳುಗಳನ್ನು ಪರಸ್ಪರ ಬಂಧಿಸಿ ಮತ್ತು ಅಂಗೈಗಳನ್ನು ಒಟ್ಟಿಗೆ ಒತ್ತಿರಿ. ಎರಡೂ ಹೆಬ್ಬೆರಳುಗಳನ್ನು ತೋರುಬೆರಳಿನ ಮೇಲೆ ಪರಸ್ಪರ ಸಮಾನಾಂತರವಾಗಿ ಇರಿಸುವ ಮೂಲಕ ಮೃದುವಾದ ಒತ್ತಡವನ್ನು ಅನ್ವಯಿಸಿ. ಇದು ಸಹಜ ಶಂಖ ಮುದ್ರೆಯನ್ನು ರೂಪಿಸುತ್ತದೆ.

- ಈ ಮುದ್ರೆಯನ್ನು ದಿನದ ಯಾವುದೇ ಭಾಗದಲ್ಲಿ ಅಭ್ಯಾಸ ಮಾಡಬಹುದು.
- ಈ ಮುದ್ರೆಯನ್ನು 5 ನಿಮಿಷಗಳ ಕಾಲ ಹಿಡಿದುಕೊಳ್ಳುವ ಮೂಲಕ ಪ್ರಾರಂಭಿಸಿ, ದಿನಕ್ಕೆ 45 ನಿಮಿಷಗಳವರೆಗೆ ವಿಸ್ತರಿಸಬಹುದು.
- ಬೆಳಗಿನ ಜಾವದಲ್ಲಿ ಇದನ್ನು ಅಭ್ಯಾಸ ಮಾಡುವುದು ಪ್ರಯೋಜನಕಾರಿ. ಪ್ರತಿದಿನ ಬೆಳಗಿನ ಜಾವ ಈ ಮುದ್ರೆಯನ್ನು ಮಾಡುವುದರಿಂದ ಜೀರ್ಣಕ್ರಿಯೆಯಲ್ಲಿನ ಸಮಸ್ಯೆಗಳು ಕಡಿಮೆಯಾಗುತ್ತವೆ.
- ಪರಿಣಾಮಕಾರಿ ಫಲಿತಾಂಶಗಳಿಗಾಗಿ ಸಾಕಷ್ಟು ನೀರು ಮತ್ತು ಜ್ಯೂಸ್‌ಗಳನ್ನು ಕುಡಿಯುವ ಮೂಲಕ ನೀರಿನಂಶ ಕಾಪಾಡಿಕೊಳ್ಳಿ.

• **ಮುನ್ನೆಚ್ಚರಿಕೆ:** ಅಂಗೈ, ಬೆರಳು, ಮಣಿಕಟ್ಟು ಗಾಯವಿರುವವರು, ಗರ್ಭಿಣಿಯರು, ಬಾಣಂತಿಯರು, ಶಸ್ತ್ರಚಿಕಿತ್ಸೆಗೆ ಒಳಗಾದವರು, ದೀರ್ಘ ಕಾಲದ ಅನಾರೋಗ್ಯದಿಂದ ಬಳಲುತ್ತಿರುವವರು, ಕಡಿಮೆ ರಕ್ತದೊತ್ತಡ ಉಳ್ಳವರು ಈ ಮುದ್ರೆಯ ಅಭ್ಯಾಸವನ್ನು ತಪ್ಪಿಸಿ.

- ಯಾವುದೇ ಮುದ್ರೆಗಳನ್ನು ಅಭ್ಯಾಸ ಮಾಡುವ ಮುನ್ನ ವೈದ್ಯರ ಸಲಹೆ ಹಾಗೂ ಮುದ್ರಾ ತಜ್ಞರ ಮಾರ್ಗದರ್ಶನವನ್ನು ಪಡೆಯುವುದು ಸೂಕ್ತ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	■	3	■	■	4
	■	5	6	■	7			
	■	■	8	9		■	■	
10		11	■		■	12		
■	■	13					■	■
14			■		■	15		16
	■	■	17		18	■	■	
19				■	20	21	■	
	■	■		■	■	22		

ಎಡದಿಂದ ಬಲಕ್ಕೆ

1. ಇವನು ಬ್ರಹ್ಮ (3)
5. ಬುದ್ಧಿ, ತಿಳುವಳಿಕೆ (2)
7. ಪದಾರ್ಥಕ್ಕೆ ಬಳಸುವ ಕಾಯಿಪಲ್ಲೆ (4)
8. ಕೆಳಕ್ಕೆ ಬೀಳುವಿಕೆ (3)
10. ದೇವೇಂದ್ರನಿಗೆ ಮತ್ತೊಂದು ಹೆಸರು (3)
12. ವಿಷ್ಣುವಿನ ಮತ್ತೊಂದು ಹೆಸರಿನೊಂದಿಗೆ ಬಂದಿರುವ ಜಿಂಕೆ (3)
13. ನಿದ್ದೆಯಲ್ಲಿ ಮಾತನಾಡುವಿಕೆ (5)
14. ಹತ್ತಿಯ ಮತ್ತೊಂದು ಹೆಸರು (3)
15. ತಲೆಗೆ ಸುತ್ತಿಕೊಂಡ ಮುಂಡಾಸು (3)
17. ಅಷ್ಟ ಸರ್ಪಗಳಲ್ಲಿ ಒಂದು (3)
19. ಆನೆ, ಕುದುರೆ, ರಥ ಮತ್ತು ಪದಾತಿಗಳಿಂದ ಕೂಡಿದ ಸೈನ್ಯ (4)
20. ರೀತಿ, ಕ್ರಮ (2)
22. ತಿರುಗಿ ಬಂದಿರುವ ಅನ್ನ (3)

ಮೇಲಿಂದ ಕೆಳಕ್ಕೆ

1. ವಿಶ್ರಾಂತಿ ಪಡೆ (4)
2. ಕತ್ತಲೆ ಅಥವಾ ಅಜ್ಞಾನ (2)
3. ಆತನ ಸಂಬಳ (3)
4. ಅಗಲ ಬಾಯಿಯ ಪಾತ್ರೆ (4)
6. ತಲೆಕೆಳಗಾಗಿರುವ ಗಂಡ (2)
9. ತೊದಲು ಅಥವಾ ಮುಗ್ಗರಿಸು (5)
11. ಹೂವಿನ ಎಸಳು (3)
12. ಪ್ರಕೃತಿಯ ಬಣ್ಣ (3)
14. ಸೇವಕ, ಹಿಂಬಾಲಕ (4)
16. ಸಮಸ್ಯೆಯ ಪರಿಹಾರಕ್ಕಾಗಿ ಸಲ್ಲಿಸಿದ ಅರ್ಜಿ ತಲೆಕೆಳಗಾಗಿದೆ (4)
17. ಊದುವ ವಾದ್ಯ ಅಸ್ತವ್ಯಸ್ತವಾಗಿದೆ (3)
18. ಕೇಳುವ ಅಂಗ (2)
21. ದುಡ್ಡು ಅಥವಾ ಹಣ (2)

ಸರಿಯುತ್ತರಗಳು

[illegible]

ವಿಷ್ಣು ಸಹಸ್ರನಾಮದ ಮಹತ್ವ

ಮನುಷ್ಯನ ಆಯಸ್ಸು ನೂರು ವರ್ಷ. ಈ ನೂರು ವರ್ಷಗಳಲ್ಲಿ 36 ಸಾವಿರ ಹಗಲು ಮತ್ತು 36 ಸಾವಿರ ರಾತ್ರಿಗಳಿವೆ. ಮನುಷ್ಯ ದೇಹ 72 ಸಾವಿರ ನಾಡಿಗಳಿಂದಾಗಿದೆ. ಈ ನಾಡಿಗಳಲ್ಲಿ 36 ಸಾವಿರ ನಾಡಿಗಳು ಎಡ ಭಾಗದಲ್ಲೂ ಮತ್ತು 36 ಸಾವಿರ ನಾಡಿಗಳು ನಮ್ಮಬಲಭಾಗದಲ್ಲೂ ಇರುತ್ತವೆ. ಈ ನಾಡಿಗಳಲ್ಲಿ ರಕ್ತ ಸಂಚಾರ ಸರಿಯಾಗಿ ಆದರೆ ಮನುಷ್ಯನಿಗೆ ಯಾವುದೇ ರೋಗ ಬರಲಾರದು.

ವೇದಗಳ ಸಾರವಾದ ಬೃಹತೀಸಹಸ್ರದಲ್ಲಿ ಒಂದು ಸಾವಿರ ಮಂತ್ರಗಳಿವೆ, ಹಾಗೂ ಈ ಒಂದು ಸಾವಿರ ಮಂತ್ರದಲ್ಲಿ 72, 000 ಅಕ್ಷರಗಳಿವೆ. ಈ ಒಂದು ಸಾವಿರ ಮಂತ್ರಗಳ ಸಾರವನ್ನು ಒಂದು ಸಾವಿರ ನಾಮಗಳ ರೂಪದಲ್ಲಿ ವೇದವ್ಯಾಸರು ನಮಗೆ ಕರುಣಿಸಿದ್ದಾರೆ. ವಿಷ್ಣು ಸಹಸ್ರನಾಮವನ್ನು ಪಠಿಸುವುದರಿಂದ ನಾವು ಬೃಹತೀಸಹಸ್ರದ 72 ಸಾವಿರ ಅಕ್ಷರಗಳನ್ನು ಜಪಿಸಿದಂತಾಗುತ್ತದೆ. ಇದರಿಂದ ನಮ್ಮ 72 ಸಾವಿರ ನಾಡಿಗಳಲ್ಲಿ ಪೂರ್ಣಪ್ರಮಾಣದ ರಕ್ತ ಸಂಚಾರವಾಗುತ್ತದೆ. ಆದ್ದರಿಂದ ವಿಷ್ಣು ಸಹಸ್ರನಾಮ ಭವರೋಗ ಪರಿಹಾರಕ. ಆದರೆ ಅರ್ಥ ತಿಳಿದು ಹೃದಯತುಂಬಿ ಭಕ್ತಿಯಿಂದ ಪಾರಾಯಣ ಮಾಡುವುದು ಮುಖ್ಯ. ವೇದಗಳಿಗೆ ಕನಿಷ್ಠ 3 ಅರ್ಥಗಳಿವೆ, ಮಹಾಭಾರತ ಶ್ಲೋಕಗಳಿಗೆ ಕನಿಷ್ಠ 10 ಅರ್ಥಗಳಿದ್ದರೆ, ಶ್ರೀವಿಷ್ಣು ಸಹಸ್ರನಾಮದ ಪ್ರತೀ ನಾಮಕ್ಕೆ ಕನಿಷ್ಠ ನೂರು ಅರ್ಥಗಳಿವೆ. ಈ ಕಾರಣಕ್ಕಾಗಿಯೇ ಪ್ರಾಚೀನರು ಭಗವದ್ಗೀತೆ ಮತ್ತು ಶ್ರೀವಿಷ್ಣು ಸಹಸ್ರನಾಮವನ್ನು ಅತ್ಯಮೂಲ್ಯ ಗ್ರಂಥವಾಗಿ ಪರಿಗಣಿಸಿದ್ದಾರೆ.

ಶರಪಂಜರದ ಮೇಲೆ ಮಲಗಿದ್ದ ಭೀಷ್ಮರನ್ನು ಧರ್ಮರಾಜ ಕೇಳುತ್ತಾನೆ, 'ಇಡೀ ಜಗತ್ತಿನ ದೈವ ಯಾರು? ಯಾರ ಸ್ತುತಿ, ಕೀರ್ತನೆ, ಅರ್ಚನೆಯಿಂದ ನಮಗೆ ಶ್ರೇಯಸ್ಸಾಗುತ್ತದೆ? ಸಮಸ್ತ ಧರ್ಮಗಳಲ್ಲಿ ಶ್ರೇಷ್ಠ ಧರ್ಮ ಯಾವುದು? ಯಾರ ಜಪ ಮಾಡುವುದರಿಂದ ಸಮಸ್ತ ಪಾಪ, ಜನನ-ಮರಣಗಳ ಚಕ್ರದಿಂದ ಮುಕ್ತರಾಗಬಹುದು? ಈ ಎಲ್ಲ ಪ್ರಶ್ನೆಗಳಿಗೂ ಭೀಷ್ಮಾಚಾರ್ಯರು ಶ್ರೀವಿಷ್ಣು ಸಹಸ್ರನಾಮವೆಂದು ಒಂದೇ ಉತ್ತರ ಹೇಳುತ್ತಾರೆ.

ಭೀಷ್ಮಾಚಾರ್ಯರಿಗೆ ವಿಷ್ಣುಸಹಸ್ರನಾಮದ ಶಕ್ತಿ ಸ್ವಯಂವೇದ್ಯವಾಗಿತ್ತು. ಕಾರಣಾಂತರಗಳಿಂದ ತಿಳಿಯದೆ ತಮ್ಮ ಊರುಗೋಲಿನ ತಳದಲ್ಲಿ ಸಿಕ್ಕಿಕೊಂಡ ಓತಿಕ್ಯಾತ ಒಂದನ್ನು ಬೇಲಿಗೆ ಎಸೆದಿದ್ದ ಪರಿಣಾಮವಾಗಿ, ಅದರ ಶಾಪದಿಂದ ಅವರೂ ಶರಶಯ್ಯೆಯ ಮೇಲೆ ನರಳುವಂತಾಯಿತು. ಅಂತಹ ಸಮಯದಲ್ಲೂ ಅವರು ಮೃತ್ಯುವನ್ನೂ ಸಹ 'ವಿಷ್ಣು ಸಹಸ್ರನಾಮದ' ಶಕ್ತಿಯಿಂದ ದೂರ ಇಟ್ಟಿದ್ದರು. ಅಷ್ಟೇ ಅಲ್ಲ, ಅವರ ಭಕ್ತಿಯ ಶಕ್ತಿಯಿಂದ ಶ್ರೀಕೃಷ್ಣ ಪರಮಾತ್ಮ ಅವರು ಮಲಗಿದ್ದ ಕಡೆಗೆ ಬಂದು ದರ್ಶನ, ಸ್ಪರ್ಶ ಭಾಗ್ಯನೀಡಿದ. ಭೀಷ್ಮಾಚಾರ್ಯರು ಹೇಳುತ್ತಾರೆ. 'ನ ವಾಸುದೇವ ಭಕ್ತಾನಾಮ್ ಅಶುಭಂ ವಿದ್ಯತೇಕ್ವಚಿತ್' ಇದನ್ನು ಪಾರಾಯಣ ಮಾಡುವವರು, ಪರಿಹರಿಸಲಾಗದ ಪರಿಪರಿಯ ಕಷ್ಟಗಳಿಂದ ಬಿಡುಗಡೆ ಹೊಂದುತ್ತಾರೆ, ಅಷ್ಟೇ ಅಲ್ಲ ವಾಸುದೇವನ ಭಕ್ತರಿಗೆ ಅಶುಭವೆಂಬುದೇ ಇರುವುದಿಲ್ಲ. ಅವರಿಗೆ ಅಪಮೃತ್ಯು, ಮರಣ, ಮುಪ್ಪು ಹಾಗೂ ರೋಗಗಳ ಭಯವಿರುವುದಿಲ್ಲ ಎನ್ನುತ್ತಾರೆ..

ಇಷ್ಟೇ ಅಲ್ಲದೇ, ಪ್ರಾಮಾಣಿಕ ಭಕ್ತಿಶ್ರದ್ಧೆಯಿಂದ ಪಾರಾಯಣ ಮಾಡಿದ್ದೇ ಆದರೆ ಭಗವಂತ ಅಂತಹ ಸುಕೃತಿಗಳಿಗೆ ಸಾಕ್ಷಾತ್ ಮೋಕ್ಷವನ್ನೇ ಕರುಣಿಸುತ್ತಾನೆ ಎಂದು ಯುಧಿಷ್ಠರನಿಗೆ ವಿಷ್ಣು ಸಹಸ್ರನಾಮದ ಮಹತ್ವವನ್ನು ಭೀಷ್ಮಾಚಾರ್ಯರು ತಿಳಿಸಿ ಹೇಳುತ್ತಾರೆ.

ನಮ್ಮ ಸನಾತನ ಸಂಸ್ಕೃತಿ, ಧರ್ಮ ನಮ್ಮ ಜೀವನವನ್ನು, ಸತ್ ಸಂಸ್ಕಾರಗಳನ್ನು ಉತ್ತಮಗೊಳಿಸುವ ಇಂತಹ ಅನೇಕ ಧರ್ಮ ಗ್ರಂಥಗಳನ್ನು, ಆಚರಣೆಗಳನ್ನು ನಮಗೆ ಕಟ್ಟಿಕೊಟ್ಟಿದೆ. ಅವುಗಳ ಐತಿಹ್ಯವನ್ನು ಸರಿಯಾಗಿ ತಿಳಿದುಕೊಂಡು ನಾವು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ನಮ್ಮೊಳಗೆ ಜಾಗೃತವಾಗುವ ಆಂತರಿಕ ಶಕ್ತಿಯಿಂದ ಬದುಕಿನುದ್ದಕ್ಕೂ ನಾವು ಅದರ ಸತ್ಫಲಗಳನ್ನು ಅನುಭವಿಸಬಹುದು, ಇಲ್ಲವೇ ಅವುಗಳ ಬಗ್ಗೆ ತಿಳಿಯದೆ, ಕೋಟ್ಯಾನಿಕೋಟಿ ಜನರಲ್ಲಿ ನಾವು ಒಬ್ಬರಂತೆ ಬದುಕಿ ಮರೆಯಾಗಬಹುದು.

ಭರತ ಭೂಮಿಯಲ್ಲಿ, ನಮ್ಮ ಜೀವನವನ್ನು ಅತ್ಯಂತ ಉತ್ಕೃಷ್ಟ ಸ್ಥಿತಿಗೆ ಕೊಂಡೊಯ್ಯಬಹುದಾದ ಇಂಥ ಧರ್ಮ ಸೂಕ್ಷ್ಮಗಳನ್ನು ತಿಳಿದು, ಆಚರಿಸಿ ನಾವು ಕೂಡ ಆ ಭಗವಂತನ ಕೃಪಾಕಟಾಕ್ಷಕ್ಕೆ ಒಂದು ಉತ್ತಮ ಸಂತೃಪ್ತ ಬದುಕನ್ನು ಕಟ್ಟಿಕೊಳ್ಳೋಣ. ಕೃಷ್ಣಾರ್ಪಣಮಸ್ತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಬಿಟ್ಟಿ ಸಲಹೆ ಪಡೆಯಬೇಡಿ...

• ವಾಣಿ ಹುಗ್ಗಿ, ಹುಬ್ಬಳ್ಳಿ

ಗುರುವಿನ ಸಲಹೆ ಕೇಳಿ ಉದ್ಧಾರ ಆಗಿರೋರು ಬಹಳ ಮಂದಿ. ಆದರೆ ಯಾರ ಹತ್ತಿರವೂ ಬಿಟ್ಟಿ ಸಲಹೆ ಪಡೆಯಬೇಡಿ. ಸಲಹೆ ಪಡೆಯುವುದು ತಪ್ಪಲ್ಲ, ಆದರೆ ಎಂಥವರನ್ನು ಕೇಳುತ್ತೀರಿ ಎನ್ನುವುದು ತುಂಬಾ ಮುಖ್ಯವಾಗುತ್ತದೆ. ಅವರು ಹಿತ್ತಾಳೆ ಕಿವಿಯವರೇ? ನಾನು ಗುಟ್ಟು, ತಪ್ಪುಗಳನ್ನು ಎತ್ತಿ ತೋರಿಸಿ ತಾವೇ ಶ್ರೇಷ್ಠರೆಂದು ಬಿಂಬಿಸಿಕೊಳ್ಳುತ್ತಾರೆ. ತಮ್ಮ ಮನೆಯ ಹಕೀಕತ್ತನ್ನೆಲ್ಲ ಮುಚ್ಚಿಟ್ಟುಕೊಳ್ಳುತ್ತಾರೆ.

ಸಲಹೆ ಕೇಳಿದ ಮಾತ್ರಕ್ಕೆ ಅವರು ನಿಮ್ಮನ್ನು ಗುಲಾಮರಂತೆ ನಡೆಸಿಕೊಳ್ಳಬಹುದು. ನಿಮ್ಮನ್ನು ಬುದ್ಧಿಗೇಡಿಗಳು, ಕೈಲಾಗದವರು ಎಂಬುದಾಗಿ ಅವರು ಕೀಳಾಗಿ ನೋಡುವ ಸಂಭವ ಹೆಚ್ಚು. ಅವರ ಮೇಲೆಯೇ ಅವಲಂಬಿತರಾಗಿದ್ದೀರಿ,



ನಾನೆಂಬ ಕಿರೀಟ ತೊಟ್ಟವರೆ? ಗುಳ್ಳೆ ನರಿಯಂಥವರೇ? ನಿಮ್ಮನೆಯಲ್ಲಿ ದರ್ಬಾರು ನಡೆಸಬೇಕೆನ್ನುವವರೆ? ಮುಂದೆ ನಟಿಸಿ ಹಿಂದೆ ಸಂಭ್ರಮಿಸುವ ಮನೋಧೋರಣೆಯವರೆ? ನಿಮ್ಮ ಸಮಸ್ಯೆ, ಸಂಕಟಕ್ಕೆ ಸ್ಪಂದಿಸಿ ಬಗೆಹರಿಸಲು ಪ್ರಯತ್ನಿಸುವವರೇ? ಎಂಬುದನ್ನು ಜಾಗರೂಕತೆಯಿಂದ ಅವಲೋಕಿಸಿ.

ಹಿಂದಿನ ಕಾಲಘಟ್ಟದಲ್ಲಾದರೆ ಭಾವನೆಗಳನ್ನು, ಸಮಸ್ಯೆಗಳನ್ನು ನಂಬಿಕಸ್ತರೊಂದಿಗೆ ಹಂಚಿಕೊಳ್ಳುತ್ತಿದ್ದರು. ಕೈಲಾದ ಸಹಾಯ ಪಡೆದುಕೊಳ್ಳುತ್ತಿದ್ದರು. ಬದಲಾದ ಪರಿಸ್ಥಿತಿಯಲ್ಲಿ ಮತ್ತೊಬ್ಬರ ಕಷ್ಟಗಳನ್ನು, ಭಾವನೆಗಳನ್ನು ತಮ್ಮ ಉಪಯೋಗಕ್ಕೆ ಬರಬಹುದೆಂದು ಯೋಚಿಸುತ್ತಾರೆ. ನೀವು ಅಮಾಯಕರಾಗಿದ್ದರೆ ನಿಮ್ಮ ತಲೆಯ ಮೇಲೆ ಮೆಣಸು ಅರೆಯಲು ಸಿದ್ಧರಾಗಿರುತ್ತಾರೆ. ನಿಮ್ಮ ಅವರಿಲ್ಲದೆ ಏನೂ ನಡೆಯುವುದಿಲ್ಲ, ಅವರು ಹೇಳಿದ್ದೇ ಸರಿ, ಅದನ್ನೆಲ್ಲ ಮರುಮಾತಿಲ್ಲದೆ ಪಾಲಿಸಲೇಬೇಕೆಂಬ ಇಚ್ಛೆ ಉಂಟಾಗುತ್ತದೆ. 'ಬಾಹು ಬಲಿ' ಸಿನಿಮಾದ ರಾಜಮಾತೆಯ ತರಹ, 'ನನ್ನ ಮಾತೇ ಶಾಸನ ಆಗಬೇಕು' ಎಂದು ಅವರು ಬಯಸುತ್ತಾರೆ. ನಿಮ್ಮ ಮನೆಗೂ ಕಂಟಕವಾಗು ವಂಥ ಸಲಹೆ ಗಳನ್ನು ಅವರು ಕೊಡಬಹುದು, ಅಷ್ಟಕ್ಕೂ ಅದು ಅವರ ಮನೆಯಲ್ಲ, ಅಲ್ಲವೇ? ನಿಮ್ಮ ಆತ್ಮಾಭಿ ಮಾನವನ್ನು ಪಕ್ಕಕ್ಕಿಟ್ಟು ಅವಮಾನ ಮಾಡಿಸಿಕೊಳ್ಳಲು ನೀವು ತಯಾರಾಗೇ ಇರಬೇಕಾ ಗುತ್ತದೆ, ಜೋಕೆ! ಸಾಧ್ಯವಾದರೆ ನಿಮ್ಮ ವಿವೇಕ, ವಿವೇಚನೆಯಿಂದ ನಿಮ್ಮ ಸಮಸ್ಯೆಯನ್ನು ಬಗೆಹ ರಿಸಿಕೊಳ್ಳಿ. ಅವರು ನಿಮ್ಮ ಸಂಬಂಧಿಕರು, ಸ್ನೇಹಿ ತರು, ಹಿತೈಷಿಗಳೇ ಆಗಿರಲಿ ಸಲಹೆ ಪಡೆಯಬೇಕಾ ದರೆ ಆ ವ್ಯಕ್ತಿ ನಂಬಲರ್ಹರೇ? ಎಂದು ಯೋಚಿಸಿ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಯಾಸ್ತಿಕಾ ಭಾಟಿಯಾ ಟೂರ್ನಿಯಿಂದ ಹೊರಕ್ಕೆ

ದೆಹಲಿ: ಮೊಣಕಾಲು ಗಾಯದಿಂದ ಭಾರತ ಕ್ರಿಕೆಟ್ ತಂಡದ ಆಟಗಾರ್ತಿ ಯಾಸ್ತಿಕಾ ಭಾಟಿಯಾ ಅವರು 2025ರ ಐಸಿಸಿ ಮಹಿಳಾ ವಿಶ್ವಕಪ್ ಟೂರ್ನಿಯಿಂದ ಹೊರ ನಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ ವಿರುದ್ಧದ ಮುಂದಿನ ಏಕದಿನ ಸರಣಿಯ ಭಾರತ ತಂಡಕ್ಕೆ ವಿಕೆಟ್ ಕೀಪರ್ ಉಮಾ ಛೆಟ್ರಿಗೆ ಅವಕಾಶ ನೀಡಲಾಗಿದೆ. ವಿಶಾಖ ಪಟ್ಟಣಂನಲ್ಲಿ ಭಾರತ ಮಹಿಳಾ ತಂಡ ಅಭ್ಯಾಸ ನಡೆಸುತ್ತಿದ್ದ ವೇಳೆ ಯಾಸ್ತಿಕಾ ಭಾಟಿಯಾ ಅವರು ಗಾಯಕ್ಕೆ ತುತ್ತಾಗಿದ್ದರು. ಯಾಸ್ತಿಕಾ ಭಾಟಿಯಾ ಅವರ ಗಾಯದ ನಿರ್ವಹಣೆಯನ್ನು ಬಿಸಿಸಿಐ ವೈದ್ಯಕೀಯ ತಂಡ ನಿರ್ವಹಿಸುತ್ತಿದೆ ಹಾಗೂ ಯಾಸ್ತಿಕಾ ಭಾಟಿಯಾ ಅವರು ಆದಷ್ಟು ಗುಣಮುಖರಾಗಲಿ ಮಹಿಳಾ ತಂಡ ಹಾರೈಸಿದೆ, ಎಂದು ಬಿಸಿಸಿಐ ತನ್ನ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದೆ. ಭಾರತ ಮಹಿಳಾ ತಂಡಕ್ಕೆ ಸೇರ್ಪಡೆಯಾಗಿರುವ ಕಾರಣ ಉಮಾ ಛೆಟ್ರಿ ಅವರು ಭಾರತ ಎ ತಂಡದಿಂದ ಹೊರ ಬಂದಿದ್ದಾರೆ. ಉಮಾ ಛೆಟ್ರಿ ಅವರು ಆಸ್ಟ್ರೇಲಿಯಾ ಪ್ರವಾಸದ ಭಾರತ ತಂಡ ಹಾಗೂ 2025ರ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಸ್ಥಾನವನ್ನು ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ವಿಶ್ವಕಪ್ ಟೂರ್ನಿಯ ನಿಮಿತ್ತ ಅಭ್ಯಾಸದ ಪಂದ್ಯ ಆಡಲಿರುವ ಭಾರತ ಎ ತಂಡದಿಂದ ಅವರು ಹೊರ ನಡೆದಿದ್ದಾರೆ, ಎಂದು ಬಿಸಿಸಿಐ ತಿಳಿಸಿದೆ. ಅಸ್ಸಾಂನ ಛೆಟ್ರಿ ಅವರು ಆಡಿರುವ 7 ಟಿ20ಐ ಪಂದ್ಯಗಳಲ್ಲಿ 4 ಇನಿಂಗ್ಸ್‌ಗಳಲ್ಲಿ ಕೇವಲ 37 ರನ್‌ಗಳನ್ನು ಮಾತ್ರ ಗಳಿಸಿದ್ದಾರೆ.

ಹರಿಣಗಳಿಗೆ ಸರಣಿ

ಲಂಡನ್: ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡ ನಾಯಕ ತೆಂಬಾ ಬವುಮಾ ನೇತೃತ್ವದಲ್ಲಿ, ಇಂಗ್ಲೆಂಡ್‌ನಲ್ಲಿ ಐತಿಹಾಸಿಕ ಏಕದಿನ ಸರಣಿ ಗೆಲುವನ್ನು ಸಾಧಿಸಿದೆ. 27 ವರ್ಷಗಳ ಬಳಿಕ ಇಂಗ್ಲಿಷ್ ನೆಲದಲ್ಲಿ ದಕ್ಷಿಣ ಆಫ್ರಿಕಾ ಏಕದಿನ ಸರಣಿ ಗೆದ್ದಿದೆ. ಇದು 1998ರ ನಂತರ ಹರಿಣಗಳಿಗೆ ಮೊದಲ ಸರಣಿ ಗೆಲುವಾಗಿದೆ. ಗುರುವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 5 ರನ್‌ಗಳ ರೋಚಕ ಗೆಲುವು ಸಾಧಿಸಿ ಐತಿಹಾಸಿಕ ಸರಣಿ ಗೆದ್ದಿದೆ. ಲಂಡನ್‌ನ ಐತಿಹಾಸಿಕ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿ 330 ರನ್ ಪೇರಿಸಿತು. ಆರಂಭಿಕ ಜೋಡಿ ಏಡೆನ್ ಮಾರ್ಕ್ರಮ್ (49 ರನ್) ಮತ್ತು ರಯಾನ್ ರಿಕಲ್ಟನ್ (35 ರನ್) 73 ರನ್‌ಗಳ ಭದ್ರ ಅಡಿಪಾಯ ಹಾಕಿದರು. ಬಳಿಕ ಮ್ಯಾಥ್ಯೂ ಬ್ರೀಟ್ಜ್ (85 ರನ್, 77 ಎಸೆತ), ಟ್ರಿಸ್ಟಾನ್ ಸ್ಟಬ್ಸ್ (58 ರನ್) 5ನೇ ವಿಕೆಟ್‌ಗೆ 140 ರನ್‌ಗಳ ಜೊತೆಯಾಟ ನೀಡಿದರು. ಕೊನೆಯಲ್ಲಿ ಅಬ್ಬರಿಸಿದ ಡೆವಾಲ್ಡ್ ಬ್ರೆವಿಸ್ (42 ರನ್, 20 ಎಸೆತ) ಮತ್ತು ಕಾರ್ಬಿನ್ ಬಾಷ್ (32* ರನ್) ದಕ್ಷಿಣ ಆಫ್ರಿಕಾವನ್ನು 50 ಓವರ್‌ಗಳಲ್ಲಿ 8 ವಿಕೆಟ್‌ಗೆ 330 ರನ್‌ಗಳಿಗೆ ಕೊಂಡೊಯ್ದರು.

ಚಿನ್ನಸ್ವಾಮಿಯಲ್ಲಿ ಮತ್ತೆ ಕ್ರಿಕೆಟ್ ಕಲರವ

ಸೆ.26ರಿಂದ ತಿಮ್ಮಪ್ಪಯ್ಯ ಸ್ಮಾರಕ ಟ್ರೋಫಿ ಸೆಮಿಫೈನಲ್, ಫೈನಲ್ ಪಂದ್ಯ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕಳೆದ ಜೂನ್ 4 ರಂದು ಸಂಭವಿಸಿದ ಕಾಲ್ತುಳಿತದಿಂದ ಕ್ರೀಡಾ ಚಟುವಟಿಕೆಗಳಿಲ್ಲದೆ ಬಣಗುಟ್ಟಿದ್ದ ಚಿನ್ನಸ್ವಾಮಿ ಕ್ರೀಡಾಂಗಣ ಎರಡು ತಿಂಗಳ ಬಳಿಕ ಕ್ರಿಕೆಟ್ ಚಟುವಟಿಕೆಗೆ ಮರಳಲು ಸಜ್ಜಾಗುತ್ತಿದೆ

2025ರ ಮಹಿಳಾ ವಿಶ್ವಕಪ್‌ನಲ್ಲಿ ಸೆಮಿಫೈನಲ್ ಸೇರಿದಂತೆ 5 ಪಂದ್ಯಗಳನ್ನು ಬೆಂಗಳೂರಿನ ಕ್ರೀಡಾಂಗಣದಲ್ಲಿ ಆಯೋಜಿಸಬೇಕಿತ್ತು. ಆದರೆ, ಬಿಸಿಸಿಐ ಮತ್ತು ಐಸಿಸಿ ಈ ಪಂದ್ಯಗಳನ್ನು ನವಿ ಮುಂಬೈಗೆ ಸ್ಥಳಾಂತರಿಸಲು ನಿರ್ಧರಿಸಿದ್ದವು. ಮಹಾರಾಜ ಟ್ರೋಫಿಯನ್ನು ಇಲ್ಲಿಂದ ಸ್ಥಳಾಂತರಿಸಲಾಗಿತ್ತು.

ಇದೀಗ ಪ್ರೇಕ್ಷಕರನ್ನು ಹೊರಗಿಟ್ಟು ಇಲ್ಲಿ ಕ್ರಿಕೆಟ್ ಪಂದ್ಯ ಆಯೋಜಿಸಲು ಚಿಂತನೆ ನಡೆದಿದೆ. ಇಎಸ್‌ಪಿಎನ್ ಕ್ರಿಕ್‌ಇನ್ಫೋ ಪ್ರಕಾರ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವು ಕೆ ತಿಮ್ಮಪ್ಪಯ್ಯ ಸ್ಮಾರಕ ಟ್ರೋಫಿಯ 6 ಪಂದ್ಯಗಳನ್ನು ಆಯೋಜಿಸಲಿದೆ. ಪಂದ್ಯಾವಳಿ ಗುರುವಾರ ಮೈಸೂರಿನಲ್ಲಿ ಪ್ರಾರಂಭವಾಗಿದೆ. ಬೆಂಗಳೂರಿನಲ್ಲಿ ಸೆಪ್ಟೆಂಬರ್ 26 ರಿಂದ ಒಂದು ಸೆಮಿಫೈನಲ್ ಮತ್ತು ಫೈನಲ್ ಪಂದ್ಯವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಆದರೆ ಅಭಿಮಾನಿಗಳಿಗೆ ನೇರ ಪಂದ್ಯಗಳನ್ನು ವೀಕ್ಷಿಸಲು ಅವಕಾಶವಿರುವುದಿಲ್ಲ.

ಕೆ ತಿಮ್ಮಪ್ಪಯ್ಯ ಸ್ಮಾರಕ ಟ್ರೋಫಿ ಕರ್ನಾಟಕದ ಪ್ರಮುಖ ರೆಡ್ ಬಾಲ್ ಸ್ಪರ್ಧೆಯಾಗಿದ್ದು, ಇದರಲ್ಲಿ 16 ತಂಡಗಳು ಭಾಗವಹಿಸಿವೆ. ಮುಂಬೈ, ಗುಜರಾತ್, ಬರೋಡಾ ಮತ್ತು ವಿದರ್ಭದಂತಹ ತಂಡಗಳು ಈ ಆವೃತ್ತಿಯಲ್ಲಿ ಸಹಿ ಹಾಕಿವೆ. ಪ್ರಸಿದ್ಧ್ ಕೃಷ್ಣ, ಅಜಿಂಕ್ಯ ರಹಾನೆ, ವೆಂಕಟೇಶ್ ಅಯ್ಯರ್ ಈ ವರ್ಷದ ಆವೃತ್ತಿಯಲ್ಲಿ ಕಾಣಿಸಿಕೊಳ್ಳುವ ದೊಡ್ಡ ಹೆಸರುಗಳಲ್ಲಿ ಸೇರಿದ್ದಾರೆ.

ಚಿನ್ನಸ್ವಾಮಿಯನ್ನು ತನ್ನ ಹಳೆಯ ವೈಭವಕ್ಕೆ ಮರಳಿ ತರುವತ್ತ ಕೆಎಸ್‌ಸಿಎ ಇಟ್ಟ ಪುಟ್ಟ ಹೆಜ್ಜೆ ಇದಾಗಿದೆ. ಕಾಲ್ತುಳಿತದ ನಂತರ ಕೆಎಸ್‌ಸಿಎ, ರಾಜ್ಯ ಸರಕಾರ ಮತ್ತು ಪೊಲೀಸ್ ಇಲಾಖೆಗಳು ಪ್ರತ್ಯೇಕ ವಿಚಾರಣೆಗಳಿಗೆ ಒಳಪಟ್ಟಿವೆ. ನಂತರ ರಾಜ್ಯ ಸರಕಾರಿ ಸಮಿತಿ ಕ್ರೀಡಾಂಗಣವನ್ನು ದೊಡ್ಡ ಸಂಖ್ಯೆಯ ಪ್ರೇಕ್ಷಕರಿಗೆ ಅನರ್ಹವೆಂದು ಘೋಷಿಸಿದೆ.

ತಿಮ್ಮಪ್ಪಯ್ಯ ಟ್ರೋಫಿ ಮೂಲಕ ಬೆಂಗಳೂರಿನ ಕ್ರೀಡಾಂಗಣದಲ್ಲಿ ಮತ್ತೆ ಕ್ರಿಕೆಟ್ ಕಲರವ ಆರಂಭವಾಗಲಿದೆ ಎಂಬ ನಿರೀಕ್ಷೆ ಅಭಿಮಾನಿಗಳದ್ದು. ಆದರೆ ಸದ್ಯದ ಕಾನೂನು ಬಿಕ್ಕಟ್ಟಿನಿಂದ 2026ರ ಐಪಿಎಲ್ ಮತ್ತು ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಪಂದ್ಯಗಳು ನಡೆಯುವುದು ಅನುಮಾನವಾಗಿದೆ.

ಸಮೋವಾ ತಂಡದ ಪರ ಟಿ20 ವಿಶ್ವಕಪ್ ಆಡಲು ನಿರ್ಧಾರ

ರಾಸ್ ಟೇಲರ್ ಮರಳಿ ಕ್ರೀಡಾಂಗಣಕ್ಕೆ

ದೆಹಲಿ: ನ್ಯೂಜಿಲೆಂಡ್ ದಿಗ್ಗಜ ಬ್ಯಾಟ್ಸ್‌ಮನ್ ರಾಸ್ ಟೇಲರ್ ಅಂತಾರಾಷ್ಟ್ರೀಯ ಕ್ರಿಕೆಟ್ ನಿವೃತ್ತಿಯಿಂದ ಹೊರ ಬಂದಿದ್ದು, ಮುಂದಿನ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಸಮೋವಾ ತಂಡದ ಪರ ಆಡಲು ಎದುರು ನೋಡುತ್ತಿದ್ದಾರೆ. ಇವರು 2022ರಲ್ಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ವೃತ್ತಿ ಜೀವನದಲ್ಲಿ 18199 ರನ್‌ಗಳನ್ನು ಕಲೆ ಹಾಕಿರುವ ರಾಸ್ ಟೇಲರ್, ಕಿವೀಸ್ ಪರ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಇದೀಗ ಅವರು ಸಮೋವಾ ತಂಡದ ಪರ ಏಷ್ಯಾ-ಈಸ್ಟ್ ಏಷ್ಯಾ ಪೆಸಿಫಿಕ್ ಪರ 2026ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಅರ್ಹತಾ ಪಂದ್ಯವನ್ನು ಆಡಲು ಎದುರು ನೋಡುತ್ತಿದ್ದಾರೆ.

ರಾಸ್ ಟೇಲರ್ ಅವರು 2022ರಲ್ಲಿ ನೆದರ್ಲೆಂಡ್ ವಿರುದ್ಧ ತಮ್ಮ ಅಂತಾರಾಷ್ಟ್ರೀಯ ಪಂದ್ಯವನ್ನು ಆಡಿದ್ದರು. ಕ್ರಿಕೆಟ್‌ಗೆ ವಿದಾಯ ಹೇಳಿದ ಮೂರು ವರ್ಷಗಳ ಬಳಿಕ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮರಳಲು ಸಜ್ಜಾಗುತ್ತಿದ್ದಾರೆ. ಒಮನ್‌ನಲ್ಲಿ ಸಮೋವಾ ಪರ ಟಿ-20 ವಿಶ್ವಕಪ್ ಕ್ವಾಲಿಫೈಯರ್ ಪಂದ್ಯವನ್ನು ರಾಸ್ ಟೇಲರ್ ಆಡಲಿದ್ದಾರೆ. ಕಾಲೆಬ್ ಜಸ್ಮತ್ ನಾಯಕತ್ವದ 15 ಸದಸ್ಯರ ಸಮೋವಾ ತಂಡದಲ್ಲಿ ರಾಸ್ ಟೇಲರ್ ಸ್ಥಾನವನ್ನು ಪಡೆದಿದ್ದಾರೆ.

ರಾಸ್ ಟೇಲರ್ ಸಮೋವನ್ ಪಾಸ್‌ಪೋರ್ಟ್ ಅನ್ನು ಹೊಂದಿದ್ದು, ಅವರ ತಾಯಿ ಸಮೋವನ್ ಪರಂಪರೆಯನ್ನು ಹೊಂದಿದ್ದಾರೆ. ಹಾಗಾಗಿ ಅವರು ಸಮೋವಾ ದೇಶದ ಪರ ಆಡಲು ಅರ್ಹತೆಯನ್ನು ಹೊಂದಿದ್ದಾರೆ. ರಾಸ್ ಟೇಲರ್ ಮೂರು ವರ್ಷಗಳ ಕೂಲಿಂಗ್ ಆಫ್ ಅವಧಿಯನ್ನು ಯಶಸ್ವಿಯಾಗಿ ಮುಗಿಸಿರುವುದರಿಂದ ಎರಡನೇ ದೇಶದ ಪರ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಲು ಅರ್ಹತೆ ಪಡೆದಿದ್ದಾರೆ.

''ಇದು ಅಧಿಕೃತ- ನಾನು ಕ್ರಿಕೆಟ್‌ನಲ್ಲಿ ಸಮೋವಾ ತಂಡವನ್ನು ಪ್ರತಿನಿಧಿಸುತ್ತೇನೆ ಎಂದು ಘೋಷಿಸಲು ಹೆಮ್ಮೆಪಡುತ್ತೇನೆ. ಇದು ನಾನು ಪ್ರೀತಿಸುವ ಆಟಕ್ಕೆ ಮರಳುವುದಕ್ಕಿಂತ ಹೆಚ್ಚಿನದಾಗಿದೆ. ನನ್ನ ಪರಂಪರೆ, ಸಂಸ್ಕೃತಿ, ಹಳ್ಳಿಗಳು ಮತ್ತು ಕುಟುಂಬವನ್ನು ಪ್ರತಿನಿಧಿಸುವ ದೊಡ್ಡ ಗೌರವ ಇದು. ಆಟಕ್ಕೆ ಮರಳಲು, ತಂಡವನ್ನು ಸೇರಲು ಮತ್ತು ಮೈದಾನದಲ್ಲಿ ಮತ್ತು ಹೊರಗೆ ನನ್ನ ಅನುಭವವನ್ನು ಹಂಚಿಕೊಳ್ಳಲು ಅವಕಾಶಕ್ಕಾಗಿ ನಾನು ಉತ್ಸುಕನಾಗಿದ್ದೇನೆ'' ಎಂದು ರಾಸ್ ಟೇಲರ್ ತಮ್ಮ ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ನಲ್ಲಿ ಬರೆದಿದ್ದಾರೆ.

ದುಲೀಪ್ ಟ್ರೋಫಿ: ನೀರಸ ಪ್ರದರ್ಶನ, ಅಯ್ಯರ್‌ಗೆ ಸಂಕಷ್ಟ

ದೆಹಲಿ: ವಿಶ್ವಕಪ್ ಮತ್ತು ಐಪಿಎಲ್ ಟೂರ್ನಿಯಲ್ಲಿ ಭರ್ಜರಿ ಪ್ರದರ್ಶನವಿತ್ತ ಶ್ರೇಯಸ್ ಅಯ್ಯರ್ ಭಾರತಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ. ಆದರೆ ದುಲೀಪ್ ಟ್ರೋಫಿಯಲ್ಲಿ ಅವರ ನೀರಸ ಪ್ರದರ್ಶನ ಅವರ ಪ್ರಯತ್ನಕ್ಕೆ ತೊಡಕಾಗಿದೆ.

ದುಲೀಪ್ ಟ್ರೋಫಿ ಮೊದಲ ಸೆಮಿಫೈನಲ್‌ನಲ್ಲಿ ಶ್ರೇಯರ್ ಅಯ್ಯರ್ ಅವರ ಹೀನಾಯ ಪ್ರದರ್ಶನ ಅವರನ್ನು ಭಾರತ ತಂಡದಿಂದ ಮತ್ತಷ್ಟು ದೂರ ಮಾಡುವ ಅಪಾಯವಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಶ್ಚಿಮ ವಲಯವು ಮೊದಲ ಇನ್ನಿಂಗ್ಸ್‌ನಲ್ಲಿ 438 ರನ್‌ಗಳಿಗೆ ಆಲೌಟ್ ಆಗಿತ್ತು. ಆರಂಭಿಕ ಯಶಸ್ವಿ ಜೈಸ್ವಾಲ್, ಹಾರ್ವಿಕ್ ದೇಸಾಯಿ ಒಂದಂಕಿ ಮೊತ್ತಕ್ಕೆ ಔಟಾದರೆ, ಋತುರಾಜ್ ಗಾಯಕ್ವಾಡ್ 184 ರನ್ ಕಲೆಹಾಕಿ ತಂಡಕ್ಕೆ ನೆರವಾದರು. ಆದಕೆ ಮಧ್ಯಮ ಕ್ರಮಾಂಕದಲ್ಲಿ ಬಂದ ಶ್ರೇಯಸ್ ಅಯ್ಯರ್ 25 ರನ್ ಗಳಿಸಿ ಖಲೀಲ್ ಅಹ್ಮದ್‌ಗೆ ವಿಕೆಟ್ ಒಪ್ಪಿಸಿ ನಿರಾಶೆ ಮೂಡಿಸಿದರು. ನಾಯಕ ಶಾರ್ದುಲ್ ಠಾಕೂರ್ (64 ರನ್) ಮತ್ತು ತನುಶ್ ಕೋಟ್ಯಾನ್ (76 ರನ್) ತಂಡದ ಮೊತ್ತವನ್ನು 400ರ ಗಡಿದಾಟಿಸಿದರು. ಮುಂಬರುವ ವೆಸ್ಟ್ ಇಂಡೀಸ್ ಸರಣಿಗೆ ಪರಿಗಣಿಸಲಾಗಿರುವುದರಿಂದ ಬಲಗೈ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಗೆ ಈ ಪಂದ್ಯ ಪ್ರಮುಖವಾಗಿದೆ. ಶ್ರೇಯಸ್ ಅಯ್ಯರ್ ಒಂದು ವರ್ಷದಿಂದ ಭಾರತ ತಂಡದಿಂದ ಹೊರಗುಳಿದಿದ್ದಾರೆ.

ಬ್ರಿಟನ್ ಜೋಡಿ ಎದುರು ಭಾಂಬ್ರಿ-ವೀನಸ್ ಜೋಡಿಗೆ ವೀರೋಚಿತ ಸೋಲು

ಯೂಕಿ ಪರಾಭವ, ಫೈನಲ್ ಕನಸು ಭಗ್ನ

ನ್ಯೂಯಾರ್ಕ್: 2025 ರ ಯುಎಸ್ ಓಪನ್‌ನಲ್ಲಿ ಭಾರತೀಯ ಟೆನಿಸ್ ಆಟಗಾರ ಯೂಕಿ ಭಾಂಬ್ರಿ ಪ್ರಯಾಣ ಅಂತ್ಯವಾಗಿದೆ. ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಯೂಕಿ ಹಾಗೂ ನ್ಯೂಜಿಲೆಂಡ್ ಆಟಗಾರ ಮೈಕೆಲ್ ವೀನಸ್ ಜೋಡಿ ವೀರೋಚಿತ ಸೋಲು ಕಂಡಿದೆ. ಈ ಇಬ್ಬರೂ ಸ್ಟಾರ್ ಆಟಗಾರರು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಥಿರ ಪ್ರದರ್ಶನ ನೀಡಿ ಎಲ್ಲರ ಗಮನ ಸೆಳೆದಿದ್ದರು. ಆದರೆ ಉಪಾಂತ್ಯ ಪಂದ್ಯದಲ್ಲಿ ಯೂಕಿ ಜೋಡಿ ಸ್ಥಿರ ಪ್ರದರ್ಶನ ನೀಡುವಲ್ಲಿ ವಿಫಲವಾಯಿತು. ನಾಲ್ಕರ ಘಟ್ಟದ ಪಂದ್ಯದಲ್ಲಿ ಯೂಕಿ ಜೋಡಿ ಬ್ರಿಟನ್ ಜೋಡಿಯ ಕಠಿಣ ಸವಾಲು ಎದುರಿಸಿ ಸೋಲು ಕಂಡಿದೆ.

ಯುಕಿ ಭಾಂಬ್ರಿ ಮತ್ತು ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಜೋಡಿ 7-2, 6-7, 6-4 ರಿಂದ ಬ್ರಿಟಿಷ್ ಜೋಡಿ ನೀಲ್ ಸ್ಕುಪ್ಸ್ಕಿ ಮತ್ತು ಜೋಸ್ ಸಾಲಿಸ್‌ಬರಿ ಅವರ ವಿರುದ್ಧ ಸೋಲು ಕಂಡಿದೆ.

ಯೂಕಿ ಜೋಡಿ ಆರಂಭದಲ್ಲಿ ಭರ್ಜರಿ ಪ್ರದರ್ಶನ ನೀಡಿತು. ಅಲ್ಲದೆ ಮೊದಲ ಸೆಟ್ ಟೈ ಬ್ರೇಕರ್ ವರೆಗೆ ಸಾಗಿತು. ಈ ವೇಳೆ ಭಾರತದ ಜೋಡಿ 7-2 ಅಂಕಗಳಿಂದ ಮುನ್ನಡೆ ಸಾಧಿಸಿ ಜಯ ಸಾಧಿಸಿತು. ಈ ಮೂಲಕ ಸೆಮಿಫೈನಲ್ ಪಂದ್ಯದಲ್ಲಿ 1-0 ಮುನ್ನಡೆ ಸಾಧಿಸಿತು.

ಆದರೆ ಎರಡನೇ ಸೆಟ್‌ನಲ್ಲಿ ಬ್ರಿಟಿಷ್ ಜೋಡಿ ಭರ್ಜರಿಯಾಗಿ ತಿರುಗೇಟು ನೀಡಿತು. ಭಾರತ ಹಾಗೂ ಕಿವೀಸ್ ಜೋಡಿಯ ತಂತ್ರವನ್ನು ಮೆಟ್ಟಿ ನಿಂತ ಬ್ರಿಟಿಷ್ ಜೋಡಿ ಅಂಕ ಎರಡನೇ ಸೆಟ್ ಅನ್ನು ಟೈ ಬ್ರೈಕರ್ ವರೆಗೆ ಒಯ್ಯುವಲ್ಲಿ ಯಶಸ್ವಿಯಾಯಿತು. ಈ ಒಂದು ಸೆಟ್ ಗೆದ್ದು ಫೈನಲ್‌ಗೆ ಪ್ರವೇಶಿಸುವ ಆಸೆಯನ್ನು ಯೂಕಿ ಹಾಗೂ ವೀನಸ್ ಜೋಡಿ ಹೊಂದಿತ್ತು. ಆದರೆ ಬ್ರಿಟಿಷ್ ಜೋಡಿ 7-6 (5) ಅಂತರದಲ್ಲಿ ಈ ಸೆಟ್ ಗೆದ್ದುಕೊಂಡಿತು.

ನಿರ್ಣಾಯಕ ಸೆಟ್‌ನಲ್ಲಿ ಸೋಲು: ಮೂರನೇ ಹಾಗೂ ನಿರ್ಣಾಯಕ ಸೆಟ್ ಅನ್ನು ಬ್ರಿಟಿಷ್ ಜೋಡಿ 6-4 ಅಂತರದಲ್ಲಿ ಸುಲಭವಾಗಿ ಗೆದ್ದು ಫೈನಲ್ ಪ್ರವೇಶಿಸಿತು. ಪುರುಷರ ಡಬಲ್ಸ್‌ನ ಫೈನಲ್‌ನಲ್ಲಿ, ಬ್ರಿಟಿಷ್ ಜೋಡಿ ಮಾರ್ಸೆಲ್ ಗ್ರಾನೋಲ್ಲರ್ಸ್ ಮತ್ತು ಹೊರಾಸಿಯೊ ಜೆಬಲ್ಲೋಸ್ ಜೋಡಿಯನ್ನು ಎದುರಿಸಲಿದೆ.

ವಿಟಾಕೀಸ್

ಬಿಡದೆ ಕಾಡುವ ಪ್ರೇಮಕಥೆ

ಪ್ರೇಮಕಥೆಗಳೇ ಹಾಗೇ ಮನಸನ್ನು ಕಾಡುತ್ತವೆ. ಏಳುಮಲೆ ಬರೀ ಕಾಡುವ ಕಥೆಯಲ್ಲ, ಮಸಿಗೆ ಹಿಡಿಸುವ, ಮನದಲ್ಲಿ ಉಳಿಯುವ ನವಿರಾದ ಲವ್‌ಸ್ಟೋರಿಯಾಗಿದೆ. ಹಾಗಂತ ಇದು ಕೇವಲ ಪ್ರೇಮಕಥೆಗೆ ಸೀಮಿತವಾಗಿಲ್ಲ, ಇಲ್ಲಿ ಭಾವುಕತೆ ಇದೆ, ತಲ್ಲಣವಿದೆ. ಆ ಕಾರಣಕ್ಕೆ ಸಿನಿಮಾ ಎಲ್ಲರಿಗೂ ರುಚಿಸುತ್ತದೆ.

ನಾಯಕ ಹರೀಶ ಮೈಸೂರಿನ ಹುಡುಗ, ವೃತ್ತಿಯಲ್ಲಿ ಕಾರು ಚಾಲಕ. ಅನಾಥನಾದರೂ ತನ್ನದೇ ಸುಂದರ ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ಹಂಬಲ ಹೊಂದಿದ ಆಶಾಜೀವಿ. ನಾಯಕಿ ರೇವತಿಯನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿರುತ್ತಾನೆ. ರೇವತಿ ತಮಿಳುನಾಡಿನ ಶ್ರೀಮಂತ ಕುಟುಂಬದ ಹುಡುಗಿ, ಮರು ದಿನವೇ ರೇವತಿಯ ಮದುವೆ. ಒಲ್ಲದ ಮದುವೆಯನ್ನು ಮುರಿದು ಮೈಸೂರಿಗೆ ಹೋಗ ಬೇಕೆನ್ನುವುದು ರೇವತಿಯ ಧಾವಂತ. ಇತ್ತ ಹರೀಶ, ಬಾಡಿಗೆಗೆ ಊಟಿಗೆ ತೆರಳಿರುತ್ತಾನೆ. ಅವನಿಗೂ ಮೈಸೂರಿಗೂ ತೆರಳಬೇಕು ಎಂಬ ತುಡಿತ. ಈ ನಡುವೆಯೇ ನಾಯಕ ಹಾಗೂ ನಾಯಕಿಯ ಜೀವನದಲ್ಲಿ ಕಹಿ ಘಟನೆ ನಡೆಯುತ್ತದೆ. ಅಲ್ಲಿಂದ ಕಥೆಯ ದಿಕ್ಕೇ ಬದಲಾಗುತ್ತದೆ. ಅಷ್ಟಕ್ಕೂ ಆ ಘಟನೆಯಾದರು ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಚಿತ್ರದುದ್ದಕ್ಕೂ ಟ್ವಿಸ್ಟ್ ಮೇಲೆ ಟ್ವಿಸ್ಟ್ ಇದ್ದು, ಪ್ರೇಕ್ಷಕರನ್ನು ಸೀಟಿನ ತುದಿಯಲ್ಲಿ ಹಿಡಿದು ಕೂರಿಸುತ್ತದೆ. ಕಾಡುಗಳ ವೀರಪ್ಪನ್ನು ಈ ಕಥೆಯಲ್ಲಿ ಪ್ರತ್ಯಕ್ಷವಾಗಿದ್ದು, ಮರತೇ ಹೋಗಿದ್ದ ಆತ ಮತ್ತೆ ನೆನಪಾಗುತ್ತಾನೆ. ಏಳುಮಲೆಯ ಕಥೆಯಲಿ ಹಿಡಿತವಿದೆ. ನಿರೂಪಣೆಯಲ್ಲಿ ಹೊಸತವೂ ಬೆರೆತಿದೆ.

ಇದು ನೈಜ ಘಟನೆಯಾಧಾರಿತ ಚಿತ್ರವಾಗಿದ್ದು, ನೈಜತೆಗೆ ಹತ್ತಿರವಾಗುವಂತೆ ಕಟ್ಟಿಕೊಡಲಾಗಿದೆ. ನಿರ್ದೇಶಕ ಪುನೀತ್ ರಂಗಸ್ವಾಮಿಗೆ ಇದು ಚೊಚ್ಚಲ ನಿರ್ದೇಶನದ ಸಿನಿಮಾ, ಆದರೂ ಎಲ್ಲಿಯೂ ಅವರು ಹೊಸ ನಿರ್ದೇಶಕ ಅನ್ನಿಸುವುದೇ ಇಲ್ಲ. ಅಷ್ಟು ಸೊಗಸಾಗಿ ಚಿತ್ರವನ್ನು ತೆರೆಯಲ್ಲಿ ನಿರೂಪಿಸಿದ್ದಾರೆ. ನಟ ರಾಣಾಗೆ ಇದು ಎರಡನೇ ಚಿತ್ರ, ಮೊದಲ ಚಿತ್ರಕ್ಕಿಂತ ಈ ಸಿನಿಮಾದಲ್ಲಿ ಅವರದ್ದು ಮಾಗಿದ ಅಭಿನಯ. ಇನ್ನು ನಾಯಕಿ ಪ್ರಿಯಾಂಕಾ ಚೊಚ್ಚಲ ಚಿತ್ರದಲ್ಲಿಯೇ ಮೆಚ್ಚುವ ಅಭಿನಯ ತೋರಿದ್ದಾರೆ. ಕಿಶೋರ್, ಜಗಪತಿ ಬಾಬು, ಟಿ.ಎಸ್.ನಾಗಾಭರಣ ತಮ್ಮ ಪಾತ್ರಗಳಿಗೆ ಜೀವತುಂಬಿದ್ದಾರೆ. ಅದ್ವೈತ ಗುರುಮೂರ್ತಿ ಕ್ಯಾಮೆರಾ ಕೈಚಳಕ. ಇಮಾನ್ ಸಂಗೀತ ನಿರ್ದೇಶನ ಚಿತ್ರಕ್ಕೆ ಶಕ್ತಿ ತುಂಬಿದೆ. ಒಟ್ಟಾರೆ ಪ್ರೇಮಕಥೆಯ ಜತೆಗೆ ತವಕ ತಲ್ಲಣ ಎಲ್ಲವೂ ಬೆರೆತಿರುವ ಚಿತ್ರವನ್ನು ಒಮ್ಮೆಯಾದರೂ ನೋಡಲೇಬೇಕು.

ಚಿತ್ರ : ಏಳುಮಲೆ
ನಿರ್ದೇಶನ : ಪುನೀತ್ ರಂಗಸ್ವಾಮಿ
ನಿರ್ಮಾಣ: ತರುಣ್ ಕಿಶೋರ್ ಸುಧೀರ್, ಅಟ್ಲಾಂಟ ನಾಗೇಂದ್ರ
ತಾರಾಗಣ: ರಾಣಾ, ಪ್ರಿಯಾಂಕಾ, ಕಿಶೋರ್, ನಾಗಾಭರಣ, ಜಗಪತಿಬಾಬು ಮುಂತಾದವರು.
ರೇಟಿಂಗ್: ★★★★

ಶ್ವಾನ ಪ್ರೇಮಿಯ ಎಮೋಷನಲ್ ಜರ್ನಿ

ನಾನು ಮತ್ತು ಗುಂಡ ಚಿತ್ರ, ಶಂಕರ ಮತ್ತು ಗುಂಡನ ಭಾವನಾತ್ಮಕ ಪಯಣವನ್ನು ಒಳಗೊಂಡಿತ್ತು. ಅದು ಎರಡನೇ ಭಾಗದಲ್ಲಿಯೂ ಮುಂದುವರಿದಿದೆ. ಎಮೋಷನ್ಸ್ ಜತೆಗೆ, ಲವ್, ಕಾಮಿಡಿ ಎಲ್ಲವೂ ಬೆರೆತಿದೆ. ಆತ ಶಂಕರ ಅಪ್ಪನಂತೆಯೇ ಶ್ವಾನ ಪ್ರೇಮಿ. ಮೊದ ಮೊದಲು ಗುಂಡನ ಬಗ್ಗೆ ತಿಳಿಯದ ಶಂಕರ ಬಳಿಕ ಗುಂಡನ ಜತೆಗೆ ಭಾವನಾತ್ಮಕ ನಂಟು ಬೆಳೆಸಿಕೊಳ್ಳುತ್ತಾನೆ. ಆತನನ್ನು ಬಿಟ್ಟಿರಲಾಗದಷ್ಟು ಹತ್ತಿರವಾಗುತ್ತಾನೆ. ಮನಸಿಗೆ ಹಿಡಿಸಿದ ಹುಡುಗಿ, ಸುಂದರ ಬದುಕು ಕಟ್ಟಿಕೊಡಲು ಬೇಕಾಗುಷ್ಟು ಸಂಪತ್ತಿನ ಆಮಿಷವಿದ್ದರೂ ಶಂಕರ ಮಾತ್ರ ಗುಂಡನನ್ನು ಬಿಡಲೊಪ್ಪುವುದಿಲ್ಲ. ಮನಸಿಗೆ ಒಪ್ಪಿದ ಹುಡುಗಿಯೋ ಗಯ್ಯಾಳಿ, ಅದಕ್ಕೂ ಹೆಚ್ಚಾಗಿ ಶ್ವಾನ ಕಂಡರೆ ಉರಿದು ಬೀಳುವಾಕೆ ಇದೆಲ್ಲದರ, ನಡುವೆ ಶಂಕರ ಹೇಗೆ ಗುಂಡನಿಗಾಗಿ ಬದುಕುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ನಿರ್ದೇಶಕ ರಘು ಹಾಸನ್ ಮೊದಲ ಭಾಗಕ್ಕೆ ಕನೆಕ್ಟ್ ಆಗುವಂತೆ ಸುಂದರವಾದ ಕಥೆ ಹೆಣೆದು ಎಲ್ಲರಿಗೂ ಒಪ್ಪುವಂತೆ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಎಲ್ಲಿಯೂ ಬೋರ್ ಹೊಡೆಸದಂತೆ ಸೆಂಟಿಮೆಂಟ್ ಹೆಚ್ಚಾಗಿ ಬೆರೆಸಿ ತೆರೆಯಲ್ಲಿ ನಿರೂಪಿಸಿ ಸೈ ಎನಿಸಿಕೊಂಡಿದ್ದಾರೆ.

ಈ ಹಿಂದೆ ಶಿವರಾಜ್ ಕೆಆರ್ ಪೇಟೆ ನಾಯಕನಾಗಿ ಕಾಣಿಸಿಕೊಂಡಿದ್ದರು. ಈ ಭಾಗದಲ್ಲಿ ರಾಕೇಶ್ ಅಡಿಗ ನಾಯಕನಾಗಿದ್ದು ಮೆಚ್ಚುವ ಅಭಿನಯ ತೋರಿದ್ದಾರೆ. ರಾಕೇಶ್ ಅದ್ಭುತ ಅಭಿನಯದ ಮೂಲಕ ಮನಗೆದ್ದಿದ್ದು ಅವರ ಪಾತ್ರಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಅಂತೆಯೇ ರಚನಾ ಇಂದರ್ ಇಲ್ಲಿ ಇಂದೂವಾಗಿ ಕಾಣಿಸಿಕೊಂಡಿದ್ದು, ಗಯ್ಯಾಳಿಯ ಪಾತ್ರಕ್ಕೆ ಹೇಳಿ ಮಾಡಿಸಿದಂತೆ ಹೊಂದಿಕೊಂಡಿದ್ದಾರೆ. ಶ್ವಾನವನ್ನು ದ್ವೇಷಿಸುವ, ಕೊನೆಗೆ ಶ್ವಾನ ಪ್ರೇಮಿಯಾಗುವ ಇಂದೂ ಪಾತ್ರ ಎಲ್ಲರಿಗೂ ಕನೆಕ್ಟ್ ಆಗಲಿದೆ. ಗೋವಿಂದೇ ಗೌಡ ಇಲ್ಲಿ ಕಾಮಿಡಿಗಿಂತ ಗಂಭೀರ ಪಾತ್ರದಲ್ಲಿ ಮನಗೆಲ್ಲುತ್ತಾರೆ. ಸಾಧುಕೋಕಿಲ, ಮಂಜು ಪಾವಗಡ, ವಿಜಯ್ ಚೆಂಡೂರು ಕಾಮಿಡಿ ಕಮಾಲ್ ಮಾಡಿದ್ದಾರೆ. ಚಿತ್ರದ ಸಂಗೀತ, ಛಾಯಾಗ್ರಹಣ ನಾನು ಮತ್ತು ಗುಂಡನಿಗೆ ಹೊಸತನ ತುಂಬಿದೆ. ಒಟ್ಟಾರೆ ಇದು ಶ್ವಾನ ಪ್ರಿಯರಿಗೆ ಹೇಳಿ ಮಾಡಿಸಿದ ಸಿನಿಮಾವಾಗಿದೆ.

ಚಿತ್ರ : ನಾನು ಮತ್ತು ಗುಂಡ 2
ನಿರ್ದೇಶನ : ರಘು ಹಾಸನ್
ನಿರ್ಮಾಣ : ರಘು ಹಾಸನ್
ತಾರಾಗಣ : ರಾಕೇಶ್ ಅಡಿಗ, ರಚನಾ ಇಂದರ್, ಅವಿನಾಶ್, ಸಾಧುಕೋಕಿಲ, ಗೋವಿಂದೇ ಗೌಡ ಮುಂತಾದವರು.
ರೇಟಿಂಗ್ : ★★★

ಶಿವನ ರುದ್ರ ತಾಂಡವ

ಓಂ ಶಿವಂ ಇದು ಪಕ್ಕಾ ಆ್ಯಕ್ಷನ್ ಸಿನಿಮಾ ಅಂದುಕೊಂಡರೆ ನಿಮ್ಮ ಊಹೆ ತಪ್ಪು. ಇಲ್ಲಿ ಲವ್, ಆ್ಯಕ್ಷನ್ ಜತೆಗೆ ಕೌಟುಂಬಿಕ ಕಥೆಯೂ ಇದೆ. ಅದಕ್ಕಿಂತ ಹೆಚ್ಚಾಗಿ ಸಾಮಾಜಿಕ ಸಂದೇಶವೂ ಅಡಕವಾಗಿದೆ. ಆತ ಶಿವ, ಸ್ನೇಹಕ್ಕೆ ಪ್ರಾಣ ಕೊಡುವಾತ ಅಂತೆಯೇ ಅನ್ಯಾಯ ಕಂಡರೆ ಉರಿದು ಬೀಳುವಾತ. ಮುಗ್ಧನಂತೆ ಕಾಣುವ ಶಿವ ಒಳ್ಳೆಯ ತನಕ್ಕೆ ತಲೆ ಬಾಗುತ್ತಾನೆ. ಸದ್ದಿಲ್ಲದೆ ತಲೆ ಎತ್ತಿದ ಡ್ರಗ್ಸ್ ಮಾಫಿಯಾದಿಂದ ಕಾಲೇಜು ಹುಡುಗರು ದಾರಿ ತಪ್ಪುತ್ತಿರುತ್ತಾರೆ. ಆ ಮಾಫಿಯದ ವಿರುದ್ಧ ನಾಯಕ ಹೇಗೆ ಸಮರ ಸಾರುತ್ತಾನೆ. ಅಲ್ಲಿ ಎದುರಾಗುವ ಸಮಸ್ಯೆಗಳನ್ನು ಹೇಗೆ ಎದಿರಿಸುತ್ತಾನೆ ಎಂಬುದನ್ನು ಥ್ರಿಲ್ಲಿಂಗ್, ಸಸ್ಪೆನ್ಸ್ ಅಂಶಗಳನ್ನು ಬೆರೆಸಿ ರೋಚಕವಾಗಿ ಕಟ್ಟಿಕೊಡಲಾಗಿದೆ. ಅಲ್ವಿನ್ ಕಥೆ ಬರೆದು ನಿರ್ದೇಶನ ಮಾಡಿದ್ದು, ಇಂದಿನ ಟ್ರೆಂಡ್‌ಗೆ ಹೇಳಿ ಮಾಡಿಸಿದಂತೆ ತೆರೆಯಲ್ಲಿ ನಿರೂಪಿಸಿದ್ದಾರೆ. ಆ್ಯಕ್ಷನ್ ಜತೆಗೆ ಕೌಟುಂಬಿಕ ಕಥೆ ಬೆರೆತಿರುವುದರಿಂದ ಓಂ ಶಿವಂ ಎಲ್ಲರಿಗೂ ರುಚಿಸಲಿಸಿದೆ.

ನಾಯಕ ಭಾರ್ಗವ ಶಿವನಂತೆ ಅಬ್ಬರಿಸಿದ್ದಾರೆ, ಲವ್ವರ್ ಬಾಯ್ ಆಗಿಯೂ ಇಷ್ಟವಾಗುತ್ತಾರೆ. ಮುಗ್ಧತೆಯ ಮೂಲಕವೂ ಮನಗೆಲ್ಲುತ್ತಾರೆ. ಮೊದಲ ಚಿತ್ರದಲ್ಲೇಯೇ ಮೋಡಿ ಮಾಡಿದ್ದಾರೆ. ಆ ಮೂಲಕ ಚಂದನವನದಲ್ಲಿ ಭರವಸೆ ಮೂಡಿಸಿದ್ದಾರೆ. ವಿರಾನಿಕಾ ಶೆಟ್ಟಿ ಸಿಂಪಲ್ ಲುಕ್‌ನಲ್ಲಿ ಮನಕ್ಕೆ ಹಿಡಿಸುತ್ತಾರೆ, ತಮಗೆ ನೀಡಿದ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಯಶ್ ಶೆಟ್ಟಿ, ಕಾಕ್ರೋಜ್ ಸುಧಿ ಇಲ್ಲಿಯೂ ಸಾದಾ ಸೀದಾ ಅಭಿನಯ ತೋರಿದ್ದಾರೆ. ಉಗ್ರಂ ರವಿ, ವರ್ಧನ್ ಹೀಗೆ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಹರ..ಹರ... ಹಾಡು ಸಿನಿಮಾ ನೋಡಿ ಹೊರಬಂದ ಮೇಲೂ ಮನದಲ್ಲಿ ಗುನುಗುತ್ತದೆ. ಸಂಗೀತ, ಛಾಯಾಗ್ರಹಣ ಚಿತ್ರಕ್ಕೆ ಶಕ್ತಿ ತುಂಬಿದೆ. ಓಂ ಶಿವಂ ಮನೆ ಮಂದಿಯೆಲ್ಲಾ ಕುಳಿತು ನೋಡುವ ಸಿನಿಮಾವಾಗಿದೆ.

ಚಿತ್ರ : ಓಂ ಶಿವಂ
ನಿರ್ದೇಶನ : ಆಲ್ವಿನ್
ನಿರ್ಮಾಣ : ಕೆ.ಎನ್. ಕೃಷ್ಣ
ತಾರಾಗಣ : ಭಾರ್ಗವ, ವಿರಾನಿಕಾ, ಯಶ್ ಶೆಟ್ಟಿ, ವರ್ಧನ್ ಮುಂತಾದವರು
ರೇಟಿಂಗ್ : ★★★

ಬಾಂಧವ್ಯ ಬೆಸೆವ ಅಮೃತ-ಅಂಜನ

ಈ ಹಿಂದೆ ಅಮೃತಾಂಜನ್ ಕಿರುಚಿತ್ರ ಬಿಡುಗಡೆಯಾಗಿತ್ತು, ಕಾಮಿಡಿ ಬೆರೆತ ಈ ಕಿರುಚಿತ್ರ ಪ್ರೇಕ್ಷಕರ ಮನಗೆದ್ದಿತ್ತು. ಈಗ ಅದೇ ಕಾನ್ಸೆಪ್ಟ್ ಇಟ್ಟುಕೊಂಡು ನಿರ್ದೇಶಕ ಜಯರಾಮ್ ಅಮೃತ- ಅಂಜನ ಎಂಬ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಶೂಟಿಂಗ್ ಮುಗಿಸಿರುವ ಈ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಸುಧಾಕರ ಗೌಡ, ಗೌರವ್ ಶೆಟ್ಟಿ, ಕಾರ್ತಿಕ್ ರುವರಿ, ಪಾಯಲ್, ಪಲ್ಲವಿ ಪರ್ವ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ನಮ್ಮ ಅಮೃತಾಂಜನ್ ಕಿರುಚಿತ್ರಕ್ಕೆ ಒಳ್ಳೆಯ ಸ್ಪಂದನೆ ಸಿಕ್ಕಿದೆ, ಹಾಗಾಗಿ ಅದನ್ನು ಸಿನಿಮಾ ರೂಪದಲ್ಲಿ ತೆರೆಗೆ ತರುತ್ತಿದ್ದೇವೆ. ಅಮೃತಾಂಜನ್ ಟೈಟಲ್ ಸಿಗಲಿಲ್ಲ, ಹಾಗಾಗಿ ಅಮೃತ-ಅಂಜನ ಎಂಬ ಶೀರ್ಷಿಕೆ ಇಟ್ಟಿದ್ದೇವೆ. ಅದೇ ಎಳೆಯ ಜತೆಗೆ ಒಂದಷ್ಟು ಮನರಂಜನೆ ಹೆಚ್ಚಾಗಿಯೇ ಬೆರೆಸಲಾಗಿದೆ. ಈ ಹಿಂದೆ ನಾನು ನಿರ್ದೇಶಿಸಿದ್ದ ಸೋಡಾಬುಡ್ಡಿ ಚಿತ್ರ, ಸಾಧಾರಣ ಪ್ರತಿಕ್ರಿಯೆ ಪಡೆದಿತ್ತು. ಇದು ಎರಡನೇ ಚಿತ್ರ. ಕಥೆಯ ಮೇಲೆ ಏನು ಎಫರ್ಟ್ ಹಾಕಬೇಕೋ ಅದನ್ನು ಹಾಕಿದ್ದೇವೆ. ಚಿತ್ರ ನೋಡುವಾಗ ಆರಂಭದಿಂದ ಕೊನೆಯವರೆಗೂ ಕಾಮಿಡಿ ಕಚಗುಳಿ ಇಡಲಿದೆ. ಹಾಸ್ಯದ ಜತೆಗೆ ತಂದೆ ಮಗನ ಎಮೋಷನ್ಸ್ ಚಿತ್ರದಲ್ಲಿದ್ದು ಎಲ್ಲರಿಗೂ ಇಷ್ಟವಾಗಲಿದೆ. ಸುಧಾಕರ್ ಮಗನ ಪಾತ್ರದಲ್ಲಿ ನವೀನ್ ಪಡೀಲ್ ತಂದೆಯಾಗಿ ಕಾಣಿಸಿಕೊಂಡಿದ್ದಾರೆ. ಮಂಗಳೂರು, ಬೆಂಗಳೂರು, ತೀರ್ಥಳ್ಳಿ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ ಎಂದು ನಿರ್ದೇಶಕ ಜಯರಾಮ್ ಹೇಳಿದರು.

ಅಮೃತಾಂಜನ್ ಕಿರುಚಿತ್ರದಿಂದಲೇ ನಮ್ಮ ಜೀವನ ಪ್ರಾರಂಭವಾಯಿತು, ಈಗ ಅದೇ ಕಥೆ ಸಿನಿಮಾ ರೂಪದಲ್ಲಿ ಬೆಳ್ಳಿತೆರೆಗೆ ಬರುತ್ತಿದೆ. ಚಿತ್ರ ನೋಡಲು ನಾನು ಕಾತರನಾಗಿದ್ದೇನೆ ಎಂದು ನಟ ಗೌರವ ಸಂತಸದಿಂದ ನುಡಿದರು. ಸುಮಂತ್ ಆಚಾರ್ಯ ಛಾಯಾಗ್ರಹಣ, ರಾಘವೇಂದ್ರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.